UNIVERSAL
LIBRARY
OU_200438
UNIVERSAL
LIBRARY

**OSMANIA UNIVERSITY LIBRARY**

Call No. K83/V59B Accession No. K 4 82

Author ವಾಣಿ

Title ಬಿಡುಗಡೆ. 1955

This book should be returned on or before the date last marked below.

# ಬಿಡುಗಡೆ

(ಕಾದಂಬರಿ)

ವಾಣಿ

ಪ್ರಕಾಶಕರು:

ಆನಂದ ಬ್ರದರ್ಸ್—ಬೆಂಗಳೂರು

ಮೊದಲನೆಯ ಮುದ್ರಣ: ೧೯೫೫

K 4820

ಎಲ್ಲ ಹಕ್ಕುಗಳೂ ಬರೆಹಗಾರ್ತಿಯರದು.

ಮುಖಚಿತ್ರ: ಎಂ. ಸಿ. ವೀರ್

1965 Checked 1969

ಬೆಲೆ: ೧—೪—೦

ಮುದ್ರಕರು ಮತ್ತು ಮಾರಾಟಗಾರರು:
**ಪರಿಮಳ ಪ್ರೆಸ್,**
ನೂರಡಿರಸ್ತೆ–ಮೈಸೂರು.

# ಬಿನ್ನಹ

"ಬಿಡುಗಡೆ" ನನ್ನ ಮೊದಲ ಕಾದಂಬರಿ. ಇದನ್ನು ಬರೆದು ಸುಮಾರು ಹತ್ತು ವರ್ಷಗಳು ಆದಮೇಲೆ ಅದು ಬಿಡುಗಡೆಯಾಗಿರುವುದು ಸಂತೋಷ. ಮೊದಲು ಅದನ್ನು ಬರೆದಾಗ ಯಾವುದಾದರೂ ಚಿತ್ರಕ್ಕೆ ಕೊಡುವ ಉದ್ದೇಶದಿಂದ ಬರೆದರೂ, ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೆಂದು ನಿರ್ಣಯಿಸಿ ಪ್ರಯತ್ನಪಟ್ಟರೂ, ಅನೇಕ ತೊಂದರೆಗಳಿಂದ ಅದು ಇಷ್ಟು ತಡವಾಗಿ ಬಂದಿದೆ.

ಇಂದು ಕಾದಂಬರಿಯ ಯುಗ. ಕನ್ನಡದಲ್ಲಿ ಕಾದಂಬರಿಗಳು ಹೇರಳವಾಗಿ, ವೈವಿಧ್ಯದಿಂದ ಕೂಡಿ ಪ್ರತಿ ತಿಂಗಳೂ ಪ್ರಕಟವಾಗುತ್ತಿವೆ. ಅಲ್ಲದೆ ಕೆಲವು ಪ್ರಕಾಶಕರು ಧೈರ್ಯದಿಂದಲೂ ಮುಂದೆ ಬಂದು ಕಾದಂಬರಿಯ ಪ್ರಕಟನೆಯಲ್ಲಿ ಹೊಸ ಪ್ರಯೋಗಗಳನ್ನು ಮಾಡುತ್ತಿದಾರೆ. ಕಡಿಮೆ ಬೆಲೆಗೆ 'ಪಾಕೆಟ್ ಬುಕ್' ಮಾದರಿಯಲ್ಲಿ ಕನ್ನಡ ಪುಸ್ತಕಗಳನ್ನು ಎಲ್ಲರೂ ಕೊಳ್ಳುವಂತೆ ಅನುಕೂಲ ಮಾಡಿಕೊಡಲು ಯತ್ನ ನಡೆಯುತ್ತಿದೆ. ಇಷ್ಟಾದರೂ ಬರಹಗಾರರಿಗೂ ಪ್ರಕಾಶಕರಿಗೂ ಇಬ್ಬರಿಗೂ ತೊಂದರೆಯಾಗದಂತೆ ಒಂದು ಸುವ್ಯವಸ್ಥೆ ಇಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಪುಸ್ತಕವನ್ನು ಬರೆದ ಕೆಲವೇ ದಿನಗಳಲ್ಲಿ ಅದನ್ನು ಪ್ರಕಟಸುವ ಭಾಗ್ಯ ಕೇವಲ ಕೆಲವು ಬರಹಗಾರರಿಗೆ ಮಾತ್ರ ಸಾಧ್ಯವಾಗಿದೆ. ಉಳಿದವರ ಸ್ಥಿತಿ ಅಷ್ಟೇನೂ ಸಂತೋಷಪಡುವಂತೆ ಇಲ್ಲ. ಕಾಲ ಬದಲಾಗಿ ಎಲ್ಲಾ ಕ್ಷೇತ್ರಗಳಲ್ಲೂ ಸೌಕರ್ಯವನ್ನು ಹೆಚ್ಚಿಸಲು ಸತತ ಪ್ರಯತ್ನ ನಡೆಯುತ್ತಿರುವಾಗ, ಅದು ಸಾಹಿತ್ಯ ಕ್ಷೇತ್ರಕ್ಕೂ ವಿಸ್ತರಿಸಬೇಕೆಂದು ಆಶಿಸುವುದು ಸಹಜವಾಗಿದೆ. ಆ ಕಾಲ ಬೇಗ ಬರಲಿ, ಅಷ್ಟೆ.

ಈ ಕಾದಂಬರಿಯನ್ನು ಪ್ರಕಟಿಸಿರುವ ಮೆಸರ್ಸ್ ಆನಂದ ಬ್ರದರ್ಸ್ ರವರಿಗೂ ಮತ್ತು ಪರಿಮಳ ಪ್ರೆಸ್ಸಿನವರಿಗೂ ನನ್ನ ವಂದನೆಗಳು.

ಮೈಸೂರು. "ವಾಣಿ"

# ಬಿಡುಗಡೆ

ಶಾಸ್ತ್ರಿಗಳು ಬಂದಾಗ ರಾಯರ ಆಫೀಸು ಬರಿದಾಗಿತ್ತು. ಕಕ್ಷಿಗಾರರ ತಂಡ ಇರದಿದ್ದರೂ, ಅವರು ಹೊದೆದಿದ್ದ ಬಟ್ಟೆ, ಮತ್ತು ಎಲೆ ಅಡಿಕೆ ಹೊಗೆಸಪ್ಪಿನ ವಾಸನೆ ಪೂರ್ತಾ ಹೋಗಿರಲಿಲ್ಲ. ಮೇಜಿನ ಮೇಲೆ ಪುಸ್ತಕದ ರಾಶಿ ಹರಡಿತ್ತು. ರಾಯರು ಕುರ್ಚಿಯ ಬೆನ್ನಿಗೆ ಒರಗಿ ಕಣ್ಮುಚ್ಚಿ ಯಾವುದೋ ಗಂಭೀರವಾದ ಆಲೋಚನೆಯಲ್ಲಿ ಮುಳುಗಿದ್ದರು.

ಶಾಸ್ತ್ರಿಗಳ ಕೋಲಿಗೆ ರಾಯರ ಯೋಚನೆಯ ಆಳ ತಿಳಿದಿರಲಾರದು. ಅದು ಮಾಮೂಲಿನಂತೆ ಕಲ್ಲಿನ ಮೇಲೆ ಸದ್ದುಮಾಡಿ ತನ್ನ ಯಜಮಾನನ ಬರವನ್ನು ಸಾರಿತು. ರಾಯರು ಕಣ್ತೆರೆಳಿಸಿ ಹಸನ್ಮುಖದಿಂದ ಎದ್ದುನಿಂತು:-

"ಶಾಸ್ತ್ರಿಗಳು ದಯ ಮಾಡಿಸಬೇಕು........" ಎಂದು ಸ್ವಾಗತಿಸಿದರು.

"ರಾಯರು ಏನೋ ಗಾಢವಾಗಿ ಯೋಚಿಸುತ್ತಿದ್ದ ಹಾಗಿತ್ತು. ಯಾವ ಅಪರಾಧಿಯನ್ನು ಬಿಡಿಸುವ ಯತ್ನವೋ........?"

"ಇರುತ್ತಲ್ಲ....ಹೊಟ್ಟೆಪಾಡಿನ ಕೆಲಸ. ಬೆಳಗಿನಿಂದ ರಾತ್ರಿವರೆಗೆ ಈ ಅವಾಂತರದಲ್ಲಿ ನಮ್ಮ ಸಂಸಾರವೇ ಮರೆತು ಹೋಗುತ್ತೆ....ಯಾವಾಗ ತಾವು ಬಂದದ್ದು....?"

"ಮಧ್ಯಾಹ್ನದ ಗಾಡಿಗೇ ಬಂದೆ. ಸಂಸ್ಕೃತ ಕಾಲೇಜಿಗೆ ಸ್ವಲ್ಪ ಹೋಗಬೇಕಾಗಿತ್ತು. ಅಲ್ಲಿನ ಕೆಲಸ ಮುಗಿಯುವ ಹೊತ್ತಿಗೆ ಐದು ಗಂಟೆ ರೈಲಿಗೆ ಕಾಲ ಮೀರಿತ್ತು. ಹೇಗೂ ರಾತ್ರಿವರೆಗೂ ಇರಬೇಕು. ರಾಯರನ್ನಾದರೂ ನೋಡೋಣವೆಂದು ಬಂದೆ."

ಶಾಸ್ತ್ರಿಗಳು ಶಾಲಿನ ಸಂದಿಯಿಂದ ನಶ್ಯದ ಡ[illegible] ತೆಗೆದು ಒಂದು ಚುಟಿಕೆಯನ್ನು ಮೂಗಿಗೇರಿಸಿ ಮೆಲ್ಲಗೆ ವಸ್ತ್ರದಿಂದ ಒರೆಸುತ್ತಿ

ದ್ದರು. ರಾಯರು ಎದುರುಗಿದ್ದ ಪುಸ್ತಕಗಳನ್ನೂ ಕಾಗದದ ಕಟ್ಟುಗಳನ್ನೂ ಜೋಡಿಸುತ್ತ ಕೇಳಿದರು–

"ಓಹೋ....ಆ ವಿಚಾರ ಏನಾಯಿತು ?"

"ನಾನೂ ಕೇಳಿದ್ದೆ. ನೀವು ಆ ಕೆಲಸಕ್ಕೆ ಒಪ್ಪಿದ ಹಾಗೆ ತಾನೇ.... ಇನ್ನೇನು ಶಾಸ್ತ್ರಿಗಳು ನಮ್ಮ ಹತ್ತಿರಕ್ಕೇ ಬಂದಂತಾಯಿತು."

"ಇಲ್ಲ....ದೇವರು ; ಒಪ್ಪಿಕೊಳ್ಳಲಿಲ್ಲ."

"ಇಲ್ಲವೇ....? ಯಾಕೆ....? ಇಷ್ಟು ಪಾಂಡಿತ್ಯವಿದ್ದು ಅದನ್ನು ಕಲಿಸುವ ಸುಯೋಗ ಒದಗಿರುವಾಗ ಅದನ್ನು ಬಿಡಬಹುದೇ....?"

"ಕಲಿಸಲಿಕ್ಕೆ ಅಡ್ಡಿಯೇನೂ ಇಲ್ಲ. ಕಲಿತ ವಿದ್ಯೇನ ದಾನಮಾಡಕ್ಕೆ ಎಂದೂ ಕಾರ್ಪಣ್ಯ ತೋರಿಲ್ಲ ಈ ಜೀವ. ನನ್ನ ಬಳಿ ಬಂದವರಿಗೆ ನನ್ನ ಶಕ್ತಿ ಮೀರಿ ಕಲಿಸಿದೇನೆ. ಆದರೆ ಈ ಮುಪ್ಪಿನ ಕಾಲದಲ್ಲಿ ಊರು ಕೇರಿ ಬಿಟ್ಟು ಬಂದು ಇಲ್ಲಿರುವುದೆಂದರೆ ಆಗದ ಮಾತು. ತಿಳುವಳಿಕೆ ಬಂದಾಗಿನಿಂದ ಒಂದು ದಿನ ಕಾವೇರಿ ಸ್ನಾನ ಬಿಟ್ಟಿಲ್ಲ ನಾನು...."

"ಇಲ್ಲಿ ನಲ್ಲಿಯಲ್ಲಿ ಬರುವುದೂ ಕಾವೇರಿಯೇ.....?" ರಾಯರು ನಕ್ಕರು.

"ಅದು ಸರಿ ; ಆದರೂ........"

"ಆದರೂ....ಇಷ್ಟು ಜನಕ್ಕೆ ಕಲಿಸುವುದಕ್ಕಿಂತ....ನಡೆದು ಬಂದ ರೂಢಿಗೇ ಹೆಚ್ಚು ಬೆಲೆ ಅಂದ ಹಾಗಾಯಿತು."

"ಹಾಗೇನಿಲ್ಲ...ಒಂದು ಕಡೆ ಕೆಲಸ ಅಂತ ಒಪ್ಪಿದ ಮೇಲೆ ಅದರ ನಿಬಂಧನೆಗೆಲ್ಲ ತಲೆಬಾಗಬೇಕು. ನನಗೆ ಅದು ಬೇಕಿಲ್ಲ. ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಈ ದೇಹದಲ್ಲಿ ಶಕ್ತಿಯಿರುವತನಕ ವಾರಕ್ಕೊಮ್ಮೆ ಇಲ್ಲಿ ಬಂದು ಪಾಠ ಹೇಳಲು ಒಪ್ಪಿ ಬಂದಿದೇನೆ."

"ಅದು ಶಾಸ್ತ್ರಿಗಳ ಘನತೆಗೆ ಒಪ್ಪುವ ಮಾತು" ರಾಯರು ತಲೆದೂಗಿದರು. "ಈ ಏರ್ಪಾಡಿಗೆ ಕಾಲೇಜಿನವರು ಒಪ್ಪಿದರೆ....?"

"ಹೂ....ಒಪ್ಪಿದರು. ಅದೇನೋ ಆನರೆರಿ ಅಂತ ಬರೆದುಕೊಂಡ

ಪ್ರಯಾಣದ ವೆಚ್ಚವನ್ನಾದರೂ ತೆಗೆದುಕೋಬೇಕೆಂದು ನಿರ್ಭಂಧ ಮಾಡಿದ್ದಾರೆ...."

"ಬಹಳ ಸಂತೋಷ ಶಾಸ್ತ್ರಿಗಳೇ—ಆ ಗೌರವ ನಮಗೆಲ್ಲರಿಗೂ ದೊರೆತ ಹಾಗೆ. ಅದಕ್ಕೇ ಹೇಳಿರೋದು ವಿದ್ವಾನ್ ಸರ್ವತ್ರ ಪೂಜ್ಯತೇ.."

ಒಂದು ಗಳಿಗೆ ಇಬ್ಬರೂ ಸುಮ್ಮನಿದ್ದರು. ಕತ್ತಲು ಕವಿಯುತ್ತ ಬಂತು. ಬಳೆಗಳ ಸದ್ದು ಮೌನವನ್ನು ಭೇದಿಸಿತು. ನಾಗಮಣಿ ದೀಪವನ್ನು ಮೀಟಿ ತಂದೆಯ ಹಿಂಬದಿಗೆ ನಿಂತಳು.

"ಶಾಸ್ತ್ರಿಗಳೇ ಮಣಿ ನಿಜವಾಗಿ ನಮ್ಮ ಮನೇ ಬೆಳಕು. ಅದನ್ನು ಬೆಳಗಿಸುವ ಕೆಲಸ ಅವಳದು. ನಾನು ಹೀಗೆ ಏನಾದರೂ ಯೋಚಿಸುತ್ತ ಕೂತರೆ ಕತ್ತಲಾದುದೇ ತಿಳಿಯುವುದಿಲ್ಲ. ಮಣಿ ಬಂದು ದೀಪ ಹಚ್ಚಿದಾಗಲೇ ನನಗೆ ಎಚ್ಚರವಾಗುವುದು!"

ಮಣಿ ಬಂದು ಶಾಸ್ತ್ರಿಗಳ ಕಾಲಿಗೆರಗಿದಳು. ಅವರು ಅವಳನ್ನು ಎತ್ತಿ ಪಕ್ಕದಲ್ಲಿ ಕೂರಿಸಿಕೊಂಡರು.

"ನಾನೂ ಅದೇ ಯೋಚಿಸುತ್ತಿದ್ದೆ....! ರಾಯರು ಒಂದು ಗಳಿಗೆಯ ಹಿಂದೆ 'ಈ ತಾಪತ್ರಯದಲ್ಲಿ ಒಂದೊಂದು ಸಲ ಸಂಸಾರವೇ ಮರೆತು ಹೋಗುತ್ತೆ' ಎಂದಿರಿ. ಈ ಮಣಿಯನ್ನಿಟ್ಟುಕೊಂಡು ಅದು ಹೇಗೆ ಸಾಧ್ಯ ? ಇಲ್ಲದಿದ್ದರೇನೋ...."

"ತಮ್ಮ ಮಾತು ನಿಜ. ಮಣಿ....ಶಾಸ್ತ್ರಿಗಳಿಗೆ ಸಂಧ್ಯಾವಂದನೆಗೆ ಇಡಮ್ಮ. ರಾತ್ರಿ ಇಲ್ಲೇ ಊಟಕ್ಕೆ ದಯಮಾಡಬೇಕು."

ರಾಯರು ಔತಣ ಕೊಟ್ಟರು.

"ಕ್ಷಮಿಸಬೇಕು; ಈ ಹೊತ್ತು ಶನಿವಾರ, ಊಟವಿಲ್ಲ."

"ಸ್ವಲ್ಪ ಏನಾದರೂ ಫಲಹಾರ ಆಗಬಹುದಲ್ಲ...."

"ಅದೂ ಬೇಡ. ರೈಲಿನಲ್ಲಿ ಬಂದಿದೇನೆ. ಸ್ನಾನ ಮಾಡದೇ ಏನೂ ತಿನ್ನುವ ಅಭ್ಯಾಸವಿಲ್ಲ."

ಶಾಸ್ತ್ರಿಗಳು ಎದ್ದರು. ಎರಡು ಹೆಜ್ಜೆ ಮುಂದಿಟ್ಟವರು ಏನನ್ನೊ ಜ್ಞಾಪಿಸಿಕೊಂಡು

"ಇನ್ನೊಂದು ವಿಷಯ; ತಮ್ಮನ್ನು ಕೇಳಿದರೆ ಅದು ಬಗೆಹರಿಯ ಬಹುದು. ಈ ಕಾಗದ ನೋಡಿ—ಇದು ಈಗ ಒಂದು ವಾರದ ಹಿಂದೆ ಬೆಂಗಳೂರಿನಿಂದ ನನ್ನ ಹೆಸರಿಗೆ ಬಂತು. ನೋಡಿದರೆ ಗೋಪುವಿನ ಜಮೀನಿನ ಗುತ್ತಿಗೆ ಕರಾರು ಪತ್ರ. ಅದು ನನಗೆ ಯಾಕೆ ಬಂತು? ಯಾರು ಕಳಿಸಿದರು ಒಂದೂ ಗೊತ್ತಿಲ್ಲ!"

"ಗೋಪು ಎಂದರೆ ಯಾರು?"

"ನನ್ನ ಸ್ನೇಹಿತ; ಗೋಪಾಲರಾಯ. ಅವನೂ ನಾನೂ ಬಾಲ್ಯ ಸ್ನೇಹಿತರು. ಸ್ನೇಹ ಅಂದರೆ ಭೂಮಿಯ ಮೇಲೆ ಪುನಃ ಆ ಬಗೆಯನ್ನು ಕಾಣುವುದು ದುರ್ಲಭ! ಅದನ್ನು ಅನುಭವಿಸುವುದಕ್ಕೂ ಲಭ್ಯ ಬೇಕು. ಗೋಪು ನಮ್ಮನ್ನು ಅಗಲಿಹೋಗಿ ಆಗಲೇ ಎರಡುವರ್ಷದ ಹತ್ತಿರಕ್ಕೆ ಬಂತು........"

ಶಾಸ್ತ್ರಿಗಳಿಗೆ ಗಂಟಲು ಬಿಗಿದು ಬಂತು. ಸ್ನೇಹಿತನ ನೆನಪೇ ಅವರ ಕಣ್ಣುಗಳಲ್ಲಿ ನೀರುತಂದಿತು.

"ಗೋಪಾಲರಾಯರು ಬೆಂಗಳೂರಿನಲ್ಲಿದ್ದರೇ?"

"ಇಲ್ಲ. ಅವನು ಹಳ್ಳಿಯಲ್ಲೇ ಇದ್ದ."

"ಮತ್ತೆ ಕಾಗದ ಬೆಂಗಳೂರಿಂದ ಬಂತು ಎಂದಿರಲ್ಲ.....ಅಲ್ಲಿ ಯಾರಿದಾರೆ.....?"

"ಅವನ ಮಗ ರಾಮಚಂದ್ರ ಬೆಂಗಳೂರಿನಲ್ಲಿ ಇಂಜನಿಯರ್ ಪರೀಕ್ಷೆಗೆ ಓದುತ್ತಿದ್ದಾನೆ. ಗೋಪು ಹೋದ ಮೇಲೆ ಅವನ ಹೆಂಡತಿ ಮಕ್ಕಳನ್ನೂ ಇಟ್ಟುಕೊಂಡು ಅಲ್ಲೇ ಒಂದು ಸಣ್ಣಮನೆ ಬಾಡಿಗೆಗೆ ಹಿಡಿದು ಮಗನಿಗೆ ಓದಿಸುತ್ತಿದ್ದಾರೆ. ಹಾಲಿನಂಥ ಸಂಸಾರ. ಏನು ಮಾಡೋದು? ಎಲ್ಲಾ ಅವನ ಚಿತ್ತ."

"ನೀವು ಅವರಿಗೆ ಕಾಗದ ಬರೆದು ವಿಷಯ ಏನೆಂದು ತಿಳಿಯ ಬಹುದಲ್ಲ."

"ನಾನೂ ಹಾಗೇ ಮಾಡೋಣವೆಂದಿದ್ದೆ. ಅಷ್ಟರಲ್ಲಿ ಆ ಹುಡುಗ ರಾಮಚಂದ್ರ......ನಮ್ಮ ಗೋಪು ಮಗನಿಂದ ನಿನ್ನೆ ನನಗೆ ಒಂದು ಕಾಗದ ಬಂತು."

"ಏನು ಬರೆದಿದ್ದ....?"

"ಭತ್ತದ ವಸೂಲಿಗೆ ಊರಿಗೆ ಹೋಗಬೇಕು. ಹಾಗೇ ಒಂದು ದಿನ ತಮ್ಮಲ್ಲಿಗೆ ಬರುತ್ತೇನೆ. ಜಮೀನಿಗೆ ಸಂಬಂಧಪಟ್ಟ ಪತ್ರ ತಮ್ಮ ಹತ್ತಿರ ನಮ್ಮ ತೀ|| ರವರು ಇಟ್ಟಿದ್ದರೆಂದು ನಮ್ಮ ತಾಯಿಯವರು ಹೇಳಿದರು. ಆ ಕಾಗದ ಹತ್ತಿರ ಇದ್ದರೆ ಅಲ್ಲಿ ನನ್ನ ಕೆಲಸಕ್ಕೆ ಅನುಕೂಲ...."

"ಸರಿ......ಮುಖ್ಯ ವಿಷಯ ತಿಳಿದ ಹಾಗಾಯಿತು. ಬಾಕಿ ವಿಚಾರ ಬೇಡ."

"ಅದೇ ನನಗೆ ಅರ್ಥವಾಗಿಲ್ಲ. ಕಾಗದ ಕಳಿಸಿರೋನು ಹುಡುಗ ಅಲ್ಲ. ಅದು ನನ್ನ ಬಳಿ ಬಂದು ಒಂದು ವಾರ ಮಾತ್ರ ಆಯಿತು. ಅದನ್ನು ಗೋಪು ನನ್ನ ಹತ್ತಿರ ಇಟ್ಟಿದ್ದ ಎಂದು ಹೇಳೋದರಲ್ಲಿ ಏನು ಉದ್ದೇಶವೋ ತಿಳಿಯಲಿಲ್ಲ........"

ರಾಯರು ಸ್ವಲ್ಪ ಸುಮ್ಮನಿದ್ದು ಜೋರಾಗಿ ನಕ್ಕರು—

"ಆ ಉದ್ದೇಶ ತಿಳಿಯಬೇಕಾದರೆ ಶಾಸ್ತ್ರಿಗಳ ಪಾಂಡಿತ್ಯದಿಂದಲೇ ನಡೆಯುವಂತಿಲ್ಲ. ಅದಕ್ಕೆ ರಾಯರ ವ್ಯವಹಾರಬುದ್ಧಿಯ ನೆರವೂ ಬೇಕಾದೀತು.....!"

"ಅದಕ್ಕೇ ತಮ್ಮಲ್ಲಿ ಆ ವಿಷಯ ಪ್ರಸ್ತಾಪಿಸಿದ್ದು."

"ನೀವು ಸ್ವಲ್ಪ ದಿವಸಗಳ ಹಿಂದೆ ಬೆಂಗಳೂರಿಗೆ ಹೋಗಿರಲಿಲ್ಲವೇ......?"

"ಹ್ಞಾ....ಮೂರು ನಾಲ್ಕು ತಿಂಗಳ ಹಿಂದೆ ಹೋಗಿದ್ದೆ."

"ಅಲ್ಲಿಂದ ಬಂದ ಮೇಲೆ ತಾವು ಒಂದು ಸಲ ನನಗೆ ಅಲ್ಲಿ

ಯಾವುದೋ ವರನನ್ನ ಮಗಳಿಗಾಗಿ ನೋಡಲು ಹೋಗಿದ್ದಂತೆ ಹೇಳಿದ ಜ್ಞಾಪಕ. ಆ ವರ ಈ ಹುಡುಗನೇ ಏನು?"

"ಹೌದು. ರಾಯರ ಜ್ಞಾಪಕಶಕ್ತಿ ಮೆಚ್ಚಬೇಕಾದದ್ದೇ!"

"ನೀವು ಹೋಗಿದ್ದಾಗ ಹುಡುಗ ಏನು ಹೇಳಿದ? ಒಪ್ಪಿದ ಹಾಗೋ....?"

"ನಾನು ಹುಡುಗನ್ನ ನೋಡಲೇ ಇಲ್ಲ. ಅವನು ಕಾಲೇಜಿಗೆ ಹೋಗಿದ್ದ. ಅವನ ತಾಯಿಯೊಡನೆ ಪ್ರಸ್ತಾಪ ಮಾಡಿದೆ. ಅವರು ಅವನಿಗೆ ಈಗಲೇ ಮದುವೆಯಾಗುವ ಉದ್ದೇಶವಿಲ್ಲನೆಂದೂ, ತಾವೇ ಸಮಯ ನೋಡಿ ಮಗನಿಗೆ ಹೇಳುವುದಾಗಿ ಹೇಳಿದ್ದರು. ಆದರ ಮೇಲೆ ನಾನೂ ಆ ವಿಚಾರ ಅಲ್ಲಿಗೆ ಬಿಟ್ಟುಬಿಟ್ಟೆ...."

"ಅದು ಸರಿ; ಆದರೆ ಹುಡುಗನ ಸ್ವಭಾವ ಹೇಗೆ?"

"ಹುಡುಗ ಒಳ್ಳೆಯವನೇ... ಆದರೂ ಈಗಿನ ಕಾಲದವರು; ಅವರಿಗೆ ದೊಡ್ಡವರಿಗಿಂತ ತಮ್ಮ ಅಭಿಪ್ರಾಯದಲ್ಲೇ ಹೆಚ್ಚು ವಿಶ್ವಾಸ....!"

"ಸರಿ....ಅದಕ್ಕೇ ಅವನ ತಾಯಿ—ಮದುವೆ ಪ್ರಸ್ತಾಪ ಮಾಡುವ ಮೊದಲು ಹುಡುಗ ಯಾವುದಾದರೂ ಒಂದು ನೆವದಲ್ಲಿ ತಮ್ಮ ಮನೆಗೆ ಬರಲಿ—ಮೀನು ಗಾಳಕ್ಕೆ ಸಿಕ್ಕಿದರೆ ಎಳೆಯುವುದೇನು ಕಷ್ಟ ಎಂದು ಯೋಚಿಸಿ ತಾವೇ ಆ ಕಾಗದಾನ ಮಗನಿಗೆ ತಿಳಿಯದ ಹಾಗೆ ಕಳಿಸಿರಬಹುದು.!"

"ಇದ್ದರೂ ಇರಬಹುದು. ನನಗೆ ತೋರಲೇ ಇಲ್ಲ!"

"ನೋಡಿ....ಎಷ್ಟಾದರೂ ಹೆಂಗಸರಿಗೆ ವ್ಯವಹಾರದಲ್ಲಿ ಬುದ್ಧಿ ಹೆಚ್ಚು; ನಾವು ಅಲ್ಲಿ ಸೋಲನ್ನು ಒಪ್ಪಿದರೆ ಅವಮಾನವೇನೂ ಇಲ್ಲವಲ್ಲ! ನೀವೂ ಕೂಡ ಹುಡುಗ ಬಂದಾಗ ಮದುವೆ ಹೆಸರೇ ಎತ್ತಬೇಡಿ. ನಿಮ್ಮ ಬಾಲ್ಯ ಮಿತ್ರನ ಮಗ ಮನೆಗೆ ಅಪರೂಪಕ್ಕೆ ಬಂದರೆ ಎಷ್ಟು ಆದರ ಉಪಚಾರ ನಡೆಯಬಹುದೋ ಅಷ್ಟುಮಾಡಿ. ಲಕ್ಷಣ ಸರಿಯಾಗಿ ಕಂಡರೆ ಒಂದು ಹದಿನೈದು ದಿನ ಬಿಟ್ಟು ಪುನಃ ಬೆಂಗಳೂರಿನ ಯಾತ್ರೆಗೆ ಹೋಗೋದು. ಬೇಕಾದರೆ ನಾನೂ ಜೊತೆಗೆ ಬರ್ತೀನೆ!"

ಶಾಸ್ತ್ರಿಗಳು ರಾಯರ ಜಾಣತನವನ್ನು ಮೆಚ್ಚಿ ತಲೆದೂಗಿದರು. ಅವರ ಮುಖದಲ್ಲಿ ಪ್ರಸನ್ನತೆ ಮೂಡಿತು. ಬಾಗಿಲವರೆಗೂ ಕಳುಹಿಸಲು ಬಂದ ರಾಯರಿಗೆ ಕೈ ಮುಗಿದು—

"ಬರ್‍ತೀನಿ....ರಾಯರೆ; ಸ್ವಲ್ಪ ಪೇಟೆ ಕಡೆಗೆ ಹೋಗಿ ಹಾಗೇ ರೈಲಿಗೆ ಹೋಗುತ್ತೇನೆ. ಒಂದು ವೇಳೆ ಆ ಹುಡುಗ ನಾಳೆಯೇ ಬಂದರೂ ಬರಬಹುದು. " ಎಂದು ಹೇಳಿದರು.

ರಾಯರು ಎರಡು ಕೈಗಳನ್ನೂ ಜೋಡಿಸಿ "ನಮಸ್ಕಾರ" ಎಂದರು.

"ನ.....ಮ..... ಸ್ಕಾ..... ರ."

"ಅಣ್ಣಾ....." ಮಣಿ ಹಿಂದಿನಿಂದ ಕೂಗಿದಳು.

"ಏನು....ಮಗು....?"

"ಶಾಸ್ತ್ರಿಗಳಿಗೆ ಸ್ವಲ್ಪ ಹಣ್ಣು ತಂದಿದ್ದೇನೆ."

"ಶಾಸ್ತ್ರಿಗಳೇ....ಸ್ವಲ್ಪ ಒಳಗೆ ಬರಬೇಕು. ತಮಗೆ ಪುನಃ ತೊಂದರೆ ಕೊಡಬೇಕಾಗಿದೆ. ನಾನು ಬಿಟ್ಟರೂ ಮಣಿ ತಮ್ಮನ್ನು ಹಾಗೇ ಕಳಿಸಲು ಒಪ್ಪುವುದಿಲ್ಲ."

ಶಾಸ್ತ್ರಿಗಳು ಒಳಗೆ ಬಂದರು. ಮಣಿ ಒಂದು ತಟ್ಟೆಯಲ್ಲಿ ನಾಲ್ಕು ರಸಬಾಳೆಹಣ್ಣು, ಎರಡು ಕಿತ್ತಲೆ ಹಣ್ಣು, ಒಂದು ಸೇಬಿನ ಹಣ್ಣು ಹಿಡಿದು ನಿಂತಿದ್ದಳು. ಅವರ ನಿಯಮ ಆ ಹುಡುಗಿ ವಿಶ್ವಾಸದಿಂದ ತಂದದ್ದನ್ನು ನಿರಾಕರಿಸಿ ಹೋಗುವಷ್ಟು ನಿಷ್ಠುರವಾಗಿರಲಿಲ್ಲ. ಶಾಸ್ತ್ರಿಗಳು ಒಳಗೆ ಹೋಗಿ ಕೈಕಾಲು ತೊಳೆದುಕೊಂಡು ಬಂದರು. ಆ ವೇಳೆಗೆ ರಾಯರ ಮುಂದೂ ಒಂದು ಹಣ್ಣಿನ ತಟ್ಟೆ ಸಿದ್ಧವಾಗಿತ್ತು.

"ಅಮ್ಮ ಆರೋಗ್ಯವಾಗಿದಾರೆಯೆ......ಮಣಿ......?"

"ಏನು ಆರೋಗ್ಯವೋ.... ಕೆಮ್ಮು ದಿನದಿನಕ್ಕೆ ಹೆಚ್ಚುತ್ತಿದೆ. ಅದು ಮುಂದೆ ಹೇಗೆ ತಿರುಗುತ್ತೋ ಗೊತ್ತಿಲ್ಲ......"

ಮಣಿ ಮಾತಾಡಲು ಬಾಯಿ ತೆರೆಯುವ ಮೊದಲೇ ರಾಯರು ತಮ್ಮ ಬೇಸರವನ್ನು ಹೊರಗೆಡವಿದರು.

"ರಾಯರ ಮನೆಯಲ್ಲಿ ಔಷಧಿಗೂ ಉಪಚಾರಕ್ಕೂ ಕೊರ ತೆಯೇ...? ಆದರೂ ಒಂದೊಂದುಸಲ ಹೀಗೆ ಆಗೋದುಂಟು. ಅಷ್ಟಕ್ಕೇ ಬೇಸರ ಪಟ್ಟರೆ ಆದೀತೆ....?"

ಶಾಸ್ತ್ರಿಗಳು ಕಿತ್ತಲೆಹಣ್ಣಿನ ಕುಸುಮವನ್ನು ಬಿಡಿಸಿ ಬಾಯಿಗೆ ಹಾಕಿಕೊಳ್ಳುತ್ತ ಹೇಳಿದರು.

"ಅದೇನೋ ಸರಿ; ಮನೆಯಲ್ಲಿ ಅಡಿಗೆಯವರಿದಾರೆ, ಕೆಲಸದವರಿ ದಾರೆ....ಹೇಗೋ ಆಗುತ್ತೆ....ಅಸ್ಟು. ಆದರೂ ಅವಳು ಓಡಾಡಿಕೊಂಡು ಇದ್ದಂತೆ ಆಗೋದಿಲ್ಲ. ಮಕ್ಕಳಿಗೆ ತೊಂದರೆ. ಏನೋ ಆ ಹುಡುಗ ಒಬ್ಬ ಇರೋವರಿಂದ ಯಾವ ತೊಂದರೆಯೂ ಕಾಣುತ್ತಿಲ್ಲ!"

"ಯಾವ ಹುಡುಗ....?"

"ವಿಶ್ವನಾಥ...! ಅವನೂ ನನಗೆ ಹತ್ತಿರದ ಸಂಬಂಧಿಯೇ....ತಂದೆ ತಾಯಿ ಯಾರೂ ಇಲ್ಲ. ಆಗಿನಿಂದ ಇಲ್ಲೇ ಇದಾನೆ. ಹುಡುಗ ಅಂದರೆ ನೋಡಿ ಹಾಗಿರಬೇಕು. ಪಾದರಸ! ಓದು ಬರಹ, ಆಟ ಪಾಟ, ಮನೆ ಕೆಲಸ ಯಾವುದರಲ್ಲೂ ಹಿಂದಿಲ್ಲ."

"ವಿಶ್ವನಾಥನೇ....ನನಗೆ ಗೊತ್ತು....! ನಾನು ಬಹಳ ದಿವಸ ಅವನ್ನ ತಮ್ಮ ಮಗನೆಂದೇ ತಿಳಿದಿದ್ದೆ. ಮಣಿ ಬೇರೆ 'ರಾಜಣ್ಣ' ಎಂದು ಕೂಗು ತ್ತಿದ್ದಳು. ಆಮೇಲೆ ಗೊತ್ತಾಯಿತು. ಯಾರಾದರೇನು? ಒಳ್ಳೆ ಹುಡುಗ. ದೇವರು ಚೆನ್ನಾಗಿಟ್ಟಿರಲಿ."

"ಅವನೂ ಹೊರಡೋನೇ ಆಗಿದಾನೆ. ಮುಂದೆ ಅವನು ಬೆಂಗಳೂರಿ ನಲ್ಲೇಓದಬೇಕು."

"ಹಾಗೇನು....?"

ಮಣಿ ಇದುವರೆಗೆ ಇವರ ಮಾತು ಕೇಳುತ್ತ ನಿಂತಿದ್ದವಳು ತಟ್ಟನೆ ಕೇಳಿದಳು–

"ಅಣ್ಣಾ,–ರಾಜಣ್ಣ ಬೆಂಗಳೂರಿಗೆ ಯಾಕೆ ಹೋಗ್ಬೇಕು? ಇಲ್ಲೇ ಓದಿದರಾಗದೆ....?"

"ಆಗುವುದಿಲ್ಲ ಮಣಿ; ಅವನು ತೆಗೆದುಕೊಂಡಿರುವ ವಿಷಯಗಳನ್ನು ಮುಂದುವರೆಸಲು ಇಲ್ಲಿ ಅವಕಾಶವಿಲ್ಲ."

"ಹಾಗಾದ್ರೆ ನಂಗೆ ಪಾಠ ಹೇಳ್ಕೊಡೋರು ಯಾರು ?"

"ಅದಕ್ಕೇನು....? ಒಳ್ಳೆ ಮೇಷ್ಟ್ರನ್ನ ಗೊತ್ತು ಮಾಡ್ತೇನೆ !"

"ಮೇಷ್ಟ್ರು ಅವನಷ್ಟು ಚೆನ್ನಾಗಿ ಹೇಳಿಕೊಡ್ತಾರೆಯೆ?"

ಮಣಿಯ ಕಣ್ಣಿನಲ್ಲಿ ಅಚ್ಚರಿಯೂ ದನಿಯಲ್ಲಿ ಕಾತರವೂ ಇತ್ತು. "ರಾಜಣ್ಣ" ಹೊರಟು ಹೋಗುವನೆಂಬ ಸುದ್ದಿ ಅವಳ ಪುಟ್ಟ ಪ್ರಪಂಚದ ಶಾಂತತೆಯನ್ನು ಕಲಕಿ ಬಿಟ್ಟಿತ್ತು. ಮೇಷ್ಟ್ರು ಪಾಠವನ್ನು ಹೇಳಿಕೊಡಬಹುದು. ಆದರೆ ಆಟದಲ್ಲಿ ಪಾಠದಲ್ಲಿ–ಮತ್ತೆ ನೂರು ವಿಧದಲ್ಲಿ ಅವಳ ಒಡನಾಡಿಯಾಗಿದ್ದವನು ದೂರವಾಗುತ್ತಾನೆ! ತಾಯಿಗೆ ಖಾಯಿಲೆ ಹೆಚ್ಚಾದರೆ ನೋಡುವವರು ಯಾರು? ಇವೇ ಮೊದಲಾದ ಪ್ರಶ್ನೆಗಳು ಮನಸ್ಸಿನಲ್ಲಿ ಏಳುತ್ತಿದ್ದುವು.

ರಾಯರಿಗೆ ಮಗಳ ಕಾತರ ಅರ್ಥವಾಗದೇ ಇರಲಿಲ್ಲ. ಅವಳನ್ನು ಸಮಾಧಾನ ಮಾಡುವಂತೆ ತಲೆಯನ್ನು ಸವರುತ್ತ:–

"ಅದಕ್ಕೇಕೆ ಯೋಚನೆ ಮಣಿ? ರಾಜಣ್ಣ ಹೋದರೂ ಪುನಃ ಬೇಗ ಬಂದು ಬಿಡ್ತಾನೆ. ನೋಡು ಒಳಗೆ ಅಮ್ಮ ಕರೆಯುವ ಹಾಗಿದೆ." ಎಂದರು.

ಮಣಿ ಒಳಗೆ ಹೋದಳು. ಶಾಸ್ತ್ರಿಗಳು ಅವಳು ಹೋದ ಕಡೆಗೇ ನೋಡುತ್ತ–"ಬ್ರಹ್ಮ ಹೆಣ್ಣು ಮಕ್ಕಳ ಹೃದಯದಲ್ಲಿ ಸ್ನೇಹದ ಕಡಲನ್ನೇ ಇಟ್ಟಿರುವನೇನೋ" ಎಂದುಕೊಂಡರು. ಅವರಿಗೆ ತಮ್ಮ ಮಗಳ ನೆನಪಾಗಿರಬಹುದು.

"ನೋಡಿ– ಹುಡುಗಿ ಅವನನ್ನು ಬಹಳ ಹಚ್ಚಿಕೊಂಡಿರುವಂತಿದೆ. ಅವನು ಹೋಗುವನೆಂದು ನೀವು ಹೇಳಿದಕೂಡಲೇ ಅವಳು ಭೂಮಿಗೆ ಇಳಿದಳು"

"ಕುಗ್ಗಿರುವವಳು ಅವಳೊಬ್ಬಳೇ ಅಲ್ಲ ಶಾಸ್ತ್ರಿಗಳೇ! ನನ್ನ ಪಾಡೂ ಹಾಗೇ ಆಗಿದೆ. ಇದುವರೆಗೆ ಅವನಿದ್ದುದರಿಂದ ನನಗೆ ಮನೆಯ ಯೋಚ

ನೆಯೇ ಇರಲಿಲ್ಲ. ನಾನಾಯಿತು ನನ್ನ ಕೆಲಸವಾಯಿತು, ಹೀಗಿದ್ದೆ. ಅವಳ ಔಷಧಿ ಉಪಚಾರ, ಮಕ್ಕಳ ಯೋಗಕ್ಷೇಮ, ಬಂದವರು ಹೋದವರು ಎಲ್ಲಾ ಅವನೇ ನೋಡಿಕೊಳ್ಳುತ್ತಿದ್ದ. ಜೊತೆಗೆ ನೆರವು ನೀಡಲು ಮಣಿ! ಅವಳು ಕೂತ ಜಾಗದಲ್ಲೇ ಬಾಯಿ ಅಲ್ಲಾಡಿಸಿ ಎಲ್ಲಾ ಕಾರುಬಾರು ನಡೆಸುತ್ತಿದ್ದಳು. ಇನ್ನು ಅದಕ್ಕೆಲ್ಲಾ ಮಣಿಯೇ ಹೊಣೆಯಾಗಬೇಕು. ಅವಳ ವಯಸ್ಸಿಗೆ ಮೀರಿದ ಕೆಲಸ ಅದು. ಈ ಗಲಾಟೆಯಲ್ಲಿ ಅವಳ ಓದಿನ ಗತಿಯೇನು? ಇವೆಲ್ಲಾ ಯೋಚಿಸ ಬೇಕಾದದ್ದೇ....!"

"ಯೋಚನೆ ಯಾಕೆ ರಾಯರೆ? ನಾಲ್ಕು ದಿನ ಹಾಗಿರುತ್ತೆ. ಅಮ್ಮಾವರು ಸ್ವಲ್ಪ ಹುಷಾರಾದರೆ ಮಣಿಗೆ ಹೆಚ್ಚು ತೊಂದರೆ ಇರುವುದಿಲ್ಲ. ಎಲ್ಲಾ ಸರಿಹೋಗುತ್ತೆ...."

"ಅದಕ್ಕೇ ಈ ವಿಚಾರ ನಾನು ಯಾರಿಗೂ ಹೇಳಿರಲಿಲ್ಲ. ಮಣಿಗೆ ತಿಳಿದದ್ದೂ ಈಗಲೇ! ಇನ್ನು ಮಣಿಯ ತಾಯಿ ಇದನ್ನು ಹೇಗೆ ಒಪ್ಪುವಳೋ ಕಾಣೆ. ಇಲ್ಲೇ ಇನ್ನೇನಾದರು ಓದಿಸಿ ಎಂದು ಹಟ ಮಾಡಬಹುದು. ಆದರೆ ನಾನು ಅಂಥ ಸ್ವಾರ್ಥಿಯಲ್ಲ. ನಮ್ಮ ಅನುಕೂಲಕ್ಕಾಗಿ ಅವನ ಭವಿಷ್ಯವನ್ನು ಹಾಳು ಮಾಡುವುದಿಲ್ಲ!"

"ಉಂಟೇ....! ಆದರೆ ಅಷ್ಟು ಮಾತ್ರಕ್ಕೇ ನಿಮ್ಮನ್ನು ಸ್ವಾರ್ಥಿಗಳಲ್ಲವೆಂದು ಹೇಳಲಿಕ್ಕಾದೀತೆ?" ಶಾಸ್ತ್ರಿಗಳು ನಕ್ಕು ಹೇಳಿದರು— "ಆ ಹುಡುಗ ಓದಿ ಮುಂದೆ ಬಂದು ಅಭಿವೃದ್ಧಿಯಾಗುವುದರಲ್ಲೇ ರಾಯರ ಸ್ವಾರ್ಥ ಏಕಿರಬಾರದು? ಮುಂದೆ ಮಣಿಗಾಗಿ ವರನನ್ನು ಹುಡುಕುವ ತಾಪತ್ರಯ ಬರಲಿಕ್ಕಿಲ್ಲ!"

ರಾಯರೂ ನಕ್ಕರು ಅವರ ಉದ್ದೇಶವೂ ಅದೇ ಆಗಿತ್ತಾಗಿ ಶಾಸ್ತ್ರಿಗಳ ಮಾತಿಗೆ ಪ್ರತಿಯಾಡಲಿಲ್ಲ.

ಆ ವೇಳೆಗೆ ತಟ್ಟೆಯಲ್ಲಿದ್ದ ಹಣ್ಣು ಮುಗಿಯುತ್ತ ಬಂದಿತ್ತು. ಕೈ ತೊಳೆದುಕೊಂಡು ವಸ್ತ್ರದಿಂದ ಒರಸಿಕೊಳ್ಳುತ್ತ ರಾಯರು ಕಡಿದು ಹೋಗಿದ್ದ ಮಾತಿನ ಎಳೆಯನ್ನು ಮತ್ತೆ ಹಿಡಿಯಲು ಪ್ರಯತ್ನ ಪಟ್ಟರು—

"ಹೆಣ್ಣು ಮಕ್ಕಳು ಇರುವವರ ಮನೆಯಲ್ಲೆಲ್ಲಾ ಇದೇ ಹಣೇ ಬರಹವೇ ಅನ್ನಿ. ತಮ್ಮ ಸರದಿ ಆಗಲೇ ಬಂದಿದೆ. ನಮ್ಮದು ಹಿಂದಿನಿಂದ ಅಷ್ಟೆ !"

ಶಾಸ್ತ್ರಿಗಳು ಆ ಮಾತನ್ನು ಮುಂದುವರೆಸಲು ಉತ್ಸಾಹ ತೋರಿಸಲಿಲ್ಲ. ಮಗಳ ಮದುವೆ ಮಾಡಬೇಕಾದುದು ಕರ್ತವ್ಯವಾಗಿದ್ದಿತೇ ವಿನಾ ಹೆಚ್ಚು ಸಂತೋಷದ ವಿಷಯವಾಗಿರಲಿಲ್ಲ. ಅವರು ಆಗಲೇ ಕೈ ಸುಟ್ಟುಕೊಂಡವರಾಗಿದ್ದರು. ಅದರ ಬಿಸಿ ಆರುವಂತಿರಲಿಲ್ಲ. ದೊಡ್ಡ ಮಗಳಿಗೆ ಮದುವೆ ಮಾಡಿ ಕೆಲವೇ ದಿನಗಳಲ್ಲಿ ಅವಳ ಭಾಗ್ಯ ರೇಖೆ ಅಳಿಸಿ ಹೋಗಿತ್ತು. ಓ-ಆ ಮದುವೆಯಲ್ಲಿ ಏನು ಉತ್ಸಾಹ ಅವರಿಗೆ! ಆಗ ಶಾಸ್ತ್ರಿಗಳ ಕುಟುಂಬ ಇದ್ದರು. ಮನೆಯಲ್ಲಿ ನಡೆಯುವ ಮೊದಲ ಮಂಗಲ ಕಾರ್ಯವೆಂದು ಅವರ ಸಡಗರ ಹೇಳುವಂತಿರಲಿಲ್ಲ. ಈಗ ಆಕೆ ಇಲ್ಲ. ದುರ್ದೈವಿ ಮಗಳು ತನ್ನ ದುಃಖವನ್ನು ಹಿಂದೆ ನೂಕಿ ಸಂಸಾರದ ಭಾರವನ್ನು ಹೊತ್ತು ನಡೆಸುತ್ತಿದ್ದಾಳೆ! ಇವೆಲ್ಲಾ ಅಷ್ಟೇನು ಸಂತೋಷದ ವಿಷಯಗಳಾಗಿರಲಿಲ್ಲ.. ಆದರಿಂದಲೇ ಅವರು—

"ಏನೋ....ಎಲ್ಲಾ ಅವನ ಲೀಲೆ. ಅವನು ಆಡಿಸಿದಂತೆ ನಾವು ಕುಣಿಯಬೇಕು. ಒಂದು ಕಣ್ಣಿನಲ್ಲಿ ಅಳು; ಒಂದು ಕಣ್ಣಿನಲ್ಲಿ ಹೀಗೇ ಸಾಗಿದೆ ಪ್ರಪಂಚ !"

ಎಂದು ಹೇಳಿ ಹೊರಡಲು ಎದ್ದು ನಿಂತರು.

ರಾಯರಿಗೆ ಅವರ ಮಾತಿನ ಪೂರ್ಣ ಅರ್ಥವಾಗದಿದ್ದರೂ ಮೌನದಿಂದ ತಲೆಯಲ್ಲಾಡಿಸಿ ಸಮ್ಮತಿಯನ್ನು ಸೂಚಿಸಿದರು.

## ೨

"ಶಾಸ್ತ್ರಿಗಳೇ...."

ಅಮ್ಮಯ್ಯ ಒಳಗಡೆ ಅಡಿಗೆ ಮನೆಯಲ್ಲಿ ಏನೋ ಕೆಲಸಮಾಡುತ್ತಿದ್ದವಳು ಅಲ್ಲಿಂದಲೇ ಕೂಗಿದಳು—

" ಮೀನಾ....ಯಾರೋ ಕೂಗಿದ ಹಾಗಾಯಿತು. ಯಾರು ನೋಡಮ್ಮ...."

ಮೀನಾಕ್ಷಿ ಮನೆಯ ಹಿಂಭಾಗದಲ್ಲಿ ಪಾತ್ರೆಗಳನ್ನು ತೊಳೆಯು ತ್ತಿದ್ದವಳು ಅಕ್ಕ ಕರೆದುದನ್ನು ಕೇಳಿ ಒಳಗೆ ಬಂದು—

"ಏನಕ್ಕ ಕರೆದದ್ದು....?" ಎಂದಳು.

"ಹೊರಗೆ ಯಾರೋ ಕೂಗಿದಂತಾಯಿತು; ನೋಡು ತಾಯಿ."

ಮೀನಾ ಹೊರಗೆ ಬಂದಳು. ಮುಂಬಾಗಿಲಿಗೆ ಅಗಣಿ ಹಾಕಿರಲಿಲ್ಲ. ಸುಮ್ಮನೆ ಮುಚ್ಚಿತ್ತು. ಆದರೂ ಬಂದವರು ನಾಗರಿಕ ಸಂಪ್ರದಾಯದವ ರಿದ್ದುದರಿಂದ ಬಾಗಿಲು ನೂಕಿ ಒಳಗೆ ಬರಲಿಲ್ಲ. ಹೊರಗೆ ನಿಂತೇ ಕೂಗಿ ದ್ದರು.

ಮೀನಾಕ್ಷಿಗೆ ಸೋಜಿಗವಾಯಿತು. ಯಾರೋ ಹೊಸಬರಿರಬೇಕೆಂದು ಕೊಂಡು ಬಾಗಿಲು ತೆಗೆದಳು. ಮುಖವನ್ನು ಮಾತ್ರ ಹೊರಗೆ ಹಾಕಿ "ಯಾರು ..." ಎಂದು ವಿಚಾರಿಸಿದಳು.

ರಾಮಚಂದ್ರ ಒಂದು ಅರೆಕ್ಷಣ ಮಾತ್ರ ಅಚ್ಚರಿಯಿಂದ ಅರಳಿ ದಂತಿದ್ದ ಆ ಕಣ್ಣುಗಳಕಡೆ ನೋಡುತ್ತ ಮುಗ್ಧನಾದವನಂತೆ ನಿಂತಿದ್ದ. ಕೂಡಲೇ ಅವನಿಗೆ ತನ್ನ ತಪ್ಪು ತಿಳಿಯಿತು. ಬೇಗ ಸಂವರಿಸಿಕೊಂಡು ಕೇಳಿದ—

"ಶಾಸ್ತ್ರಿಗಳ ಮನೆ-ಇದೇ ಏನು—?"

"ಹೌದು."

"ಅವರು ಇದಾರೆಯೆ?"

"ಇಲ್ಲ."

"ಇಲ್ಲವೇ....! ಎಲ್ಲಿ ಹೋಗಿದಾರೆ....?"

"ಮೈಸೂರಿಗೆ. ಇದೇ ಈಗ ತಾನೆ ಹೋದರು."

"ನಾನೂ ಇದೇ ರೈಲಿನಲ್ಲಿ ಬಂದೆ. ನನಗೆ ಗೊತ್ತಾಗಲಿಲ್ಲ. ಅವರು ಬರುವುದು ಯಾವಾಗ....?"

"ಸಾಯಂಕಾಲ"

ರಾಮಚಂದ್ರ ಅರ್ಥ ತನಗೇ ಎಂಬಂತೆ—

"ನಾನು ಒಂದು ಕಾಗದ ಬರೆದಿದ್ದರೆ ಚೆನ್ನಾಗಿತ್ತು"ಎಂದುಕೊಂಡ. ಅದು ಮೀನಾಕ್ಷಿಗೂ ಕೇಳಿಸಿತು. ಆಗ ಅವಳ ದೃಷ್ಟಿ ಸ್ವಲ್ಪ ದೂರದಲ್ಲಿ ಪೆಟ್ಟಿಗೆ ಹಿಡಿದು ನಿಂತಿದ್ದ ಕೂಲಿಯ ಕಡೆ ಹರಿಯಿತು. ಬಂದವರು ಸುಮ್ಮನೆ ತಂದೆಯವರನ್ನು ಕೇಳಿ ಹೋಗಬಂದಿಲ್ಲ. ಬೇರೆ ಊರಿನವರು ಎಂದು ತೋರಿತು. ಕೂಡಲೇ ಬಾಗಿಲನ್ನು ಪೂರಾ ತೆಗೆದು,

"ಒಳಗೆ ಬನ್ನಿ....ಅಕ್ಕನ್ನ ಕರೀತೇನೆ...." ಎಂದಳು. ಆದರೆ ಅಕ್ಕನ್ನ ಕರಿಯಬೇಕಾಗಿರಲಿಲ್ಲ. ಬಂದವರು ಹೋಗದೇ ಮಾತಾಡುತ್ತಾ ನಿಂತದ್ದು ನೋಡಿ ಅಮ್ಮಯ್ಯ ಒಳಗಿನಿಂದ ಬಂದಳು.

ಮೀನಾಕ್ಷಿಗೆ ಯಾವ ಸುದ್ದಿಯೂ ತಿಳಿಯದಿದ್ದರೂ ಅಮ್ಮಯ್ಯ ರಾಮಚಂದ್ರನ ಕಾಗದವನ್ನು ನೋಡಿದ್ದಳು. ಅವನು ಅಂದೇ ಬರುವ ನೆಂದು ಖಂಡಿತವಾಗಿ ತಿಳಿದಿರದಿದ್ದರೂ ಸಧ್ಯದಲ್ಲೇ ಬರುವನೆಂಬ ನಿರೀಕ್ಷೆ ಇತ್ತು. ಆದರಿಂದ ಕೂಡಲೇ ಬಂದಿರುವವನು ಅವನೇ ಇರಬೇಕೆಂದು ಊಹಿಸಲು ತಡವಾಗಲಿಲ್ಲ.

ರಾಮಚಂದ್ರ ಒಳಗೆ ಬರಲು ಅನುಮಾನಿಸಿದ್ದನ್ನು ನೋಡಿ ಅಮ್ಮಯ್ಯ—

"ಮೀನಾ–ಅವರಿಗೆ ಕಾಲಿಗೆ ನೀರು ಕೊಡಮ್ಮ." ಎಂದಳು.

ಮೀನಾಕ್ಷಿ ಒಳಗೆ ಹೋದಳು. ಕೂಲಿಯವನು ಸಾಮಾನನ್ನು ಪಡಸಾಲೆಯಲ್ಲಿಟ್ಟು ದುಡ್ಡು ತೆಗೆದುಕೊಂಡು ಹೋದ. ರಾಮಚಂದ್ರ ಬೂಡ್ಸುಗಳನ್ನು ಅಲ್ಲೇ ಕಳೆದಿಟ್ಟು ಕಾಲು ತೊಳೆದುಕೊಂಡು ಒಳಗೆ ಬಂದ. ಮೀನಾಕ್ಷಿ ಶಾಸ್ತ್ರಿಗಳ ಕೋಣೆಯ ಬಾಗಿಲನ್ನು ತೆಗೆದು ಅವನನ್ನು ಅಲ್ಲಿ ಕುಳಿತುಕೊಳ್ಳುವಂತೆ ಹೇಳಿದಳು.

ಆ ಕೋಣೆ ಬೀದಿಯ ಜಗಲಿಗೆ ಹೊಂದಿಕೊಂಡಂತೆ ಇತ್ತು. ಶಾಸ್ತ್ರಿಗಳು ಅದನ್ನು 'ಸರಸ್ವತೀ ಮಂದಿರ'ವೆಂದು ಕರೆಯುತ್ತಿದ್ದರು.

ಹೆಸರಿಗೆ ತಕ್ಕಂತೆ ಅದು ನಿಜವಾಗಿಯೂ ಸರಸ್ವತೀ ಮಂದಿರವೇ ಆಗಿತ್ತು. ನಾಲ್ಕು ಗೋಡೆಗಳನ್ನೂ ಆಶ್ರಯಿಸಿದಂತೆ ಗ್ರಂಥರಾಶಿ ಅಡಕವಾಗಿತ್ತು. ಎದುರಿಗೆ ದೊಡ್ಡದಾದ ಸರಸ್ವತಿಯ ಚಿತ್ರ. ನೆಲದಮೇಲೆ ಚಾಪೆಗಳನ್ನು ಹಾಸಿ ಒರಗು ದಿಂಬನ್ನು ಇಟ್ಟಿದ್ದರು. ತಮ್ಮ ಅಧ್ಯಯನವನ್ನೂ, ತಮ್ಮ ಲ್ಲಿಗೆ ಕಲಿಯಲು ಬಂದವರಿಗೆ ಅಭ್ಯಾಸವನ್ನೂ ಇಲ್ಲೇ ಮಾಡಿಸುತ್ತಿದ್ದರು. ಕಾಲು ತೊಳೆಯದೆ ಯಾರೂ ಅಲ್ಲಿಗೆ ಪ್ರವೇಶಿಸುತ್ತಿರಲಿಲ್ಲ.

ರಾಮಚಂದ್ರ ದಿಂಬಿಗೆ ಒರಗಿ ಕುಳಿತು ತನ್ನ ಸುತ್ತ ಇದ್ದ ಪುಸ್ತಕ ಭಂಡಾರವನ್ನು ನಿರುಕಿಸುತ್ತಿದ್ದ. ಅಲ್ಲಿ ಒಂದು ಬಗೆಯ ಶಾಂತ ಗಂಭೀರವಾತಾವರಣ ನೆಲಸಿದಂತೆ ಇತ್ತು. ಅವನಿಗೆ ತಿಳಿಯದಂತೆ ಆಗಲೇ ಶಾಸ್ತ್ರಿಗಳ ಬಗೆಗೆ ಒಂದು ಬಗೆಯ ಗೌರವ ಅವನಲ್ಲಿ ಮೂಡಿತ್ತು.

ರಾಮಚಂದ್ರ ಶಾಸ್ತ್ರಿಗಳು ತಮ್ಮ ತಂದೆಯ ಬಾಲ್ಯ ಮಿತ್ರರೆಂದು ತಿಳಿದಿದ್ದನಲ್ಲದೆ ಅವರನ್ನು ನೋಡಿರಲಿಲ್ಲ. ಊರಿನಿಂದ ಹೊರಟಾಗ ತಾಯಿಯನ್ನು ಅವರ ಮನೆಯ ಗುರುತು ಕೇಳಿದಾಗ ಅವರು—

"ಶಾಸ್ತ್ರಿಗಳ ಮನೆಯೆಂದರೆ ಅದೊಂದು ವಿದ್ಯಾಪೀಠ. ಬೀದಿಯಲ್ಲಿ ಹೋಗುವ ಹುಡುಗರನ್ನು ಕೇಳಿದರೂ ತೋರಿಸುತ್ತಾರೆ. ಅವರ ಮನೆಗೆ ಗುರುತೇಂದರೇನು!" ಎಂದು ಹೇಳಿದ್ದರು. ಅದು ಆದದ್ದೂ ಹಾಗೇ ಆಯಿತು. ಒಬ್ಬ ಕೂಲಿ ಹುಡುಗನಿಗೆ ಹೇಳಿದ ಕೂಡಲೇ ಅವನನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ದ.

ಅಮ್ಮಯ್ಯ ಕೋಣೆಯ ಹೊರಬಾಗಿಲಲ್ಲಿ ನಿಂತು ಮೆಲು ದನಿಯಲ್ಲಿ ಕೇಳಿದಳು—

"ಮನೆಯಲ್ಲಿ ತಾಯಿಯವರು ಸೌಖ್ಯವೇ?"

"ಹೂಂ...." ರಾಮಚಂದ್ರ ಸಂಕೋಚದಿಂದಲೇ ಹೇಳಿದ. ಮನೆಯಲ್ಲಿ ಗಂಡಸರು ಯಾರೂ ಇಲ್ಲದೆ ಸಂಜೆಯವರೆಗೆ ಶಾಸ್ತ್ರಿಗಳಿಗಾಗಿ ಕಾಯುವುದು ಹೇಗೆಂದು ಅವನಿಗೆ ಆಗಲೇ ಯೋಚನೆಯಾಗಿತ್ತು.

"ಮೈಸೂರಿನಲ್ಲಿ ಏನೋ ಕೆಲಸವಿದೆಯೆಂದು ಅಪ್ಪ ಈಗ ತಾನೇ

ಊಟಮಾಡಿಕೊಂಡು ಇದೇ ರೈಲಿನಲ್ಲಿ ಹೋದರು. ಅವರಿಗೆ ನೀವು ಇಂದು ಬರುವ ವಿಚಾರ ಸರಿಯಾಗಿ ತಿಳಿದಿರಲಿಲ್ಲವೇನೋ...."

"ಇಲ್ಲ....ಇಲ್ಲ. ಅವರಿಗೆ ಹೇಗೆ ಗೊತ್ತು? ನಾನು ಮೊದಲು ಮುಂದಿನ ವಾರ ಬರಬೇಕೆಂದಿದ್ದೆ. ಆ ಮೇಲೆ ಸಿಂತ ಹಾಗೆ ಹೊರಟು ಬಿಟ್ಟೆ. ಕಾಗದ ಬರೆಯಲು ಕೂಡ ಅವಕಾಶವಾಗಲಿಲ್ಲ."

"ಚಂದು ಎಲ್ಲೋ ಹೊರಗೆ ಹೋಗಿದ್ದಾನೆ; ಇನ್ನೇನು ಈಗ ಬರ ಬಹುದು." ಎಂದು ಹೇಳಿ ಅಮ್ಮಯ್ಯ ಒಳಗೆ ಜಾರಿದಳು ರಾಮ ಚಂದ್ರ ಅಲ್ಲೇ ಇದ್ದ ಒಂದು ಪುಸ್ತಕವನ್ನು ಮಗುಚಿ ಹಾಕುತ್ತ ಹೊತ್ತು ನೂಕುತ್ತಿದ್ದ. ಮೀನಾಕ್ಷಿ ತಟ್ಟೆಯಲ್ಲಿ ರಸಬಾಳೆ ಹಣ್ಣನ್ನೂ, ಬೆಳ್ಳಿಯ ಲೋಟದಲ್ಲಿ ಕಾಫಿಯನ್ನೂ ತಂದು ಮುಂದಿಟ್ಟಳು. ರಾಮಚಂದ್ರ ಹಣ್ಣು ತಿನ್ನುತ್ತ ಅವಳ ಕಡೆ ನೋಡಿದ. ಮೀನಾ ಇನ್ನೂ ಹುಡುಗಿ. ರಾಮಚಂದ್ರ ನಿಗೆ ಅವಳ ಬಳಿ ಸಂಕೋಚವೆನಿಸಲಿಲ್ಲ. ಮಾತಾಡೋಣವೆನ್ನಿಸಿತು. ಹೇಗೂ ಹೊತ್ತು ಕಳೆಯಬೇಕಲ್ಲ!

"ಶಾಸ್ತ್ರಿಗಳೇ...." ಯಾರೋ ಹೊರಗಿನಿಂದ ಕೂಗಿದರು.

ಮೀನಾಕ್ಷಿ ಹೋಗಿ ಅವರನ್ನು ಕಳಿಸಿ ಬಂದಳು. ರಾಮಚಂದ್ರ ಕಾಫಿ ಕುಡಿದು ಮುಗಿಯುವುದರೊಳಗೆ ಮತ್ತಿಬ್ಬರು ಬಂದರು. ಒಬ್ಬ ವಿದ್ಯಾರ್ಥಿ ಯಾವುದೋ ಪುಸ್ತಕಕ್ಕಾಗಿ ಬಂದ. ಮೀನ ಅದನ್ನು ಆ ರಾಶಿ ಯಲ್ಲಿ ಹುಡುಕಿ ತಂದು ಕೊಟ್ಟಳು.

"ಬರ್ತೀನಿ ತಾಯಿ. ತಂದೆಯವರಿಗೆ ತಿಳಿಸಿಬಿಡಿ. ನಾನು ನಾಳೆ ಪಾಠಕ್ಕೆ ಬರುವುದಿಲ್ಲ."

ಮೀನಾಕ್ಷಿ ಅವನನ್ನು ನಗುಮುಖದಿಂದ ಕಳುಹಿಸಿಕೊಟ್ಟಳು. ವಿದ್ಯಾರ್ಥಿ ಹೊರಟು ಹೋದ. ರಾಮಚಂದ್ರನ ಕಣ್ಣುಗಳು ಅವಳು ತಿರುಗಿ ದತ್ತ ಅವಳನ್ನು ಹಿಂಬಾಲಿಸುತ್ತಿದ್ದುವು. ಅವಳ ವಯಸ್ಸಿನ ಬೇರೆ ಹುಡುಗಿ ಯಾಗಿದ್ದರೆ ಕೈ ಹಿಡಿದು ಕೂರಿಸಿ ಹರಟೆ ಹೊಡೆಯ ಬಹುದಾಗಿತ್ತು. ಆದರೆ ಮೀನಾಕ್ಷಿಯ ನಡಿಗೆಯಲ್ಲಿ ಹುಡುಗಿಯ ಚಪಲತೆಯಿದ್ದರೂ ಕಣ್ಣು ಗಳಲ್ಲಿ ಹಿರಿತನದ ಗಾಂಭೀರ್ಯವಿತ್ತು.

ಸ್ವಲ್ಪ ಹೊತ್ತಿಗೆ ಚಂದು ಹೊರಗೆ ಹೋಗಿದ್ದವನು ಬಂದ. ಮೀನಾ ನಡುಮನೆಯಲ್ಲಿ ಮಣೆ ಹಾಕಿ ಊಟಕ್ಕೆ ಸಿದ್ಧಪಡಿಸುತ್ತಿದ್ದಳು. ಅವರಿಬ್ಬರೂ ಕೈ ಕಾಲು ತೊಳೆದುಕೊಂಡು ಬಂದು ಎಲೆಯ ಮುಂದೆ ಕುಳಿತಾಗ ಮೀನಾಕ್ಷಿ ಅಕ್ಕನೊಂದಿಗೆ ಬಡಿಸುತ್ತಿದ್ದಳು. ಅದನ್ನು ನೋಡಿ ರಾಮಚಂದ್ರನ ಆಶ್ಚರ್ಯಕ್ಕೆ ಮಿತಿಯಿರಲಿಲ್ಲ. ಬೆಂಗಳೂರಿನಲ್ಲಿ ಅವನಿದ್ದ ಮನೆಯ ಮುಂಭಾಗದಲ್ಲಿದ್ದ ದೊಡ್ಡಮನೆಯಲ್ಲಿ ಮೀನಾಕ್ಷಿಯ ವಯಸ್ಸಿನ ಹುಡುಗಿಯರಿದ್ದರು. ಮಂಡಿಯ ಮೇಲಕ್ಕೆ ಲಂಗ ಹಾಕಿಕೊಂಡು ಹಗ್ಗವನ್ನು ಹಿಡಿದು ಗಿಡದ ಕೆಳಗೆ ಕುಣಿಯುತ್ತ ಇದ್ದ ಅವರನ್ನು ರಾಮಚಂದ್ರ ದಿನಕ್ಕೆ ಹತ್ತಾರು ಸಲ ತನ್ನ ಮನೆಗೆ ಹೋಗುವಾಗ ಬರುವಾಗ ಸಂಧಿಸುತ್ತಿದ್ದ. ತಿಂಗಳಿಗೊಮ್ಮೆ ಬಾಡಿಗೆ ಸಲ್ಲಿಸುವಾಗ ಅವರ ಮನೆಗೂ ಹೋಗಬೇಕಾಗುತ್ತಿತ್ತು. ಒಂದು ಸಲ ಹಾಗೆ ಹೋದಾಗ ಆ ಹುಡುಗಿಯನ್ನು "ಅಪ್ಪ ಇದಾರೆಯೇ?" ಎಂದು ಕೇಳಿದ. ಆಟದ ಸಂಭ್ರಮದಲ್ಲಿ ಆ ಮಾತು ಹುಡುಗಿಗೆ ಕೇಳಿರಲಿಲ್ಲ. ಆಡಿದ ಮಾತನ್ನು ಕೇಳಿ ಅದಕ್ಕೆ ಉತ್ತರ ಕೊಡುವಷ್ಟು ಸಹನೆಯೂ ಇದ್ದಿರಲಾರದು. ನಾಲ್ಕು ಸಲ ಮತ್ತೆ ಅದೇ ಪ್ರಶ್ನೆಯನ್ನು ಕೇಳಿದ ಮೇಲೆ "ಗೊತ್ತಿಲ್ಲ."ಎಂದು ಉತ್ತರ ಬಂತು.

ಅವಳೆಲ್ಲಿ? ಇವಳೆಲ್ಲಿ?

ರಾಮಚಂದ್ರ ಮನಸ್ಸಿನ ತಕ್ಕಡಿಯಲ್ಲಿ ಇಬ್ಬರನ್ನೂ ತೂಗಿ ನೋಡುತ್ತಿದ್ದ. ಮೀನಾಕ್ಷಿ ಸೀರೆಯುನ್ನುಟ್ಟು ಚಿಕ್ಕ ಯಜಮಾನಿಯಂತೆ ಅಕ್ಕನಿಗೆ ನೆರವಾಗುತ್ತಿದ್ದಳು. ಅವಳ ನಡೆ ನುಡಿ ಯಾವುದರಲ್ಲೂ ಹುಡುಗಿಯ ಚೆಲ್ಲಾಟ ಕಾಣಿಸುತ್ತಿರಲಿಲ್ಲ. ಹಾಗೆಂದು ಮುಖ ಮುದುರಿ ಒಳಗೇನು ಇರಲಿಲ್ಲ. ತಂದೆ ಮನೆಯಲ್ಲಿ ಇಲ್ಲದಿದ್ದರೂ ಹೊಸಬನಾದ ತನ್ನನ್ನು ಎಷ್ಟು ನಯದಿಂದ ಸ್ವಾಗತ ಮಾಡಿದಳು. ಚಂದು ಬರುವವರೆಗೆ ತನಗೆ ಒಬ್ಬನಿಗೇ ಬೇಸರವಾಗದಂತೆ ಅಲ್ಲೇ ದೂರ ಕುಳಿತು ಮಾತಾಡುತ್ತಿದ್ದಳು. ಕೇಳಿದ ಪ್ರಶ್ನೆಗೆ ಮರ್ಯಾದೆಯಿಂದ ಕೊಡುತ್ತಿದ್ದ ಉತ್ತರ ಮನಮೆಚ್ಚಿಸುವಂತಿತ್ತು. ಶಾಸ್ತ್ರಿಗಳ ಬಳಿಗೆ ಬರುತ್ತಿದ್ದ ವಿದ್ಯಾರ್ಥಿಗಳ ಜೊತೆ ವ್ಯವಹರಿಸಿ

ಮೀನಾಕ್ಷಿಗೆ ಆ ಬಗೆಯ ವರ್ತನೆ ಸಹಜವಾಗಿತ್ತು. ಅದನ್ನು ತಿಳಿಯದ ರಾಮಚಂದ್ರನಿಗೆ ಅದು ನವೀನವಾಗಿ ತೋರಿತು.

ಶಾಸ್ತ್ರಿಗಳು ಸಾಯಂಕಾಲ ಬರಲಿಲ್ಲ. ಅವರಿಗೆ ಆ ರೈಲು ತಪ್ಪಿದ್ದರಿಂದ ರಾತ್ರೆ ಹತ್ತು ಗಂಟೆಯ ರೈಲಿಗೆ ಬಂದರು. ಅವರು ಹಣ್ಣಿನ ಚೀಲವನ್ನು ಹೊತ್ತು ಮನೆಗೆ ಬಂದಾಗ ಬಾಗಿಲಿನಲ್ಲಿ ಎದುರಿಸಿದ ನೋಟ ಅವರ ಆಯಾಸವನ್ನು ಮರೆಸಿತು. ಬಾಗಿಲಿನ ಎದುರಿಗೆ ದೀಪದ ಕೆಳಗೆ ರಾಮಚಂದ್ರ ಚಂದು ಇಬ್ಬರೂ ಚಾಪೆಯ ಮೇಲೆ ಕುಳಿತು ಮಾತಾಡುತ್ತಿದ್ದರು.

ಅವರಿಗೆ ಸ್ವಲ್ಪ ದೂರದಲ್ಲಿ ಮೀನಾಕ್ಷಿ ಕುಳಿತ್ತಿದ್ದಳು. ಅವರೆಲ್ಲ ರಾತ್ರಿಯೂಟವನ್ನು ಮುಗಿಸಿ ಶಾಸ್ತ್ರಿಗಳು ಬರುವುದನ್ನು ಕಾಯುತ್ತಿದ್ದರು. ಮಾತಿನೊಡನೆ ಮುಂದುಗಡೆ ತಟ್ಟೆಯಲ್ಲಿದ್ದ ಹುರಿಗಾಳೂ ಮುಗಿಯುತ್ತಿತ್ತು.

ಶಾಸ್ತ್ರಿಗಳು ಬಾಗಿಲಿಗೆ ಬಂದ ಮೀನಾಕ್ಷಿಯ ಕೈ ಹಿಡಿದುಕೊಂಡೇ ಒಳಗೆ ಬಂದರು. ರಾಮಚಂದ್ರ ಎದ್ದು ನಮಸ್ಕಾರ ಮಾಡಿದ. ಅವರು ಅವನನ್ನು ಬಾಚಿ ತಬ್ಬಿಕೊಂಡು—

"ನನ್ನಪ್ಪ—ನೂರು ವರ್ಷ ಸುಖವಾಗಿ ಬಾಳು. ಈ ದಿನ ಗೋಪುವೇ ಪುನಃ ನನ್ನ ಮನೆಗೆ ಬಂದಂತಾಯಿತು!" ಎಂದರು ಈ ಮಾತು ಹೇಳಿದಾಗ ಅವರ ಗಂಟಲು ಬಿಗಿದು ಕಣ್ಣುಗಳಲ್ಲಿ ನೀರು ತುಂಬಿತು

ರಾಮಚಂದ್ರ ಆ ರಾತ್ರಿ ಅಲ್ಲಿದ್ದು ತನಗೆ ಬೇಕಾಗಿದ್ದ ಕಾಗದವನ್ನು ತೆಗೆದುಕೊಂಡು ಮಾರನೆ ದಿವಸ ತನ್ನ ಕೆಲಸದ ಮೇಲೆ ಹೊರಟ. ಶಾಸ್ತ್ರಿಗಳು ಅವನಿಗೆ ಸೊಗಸಾದ ಔತಣ ಮಾಡಿಸಿ ಬಾಗಿಲವರೆಗೆ ಬಂದು ಬೀಳ್ಕೊಟ್ಟರು. ಆ ಒಂದು ದಿವಸದಲ್ಲಿ ಅವರು ತೋರಿಸಿದ ಆದರ, ವಿಶ್ವಾಸ ಅವನನ್ನು ಸೆರೆ ಹಿಡಿದಿತು. ಅಲ್ಲಿಂದ ಹೊರಟಾಗ ಅವನಿಗೆ ಯಾರೋ ಆಪ್ತರನ್ನು ಬಿಟ್ಟು ದೂರ ಹೋಗುತ್ತಿರುವಂತೆ ಭಾಸವಾಯಿತು.

ಶಾಸ್ತ್ರಿಗಳು ರಾಯರ ಸಲಹೆಯನ್ನು ಮರೆಯಲಿಲ್ಲ. ಒಂದು ಹದಿನೈದು ದಿವಸ ಕಳೆದ ಮೇಲೆ ಬೆಂಗಳೂರಿಗೆ ಹೋದರು. ಆ ದಿನ ಭಾನುವಾರವಾದ್ದರಿಂದ ರಾಮಚಂದ್ರ ಮನೆಯಲ್ಲೇ ಇದ್ದ. ಊಟ ಉಪಚಾರ ಎಲ್ಲಾ ಆದ ಮೇಲೆ ಶಾಸ್ತ್ರಿಗಳು ಮದುವೆಯ ಪ್ರಸ್ತಾಪ ಮಾಡಿದರು.

ರಾಮಚಂದ್ರನ ತಾಯಿ—

"ನನ್ನದೇನೂ ಇಲ್ಲಪ್ಪ. ನೀವೂ ಅವರು ಅಣ್ಣತಮ್ಮಂದಿರಂತೆ ಇದ್ದೀರಿ. ನಿಮ್ಮ ಸಂಬಂಧ ಬೆಳೆಸಲು ಯೋಚಿಸಬೇಕಾಗಿಯೇ ಇಲ್ಲ. ಅವನು ಒಪ್ಪಿದರಾಯಿತು." ಎಂದು ಹೇಳಿ ಹೊಣೆಯನ್ನು ಮಗನ ಮೇಲೆ ಹಾಕಿದರು.

ರಾಮಚಂದ್ರನಿಗೆ ಆ ಪ್ರಸ್ತಾಪದಿಂದ ಸಂತೋಷ ಆಶ್ಚರ್ಯ ಎರಡೂ ಆದುವು. ಒಂದು ಕ್ಷಣ ಅವನಿಗೆ ಆ ಮಾತಿನ ಅರ್ಥ ಆಗಲಿಲ್ಲ. ಮೀನಾಕ್ಷಿಯೊಡನೆ ತನ್ನ ಮದುವೆ? ಅಸಂಭವ ಎನಿಸಿತು. ಯಾಕಾಗಬಾರದು? ಮನಸ್ಸು ಹೊಯ್ದಾಡಿತು. ಅವನು ರಂಗನೂರಿನಲ್ಲಿ ಶಾಸ್ತ್ರಿಗಳ ಮನೆಯಲ್ಲಿ ಅತಿಥಿಯಾಗಿದ್ದಾಗ ಒಂದು ಸಲವೂ ಅವನಿಗೆ ಆ ಭಾವನೆ ಬಂದಿರಲಿಲ್ಲ. ಅದು ಹೇಗೆ ಬರಲಿಲ್ಲವೋ ಅವನಿಗೇ ತಿಳಿಯದು.

"ಜಾತಕ ಬಹಳ ಚೆನ್ನಾಗಿ ಹೊಂದಿಕೆಯಾಗಿದೆ. ಗೋಪು ಇದ್ದಿದ್ದರೆ ನನಗೆ ಕಷ್ಟವೇ ಇರಲಿಲ್ಲ. ನೀನು ಅವನಿಗೆ ತಕ್ಕ ಮಗ. ಅದೂ ತಾಯಿಯಿಲ್ಲದ ಮಗು. ಅದನ್ನು ಒಬ್ಬ ಸತ್ಪಾತ್ರನ ಕೈಲಿಟ್ಟರೆ ಸಾಕು."

ರಾಮಚಂದ್ರ ಸುಮ್ಮನಿದ್ದುದನ್ನು ನೋಡಿ ಶಾಸ್ತ್ರಿಗಳು—

"ಮುಂದಿನ ಶನಿವಾರ ಭಾನುವಾರ ಮಗನನ್ನೂ ಕರೆದುಕೊಂಡು ಬನ್ನಿ. ಹುಡುಗಿಯನ್ನು ನೋಡಿದ ಹಾಗೂ ಆಯಿತು." ಎಂದರು.

ರಾಮಚಂದ್ರನ ಮುಂದೆ ರಂಗನೂರಿನಲ್ಲಿ ಕಳೆದ ದಿನದ ಚಿತ್ರ ಮತ್ತೆ ಸುಳಿಯಿತು. ಅಲ್ಲಿ ಹೋಗಿ ಮೀನಾಕ್ಷಿಯನ್ನು ಮತ್ತೊಮ್ಮೆ ನೋಡಲು ಹೃದಯ ತವಕಗೊಂಡಿತು. ಅವನು ಉತ್ತರ ಕೊಡುವ ಮೊದಲೇ ಅವನ ತಾಯಿ,

"ಹುಡುಗಿಯನ್ನು ನಾನೇನೂ ನೋಡಬೇಕಾಗಿಲ್ಲ. ನಾವು ಹಳೆಯ ತರಹದವರು. ಅದೆಲ್ಲಾ ನಮಗೆ ಬೇಕಾಗಿಯೂ ಇಲ್ಲ. ಅವನು ಹೇಗೂ ನಿಮ್ಮ ಮಗಳನ್ನು ನೋಡಿಯೇ ಇದಾನೆ. ಅಷ್ಟೇ ಅಲ್ಲ...."

ರಾಮಚಂದ್ರ ಸುಮ್ಮನಿರುವಂತೆ ತಾಯಿಗೆ ಕಣ್ಣು ಸನ್ನೆ ಮಾಡಿದ. ಮುಂದೆ ಅವರು ಏನು ಹೇಳುವರೆಂದು ಅವನಿಗೆ ಗೊತ್ತಿತ್ತು! ಆದರೆ ಅವರು ಅವನ ಕಡೆ ತಿರುಗದೆ ತಮ್ಮ ಮಾತನ್ನು ಮುಂದುವರೆಸಿದರು

"ಅಲ್ಲಿಂದ ಬಂದಾಗಿನಿಂದ ಅವಳನ್ನು ಹೊಗಳುವುದೇ ಆಗಿದೆ. ಋಣಾನುಬಂಧವಿದ್ದರೆ ಒಪ್ಪಿಕೋತಾನೆ."

ಮತ್ತೊಮ್ಮೆ ರಂಗನೂರಿಗೆ ಹೋಗುವ ಹಂಚಿಕೆ ಅಲ್ಲಿಗೇ ಮುಗಿಯಿತು. ರಾಮಚಂದ್ರ ಹೆಚ್ಚು ಉಪಚಾರ ಹೇಳಿಸಿಕೊಳ್ಳದೇ ಮದುವೆಗೆ ಒಪ್ಪಿಕೊಂಡ.

ಮಾಘಮಾಸದಲ್ಲಿ ಲಗ್ನವೆಂದು ಖಂಡಿತವಾಯಿತು. ಶಾಸ್ತ್ರಿಗಳು ಬರುವಾಗಲೇ ಅದನ್ನೂ ನಿಷ್ಕರ್ಷೆ ಮಾಡಿಕೊಂಡೇ ಬಂದಿದ್ದರು. ಮನೆಯಲ್ಲಿ ಮದುವೆಯ ಸಡಗರ ಅಂದಿನಿಂದಲೇ ಮೊದಲಾಯಿತು ಸಾಮಾನ್ಯವಾಗಿ ಸಣ್ಣ ಊರುಗಳಲ್ಲಿ ಒಬ್ಬರ ಮನೆಯಲ್ಲಿ ಮದುವೆ ಮುಂಜಿ ಆದರೆ ನೆರೆ ಹೊರೆಯುವರು ಹತ್ತು ಜನ ಸೇರಿ ಅದರ ಕೆಲಸವನ್ನು ನಡೆಸುತ್ತಾರೆ. ಶಾಸ್ತ್ರಿಗಳ ಹೆಂಡತಿ ಬದುಕಿದ್ದಾಗ ಹತ್ತು ಜನರಿಗೆ ಕಷ್ಟಸುಖಗಳಲ್ಲಿ ನೆರವಾಗಿದ್ದವರು. ಈಗ ಅವರಿಲ್ಲ. ಅಮ್ಮಯ್ಯ ಇನ್ನೂ ಚಿಕ್ಕವಳು. ಅವಳಿಗೆ ಏನು ತಿಳಿಯುತ್ತೆ? ಎಂದು ದೊಡ್ಡವರಾಗಿದ್ದವರು ತಾವಾಗಿಯೇ ನೆರವಿಗೆ ಬಂದರು. ಹಪ್ಪಳ, ಸಂಡಿಗೆ ಮೊದಲಾದುವೆಲ್ಲಾ ಒಂದೊಂದಾಗಿ ತಯಾರಾದವು. ಮನೆ ನೆಂಟರಿಂದಲೂ ಸ್ನೇಹಿತರಿಂದಲೂ ತುಂಬಿತು. ಶಾಸ್ತ್ರಿಗಳು ತಮ್ಮ ಶಕ್ತಿ ಮೀರಿ ಖರ್ಚುಮಾಡುತ್ತಿದ್ದರು

ಬೀಗರು ಬರುವ ದಿನ ಶಾಸ್ತ್ರಿಗಳು ಅವರನ್ನು ಎದುರುಗೊಳ್ಳಲು ಓಲಗ ತೆಗೆಸಿಕೊಂಡು ಎಲ್ಲರೊಡನೆ ನಿಲ್ದಾಣಕ್ಕೆ ಹೋಗಿದ್ದರು. ಅಲ್ಲೇ ಹಾರಹಾಕಿ ಎದುರುಗೊಂಡು ಗಾಡಿಯಲ್ಲಿ ಕೂರಿಸಿ ಮೆರವಣಿಗೆಯಲ್ಲಿ ಮನೆಗೆ ಕರೆತಂದರು. ರಾಮಚಂದ್ರನ ಮನಸ್ಸು ಮೀನಾಕ್ಷಿ ಅಂದು ತನಗೆ

ಕಾಲಿಗೆ ನೀರುಕೊಟ್ಟು "ಒಳಗೆ ಬನ್ನಿ" ಎಂದು ಕರೆದುದನ್ನು ನೆನೆಯು ತ್ತಿತ್ತು. ಅಂದು ಅತಿಥಿಯಾಗಿ ಹೋದವನಿಗೇ ಅಷ್ಟು ಆದರ; ಇಂದು ಸ್ವಾಮಿಯಾಗುವವನಾಗಿ ಹೋದರೆ ಎಂತಿರಬಹುದು ? ಎಂದು ಎಣಿಕೆ ಹಾಕುತ್ತಿತ್ತು. ಆದರೆ ಮದುವಣಗಿತ್ತಿಯಾದ ಮೀನಾಕ್ಷಿ ಮುಹೂರ್ತದ ವರೆಗೂ ತನ್ನ ಎದುರಿಗೂ ಬರಲಾರಳೆಂಬುದು ಅವನಿಗೆ ತೋರೀರಲಿಲ್ಲ.

ನಿಜ. ಇಂದು ಮೀನಾಕ್ಷಿ ಮದುಮಗಳು. ಅಮ್ಮಯ್ಯ ಅವಳಿಗೆ ಹೊಸ ಸೀರೆ ಉಡಿಸಿ ಮೈ ತುಂಬ ಒಡವೆ ಇಟ್ಟು ಅಲಂಕಾರ ಮಾಡಿ ದ್ದಳು. ಮನೆಯಲ್ಲಿ ಆಡುತ್ತಿದ್ದ ಮಾತುಗಳಿಂದು ಅವಳಿಗೆ ತನಗೆ ಮದುವೆ ಯೆಂದು ತಿಳಿದಿದ್ದಿತು. ಎಲ್ಲರೂ ಸುತ್ತಿಕೊಂಡು ಕೆಲಸ ಮಾಡುತ್ತಿದ್ದಾಗ ತಾನೂ ಜೊತೆಗೆ ಹೋಗುತ್ತಿದ್ದಳು. ಶಾಸ್ತ್ರಿಗಳು ಜವಳಿಯನ್ನು ತಂದ ದಿನ ಸೀರೆಯ ಗಂಟನ್ನು ಮಗಳ ಮುಂದಿಟ್ಟು "ಮೀನಾ-ಇದರಲ್ಲಿ ಯಾವುದು ಚೆನ್ನಾಗಿದೆ ನೋಡಮ್ಮ" ಎಂದು ಕೇಳಿದಾಗ ಮೀನಾಕ್ಷಿ—

"ಯಾವುದಾದರೂ ಸರಿ; ಅಕ್ಕನಿಗೆ ತೋರಿಸಿ." ಎಂದು ಹೇಳಿ ದ್ದಳು.

ನೆಂಟರೆಲ್ಲಾ ಮನೆಗೆ ಬರುತ್ತಾರೆ. ಹೊಸಸೀರೆ ಉಟ್ಟುಕೊಂಡು ಎಲ್ಲರೊಡನೆ ಓಡಾಡಿಕೊಂಡಿರಬಹುದು ಎಂದು ಕೊಂಡಿದ್ದಳು ಮೀನಾಕ್ಷಿ. ಅವಳಿಗೆ ಮದುವೆ ಎಂದರೆ ಅದಕ್ಕಿಂತ ಹೆಚ್ಚಿನ ಅರ್ಥ ತೋರಿರಲಿಲ್ಲ.

ಮದುವೆಯ ಕೆಲಸ ಭರದಿಂದ ನಡೆಯುತ್ತಿದ್ದಾಗ ಒಂದು ದಿನ ಅಮ್ಮಯ್ಯ ಮೀನಾಕ್ಷಿಗೆ ತಲೆ ಬಾಚುತ್ತ—

"ಮೀನಾ-ಇನ್ನು ಎಂಟು ದಿನಕ್ಕೆ ನಿನಗೆ ಮದುವೆ. ನಿನಗೆ ಬರುವ ಹಾಡುಗಳನ್ನೆಲ್ಲಾ ಚೆನ್ನಾಗಿ ಅಭ್ಯಾಸ ಮಾಡಿಕೋಮ್ಮ" ಎಂದಳು. ಮೀನಾ ಸುಮ್ಮನಿದ್ದಳು. ಅಮ್ಮಯ್ಯ ಪುನಃ—

"ಇದೇನೇ ಹುಡುಗಿ ಸುಮ್ಮನಾದೆ. ಮದುವೆಯಾದರೆ ನಿನಗೆ ಸಂತೋಷವಿಲ್ಲವೆ ?" ಎಂದು ಕೇಳಿದಳು.

"ಮದುವೆಯಾದರೆ ಸಂತೋಷವೇಕೆ ?"

"ಯಾಕೆ.....? ಗಂಡ ಬರ್‍ತಾನೆ ಅಂತ!"

"ಅಕ್ಕ........ನಿನ್ನ ಗಂಡ ಬಂದಾಗ ನೀನೂ ಸಂತೋಷಪಟ್ಟಿದ್ದೆಯೇನು ?"

"ಏನ್ಮಾಡಿದ್ದೆನೋ....ಹಾಳು! ಯಾರಿಗೆ ಗೊತ್ತು? ಸಧ್ಯ ನನ್ನ ಮಾತು ತೆಗೀಬೇಡ ತಾಯಿ!''

"ಯಾಕಕ್ಕ ಕೇಳಬಾರದು. ನೋಡು ನಿನ್ನ ಕಣ್ಣಲ್ಲಿ ಆಗಲೇ ನೀರು ಬರ್ತಿದೆ. ನೀನು ಅಳುವಾಗ ನನಗೆ ನಗುವೆ ?"

''ಛಿ....ಹುಚ್ಚಿ. ಅತ್ತೋರ್‍ಯಾರು ? ಕಣ್ಣಿಗೆ ಏನೋ ಕಸ ಹಾರಿತು"

ಅಮ್ಮಯ್ಯ ಸೆರಗಿನ ಕೊನೆಯಿಂದ ಕಣ್ಣೊರಸಿಕೊಳ್ಳುತ್ತ ಹೇಳಿದಳು.

"ಈಗ ಕಸ ಬಿದ್ದಿರಬಹುದು. ನಾನು ಎಷ್ಟೋಸಲ ನೀನು ಕಣ್ಣೀರು ಹಾಕುವುದನ್ನು ನೋಡಿದೇನೆ."

"ಅದು ನನ್ನ ದುರ್ದೈವದ ಮುಗು. ಅದಕ್ಕೆ ಯಾರೇನು ಮಾಡುವರು ? ನೀನು ನೂರುವರ್ಷ ಗಂಡನೊಂದಿಗೆ ಸುಖವಾಗಿರು."

ಮೀನಾಕ್ಷಿಗೆ ಆ ಮಾತಿನಲ್ಲಿ ಅಷ್ಟು ನಂಬಿಕೆಯಾಗಲಿಲ್ಲ. ಅನುಮಾನದಿಂದ ಅಕ್ಕನ ಮುಖವನ್ನೇ ನೋಡುತ್ತಿದ್ದಳು. ಅಮ್ಮಯ್ಯ ಅವಳಿಗೆ ಮುಂದಲೆ ಬಾಚಿ ಹಣೆಗೆ ಕುಂಕುಮ ಇಟ್ಟು ಪ್ರೀತಿಯಿಂದ ಗಲ್ಲವನ್ನು ಸವರುತ್ತ—

"ಗಂಡು ನಿನ್ನ ಮನಸ್ಸಿಗೆ ಒಪ್ಪಿತೆ ಮೀನಾ ?" ಎಂದು ಕೇಳಿದಳು.

''ಯಾವ ಗಂಡು ?''

"ಇದೇನೇ ಮೀನಾ ಹೀಗೆ ಕೇಳ್ತಿ ? ಯಾವ ಗಂಡು ಅಂದರೆ ನೀನು ಮದುವೆಯಾಗುವ ಗಂಡು!"

"ಯಾರಕ್ಕ ಅದು ? ನನಗೆ ಗೊತ್ತಾಗಲಿಲ್ಲ!"

"ಅಯ್ಯೋ.... ಪಾಪ.....ಗೊತ್ತಿಲ್ಲ ಅಲ್ವೆ.... ? ಅವತ್ತು ಅಪ್ಪ ಊರಲ್ಲಿ ಇಲ್ಲದಿದ್ದಾಗ ಬಂದಿರಲಿಲ್ವೇ ಅವರೇ.... ಈಗಲಾದರೂ ತಿಳಿಯಿತೋ....?"

"ಅಪ್ಪ ಊರಲ್ಲಿಲ್ಲದಾಗ ಅವರನ್ನ ಹುಡುಕಿಕೊಂಡು ಎಷ್ಟೋ ಜನ ಬಂದಿದ್ದರು. ಶೀನಪ್ಪ ಯಾವುದೋ ಪುಸ್ತಕ ಬೇಕೆಂದು ಬಂದಿದ್ದ. ನೆರೆ

ಮನೆ ರಂಗರಾಯರು ಅವರ ಮೊಮ್ಮಗಳೊಡನೆ ಬಂದಿದ್ದರು. ಗಾರೆ ಕೆಲಸದ...."

"ಸಾಕು ಸುಮ್ಮನಿರೆ. ಈ ಜಾಣತನವೆಲ್ಲಾ ಗೊತ್ತಿದೆ. ಬಂದಿದ್ದವರ ಹೆಸರನ್ನೆಲ್ಲಾ ಸಾಲಿಗೆ ಪಟ್ಟಿಮಾಡಿ ಒಪ್ಪಿಸಿಬಿಟ್ಟೆಯಲ್ಲ–ಇನ್ಯಾರೂ ಬಂದಿರಲಿಲ್ವೇನು ?

"ಏನೋ ನನಗೆ ನೆನಪಿಲ್ಲ !"

"ಪಾಪ....ಹೇಗಿರುತ್ತೆ ಹೇಳು. ಕರೆದು ಕೋಣೆಯಲ್ಲಿ ಕೂರಿಸಿ ಉಪಚಾರ ಮಾಡುವಾಗ ಮಾತ್ರ ಹೇಗಿತ್ತೋ......?"

"ನಾನೇನು ಉಪಚಾರ ಮಾಡಿದೆ ಅಕ್ಕ ? ನೀನು ಕಾಫಿ ಮಾಡಿ ಕೊಟ್ಟು, ಕೊಡು ಅಂತ ಹೇಳಿದೆ. ನಾನು ಕೊಟ್ಟೆ ಅಷ್ಟೆ ! ಚಂದು ಕೂಡ ಮನೇಲಿರಲಿಲ್ಲ. ಇನ್ನೇನು ಮಾಡೋದು...."

"ಅದು ತಪ್ಪು ಎನ್ನಲಿಲ್ಲ ನಾನು....ಯಾರು ಎನ್ನುವುದು ಈಗಲಾದರೂ ತಿಳೀತಲ್ಲ. ಬಿಡು !"

"ಈಗ ತಿಳಿದರೆ ತಾನೇ ಏನು? ಹೇಗೂ ಮದುವೆ ಖಂಡಿತವಾಗಿದೆ. ಅದೇನೂ ನಿಲ್ಲುವಂತಿಲ್ಲವಲ್ಲ !"

"ಅದೇಕೆ ಹಾಗೆನ್ನುವೆ ಮೀನಾ....ನಿನಗೆ ಇಷ್ಟವಿಲ್ಲವೇ ?"

"ನನ್ನ ಇಷ್ಟ ಕೇಳಿದೋರು ಯಾರಕ್ಕ ?"

ಮೀನಾ ನಗುತ್ತಲೇ ಆ ಮಾತು ಕೇಳಿದಳು. ಆದರೂ ಅದು ಅಮ್ಮಯ್ಯನ ಎದೆಗೆ ಚುಚ್ಚಿದಂತಾಯಿತು. ಹುಡುಗಾಟದಲ್ಲಿ ಮೊದಲಾದ ಮಾತು ಗಂಭೀರವಾಯಿತು.

"ಮೀನಾ–ನೀನು ಇನ್ನೂ ಮಗು. ನಿನ್ನ ಹಿತ ನಿನಗಿಂತ ಹೆಚ್ಚಾಗಿ ನಮಗೆ ತಿಳಿಯುವುದೆಂದು ಅಪ್ಪ ನಿನ್ನ ಏನೂ ಕೇಳಿರಲಾರರು."

"ಅದು ಸರಿ; ಹಾಗೆಂದ ಮೇಲೆ ನನ್ನ 'ಮನಸ್ಸಿಗೆ ಬಂತೆ?' ಎಂದು ಕೇಳುವ ಕಾರಣವೇ ಉಳಿಯಲಿಲ್ಲವಲ್ಲ !"

ಅಮ್ಮಯ್ಯನಿಗೆ ಏನು ಹೇಳಬೇಕೋ ತಿಳಿಯದಾಯಿತು. ಮಾತಾಡದೆ ಎದ್ದು ತನ್ನ ಕೆಲಸಕ್ಕೆ ಹೋದಳು.

*  *  *  *  *  *

ಬೀಗರನ್ನು ಶಾಸ್ತ್ರಿಗಳ ಮನೆಗೆ ಹತ್ತಿರದಲ್ಲಿದ್ದ ಇನ್ನೊಂದು ಮನೆಯಲ್ಲಿ ಇಳಿಸಿದ್ದರು. ರೈಲಿನಿಂದ ಬಂದ ಮೇಲೆ ಎಲ್ಲರಿಗೂ ಉಪ್ಪಿಟ್ಟು, ಇಡ್ಲಿ, ಬಾಳೇಹಣ್ಣು ಫಲಹಾರವಾಯಿತು. ಕಾಫಿ ಪಾನಕ ಎಳನೀರು ಇವುಗಳ ಸಂತರ್ಪಣೆಯೂ ಆಯಿತು. ಗಂಡಸರು ಅಲ್ಲಲ್ಲಿ ಕುಳಿತು ಮಾತಾಡುತ್ತಿದ್ದರು. ಹೆಂಗಸರು ತಲೆ ಬಾಚಿ ಹೊಸಸೀರೆ ಉಟ್ಟು 'ವರ ಪೂಜೆಗೆ' ಸಿದ್ಧವಾಗುತ್ತಿದ್ದರು. ಊರಿನ ಸಂಪ್ರದಾಯದಂತೆ 'ವರ ಪೂಜೆ' ದೇವಸ್ಥಾನದಲ್ಲಿ ನಡೆಯಿತು. ಎಲ್ಲರಿಗೂ ದಕ್ಷಿಣೆ ತಾಂಬೂಲ ಕೊಟ್ಟ ಮೇಲೆ ವರನನ್ನು ಕುದುರೆ ಗಾಡಿಯಲ್ಲಿ ಕೂರಿಸಿ ಊರು ಸುತ್ತ ಮೆರವಣಿಗೆ ಹೊರಟಿತು.

ರಂಗನೂರಿನ ಓಲಗ ಬಹಳ ಹೆಸರುವಾಸಿಯಾದದ್ದು. ಮೈಸೂರಿನ ಸಾಹುಕಾರರು ಅನೇಕ ವೇಳೆ ಅವರನ್ನು ಕರೆಸಿದ್ದುಂಟು. ಮುಂದುಗಡೆ ಓಲಗದವರು, ಅವರ ಹಿಂದೆ ಗಂಡಸರು, ಆಮೇಲೆ ಗಾಡಿ, ಅದನ್ನು ಅನುಸರಿಸಿ ಹೆಣ್ಣು ಮಕ್ಕಳು ತಟ್ಟೆಗಳನ್ನು ಹಿಡಿದು ಹೊರಟಿದ್ದರು. ಎರಡು ಕಡೆಯೂ ದೀಪದ ಸಾಲು, ಮೆರವಣಿಗೆ ಮೆಲ್ಲಗೆ ಸಾಗಿತ್ತು. ಒಂದೊಂದು ಚೌಕದಲ್ಲೂ ಓಲಗದವರು ತಮ್ಮ ಕೌಶಲವನ್ನು ಪ್ರದರ್ಶಿಸುತ್ತ ನಿಲ್ಲುತ್ತಿದ್ದರು. ಹೀಗಾಗಿ ಮೆರವಣಿಗೆಯನ್ನು ಮುಗಿಸಿ ಮನೆಯನ್ನು ಸೇರುವ ಹೊತ್ತಿಗೆ ಹೊತ್ತು ಹತ್ತು ಗಂಟೆಯನ್ನು ಮೀರಿತ್ತು.

ರಾಮಚಂದ್ರನಿಗೆ ಕೂತು ಕೂತು ಬೇಸರ ಬಂದಿತ್ತು. "ಇವೆಲ್ಲಾ ಏನು ಪದ್ಧತಿಯೋ" ಎಂದುಕೊಂಡ.

ಕೊನೆಗೊಮ್ಮೆ ಮನೆಯನ್ನು ಸೇರಿದಾಗ ಅಲ್ಲಿ ಎಲೆ ಹಾಕಿ ಊಟಕ್ಕೆ ಸಿದ್ಧಮಾಡಿದ್ದರು. ಗಂಡಸರೆಲ್ಲಾ ಚಪ್ಪರದಲ್ಲೂ ಹೆಂಗಸರು ಮನೆಯ ಒಳಗೂ ಕುಳಿತ್ತಿದ್ದರು. ಅಮ್ಮಯ್ಯ ಮೀನಾಕ್ಷಿಯನ್ನು ಹುಡುಕುತ್ತಿದ್ದಳು. ಗಂಡಿನ ಕಡೆಯವರೆಲ್ಲ ಹುಡುಗಿಯನ್ನು ನೋಡಲು ಆತುರರಾಗಿದ್ದರು.

ಮೆರವಣಿಗೆ ಹೊರಟಾಗ ಎಲ್ಲರೊಡನೆ ತಾನೂ ಹೋಗಲು ಮೀನಾಕ್ಷಿ ಹೊರಟಿದ್ದಳು. ಅಮ್ಮಯ್ಯ ಅವಳನ್ನು ಕೈ ಹಿಡಿದು ನಿಲ್ಲಿಸಿ–

"ಇದೇನು ಮೀನಾ ನೀನು ಹೋಗೋದುಂಟೆ? ನೀನು ಮದು ಮಗಳು. ಹಾಗೆಲ್ಲಾ ಹೊರಗೆ ಹೋಗಬಾರದು. ಗಂಭೀರವಾಗಿ ಒಳಗೆ ಕೂತಿರಬೇಕು." ಎಂದು ಹೇಳಿದಳು.

ಮೀನಾಕ್ಷಿ ಸುಮ್ಮನೆ ನಿಂತಳು. ಅವಳ ಓರಿಗೆಯವರೆಲ್ಲ ನಗು ನಗುತ್ತ ಹೊರಟು ಹೋಗಿದ್ದರು. ಮನೆಯಲ್ಲಿ ಅವಳು, ಅಮ್ಮಯ್ಯ-ಒಬ್ಬಿಬ್ಬರು ಮುದುಕಿಯರು, ಕೆಲಸದವರು, ಇಷ್ಟು ಜನ ಮಾತ್ರ ಇದ್ದರು. ಅಮ್ಮಯ್ಯ ಕೆಲಸದ ಗಡಿಬಿಡಿಯಲ್ಲಿದ್ದಳು. ಮೀನಾಕ್ಷಿ ಉಂಡೆಗಳನ್ನು ಇಟ್ಟಿದ್ದ ಕೋಣೆಯಲ್ಲಿ ಹಾಸಿಗೆಯ ಸುರಳಿಯನ್ನು ಒರಗಿ ಕೂತಿದ್ದಳು. ಮಾತಾಡಲು ಜೊತೆಗೆ ಯಾರೂ ಇಲ್ಲ. ಅವಳಿಗೆ ಬೇಸರ ಬಂದಿತ್ತು. ಕುಳಿತಲ್ಲೇ ತೋಳಿನ ಮೇಲೆ ತಲೆ ಇಟ್ಟು ನಿದ್ರೆ ಮಾಡಿದಳು.

ಅಮ್ಮಯ್ಯ ತಂಗಿಯನ್ನು ಹುಡುಕುತ್ತ ಮನೆಯಲ್ಲಾ ಓಡಾಡಿದಳು. ಮೀನಾಕ್ಷಿ ಎಲ್ಲಿಯೂ ಕಾಣಿಸಲಿಲ್ಲ. ಕೊನೆಗೆ ಉಂಡೆಗಳನ್ನು ಇಟ್ಟಿದ್ದ ಕೋಣೆಯಲ್ಲಿ ಅವಳು ಮಲಗಿರುವುದು ಕಾಣಿಸಿತು. ಅಮ್ಮಯ್ಯ ಒಂದು ಕ್ಷಣ ನಿಂತು ನೋಡಿದಳು. ಮೀನಾ ತಾಯಿಯ ತೊಡೆಯಲ್ಲಿ ಮಲಗಿ ದಂತೆ ಸುಖವಾಗಿ ನಿದ್ರಿಸಿದ್ದಳು. ಕೋಣೆಯಲ್ಲಿನ ಸಣ್ಣ ದೀಪ ಅವಳ ಮುಖದ ಮೇಲೆ ಮಂದವಾದ ಬೆಳಕನ್ನು ಚೆಲ್ಲಿತ್ತು. ಹೊಸ ಬಟ್ಟೆ ಉಟ್ಟ ಶೆಖೆಯಿಂದ ಮುಖದ ಮೇಲೆ ಮುತ್ತಿನಂತೆ ಬೆವರ ಹನಿಗಳು ಮೂಡಿ ದ್ದವು. ತೋಳಿನ ಮೇಲೆ ಕೊರಳ ಸರ ಒತ್ತಿ ಗುರುತುಮಾಡಿತ್ತು. ತಲೆ ಯಲ್ಲಿ ಮುಡಿದಿದ್ದ ಮಲ್ಲಿಗೆಯ ಮೊಗ್ಗು ಅರಳಿ ಕೋಣೆಯಲ್ಲಿ ಅಡಗಿದ್ದ ತಿಂಡಿಯ ವಾಸನೆಯೊಂದಿಗೆ ಸ್ಪರ್ಧಿಸುತ್ತಿತ್ತು.

ಅವಳನ್ನು ನೋಡುತ್ತ ಅಮ್ಮಯ್ಯನಿಗೆ ತಾಯಿಯ ನೆನಪಾಗಿ ಕಣ್ಣಲ್ಲಿ ನೀರೂರಿತು. ಇಂದು ಅಮ್ಮ ಇದ್ದಿದ್ದರೆ ಎಷ್ಟು ಸಂತೋಷ ಪಡು ತ್ತಿದ್ದಳೋ? ಎಂದುಕೊಂಡು ಮೀನಾಕ್ಷಿಯ ಭುಜವನ್ನು ಹಿಡಿದು ಅಲ್ಲಾ ಡಿಸಿ—

"ಮೀನ....ಮೀನಾ....ಏಳಮ್ಮ" ಎಂದು ಎಚ್ಚರಿಸಿದಳು.

ಮೀನಾಕ್ಷಿ ಕಣ್ಣು ಜ್ಜಿಕೊಳ್ಳುತ್ತ ಎದ್ದಳು. ಅಮ್ಮಯ್ಯ ಅವಳ ಕಣ್ಣಿಗೆ ನೀರು ಸವರಿ ಕೆದರಿದಂತಿದ್ದ ಕೂದಲನ್ನು ಸರಿಮಾಡಿ ಕೈ ಹಿಡಿದು ಹೊರಗೆ ಕರತಂದಳು.

ಎಲ್ಲರದೂ ಊಟ ಮುಗಿಯುವ ಹೊತ್ತಿಗೆ ಹನ್ನೆರಡು ಗಂಟೆ ಯಾಗಿತ್ತು. ಬೀಗರೆಲ್ಲಾ ಮನೆಗೆ ಹೊಗುತ್ತಿರುವಾಗ ದಾರಿಯಲ್ಲಿ ಒಬ್ಬಾಕೆ ರಾಮಚಂದ್ರನ ತಾಯಿಯೊಡನೆ—

"ಅತ್ತೆಮ್ಮ....ಪರವಾಗಿಲ್ಲ ಸೊಸೆ ಗೌರಿದೇವಿಯ ಹಾಗೆ ಚೆನ್ನಾಗಿದ್ದಾಳೆ." ಎಂದು ತನ್ನ ಮೆಚ್ಚುಗೆಯನ್ನು ಪ್ರದರ್ಶಿಸಿದಳು.

"ಹುಡುಗಿಯೇನೋ ಚೆನ್ನಾಗಿದೆ. ಆದರೆ ವಯಸ್ಸು ಬಹಳ ಚಿಕ್ಕದು. ನಮ್ಮ ರಾಮುವಿಗೆ ಓರಿಗೆಯಾಗುವುದಿಲ್ಲ."

ಇನ್ನೊಬ್ಬಳು ನಡುವೆ ಬಾಯಿಹಾಕಿದಳು.

"ನೀವು ತಂದ ಸೀರೆ ಬಹಳ ಚೆನ್ನಾಗಿದೆ ಅತ್ತೆಮ್ಮ. ಅವಳಿಗೆ ಚೆನ್ನಾಗಿ ಒಪ್ಪುತ್ತಿತ್ತು."

ರಾಮಚಂದ್ರ ಸ್ವಲ್ಪ ಅಂತರದಲ್ಲಿ ಇವರ ಮಾತುಗಳನ್ನು ಕೇಳುತ್ತ ಬರುತ್ತಿದ್ದ. ಕೊನೆಯ ಮಾತು ಅವನ ಗಮನವನ್ನು ಎಳೆಯಿತು. ಆ ಸೀರೆಯನ್ನು ಆರಿಸಿ ತಂದವನು ಅವನೇ. ಅದು ಮೀನಾಕ್ಷಿಗೆ ಚೆನ್ನಾಗಿ ಒಪ್ಪುವುದೆಂದು ಹೆಂಗಸರ ಗುಂಪಿನಲ್ಲಿ ತೀರ್ಮಾನವಾದಾಗ ಅವನಿಗೆ ಸಂತೋಷವಾಗಿತ್ತು.

"ಜವಳಿಯಲ್ಲಾ ಅವನೇ ತಂದಿದ್ದು. ನಾವು ಹಳೆಯಕಾಲದವರು. ನಮಗೆ ಅದೆಲ್ಲಾ ತಿಳಿಯುವುದಿಲ್ಲ. ನೀನು ಹೇಳಿದ ಹಾಗೆ ಹುಡುಗಿ ಚೆನ್ನಾಗಿದಾಳೆ. ಅದರಿಂದ ಏನು ಉಟ್ಟರೂ ಚೆನ್ನಾಗಿ ಕಾಣಿಸುತ್ತೆ."

ರಾಮಚಂದ್ರನ ತಾಯಿ ಹೇಳಿದರು.

ಮದುವೆ ಎಲ್ಲ ಮದುವೆಗಳಂತೆ ಐದು ದಿವಸ ವಿಜೃಂಭಣೆಯಿಂದ ನಡೆಯಿತು. ಊಟ ಉಪಚಾರ, ಉಡುಗೊರೆ ಯಾವುದರಲ್ಲೂ ಲೋಪ ಬರಲಿಲ್ಲ. ಮೀನಾಕ್ಷಿ ರಾಮಚಂದ್ರನ ಮಡದಿಯಾದಳು. ಬೀಗರ ಕಡೆ ಯಾರೂ ಒಂದು ಅಸಮಾಧಾನದ ಮಾತನ್ನು ಆಡದಿದ್ದರೂ ರಾಮಚಂದ್ರ

ಮಾತ್ರ ಬಿಗುವಿನಿಂದಲೇ ಇದ್ದ. ಅವನ ಉತ್ಸಾಹ ಬಂದ ದಿನವೇ ಇಂಗಿ ಹೋಗಿತ್ತು. ಅವಳ ಹೆಸರು ಮೀನಾಕ್ಷಿಯೆಂದು ತಿಳಿದಾಗ ಅವನು, ಅವಳು ಮೊದಲು ಸಲ ಬಾಗಿಲು ತೆಗೆದಾಗಿನ ನೋಟವನ್ನು ನೆನೆದು—

"ಎಂತಹ ಒಪ್ಪಾದ ಹೆಸರು! ಅದನ್ನು ಇಟ್ಟವರ ಜಾಣ್ಮೆ ಎಂತ ಹುದು!" ಎಂದುಕೊಂಡಿದ್ದ. ಮದುವೆಗಾಗಿ ರಂಗನೂರಿಗೆ ಬಂದಾಗ ಆ ಕಣ್ಣುಗಳನ್ನು ಪುನಃ ನೋಡುವ ಆತುರ ಹೆಚ್ಚುತ್ತಿತ್ತು. ತಾನು ಪ್ರೀತಿಯಿಂದ "ಮೀನಾ" ಎಂದು ಕರೆದರೆ ಆ ಕಣ್ಣುಗಳಲ್ಲಿ ಎಂತಹ ಬೆಳಕು ಚಿಮ್ಮಬಹುದು? ಎಂದು ಯೋಚಿಸುತ್ತಿದ್ದ. ಆದರೆ ಅದು ಬರೀ ಕನಸಾಯಿತು. ಊರಿಗೆ ಬಂದು ಇಪ್ಪತ್ತುನಾಲ್ಕು ಗಂಟೆಗಳಾದರೂ ಅವಳ ಸುಳಿವಿಲ್ಲ. ಕೊನೆಗೊಮ್ಮೆ ಲಗ್ನದ ಹೊತ್ತಿನಲ್ಲಿ ಮೀನಾಕ್ಷಿಯನ್ನು ಬೊಂಬೆಯಂತೆ ಸಿಂಗರಿಸಿ ಅವನ ಮುಂದೆ ನಿಲ್ಲಿಸಿದಾಗ ಅವಳು ನಾಚಿಕೆ ಯಿಂದ ತಲೆ ತಗ್ಗಿಸಿದ್ದಳು.

"ಎಲ್ಲೋ ಶುದ್ಧ ವೈದಿಕಗೊಡ್ಡು; ಒಂದು ಕಾದಂಬರಿಯಾದರೂ ಓದಿರುವಳೋ ಇಲ್ಲವೋ....!" ಎಂದುಕೊಂಡ ರಾಮಚಂದ್ರ. ಆ ಹುಡು ಗಿಗೆ ಮರುಳಾದುದಕ್ಕಾಗಿ ಅವನಿಗೆ ತನ್ನ ಮೇಲೇ ಸಿಟ್ಟು ಬಂದಿತ್ತು.

ಅಂತಃಪಟವನ್ನು ತೆರೆದು ಪುರೋಹಿತರು ಶುಭದೃಷ್ಟಿಯ ಸಮಯ ದಲ್ಲಿ ಪರಸ್ಪರ "ನೋಡಿ" ಎಂದು ಹೇಳಿದಾಗ ಮೀನಾಕ್ಷಿ ಯತ್ನವಿಲ್ಲದೆ ಸಾಹಸಪಟ್ಟು ನೋಟವನ್ನು ಅವನ ಕಡೆ ತಿರುಗಿಸಿದಳು. ಅನಂತರ ಮದುವೆ ಮುಗಿಯುವವರೆಗೂ ಅಕ್ಕ ಕಲಿಸಿದ್ದ "ಗಂಡನನ್ನು ಕಂಡರೆ ನಾಚಿಕೊಂಡು ದೂರ ಇರಬೇಕೆಂಬ" ತತ್ವವನ್ನು ಅಕ್ಷರಶಃ ಪಾಲಿಸಿದಳು.

ಅಳಿಯ ಮುಖ ದಪ್ಪಗೆ ಮಾಡಿಕೊಂಡಿರುವುದು ಶಾಸ್ತ್ರಿಗಳಿಗೆ ತಿಳಿ ದರೂ ಅದರ ಕಾರಣ ಅವರಿಗೆ ತಿಳಿಯುವಂತಿರಲಿಲ್ಲ. ಉಪಚಾರವನ್ನು ಇನ್ನೂ ಹೆಚ್ಚು ಮಾಡುತ್ತಿದ್ದರು ಅಷ್ಟೆ! ಮದುವೆ ಮನೆಯಲ್ಲಿ ಉರುಟ ಣೆಯ ಸಮಯದಲ್ಲಿ, ಊಟದ ಹೊತ್ತಿನಲ್ಲಿ ಹೆಣ್ಣುಮಕ್ಕಳ ಉತ್ಸಾಹ ಬಹಳ. ಆಗ ಹಾಸ್ಯ ವಿನೋದ ಇವಕ್ಕೆ ಅವಕಾಶ. ರಾಮಚಂದ್ರನ ಗಂಟು ಮುಖ ಯಾವುದಕ್ಕೂ ಅವಕಾಶ ಕೊಡಲಿಲ್ಲ. ಅದರಿಂದ ಹೆಂಗ

ಸರು ನಿರುತ್ಸಾಹಿಗಳಾಗಿದ್ದರು. ಕೆಲವರು—"ಎಲ್ಲೋ ವಕ್ರಬುದ್ಧಿಯ ಹುಡುಗ!" ಎನ್ನುವ ಸಿದ್ಧಾಂತಕ್ಕೂ ಬಂದಿದ್ದರು.

ರಾಮಚಂದ್ರನಿಗೆ ಹೊರಡುವ ಮೊದಲು ಒಂದು ಸಲ ಮೀನಾಕ್ಷಿಯನ್ನು ಮಾತಾಡಿಸಬೇಕೆಂದು ಬಹಳ ಆಸೆಯಿತ್ತು. ಅದನ್ನು ತಾಯಿಯ ಬಳಿ ಹೇಳಿದರೆ ಉಪಯೋಗವಿಲ್ಲವೆಂದೂ ಗೊತ್ತಿತ್ತು.

"ಮಾತಾಡಲು ಏನವಸರ ? ನಾಳೆ ನಮ್ಮ ಮನೆಗೇ ಬರ್ತ್ತಾಳೆ" ಎನ್ನುವವರು ಅವರು. ಹೊರಡುವ ದಿವಸ ಬೇರೆ ಉಪಾಯ ತೋರದೆ ರಾಮಚಂದ್ರ ಚಂದುವಿಗೆ ಕೈಕಾಲು ಕಟ್ಟಿ ಹೇಳಿಕೊಂಡಿದ್ದ. ಅವನು ಅಳಿಯದೇವರ ಅಭಿಲಾಷೆಯನ್ನು ಅಕ್ಕನಿಗೆ ತಿಳಿಸಿ ಸುಮ್ಮನಾಗಿದ್ದ. ಕಡೆಗೊಮ್ಮೆ ಅಕ್ಕನ ಬಲವಂತಕ್ಕೆ ಮೀನಾಕ್ಷಿ ಕಾಫಿಯ ಲೋಟವನ್ನು ಹಿಡಿದು ಅವನಿದ್ದ ಜಾಗಕ್ಕೆ ಬಂದಾಗ, ಈ ಅಪರೂಪ ನೋಡಲು ಹೊರಗಡೆ ಮದುವೆ ಮನೆಯ ಜನರೆಲ್ಲಾ ನೆರೆದಿದ್ದರು.

ಮುಖವೆಲ್ಲ ಕೆಂಪಾಗಿ, ಮೈ ಬೆವರಿ ನೀರಾಗಿ, ನಾಚಿಕೆಯ ಮುದ್ದೆಯಾಗಿ ಒಂದು ಕ್ಷಣ ನಿಂತಿದ್ದು ಹೊರಟುಹೋದಳು ಮೀನಾಕ್ಷಿ. ಈ ಸಂಭ್ರಮಕ್ಕೆ ತಾನೇಕೆ ಬೆಳಗಿನಿಂದ ಒದ್ದಾಡಿದೆನೋ ಎನ್ನಿಸಿತು ಅವನಿಗೆ. ಆದರೆ ಅದನ್ನೆಲ್ಲಾ ಯೋಚಿಸುತ್ತ ಕೂರುವಂತಿಲ್ಲ. ಎಲ್ಲರೂ ಹೊರಟು ನಿಂತು ಅವನಿಗಾಗಿ ಕಾದಿದ್ದರು. ರಾಮಚಂದ್ರ ಕುಗ್ಗಿದ ಮನಸ್ಸಿನಿಂದ ಎಲ್ಲರೊಡನೆ ಹೊರಟ.

## ೩

ವಿಶ್ವನಾಥ ಓದುವುದಕ್ಕೆ ಬೆಂಗಳೂರಿಗೆ ಹೋಗಿ ಒಂದು ವರ್ಷವಾಗಿತ್ತು. ಮಧ್ಯೆ ಕ್ರಿಸ್‌ಮಸ್ ರಜದಲ್ಲಿ ಬಂದು ಒಂದು ವಾರ ಇದ್ದು ಹೋಗಿದ್ದ. ಯಾರು ಇಲ್ಲದಿದ್ದರೂ ಯಾವುದೂ ನಿಲ್ಲುವುದಿಲ್ಲ. ಅವನು ಹೋಗುವ ಸುದ್ದಿ ಮೊದಲು ತಿಳಿದಾಗ ಎಲ್ಲರೂ "ಅವನಿಲ್ಲದಿದ್ದರೆ ಹೇಗೆ ?" ಎಂದು ಹೆದರಿದರೂ ರಾಯರ ಪ್ರಪಂಚ ಅವನಿಲ್ಲದೆಯೇ ಮುಂದೆ

ಸಾಗಿತ್ತು. ಮೊದಲು ಸ್ವಲ್ಪದಿನ ಅವನ ಅಭಾವ ಕಾಣಿಸಿದರೂ ಕ್ರಮೇಣ ಅದೇ ಸರಿಹೋಗುತ್ತ ಬಂದಿತ್ತು.

ರಾಯರ ಹೆಂಡತಿಯ ಆರೋಗ್ಯ ಉತ್ತಮಗೊಂಡದ್ದರಿಂದ ಮಣಿಗೆ ಹೆಚ್ಚು ತೊಂದರೆಯಾಗಲಿಲ್ಲ. ಅವಳು ನಿರಾತಂಕವಾಗಿ ಸ್ಕೂಲಿಗೆ ಹೋಗುತ್ತಿದ್ದಳು. ಮನೆಯಲ್ಲೂ ಪಾಠಕ್ಕೆ ಮೇಷ್ಟ್ರು ಬರುತ್ತಿದ್ದರು. ಹೊಸದಾಗಿ ಸಂಗೀತಪಾಠವೂ ಮೊದಲಾಗಿತ್ತು. ಆದರೂ ಇದು ಯಾವುದರಿಂದಲೂ ಅವಳು ವಿಶ್ವನಾಥನನ್ನು ಮರೆಯಲು ಸಾಧ್ಯವಾಗಿರಲಿಲ್ಲ. ಮನೆಯಲ್ಲಿ ಅಷ್ಟು ದಿನಗಳು ಕಳೆದರೂ ಪ್ರತಿದಿನವೂ ಏನಾದರೊಂದು ನೆಪದಲ್ಲಿ ನಾಲ್ಕಾರು ಸಲ ಅವನನ್ನು ಜ್ಞಾಪಿಸಿಕೊಳ್ಳುತ್ತಿದ್ದವಳೆಂದರೆ ಮಣಿಯೊಬ್ಬಳೇ. ಯಾವಾಗಲಾದರೂ ಅವಳ ತಾಯಿ ಒಂದೊಂದು ಸಲ ತಮ್ಮ ಕೆಲಸಕ್ಕೆ ಏನಾದರೂ ನ್ಯೂನತೆ ಬಂದಾಗ “ಆ ಹುಡುಗ ಇದ್ದಾಗ ನನಗೆ ಈ ತಾಪತ್ರಯವೇ ಇರಲಿಲ್ಲ. ಮನೆ ತುಂಬ ಜನ ಇದಾರೆ ಅನ್ನದಂಡಕ್ಕೆ. ಮೂರುಕಾಸಿನ ಉಪಯೋಗವಿಲ್ಲ” ಎನ್ನುತ್ತಿದ್ದರು. ರಾಯರು ಯಾವ ಮಾತೂ ಆಡದೆ ಉದಾಸೀನರಾಗಿ ಇದ್ದುಬಿಡುತ್ತಿದ್ದರು. ಯಾವಾಗಾದರೊಮ್ಮೆ ಅವನಿಗೆ ಸ್ವಲ್ಪ ಹಣ ಕಳಿಸಿ ತಮ್ಮ ಕರ್ತವ್ಯ ಮುಗಿಯಿತೆಂದು ಭಾವಿಸುತ್ತಿದ್ದರು.

ಬೇಸಿಗೆ ರಜ ಬಂದು ಮೂರು ವಾರವಾಗಿತ್ತು. ಶಾಲೆ ಕಾಲೇಜುಗಳೆಲ್ಲ ಮುಚ್ಚಿದ್ದುವು. ವ್ಯಾಸಂಗಕ್ಕಾಗಿ ಪರಸ್ಥಳಗಳಲ್ಲಿದ್ದ ವಿದ್ಯಾರ್ಥಿಗಳೆಲ್ಲ ತಮ್ಮ ತಮ್ಮ ಊರಿಗೆ ತೆರಳಿದ್ದರು. ವಿಶ್ವನಾಥ ಮಾತ್ರ ಬಂದಿರಲಿಲ್ಲ. ಯಾವಾಗ ಬರುವುದೆಂದು ತಿಳಿಸಿಯೂ ಇರಲಿಲ್ಲ. ಮಣಿ ಎರಡು ಹೊತ್ತೂ ಕಾಗದವನ್ನು ಕಾಯುತ್ತಿದ್ದಳು ಪ್ರತಿದಿನ ಟಪ್ಪಾಲನ್ನು ಒಡೆಯುವಾಗ ಉತ್ಸುಕತೆಯಿಂದ ಮಗಳು ನೋಡುತ್ತ ನಿಂತಿರುವುದು ರಾಯರಿಗೆ ಗೊತ್ತಿತ್ತು. ವಿಶ್ವನಾಥನ ಮೇಲೆ ಸಿಟ್ಟೂ ಬಂದಿತ್ತು.

“ಎಲ್ಲ ಅಯೋಗ್ಯರು. ತಮ್ಮ ಕೆಲಸ ಆಗುವವರೆಗೆ ಬೇಕು. ಒಂದು ಕಾಗದ ಹಾಕುವಷ್ಟು ಮರ್ಯಾದೆ ಬೇಡವೆ? ಅಲ್ಲಿ ಬಿಟ್ಟ ಅನ್ನ ಹಾಕುವವರು ಯಾರು ಸಿಕ್ಕಿದರೋ!” ಎಂದು ಮನಸ್ಸಿನಲ್ಲಿ ಅಂದುಕೊಂಡರೂ ಮಗಳೆದುರಿಗೆ ಸುಮ್ಮನಿದ್ದರು.

ಒಂದು ದಿನ ಇದ್ದಕ್ಕಿದ್ದಂತೆ ಯಾವ ಸುದ್ದಿಯೂ ಇಲ್ಲದೆ ವಿಶ್ವನಾಥ ಬಂದ. ಆಗ ರಾಯರು ಮನೆಯಲ್ಲಿರಲಿಲ್ಲ. ಮಣಿ ಮನೆಯ ಮುಂಭಾಗ ದಲ್ಲಿ ಹೂ ಬಿಡಿಸುತ್ತಿದ್ದಳು. ಬಂದವನು ಅವನೆಂದು ತಿಳಿದ ಕೂಡಲೇ ಬುಟ್ಟಿಯನ್ನು ಎಸೆದು ಅವನ ಬಳಿ ಓಡಿದಳು. ಅವನೂ ಅದೇ ಉತ್ಸಾಹ ದಿಂದ ಅವಳನ್ನು ಮಗುವನ್ನು ಎತ್ತಿದಂತೆ ಸರಾಗವಾಗಿ ಮೇಲಕ್ಕೆತ್ತಿ ಪುನಃ ಕೆಳಗಿಳಿಸಿ—

"ಏನು ಮಣಿ ಇನ್ನೂ ಮಗುವಾಗಿಯೇ ಇದೀಯಲ್ಲ! ಈಸಲ ಬಂದಾಗ ನಿನ್ನನ್ನು ಎತ್ತಲಾಗುವುದಿಲ್ಲವೆಂದು ತಿಳಿದಿದ್ದೆ. ನೀನೇ ಬೆಳೆ ದಿಲ್ಲವೋ....ಅಥವಾ ನನ್ನ ಶಕ್ತಿಯೇ ಹೆಚ್ಚಿತೋ ತಿಳಿಯಲಿಲ್ಲ!" ಎಂದು ಹೇಳಿ ಜೇಬಿಗೆ ಕೈಹಾಕಿ ಒಂದೆರಡು ಪೆಪ್ಪರಮೆಂಟುಗಳನ್ನು ಅವಳಿಗೆ ಕೊಟ್ಟ. ಮಣಿ ಅದನ್ನು ಚಪ್ಪರಿಸುತ್ತ—

"ನಾನು ಬೆಳೆದಿದ್ದೇನೆ. ನೀನು ಮಾತ್ರ ದೊಡ್ಡವನಾದೆ. ಅದಕ್ಕೇ ಹಾಗೆ ಹೇಳುವೆ."

"ನಾನು ದೊಡ್ಡವನಾದೆನೆಂದು ಯಾರು ಹೇಳಿದರು?"

"ಅಣ್ಣ ಅನ್ನುತ್ತಿದ್ದರು...."

"ಏನನ್ನುತ್ತಿದ್ದರು?"

"ನಿನ್ನ ರಾಜಣ್ಣ ದೊಡ್ಡವನಾದ; ಈಗೇಕೆ ಕಾಗದ ಬರೆಯುವನು?" ಎಂದು"

"ನೀನು ಕಾಗದ ಬರಲಿಲ್ಲವೆಂದು ವಿಚಾರಿಸಿದೆಯೇನು?"

"ಬೇಡವೇ....? ರಜ ಬಂದು ಮೂರು ವಾರವಾಯಿತು. ನೀನು ಊರಿಗೂ ಬರದೆ ಕಾಗದಾನೂ ಬರೆಯದೆ ಇದ್ದರೆ ವಿಚಾರಿಸದೆ ಏನು ಮಾಡಲಿ?"

ಮಣಿಯ ಮೊದಲು ಮಾತಿನಿಂದ ರಾಯರು ತನ್ನನ್ನು ಕೃತಘ್ನ ನೆಂದು ಬಗೆದರೆ? ಎಂದು ವಿಶ್ವನಾಥನ ಮನಸ್ಸು ಕುಗ್ಗಿತಾದರೂ ಅವಳ ಕೊನೆಯ ಮಾತಿನಿಂದ ಮುಖ ಅರಳಿತು. ಅವಳ ಕೈ ಹಿಡಿದು ನಗುತ್ತ ಹೇಳಿದ—

"ಏನು ಮುಳುಗಿಹೋದದ್ದು ? ಕಾಗದ ಬರೆಯುವುದು ಸ್ವಲ್ಪ ತಡ ವಾದರೆ ಅದಕ್ಕಿಷ್ಟು ಅವಾಂತರವೇ ? ಬೇರೆ ಕೆಲಸ ಇರಬಾರದೇನು ?"

"ಏನು ಕೆಲಸವೋ........"

"ಗಂಡಸರಿಗೆ ಸಾವಿರ ಕೆಲಸ. ಅದೆಲ್ಲ ನಿನಗೆ ತಿಳಿಯುವುದೇನು ?"

"ತಿಳಿಯದೆ ಏನು ? ಇನ್ನು ಯಾರಾದರೂ ಹೊಸ ಸ್ನೇಹಿತರು ಸಿಕ್ಕಿದರೇನೋ...."

"ಸ್ನೇಹಿತರಿಗೇನು....? ನಾನು ಹೋದಲ್ಲೆಲ್ಲ ಸಿಕ್ಕುತ್ತಾರೆ. ನಮ್ಮ ನೆರೆಯಲ್ಲಿ ಒಬ್ಬರಿದ್ದಾರೆ. ಅವರ ಮನೆಯವರಂತೂ ಕೇವಲ ಆತ್ಮೀಯ ರಂತೆಯೇ ಇದ್ದಾರೆ....!"

"ಅದಕ್ಕೇ ಇಲ್ಲಿಗೆ ಬರಬೇಕೆನಿಸಲಿಲ್ಲ .. !"

"ಅಬ್ಬ.... ಏನು ಹೊಟ್ಟೆಯುಕಿಚ್ಚಪ್ಪ ಹುಡುಗಿಯರಿಗೆ! ಮಣಿ.... ಇನ್ನು ನೀನು ಮಗುವಲ್ಲ, ದೊಡ್ಡವಳಾದೆ. ನೀನು ಹೇಳಿದಂತೆ ಕವಾತು ಮಾಡಿ ನನಗೆ ಹೆಚ್ಚು ಶಕ್ತಿ ಬಂದಿದೆ. ಅದರಿಂದ ನಿನ್ನ ಎತ್ತಿದೆ ಅಷ್ಟೆ! ಆದರೆ ನಿನ್ನ ತಲೆ ಇಷ್ಟು ಬೇಗ ಬೆಳೆಯುವುದೆಂದು ಗೊತ್ತಿರಲಿಲ್ಲ!"

"ಸಾಕು.... ನಿನ್ನ ಹುಡುಗಾಟ. ಯಾವಾಗಲೂ ಒಂದೆ. ನೀನು ನೋಡುವುದಕ್ಕೆ ಬದಲಾಯಿಸಿದ್ದರೂ ನಿನ್ನ ತಲೆ ಬದಲಾಯಿಸಿಲ್ಲವಲ್ಲ!"

"ಆಯಿತಲ್ಲ, ಬಿಡು. ಇನ್ನಾದರೂ ಒಳಗೆ ಹೋಗೋಣವೋ.... ಅಥವಾ ಇಲ್ಲೇ ನಿಂತು ಒಂದು ವರ್ಷದ ವರದಿಯನ್ನೆಲ್ಲಾ ಒಪ್ಪಿ ಸಲೋ....?"

"ಬೇಡ ಮಹರಾಯ. ಇಷ್ಟು ಹೊತ್ತು ನಿಲ್ಲಿಸಿದ್ದಕ್ಕೇ ಅಮ್ಮ ನನಗೆ ಮಂಗಳಾರತಿ ಮಾಡಿಯಾರು. ಮೊದಲೇ ನನ್ನ—"

"ವಯಸ್ಸೊಂದು ಬೆಳೆಯುತ್ತಿದೆ. ತಿಳುವಳಿಕೆ ಮಾತ್ರ ಇಲ್ಲ" ಅನ್ನುತ್ತಾರೆ."

"ಅವರಿಗೆ ಗೊತ್ತಿಲ್ಲ; ನಾನು ಹೇಳ್ತೇನೆ—

"ತಿಳುವಳಿಕೆ ಇನ್ನೂ ಹೆಚ್ಚಿದರೆ ಈ ದೇಹ ಅದನ್ನು ಹಿಡಿಸಲಾ ರದು" ಎಂತ.

ಇಬ್ಬರೂ ನಕ್ಕರು. ಮಣಿ ಅವನ ಕೈಹಿಡಿದು ಎಳೆಯುತ್ತ ಒಳಗೆ ಕರೆದೊಯ್ದಳು.

ರಾಯರು ಊಟದ ಹೊತ್ತಿಗೆ ಮನೆಗೆ ಬಂದರು. ಒಳಗೆ ಹುಡುಗರೆಲ್ಲ ಒಟ್ಟಿಗೆ ಸುತ್ತಿಕೊಂಡು ಗಲಾಟೆ ಮಾಡುತ್ತಿದ್ದುದರಿಂದ ಅವರಿಗೆ ವಿಶ್ವನಾಥ ಬಂದಿರಬೇಕೆಂದು ಬಾಗಲಿನಲ್ಲೇ ತೋರಿತು. ಪದ್ಧತಿಯಂತೆ ಕುಶಲಪ್ರಶ್ನೆಗಳಾದುವು. ರಾಯರೂ ಮನಸ್ಸಿನಲ್ಲಿ ವಿಶ್ವನಾಥ ಬಹಳ ಬದಲಾಯಿಸಿದಾನೆ, ಎಂದುಕೊಂಡರು. ಆ ಒಂದು ವರ್ಷದ ಅವಧಿಯಲ್ಲಿ ಅವನ ಬೆಳವಣಿಗೆ ನೋಡುತ್ತಲೇ ತಕ್ಷಣ ತಿಳಿಯುವ ಮಟ್ಟಿಗೆ ಆಗಿತ್ತು. ಬಟ್ಟೆಬರೆ ಹಾಕುವುದರಲ್ಲೂ ಸುಧಾರಣೆ ಕಾಣುತ್ತಿತ್ತು. ಹೊರಗಡೆ ಹೋಗಿ ನಾಲ್ಕು ಜನರೊಡನೆ ಬೆರೆತುದರ ಫಲವಾಗಿ ನಡೆನುಡಿಯಲ್ಲಿ ಹೆಚ್ಚು ನಾಜೂಕು, ಆತ್ಮವಿಶ್ವಾಸ ಮೂಡಿದ್ದುವು. ವಯಸ್ಸಿಗೆ ತಕ್ಕಂತೆ ಅವೆಲ್ಲಾ ಆಗಬೇಕಾದದ್ದೆ. ಎದುರಿಗೇ ಇದ್ದರೆ ಅದು ಅಷ್ಟಾಗಿ ನಮ್ಮ ಗಮನಕ್ಕೆ ಬರುವುದಿಲ್ಲ. ಹೆಚ್ಚುದಿನ ಹೊರಗಿದ್ದು ಬಂದಾಗ ಅದು ಕಾಣುವುದು ಬೇಗ. ಆದರೂ ಅದನ್ನು ಸಹಜವಾದುದೆಂದು ರಾಯರು ತಿಳಿಯಲಿಲ್ಲ. ಹುಡುಗ ತಮ್ಮಿಂದ ದೂರವಾಗುತ್ತಿದ್ದಾನೆಂದು ಅವರಿಗನಿಸಿತು.

ವಾಸ್ತವವಾಗಿ ವಿಶ್ವನಾಥ ಮೊದಲಿನಂತೆ ಮನೆಯವನಾಗಿಯೇ ಓಡಾಡಿಕೊಂಡಿದ್ದ. ರಾಯರ ವರ್ತನೆ ಅವನಿಗೆ ಅರ್ಥವಾಗಲಿಲ್ಲ. ಮಗನಂತೆ ಕಂಡುಕೊಂಡಿದ್ದ ಅವರ ಹೃದಯಸ್ಥಲದಿಂದ ಜಾರಿದೆನೆ? ಎಂದು ನೊಂದಿತು ಅವನ ಮನಸ್ಸು. ತನ್ನ ತಪ್ಪೇನು? ತನ್ನ ತಪ್ಪು ಬೇಗ ಯಾರಿಗೂ ಕಾಣಿಸುವುದಿಲ್ಲ. ಅದು ಕಾಣಿಸುವುದು ಮತ್ತೊಬ್ಬರಲ್ಲಿ! ವಿಶ್ವನಾಥನಿಗೂ ಹಾಗೇ ಆಯಿತು. ನಿಷ್ಕಾರಣವಾಗಿ ಅವರು ತನ್ನನ್ನು ದೂರ ಮಾಡುತ್ತಿರುವರೆಂದು ತೋರಿ ಅವರ ವಿಚಾರದಲ್ಲಿ ಮನಸ್ಸು ನಿಷ್ಠುರವಾಯಿತು. ತನ್ನವರೆನ್ನುವರು ಯಾರೂ ಇಲ್ಲದೆ ಮತ್ತೊಬ್ಬರ ಆಶ್ರಯದಲ್ಲಿಯೇ ಬದುಕಬೇಕಾದುದನ್ನು ನೆನೆದು ವ್ಯಥೆಯೂ ಆಯಿತು. ಆದಷ್ಟು ಬೇಗ ಈ ಎಲ್ಲ ಹಂಗಿನಿಂದ ಪಾರಾಗಿ ತನ್ನ ಕಾಲಿನ ಮೇಲೆ ನಿಲ್ಲಬೇಕೆಂದು ನಿರ್ಧರಿಸಿದ.

ರಜ ಮುಗಿಯುತ್ತ ಬಂತು. ಅವನು ಹೆಚ್ಚು ಕಾಲವನ್ನು ಮಣಿಯೊಡನೆಯೂ, ಹುಡುಗರೊಡನೆಯೂ ಕಳೆಯುತ್ತಿದ್ದ. ಬರುವಾಗ ರಾಯರೊಡನೆ ಎಷ್ಟೋ ಮಾತಾಡಬೇಕೆಂದು ಯೋಚಿಸಿದ್ದ. ಅವರಲ್ಲಿ ಕೇಳಬೇಕಾದ ವಿಚಾರವೂ ಇತ್ತು. ಆದರೂ ಬಾಯಿಕಟ್ಟಿದಂತೆ ಆಗಿತ್ತು. ಎಲ್ಲವನ್ನೂ ಮನಸ್ಸಿನಲ್ಲಿಯೇ ಇಟ್ಟುಕೊಂಡು ಊರಿಗೆ ಹೊರಟ.

"ದೇಹಸ್ಥಿತಿ ಸರಿಯಾಗಿ ನೋಡಿಕೋ ಆಗಾಗ ಪತ್ರ ಹಾಕಲು ಮರೆಯಬೇಡ." ಎಂದು ಎಚ್ಚರಿಸಿ ರಾಯರು ಇಲ್ಲದ ಕಳಕಳಿಯನ್ನು ಪ್ರದರ್ಶಿಸಿದರು. ಆ ಘಳಿಗೆಯಲ್ಲಿ ಅವರಿಗೆ ತಮ್ಮ ಅದುವರೆಗಿನ ವರ್ತನೆಯ ಬಗ್ಗೆ ಸಂಕೋಚವೆನಿಸತೊಡಗಿತ್ತು.

ವಿಶ್ವನಾಥ "ಆಗಲಿ" ಎಂದಷ್ಟೇ ಹೇಳಿದ. ಅದರಂತೆ ವಾರಕ್ಕೊಮ್ಮೆ ಪತ್ರವನ್ನೂ ಹಾಕುತ್ತಿದ್ದ. ಪತ್ರವು ಮರ್ಯಾದೆಯಿಂದ ಕೂಡಿದ್ದರೂ ರಾಯರಿಗೆ ಅದರಲ್ಲಿ ಏನೋ ಕೊರತೆಯಿದೆ ಎನಿಸುತ್ತಿತ್ತು.

ನವರಾತ್ರಿಯ ರಜ ಬಂತು. ರಾಯರು ಹಬ್ಬಕ್ಕೆ ಬರಬೇಕೆಂದು ಬರೆದರು. ವಿಶ್ವನಾಥ ಟರ್ಮಿನಲ್ ಪರೀಕ್ಷೆ ಹತ್ತಿರವಾಯಿತೆಂದೂ, ಓದುವುದು ಬಹಳವಾಗಿರುವುದರಿಂದ ಬರಲು ಸಾಧ್ಯವಿಲ್ಲವೆಂದೂ ಬರೆದ. ಕ್ರಿಸ್‌ಮಸ್ ರಜೆಯೂ ಕಳೆಯಿತು. ಆಗಲೂ ಅದೇ ಉತ್ತರ ಬಂತು. ಇದನ್ನೆಲ್ಲಾ ನೋಡಿ ರಾಯರಿಗೆ ಮನಸ್ಸು ಬೇಸರಗೊಂಡಿತ್ತು. ಆದರೂ ಮಗಳ ಮುಖವನ್ನು ನೋಡಿದಾಗ ಅವರಿಗೆ "ನಾವು ಯಾವ ಬಗೆಯ ಅಸಮಾಧಾನವನ್ನೂ ತೋರಿಸದೆ ಅವನು ಬಂದಾಗ ಸರಿಯಾಗಿ ನಡೆಸಿಕೊಂಡರೆ ಚೆನ್ನಾಗಿತ್ತೇನೋ" ಎನಿಸುತ್ತಿತ್ತು. ಹೇಗೂ ಒಮ್ಮೆ ಪರೀಕ್ಷೆ ಮುಗಿದರೆ ಬರ್‍ತಾನಲ್ಲ. ಆಗ ನೋಡಿಕೊಂಡರಾಯಿತು, ಎಂದುಕೊಂಡರು.

ರಾಯರ ಆ ದೂರದ ಆಸೆ ಫಲಿಸಲಿಲ್ಲ. ಪರೀಕ್ಷೆ ಮುಗಿಯಿತು. ವಿಶ್ವನಾಥನಿಂದ ಪತ್ರವೂ ಬಂತು. ಅದು ಅವನು ಬರುವ ಸುದ್ದಿಯನ್ನು ತರಲಿಲ್ಲ. ಪತ್ರದ ಸಾರಾಂಶ ಒಟ್ಟಿನಲ್ಲಿ ಹೀಗಿತ್ತು—

"........ತಮ್ಮ ಆಶೀರ್ವಾದದಿಂದ ಪರೀಕ್ಷೆಯಲ್ಲಿ ಚೆನ್ನಾಗಿಯೇ ಬರೆದಿದ್ದೇನೆ. ಕೂಡಲೆ ಅಲ್ಲಿಗೆ ಬರಬೇಕೆಂದು ಮನಸ್ಸೂ ಇತ್ತು. ಆದರೆ

ಅನಿರೀಕ್ಷಿತವಾದ ಒಂದು ಘಟನೆಯಿಂದ ಬರಲು ಅವಕಾಶವಿಲ್ಲ. ಕಳೆದ ಕೆಲವು ತಿಂಗಳುಗಳಿಂದ ಕಾಲೇಜಿನ ಕೆಲವು ಹುಡುಗರು, ಸೈನಿಕಶಿಕ್ಷಣಕ್ಕೆ ಪೂರ್ವಭಾವಿಯಾಗಿ ಒಂದು ರೀತಿಯ ತರಬೇತು ಪಡೆಯುತ್ತಿದ್ದರು. ಅವರಲ್ಲಿ ನಾನೂ ಒಬ್ಬ. ಮೊನ್ನೆ ಅದರ ಸಂಬಂಧವಾಗಿ ಏರ್ಪಡಿಸಿದ್ದ ಮೇಲಾಟದಲ್ಲಿ ಮೊದಲನೆಯವನಾಗಿ ಬಂದೆ. ಅದರ ಫಲವಾಗಿ ಶಿಕ್ಷಣಕ್ಕಾಗಿ ಇಟ್ಟಿರುವ ವೇತನ ನನಗೆ ದೊರೆತಿದೆ. ಕೂಡಲೇ "ಮೋವ್"ನ ಸೈನಿಕಶಿಕ್ಷಣದ ಕಾಲೇಜಿಗೆ ಹೋಗಬೇಕೆಂದು ಅಪ್ಪಣೆ ಬಂದಿದೆ. ಕಾಲಾವಕಾಶ ಇಲ್ಲದ್ದರಿಂದ ಎದುರಿಗೆ ಬಂದು ತಮ್ಮ ಅಪ್ಪಣೆ ಪಡೆಯಲು ಆಗಲಿಲ್ಲ. ಶಿಕ್ಷಣದ ಅವಧಿ ಕೇವಲ ಆರುತಿಂಗಳು. ಅದೇನು ಅಷ್ಟು ದೀರ್ಘಕಾಲವಲ್ಲ............

ಯಾವಾಗಲೂ ತಮ್ಮವ,

ವಿಶ್ವನಾಥ

ಕಾಗದವನ್ನು ನೋಡಿ ರಾಯರು ಸಂತುಷ್ಟರಾಗಲಿಲ್ಲ. ಮನಸ್ಸಿನಲ್ಲಿ ಹೊಗೆಯಾಡುತ್ತಿದ್ದ ಅಸಮಾಧಾನ ಭುಗ್ಗನೆ ಮೇಲೆದ್ದಿತು. ಅವರು ಯೋಚಿಸುತ್ತಿದ್ದ ರೀತಿಯಲ್ಲಿ ಯಾವುದೂ ನಡೆಯದೆ ಸಂದರ್ಭ ಬೇರೆ ದಾರಿಯನ್ನು ಹಿಡಿಯುತ್ತಿರುವಂತೆ ತೋರಿತು. ಹುಡುಗ ದೂರವಾದನೆಂದೇ ಬೇಸರ ಪಟ್ಟವರಿಗೆ ಅವನು ತಮ್ಮ ಹಿಡಿತದಿಂದ ಜಾರಿದನೆಂದು ತಿಳಿದಾಗ ಹೇಗೆನಿಸಬೇಡ.

"ಹೋಗಲಿ....ಹೋಗಲಿ.... ಈ 'ಪುಳಿಚಾರು' ಗಳನ್ನೆಲ್ಲಾ ಯಾರು ಯುದ್ಧಕ್ಕೆ ಕರೀತಾರೆ. ಕಾಲು ನೋಯುವವರೆಗೂ ಕವಾತು ಮಾಡಲಿ!" ಎಂದುಕೊಂಡು ಸುಮ್ಮನಾದರು.

ಆದರೆ ಅಲ್ಲೂ ರಾಯರ ಊಹೆ ಸರಿಯಾಗಲಿಲ್ಲ. ಶಿಕ್ಷಣ ಕವಾತಿನಲ್ಲೇ ಮುಗಿಯಲಿಲ್ಲ. ಯುದ್ಧದ ಕಾವು ದಿನದಿನಕ್ಕೆ ಏರಿತು. ಎಲ್ಲೆಡೆಯಲ್ಲೂ ಸೈನ್ಯ ಜಮಾವಣೆ ಭರದಿಂದ ನಡೆಯಿತು. ಹತ್ತಾರು ಕಡೆ ಸೈನಿಕ ಶಿಕ್ಷಣದ ಶಿಬಿರಗಳು ಏರ್ಪಟ್ಟವು. ವಿಶ್ವನಾಥ ಅಲ್ಲಿನ ಅವಧಿ ಮುಗಿದ ಮೇಲೆ ಇನ್ನೂ ಮೂರು ನಾಲ್ಕು ಶಿಕ್ಷಣ ಕೇಂದ್ರಗಳಲ್ಲಿ ತರ

ಪೇತು ಪಡೆದ. ಆ ವೇಳೆಗೆ ದಕ್ಷಿಣ ಭಾರತಕ್ಕೆ ಬೆಂಗಳೂರನ್ನು ಮುಖ್ಯ ಕೇಂದ್ರವಾಗಿ ಮಾಡಿ ಅಲ್ಲೂ ಸೈನಿಕರನ್ನು ಇಡುವ, ತರಪೇತು ಮಾಡುವ ಯೋಜನೆ ಬಂತು. ಅದರಂತೆ ಅಲ್ಲಿನ ಶಿಕ್ಷಕನಾಗಿ ನಿಯೋಜಿತನಾಗಿ ವಿಶ್ವನಾಥ ಪುನಃ ಬೆಂಗಳೂರಿಗೆ ಬಂದ.

೪

ಪರೀಕ್ಷೆಯ ಫಲಿತಾಂಶ ಬಂದ ದಿನ ರಾಮಚಂದ್ರ ತಾಯಿಗೆ ನಮ ಸ್ಕಾರ ಮಾಡಿ—

"ಅಮ್ಮ.... ಪರೀಕ್ಷೆ ಆಯಿತಮ್ಮ. ಈ ಸಲವೂ ನಾನೇ ಮೊದಲನೆ ಯವನು" ಎಂದು ಹೇಳಿದ. ಅವರು ಅವನ ತಲೆಯನ್ನು ನೇವರಿಸಿ—

"ಏಳು ಮಗು. ಎಲ್ಲಾ ದೇವರ ದಯ. ಕೈಹಿಡಿದ ಹುಡುಗಿಯ ಪುಣ್ಯ" ಎಂದರು.

"ರಾತ್ರಿ ಹಗಲು ಕಷ್ಟಪಟ್ಟು ಓದಿದವನು ನಾನು; ಪುಣ್ಯವನ್ನೇಕೆ ಅವಳ ತಲೆಗೆ ಕಟ್ಟುತ್ತೀಯಮ್ಮ!"

ರಾಮಚಂದ್ರ ನಗುತ್ತ ಕೇಳಿದ.

"ಹೌದು ಮಗು. ಅದು ಹಾಗೇ. ಕಷ್ಟಪಡುವವನು ನೀನೇ ಆದರೂ ಅದರ ಫಲ ಅವಳಿಗೆ. ನೀನು ಅಭಿವೃದ್ಧಿಯಾಗಿ ಚೆನ್ನಾಗಿ ಬದುಕಿ ದರೆ ಅದರ ಸುಖ ಅವಳಿಗಲ್ಲವೆ?"

"ಇದು ಒಳ್ಳೆಯ ತರ್ಕ! ಈ ಸಲವೇನೋ ಅವಳ ಪುಣ್ಯವೆಂದು ಹೇಳಿದೆ. ಹಾಗೇ ಆಗಲಿ, ಆದರೆ ಇದುವರೆಗೆ ಮೊದಲನೆಯವನಾಗಿ ಬಂದದ್ದು, ಸ್ಕಾಲರ್ ಷಿಪ್ ಪಡೆದದ್ದು ಎಲ್ಲಾ ಅವಳಿಂದಲೇ ಏನು?"

"ಇರಬಹುದು."

"ಅದು ಸರಿಯಲ್ಲ. ನಾನು ಹೇಳಲೇನಮ್ಮ? ಎಲ್ಲ ನಿನ್ನ ಪುಣ್ಯ. ನಿನ್ನ ಆಶೀರ್ವಾದ!"

"ಯಾರ ಪುಣ್ಯವಾದರೂ ಆಗಲಿ. ಹಿಡಿದ ಕೆಲಸ ಹೂವಿನಸರ ಎತ್ತಿದಂತೆ ಸರಾಗವಾಗಿ ನಡೆಯುತ್ತಿದೆಯಲ್ಲ ಅಷ್ಟೇ ಸಾಕು!"

"ಅಮ್ಮಾ....ನನಗಾಗಿ ಎಷ್ಟು ಕಷ್ಟಪಡುತ್ತಿರುವೆ. ಹಳ್ಳಿಯಲ್ಲಿದ್ದಾಗ ನೀನು ಸುಖವಾಗಿದ್ದೆ. ಆ ಸುಖ ಅಪ್ಪನೊಡನೆಯೇ ಹೋಯ್ತು. ಅಲ್ಲಿ ಬರುವ ವರಮಾನ ಈ ಊರಲ್ಲಿ ಹೊಟ್ಟೆ ಬಟ್ಟೆಗೇ ಸಾಕಾಗುವುದಿಲ್ಲ. ನಿನ್ನ ಮೈಮೇಲಿದ್ದ ಚೂರು ಪಾರು ಒಡವೆಯನ್ನೆಲ್ಲಾ ನನ್ನ ವಿದ್ಯೆಗೆಂದು ತೆತ್ತಾಯಿತು...."

"ಹೋಗಲಿ ಬಿಡು ಅದಕ್ಕೇಕೆ ಯೋಚನೆ. ಅದರಿಂದ ನನಗೆ ಇನ್ನೇನಾಗಬೇಕು. ನೀನೇ ದೊಡ್ಡ ಒಡವೆ. ನೀನು ಸುಖವಾಗಿದ್ದರೆ ಸಾಕು."

"ಅಮ್ಮಾ, ಇದೊಂದು ವರ್ಷ ಹೇಗೋ ಕಳೆದುಬಿಟ್ಟು ಮುಂದಿನ ಸಲವೂ ಹೀಗೇ ಪಾಸಾಗಿ ಒಂದು ದಡ ಸೇರಿದರೆ ನಿನ್ನನ್ನು ತುಂಬ ಸುಖವಾಗಿ ಇಟ್ಟುಕೊಳ್ಳಬೇಕೆಂದು ಆಶೆಯಿದೆ!"

"ದೇವರು ನಡೆಸುತ್ತಾನಪ್ಪ. ಅದಕ್ಕೆ ಈಗಿನಿಂದ ಯಾಕೆ ಯೋಚನೆ. ಮಗು....ಶಂಕರ ಮಠಕ್ಕೆ ಹೋಗೋಣವೇ? ಶಾರದಾಮ್ಮನವರಿಗೆ ಕುಂಕುಮಾರ್ಚನೆ ಮಾಡಿಸಬೇಕೆಂದು ಮನಸ್ಸಿನಲ್ಲಿತ್ತು."

"ಆಗಲಮ್ಮಾ, ಅದಕ್ಕೇನು ಹೋಗೋಣ. ಬಟ್ಟೆ ಬದಲಾಯಿಸಿ ಕಾಲು ತೊಳೆದುಕೊಂಡು ಬರ್‍ತೀನೆ. ಇಂದಿರ ಎಲ್ಲಮ್ಮಾ? ಅವಳಿಗೆ ಹೇಳಬೇಡವೆ? ಪ್ರತಿದಿನವೂ "ರಿಸಲ್ಟ್" ಬಂತೇ ಎಂದು ಕೇಳುತ್ತಿದ್ದಳು."

"ಇಲ್ಲೇ ನೆರೆಮನೆಗೆ ಆಟಕ್ಕೆ ಹೋಗಿದಾಳೆ, ಕರೀತೇನೆ."

ಇಂದಿರ ರಾಮಚಂದ್ರನ ಪುಟ್ಟ ತಂಗಿ. ತಾಯಿ ಕೂಗಿದ್ದನ್ನು ಕೇಳಿ ಕುಣಿಯುತ್ತ ಓಡಿ ಬಂದಳು. ಅಣ್ಣನ ಕೊರಳಿಗೆ ತೆಕ್ಕೆ ಬಿದ್ದು—

"ಎಲ್ಲಣ್ಣ ತಿಂಡಿ?" ಎಂದಳು. ರಾಮಚಂದ್ರ ತಂಗಿಗೆ ಮುದ್ದಿಟ್ಟು,

"ಮೊದಲು ದೇವಸ್ಥಾನಕ್ಕೆ ಹೋಗೋಣ ನಡಿ. ಆಮೇಲೆ ತಿಂಡಿ ಕೊಡಿಸುತ್ತೇನೆ."

ಎಂದು ಹೇಳಿದ. ಮೂರು ಜನವೂ ಹೊರಟರು, ಸ್ವಲ್ಪ ಹೊತ್ತು

ತಾಯಿ ಮಗ ಇಬ್ಬರೂ ಮೌನವಾಗಿ ನಡೆದಿದ್ದರು. ಇಬ್ಬರ ಹೃದಯವೂ ತುಂಬಿದಂತಿದ್ದು ಭವಿಷ್ಯದ ಭವ್ಯ ಕನಸನ್ನು ಕಾಣುತ್ತಿತ್ತು. ಇಂದಿರ ಒಂದೇ ಸಮ ಮಾತಾಡುತ್ತಿದ್ದಳು. ಕತ್ತಲು ಕವಿಯುತ್ತ ಬಂದಿತ್ತು. ದೂರದಲ್ಲಿ ಮಿನುಗುತ್ತಿದ್ದ ದೀಪಗಳು ಅವರ ಹೃದಯದಲ್ಲಿ ಮೂಡಿದ್ದ ಆಸೆಯ ಪ್ರತೀಕದಂತಿದ್ದುವು.

"ಪರೀಕ್ಷೆ ಆಯಿತೆಂದು ಶಾಸ್ತ್ರಿಗಳಿಗೆ ಕಾಗದ ಬರಿಯಪ್ಪ.'

ರಾಮಚಂದ್ರನ ತಾಯಿ ಏನೋ ಯೋಚಿಸುತ್ತಿದ್ದವರು ತಟ್ಟನೆ ಹೇಳಿದರು.

"ಆಗಲಮ್ಮ. ನಾಳೇ ಬರೀತೇನೆ."

"ರಾಮು—ಹೇಗೂ ಇನ್ನೂ ರಜ ಇದೆ. ಮೀನಾಕ್ಷಿಯನ್ನು ಕರೆಸಲೆ? ನಾಲ್ಕುದಿನ ಜೊತೆಯಲ್ಲಿರಲಿ."

"ಈಗ ಬೇಡಮ್ಮ. ನಾನು ಒಂದು ಕಡೆ ನಿಂತು ಸಂಪಾದಿಸುವವರೆಗೂ ಆ ಯೋಚ್ನೇನೇ ಬೇಡ. ಇಲ್ಲದ ತೊಂದರೆ!"

"ತೊಂದರೆ ಏನು ಬಂತು? ನಾವು ಉಂಡದ್ದನ್ನೇ ಅವಳೂ ಉಣ್ಣುತ್ತಾಳೆ. ನಮ್ಮ ಮಗು ನಮಗೆ ಭಾರವೆ?"

"ಊಟದ ಮಾತಲ್ಲಮ್ಮ ಅದು. ದೇವರು ಕೊಟ್ಟಿರೋದನ್ನು ಬೇಕಾದರೆ ಇನ್ನೂ ಇಬ್ಬರು ತಿನ್ನಲಿ. ಅದಕ್ಕೇನೂ ಯೋಚನೆಯಿಲ್ಲ. ಆದರೆ ಅದೊಂದು ತತ್ವ ಅಷ್ಟೆ! ನಮ್ಮ ಸ್ಥಿತಿ ಸುಧಾರಿಸುವವರೆಗೂ ಅವಳು ಇಲ್ಲಿಗೆ ಬರುವುದು ಬೇಡ."

"ಏನೋಪ್ಪ ನಿನ್ನ ರೀತಿ ನನಗೆ ಅರ್ಥವಾಗುವುದಿಲ್ಲ. ನಿನಗೆ ತೋರಿದಂತೆ ಮಾಡು. ಒಮ್ಮೆ ನಿನ್ನ ಮನಸ್ಸಿಗೆ ಏನಾದರೂ ಬಂದಿತೆಂದರೆ ಅದಕ್ಕೆ ವಿರೋಧವಾಗಿ ಹೇಳುವುದರಿಂದ ಎಷ್ಟು ಪ್ರಯೋಜನವೆಂದು ನನಗೆ ಗೊತ್ತಿದೆ."

"ಸಿಟ್ಟುಮಾಡಬೇಡಮ್ಮ. ಅದು ನನ್ನ ಸ್ವಭಾವ. ಅದಕ್ಕೆ ನಾನೇನು ಮಾಡಬಹುದು....?"

"ಅದು ಸರಿ. ಒಬ್ಬೊಬ್ಬರ ಹುಟ್ಟು ಗುಣ ಒಂದೊಂದು ರೀತಿ. ಅದಕ್ಕೆ ಯಾರೇನು ಮಾಡಲಾದೀತು! ಹೋಗಲಿ....ರಂಗನೂರಿಗಾದರೂ ಹೋಗಿ ಎರಡು ದಿವಸ ಇದ್ದು ಬರಬಾರದೆ? ಶಾಸ್ತ್ರಿಗಳು ರಜ ಬಂದಾಗಿನಿಂದಲೂ ಒಂದೇಸಮ ಬರಬೇಕೆಂದು ಕರೀತಿದಾರೆ. ಈಗಲೂ ಹೋಗದಿದ್ದರೆ ಏನೆಂದುಕೊಂಡಾರು!"

"ಏನು ಸುಖ ಸುರಿದುಕೊಳ್ಳುವುದಕ್ಕೆ ಅಲ್ಲಿಗೆ ಹೋಗಬೇಕೋ...."

"ಸಾಕು ಸುಮ್ಮನಿರು. ನಿನ್ನಾಟವೆಲ್ಲಾ ನನಗೆ ಗೊತ್ತಿದೆ. ಮನೆ ತುಂಬ ನೆಂಟರಿಷ್ಟರು ತುಂಬಿರುವಾಗ ಆ ಮದುವೆ ಹುಡುಗಿ ಬಂದು ನಿನ್ನ ಮುಂದೆ ಕೂತಿರಬೇಕಾಗಿತ್ತೇನೋ! ಎಷ್ಟಾದರೂ ಸಂಪ್ರದಾಯವಂತರ ಮನೆ ಹೆಣ್ಣು. ನಿನ್ನಂತೆ ಸಿನಿಮಾ ನೋಡಿ ತಲೆ ಕೆಡಿಸಿಕೊಂಡಿಲ್ಲ. ಅದನ್ನೇ ಮನಸ್ಸಿನಲ್ಲಿಟ್ಟುಕೊಂಡು, ದೀಪಾವಳಿ ಹಬ್ಬಕ್ಕೆ ಕರೆದರೂ ಹೋಗಲಿಲ್ಲ. ಮದುವೆ ಮಾಡಿಕೊಂಡು ಬಂದವನು ಒಂದು ಸಲವೂ ಹೋಗದಿದ್ದರೆ ಅವರಿಗೆ ಹೇಗೆನಿಸಬೇಡ? ಇಷ್ಟೆಲ್ಲಾ ಓದಿದವರಿಗೆ ಇದು ಯಾಕೆ ತಿಳಿಯುವುದಿಲ್ಲವೋ: ಕಾಣೆ....!"

"ಇಲ್ಲಮ್ಮ, ಈ ಸಲ ಹೋಗ್ತೇನೆ. ಸರಿಯೋ? ಈಗಲಾದರೂ ಸಮಾಧಾನವಾಯಿತೇ....?"

ಆ ವೇಳೆಗೆ ದೇವಸ್ಥಾನ ಬಂತು. ಕುಂಕುಮಾರ್ಚನೆ ಮಂಗಳಾರತಿ ಆದ ಮೇಲೆ ಮನೆಗೆ ಹೊರಟರು. ಹಾಗೇ ದಾರಿಯಲ್ಲಿ ಮಾರ್ಕೆಟ್ಟಿಗೆ ಹೋಗಿ ಹಣ್ಣು ಹೂವು, ತರಕಾರಿ ಕೊಂಡಾಯಿತು ರಾಮುಚಂದ್ರ ಹೋಟೆಲಿನಿಂದ ಸಿಹಿತಿಂಡಿಯನ್ನು ಕಟ್ಟಿಸಿಕೊಂಡು ಬಂದ. ಊಟ ಮಾಡುತ್ತಿರುವಾಗ ರಾಮುಚಂದ್ರನ ತಾಯಿ,

"ರಾಮು....ವಿಶ್ವನಾಥ ಎಲ್ಲಿ ಕಾಣಿಸುವುದಿಲ್ಲ. ಎರಡು ಮೂರು ದಿನದಿಂದ ಬಂದಹಾಗಿಲ್ಲ...."

"ಇಲ್ಲ, ಬಂದಿಲ್ಲ. ಸಾಯಂಕಾಲ ಮನೆಗೆ ಬರುವ ಮೊದಲು ಅವನ ರೂಮಿಗೆ ಹೋಗಿದ್ದೆ. ಬೀಗ ಹಾಕಿತ್ತು. ಎಲ್ಲಿ ಹೋಗಿದ್ದನೋ...."

"ನಾಳೆ ಪಾಯಸದ ಅಡಿಗೆ ಮಾಡೋಣವೆಂದಿದ್ದೇನೆ. ಅವನಿಗೂ ಇಲ್ಲಿಗೆ ಊಟಕ್ಕೆ ಬರುವಂತೆ ಹೇಳುವೆಯೇನು?"

"ಆಗಲಮ್ಮ. ಬೆಳಗ್ಗೆ ಹೋಗಿ ಹೇಳ್ತೀನೆ."

"ನಿನ್ನ ಸ್ನೇಹಿತರು ಇನ್ನಾರಿಗಾದರೂ ಹೇಳುವಂತಿದ್ದರೆ ಹೇಳು. ಎಲ್ಲಾ ಒಂದು ದಿವಸ ಒಟ್ಟಾಗಿ ಸಂತೋಷದಿಂದ ಕಳೆಯಬಹುದು...."

"ಇನ್ನಾರೂ ಬೇಡಮ್ಮ. ಅವನೊಬ್ಬನೇ ಸಾಕು. ಹೊರಗಿನವರು ಬಂದರೆ ಸುಮ್ಮನೆ ಗಲಾಟೆ. ಬರೀ ಉಪಚಾರ—ಮನ ಬಿಚ್ಚಿ ಮಾತಾಡು ವಂತಿಲ್ಲ. ಇಬ್ಬರೂ ಕೆಲಸಮಾಡಿ ಒಳಗೆ ಸೇರಿಬಿಡುತ್ತೀರಿ. ನಾವು ತಿಂದು ಹೊರಗೆ ಕೂತು ಹರಟೆ ಹೊಡೆಯುವುದಾಗುತ್ತೆ. ಅದರಲ್ಲಿ ಸುಖ ವಿಲ್ಲ. ವಿಶ್ವನಾಥನಾದರೆ ಮನೆಯವನಂತೆಯೇ ಇರುವುದರಿಂದ ಪರ ವಾಗಿಲ್ಲ."

"ಹೌದಪ್ಪ, ಬಹಳ ಒಳ್ಳೇ ಹುಡುಗ. ನಿನ್ನ ಸ್ನೇಹಿತರು ಎಷ್ಟೋ ಜನ ಬರ್‍ತಾರೆ. ಆದರೆ ಅವನ ಹಾಗೆ ಯಾರೂ ಇಲ್ಲ. ಯಾವಾಗ ಬಂದರೂ ಒಳಗೆ ಬಂದು ನನ್ನ ಮಾತಾಡಿಸದೆ ಹೋಗುವುದಿಲ್ಲ. ಅವತ್ತು ಸಾಯಂಕಾಲ ನಿನ್ನ ಹುಡುಕಿಕೊಂಡು ಬಂದಿದ್ದ. ನೀನು ಮನೇಲಿರಲಿಲ್ಲ. ನಲ್ಲೀಲಿ ಬೆಳಗಿನಿಂದಲೂ ನೀರಿರಲಿಲ್ಲ. ಎದುರು ಮನೆ ಭಾವಿಯಲ್ಲಾದರೂ ಎರಡು ಕೊಡ ತರೋಣವೆಂದು ಹೊರಟಿದ್ದೆ. ಅವನು ನೋಡಿದವನೇ ಎಷ್ಟು ಬೇಡವೆಂದರೂ ಕೇಳದೆ, ಕೋಟು ಬಿಚ್ಚಿಟ್ಟು ನಾಲ್ಕು ಕೊಡ ನೀರು ತಂದು ಹಾಕಿದ. ನಿಗರ್ವಿ....!"

"ಹೌದಮ್ಮ. ಅವನ ಸ್ವಭಾವವೇ ಹಾಗೆ. ಎಲ್ಲಿ ಹೋದರೂ ಯಾರಿಗೆ ಏನುಮಾಡಲಿ? ಎಂದು ಯೋಚಿಸುವುದೇ ಹೊರತು, ಇದ ವರು ತನಗೆ ಮಾಡಲಿ ಎನ್ನುವುದಿಲ್ಲ...."

"ಅದು ಬಹಳ ದೊಡ್ಡ ಗುಣ. ನನಗೆ ಅಷ್ಟು ಮಾಡಬೇಕೆಂದು ಅವನಿಗೆ ಏನು ಅಗತ್ಯ ಹೇಳು....?"

"ನಾಳೆ ಏನಡಿಗೆ ಮಾಡ್ತೀಯಮ್ಮ?"

"ಏನು ಮಾಡಲಿ, ಹೇಳು?"

"ನೀನೇ ಹೇಳಬಾರದೆ....?"

"ಕೇಸರಿಭಾತು, ಕೀರು. ಬೋಂಡ—ಮಾಡೋಣವೆಂದಿದ್ದೆ...."

"ಆಗಬಹುದು. ಜೊತೆಗೆ ಕೊಬ್ಬರಿ ಮಿಠಾಯಿ ಮಾಡಮ್ಮ. ಇಂದಿರನಿಗೆ ಅದು ಬಹಳ ಇಷ್ಟ!"

"ಹೌದಮ್ಮ. ನೀನು ಮಾಡೋ ಕೊಬ್ಬರಿ ಮಿಠಾಯಿ ಬಹಳ ಚೆನ್ನಾಗಿರುತ್ತೆ. ಅದೇ ಮಾಡಮ್ಮ...."

"ಆಗಲಿ ನನ್ನ ಚಿನ್ನ. ಅದೇ ಮಾಡಿದರಾಯಿತು. ಏನು ಮುಟ್ಟಿಸಬೇಕು. ನಿಮಗೆ ಏನು ಇಷ್ಟವೋ ಅದೇ ಆಗಲಿ. ನೀವಿಬ್ಬರೂ ನನಗೆ ಎರಡು ಕಣ್ಣು. ನೀವು ಸಂತೋಷವಾಗಿರುವುದೇ ನನಗೆ ಬೇಕಾಗಿರೋದು....!"

ರಾಮುಚಂದ್ರನ ತಾಯಿ ಆ ಮಾತು ಹೇಳಿದಾಗ ನಿಜವನ್ನೇ ನುಡಿದಿದ್ದರು. ರಾಮುಚಂದ್ರನ ಹಿಂದೆ ನಾಲ್ಕು ಮಕ್ಕಳು ಹೋಗಿ ಇಂದಿರ ಉಳಿದಿದ್ದಳು. ಮಕ್ಕಳ ವಿಚಾರದಲ್ಲಿ ಬಹಳ ನೊಂದವರಾಗಿ ಆಕೆ ಆ ಎರಡು ಮಕ್ಕಳನ್ನೂ ತಮ್ಮ ಬಾಳಿನ ಬೆಳಕೆಂದೇ ಭಾವಿಸಿ ನಡೆಸಿಕೊಂಡು ಬಂದಿದ್ದರು. ಅವರನ್ನು ಸುಖವಾಗಿಡುವುದಕ್ಕಾಗಿ ಹಗಲಿರಳೂ ಶ್ರಮಿಸುತ್ತ ಅದರಲ್ಲೇ ತಾವು ಸುಖವನ್ನು ಕಾಣುತ್ತಿದ್ದರು.

* * * * *

ರಾಮುಚಂದ್ರ ತಾಯಿಗೆ ಹೇಳಿದ್ದಂತೆ ರಂಗನೂರಿಗೆ ಹೋಗುವುದನ್ನು ನಿಶ್ಚೈಸಿ ಶಾಸ್ತ್ರಿಗಳಿಗೆ ಕಾಗದ ಬರೆದಿದ್ದ. ಪರೀಕ್ಷೆಯ ಫಲಿತಾಂಶದ ಜೊತೆಗೆ ತಾನು ಬರುವುದನ್ನೂ ತಿಳಿಸಿದ್ದ. ಕಾಗದ ನೋಡಿ ಶಾಸ್ತ್ರಿಗಳಿಗಾದ ಆನಂದ ಅಷ್ಟಿಷ್ಟಲ್ಲ. ಮಗಳನ್ನು ಕೂಗಿ,

"ಮೀನಾ-ದೇವರಿಗೆ ತುಪ್ಪದ ದೀಪ ಹಚ್ಚಿಡಮ್ಮ. ಯಜಮಾನರು ಪರೀಕ್ಷೆಯಲ್ಲಿ ಜಯಭೇರಿ ಹೊಡೆದಿದಾರೆ! ತಾಳು-ಅಷ್ಟರಲ್ಲೇ ಹೊರಟುಬಿಟ್ಟೆಯಲ್ಲ, ಪೂರ್ತಿ ಕೇಳಬಾರದೆ. ನಾಳೆ ಇಲ್ಲಿಗೆ ಬರ್‍ತಾರಂತೆ. ತಗೋ-ಈ ಕಾಗದ ಅಮ್ಮಯ್ಯನಿಗೆ ತೋರಿಸು. ಅವರು ಹೊಸ ರೀತಿಯವರು. ಇಲ್ಲಿರುವಾಗ ಅವರಿಗೆ ಯಾವ ಕೊರತೆಯೂ ತೋರದಂತೆ ನೋಡಿಕೊಳ್ಳ

ವುದು ನಿಮ್ಮ ಭಾರ. ಕಾಲಕ್ಕೆ ತಕ್ಕಂತೆ ನಮ್ಮ ನಡೆ ನುಡಿಯನ್ನು
ಹೊಂದಿಸಿಕೊಳ್ಳುವುದು ಒಳ್ಳೆಯದು...."

ಎಂದು ಹೇಳಿ ಕಾಗದವನ್ನು ಅವಳಿಗೆ ಕೊಟ್ಟರು. ಶಾಸ್ತ್ರಿಗಳು ಆ
ಮಾತನ್ನು ಮೀನಾಕ್ಷಿಯನ್ನು ಉದ್ದೇಶಿಸಿ ಆಡಿದ್ದರೂ ಅದು ಒಟ್ಟಿನಲ್ಲಿ
ಎಲ್ಲರಿಗೂ ಒಂದು ಸೂಚನೆಯಂತಿತ್ತು.

ಮೀನಾಕ್ಷಿ ಕಾಗದವನ್ನು ನೋಡಿ ಹಿಗ್ಗಿ ಹೋದಳು. ಅಕ್ಕ ತಂಗಿ
ಯರಿಬ್ಬರೂ ಸಂಭ್ರಮದಿಂದ ಓಲಾಡಿದರು. ಅವಳ ಹೃದಯ ಸಂತಸ
ದಿಂದ ತುಂಬಿದ್ದರೂ, ನಾಚಿಕೆ-ಸಂಕೋಚ ಅದನ್ನು ಆವರಿಸದೆ ಬಿಡಲಿಲ್ಲ.
ನೆರೆಹೊರೆಯ ಹೆಂಗಸರು ಒಂದೆಡೆ ಸೇರಿದಾಗ —,

"ಮೀನಾಕ್ಷಿ ಬಹಳ ಪುಣ್ಯವಂತೆ. ಅಷ್ಟು ಓದಿ ಬುದ್ಧಿವಂತನಾಗಿರುವ
ಗಂಡನು ಸಿಕ್ಕಬೇಕಾದರೆ ಒಳ್ಳೆ ಪೂಜೆ ಮಾಡಿರಬೇಕು!"

ಎಂದು ಆಡಿರುವುದನ್ನು ಕೇಳಿದ್ದಳು. ಅದನ್ನು ಕೇಳಿ ಗಂಡನ
ಕಡೆಗೆ ಒಂದಿಷ್ಟು ಅಭಿಮಾನವೂ ಹೆಮ್ಮೆಯೂ ಉಂಟಾಗಿತ್ತು. ಆದರೂ
ಅವನು ಒಮ್ಮೆಯಾದರೂ ಈ ಕಡೆ ಬರದೆ ಉದಾಸೀನ ತೋರಿಸಿದ್ದರಿಂದ
ಮನಸ್ಸು ಕುಗ್ಗಿದ್ದೂ ಉಂಟು. ಒಂದು ರೀತಿಯಲ್ಲಿ ಅವನು ಎಷ್ಟು ಹತ್ತಿರ
ದವನು! ಅವನಿಗಾದ ಒಂದು ಪರೀಕ್ಷೆಯ ಜಯ ಅವಳ ಹೃದಯವನ್ನು
ಆನಂದದಿಂದ ತುಂಬಿದೆ. ಅವನು ಬರುವನೆಂಬ ಸುದ್ದಿ ಅವನನ್ನು ನೋಡು
ವೆನೆಂಬ ಅರಿವು ಮನದಲ್ಲಿ ಮೂಡಿ, ಯಾವುದೋ ಮಧುರ ಭಾವ ಲಾಸ್ಯ
ವಾಡುತ್ತಿತ್ತು. ಆದರೂ ಒಂದು ರೀತಿಯಲ್ಲಿ ಅವನು ದೂರವಾಗೇ ಇದ್ದಾನೆ.
ಮೀನಾಕ್ಷಿ ಈಗ ಕೇವಲ ಹುಡುಗಿಯಲ್ಲ. ಅದನ್ನು ತಿಳಿಯಬಲ್ಲವಳಾಗಿ
ದ್ದಾಳೆ. ಮನೆಯಲ್ಲಿ ಆಗಾಗ ನಡೆಯುತ್ತಿದ್ದ ಮಾತುಗಳಿಂದ ಆತನ ವಿಚಾರ
ದಲ್ಲಿ ಕೆಲವು ಅಭಿಪ್ರಾಯಗಳೂ ತಲೆದೋರಿವೆ!

ರಾಮಚಂದ್ರ ಬಂದಾಗ ಮೀನಾಕ್ಷಿ ಅಕ್ಕನ ಮಗ್ಗುಲಿಗೆ ನಿಂತು
ಮೃದುಹಾಸವನ್ನು ಬೀರಿ ಅವನನ್ನು ಸ್ವಾಗತಿಸಿದಳು. ಆ ಒಂದು ನೋಟ
ಅವನನ್ನು ತಣಿಸಿತು ಎಂದರೂ ತಪ್ಪಾಗಲಾರದು. ರಾಮಚಂದ್ರ ಮನಸ್ಸಿ
ನಲ್ಲಿ—

"ಮೀನಾ ಎಷ್ಟು ದೊಡ್ಡವಳಾಗಿ ಬಿಟ್ಟಿದಾಳೆ ನಾನು ಒಂದು ಬಾರಿ ಯಾದರೂ ಇಲ್ಲಿಗೆ ಬರದೆ ಎಷ್ಟು ತಪ್ಪು ಮಾಡಿದೆ!" ಎಂದುಕೊಂಡ.

ಮಾವನ ಮನೆಯಲ್ಲಿ ಅಳಿಯನಿಗೆ ಆಗುವ ಉಪಚಾರವೆಲ್ಲಾ ನಡೆ ಯಿತು. ಶಾಸ್ತ್ರಿಗಳು ಬೆಳಗ್ಗೆ ಎದ್ದು ಕಾವೇರಿ ನದಿಗೆ ಸ್ನಾನಕ್ಕೆ ಹೋಗಿ ಜಪ ಮುಗಿಸಿ ದೇವರ ದರ್ಶನ ಮಾಡಿ ಮನೆಗೆ ಬರುವ ಹೊತ್ತಿಗೆ ಹತ್ತು ಗಂಟೆ ಆಗುತ್ತಿತ್ತು. ಆ ಮೇಲೆ ದೇವರ ಪೂಜೆ, ಪಾರಾಯಣ ಆಗಬೇಕಾ ದರೆ ಹನ್ನೆರಡು ಗಂಟೆ. ಅನಂತರ ಊಟ. ಅವರು ಕಾಫಿ ಕುಡಿಯುವ ಅಭ್ಯಾಸವನ್ನೇ ಇಟ್ಟಿರಲಿಲ್ಲ. ರಾಮಚಂದ್ರ ಹಾಸಿಗೆಯಿಂದ ಏಳುವ ಮೊದ ಲೇ ಅವರು ನದಿಗೆ ಹೋಗುತ್ತಿದ್ದರು. ಏನಿದ್ದರೂ ಊಟ ಮಾಡುವಾಗ ಅವರೊಡನೆ ಮಾತಿಗೆ ಅವಕಾಶ. ಊಟವಾಗಿ ಸ್ವಲ್ಪ ವಿಶ್ರಾಂತಿ ಪಡೆಯುವ ಹೊತ್ತಿಗೆ ವಿದ್ಯಾರ್ಥಿಗಳು ಪಾಠಕ್ಕಾಗಿ ಬರುತ್ತಿದ್ದರು. ಆಗ "ಸರಸ್ವತಿ ಮಂದಿರ"ವನ್ನು ಹೊಕ್ಕರೆ ಹೊರಗೆ ಬರುವ ವೇಳಗೆ ಸಂಜೆಯಾಗು ತ್ತಿತ್ತು. ತಿರುಗಾಡಿಕೊಂಡು ಪುನಃ ಸಂಧ್ಯಾವಂದನೆಗೆ ನದಿಯ ಕಡೆ ಹೋಗುತ್ತಿದ್ದರು.

ಚಂದು ಭಾವನೊಡನೆ ಕಾಫಿ ತೆಗೆದುಕೊಂಡು ಕೆಲಸದ ನೆವ ಹೇಳಿ ಹೊರಗೆ ಜಾರುತ್ತಿದ್ದ. ಅವನ ಜೊತೆ ರಾಮಚಂದ್ರನಿಗೆ ಸಿಕ್ಕುತ್ತಿದ್ದುದು ಸಾಯಂಕಾಲ ತಿರುಗಾಡಲಿಕ್ಕೆ ಹೋಗುವಾಗ ಮಾತ್ರ. ಚಂದುವಿಗೆ ತಾನು ಹರಟೆಗೆ ಕೂರುವುದಕ್ಕಿಂತ ಹೊರಗೆ ಹೋಗುವುದರಲ್ಲಿಯೇ ಅವನಿಗೆ ಹಿತವೆಂದು ತಿಳಿದಿತ್ತು. ಅಮ್ಮಯ್ಯನಿಗೂ ಅಡಿಗೆ ಮನೆಯ ಕೆಲಸಕ್ಕೂ ಸರಿಹೋಗುತ್ತಿತ್ತು. ಇನ್ನು ಉಳಿದವಳೆಂದರೆ ಮೀನಾಕ್ಷಿ! ಅವಳ ಸಹವಾಸದಲ್ಲಿ ರಾಮಚಂದ್ರನಿಗೆ ನಾಲ್ಕು ದಿವಸ ನಾಲ್ಕು ಗಳಿಗೆಯಂತೆ ಕಳೆಯಿತು.

ಆ ದಿನ ಹುಣ್ಣಿಮೆ. ಶಾಸ್ತ್ರಿಗಳು ಹೊಳೆಯ ಬಳಿ ಬೆಳದಿಂಗಳೂಟ ಮಾಡಬೇಕೆಂದು ಏರ್ಪಾಡು ಮಾಡಿದ್ದರು. ಆ ಅಪೇಕ್ಷೆ ಅವರ ಮನಸ್ಸಿ ನಲ್ಲಿ ಬಹಳ ದಿವಸದಿಂದ ಇದ್ದುದು ಈಗ ಅಳಿಯ ಬಂದಿರುವ ಸಮಯ ದಲ್ಲಿ ಕಾರ್ಯ ರೂಪಕ್ಕೆ ಬಂದಿತ್ತು.

ಮೀನಾಕ್ಷಿ ಅಮ್ಮಯ್ಯ ಇಬ್ಬರೂ ಸೇರಿ ಸೊಗಸಾದ ಅಡಿಗೆಯನ್ನು ಸಿದ್ಧಮಾಡಿದರು. ಬಿಸಿ ಬೇಳೆ ಹುಳಿಯನ್ನು, ಮೊಸರನ್ನ ಹಪ್ಪಳ ಸಂಡಿಗೆ ಪಾಯಸ ಎಲ್ಲವನ್ನೂ ಅಲ್ಲಿಗೆ ತೆಗೆದುಕೊಂಡು ಹೋಗಲು ಅನುಕೂಲವಾಗುವಂತೆ ಪಾತ್ರೆಗಳಲ್ಲಿ ಹಾಕಿ ಇಟ್ಟಾಯಿತು. ಬೆಳದಿಂಗಳು ಇನ್ನೂ ಚೆನ್ನಾಗಿ ಬಂದಿರಲಿಲ್ಲವಾಗಿ ಹೊರಡುವುದು ತಡವಾಗಿತ್ತು. ರಾಮಚಂದ್ರ ತಾವು ಅಲ್ಲಿ ಹೋಗಿ ಕೂತಿರುವುದಾಗಿ ಹೇಳಿ ಮೀನಾಕ್ಷಿಯೊಡನೆ ಮುಂದಾಗಿ ಹೊರಟ. ಮೀನಾಕ್ಷಿ ಮನೆಯಲ್ಲಿ ಅವನೊಡನೆ ಮಾತಾಡುತ್ತಿದ್ದರೂ ತಿರುಗಾಡುವಾಗ ಅವನ ಜೊತೆ ಹೋಗಲು ಒಪ್ಪುತ್ತಿರಲಿಲ್ಲ. ರಂಗನೂರಿನಲ್ಲಿ ಅದೊಂದು ಸೋಜಿಗದ ಸುದ್ದಿಯಾಗಿ ಎಲ್ಲರೂ ಮಾತಾಡಲು ಕಾರಣವಾಗುವುದೆಂದು ಹೆದರಿದ್ದಳು. ಆದರೆ ಆ ದಿನ ಕತ್ತಲಾಗಿತ್ತಾಗಿ ಹೆಚ್ಚು ಜನರನ್ನು ಸಂಧಿಸುವ ಅವಕಾಶ ಬರಲಾರದೆಂದು ಧೈರ್ಯಮಾಡಿ ಹೊರಟಿದ್ದಳು.

ಅವರು ನದಿಯ ತೀರವನ್ನು ಸೇರಿದಾಗ ಚಂದ್ರ ಆಗತಾನೇ ನೀಲಿಯಾಗಸದಲ್ಲಿ ವಿಲಾಸದಿಂದ ಮೇಲೇರುತ್ತಿದ್ದ. ಬೆಳುದಿಂಗಳು ನದಿಯ ತೀರವನ್ನು ಬೆಳ್ಳಿಯಂತೆ ಬೆಳಗಿಸಿತ್ತು. ಗಿಡ, ಮರ ಸೋಪಾನ ಎಲ್ಲವೂ ಅದರ ಅಮೃತಧಾರೆಯಲ್ಲಿ ಮಿಂದು ತೃಪ್ತಿಗೊಂಡಂತೆ ನಿಂತಿದ್ದುವು. ಬೇಸಗೆಯ ದಿನವಾದ್ದರಿಂದ ಹೊಳೆಯಲ್ಲಿ ಹೆಚ್ಚು ನೀರಿರಲಿಲ್ಲ. ನೋಡಿದಲ್ಲೆಲ್ಲ ಬರೀ ಬಂಡೆಗಳೇ ಕಾಣುತ್ತಿದ್ದುವು. ಹಗಲಿನಲ್ಲಿ ಜನರಿಂದ ತುಂಬಿರುತ್ತಿದ್ದ ಪ್ರದೇಶ ರಾತ್ರಿಯಲ್ಲಿ ಮೌನವಾಗಿ ಗಂಭೀರ ಆಲೋಚನೆಯಲ್ಲಿರುವಂತೆ ತೋರುತ್ತಿತ್ತು.

ರಾಮಚಂದ್ರ ಮೀನಾಕ್ಷಿಯ ಕೈ ಹಿಡಿದುಕೊಂಡು ಬಂಡೆಗಳನ್ನು ದಾಟಿ ನದಿಯಲ್ಲಿ ಸ್ವಲ್ಪ ದೂರ ಹೋಗಿ ಅಲ್ಲಿ ವಿಸ್ತಾರವಾಗಿದ್ದ ಬಂಡೆಯೊಂದರ ಮೇಲೆ ಕುಳಿತ. ಪಕ್ಕದಲ್ಲಿ ಅವನಿಗೆ ಒರಗಿದಂತೆ ಮೀನಾಕ್ಷಿ ಇದ್ದಳು. ಎದುರಿಗೆ ಚಂದ್ರ ನಗುತ್ತಿದ್ದ. ಬಂಡೆಗಳನ್ನು ಸುತ್ತಿ ಬಳಸಿ ನದಿ ಮುಂದೆ ಸಾಗುತ್ತಿತ್ತು. ಅದರ ನಡಿಗೆಯಲ್ಲಿ ಆರ್ಭಟವಿರಲಿಲ್ಲ. ಶಾಂತ ಗಂಭೀರತೆ ಇತ್ತು. ಬಂಡೆಗೆ ಅಪ್ಪಳಿಸಿದ ಕಿರುದೆರೆಗಳು ನೊರೆ ನೊರೆ

ಯಾಗಿ ತೇಲುತ್ತಿದ್ದುವು. ಗಾಳಿಗೆ ಅಲ್ಲಾಡುತ್ತಿದ್ದ ಮರದ ಎಲೆಗಳ ಮರಮರ ಶಬ್ದ ಯಾವುದೋ ಅವ್ಯಕ್ತ ಸಂದೇಶವನ್ನು ಕಿವಿಯಲ್ಲಿ ಹೇಳುತ್ತಿರವಂತೆ ತೋರಿತು.

ರಾಮಚಂದ್ರ ಆ ನೋಟವನ್ನು ನೋಡಿ ಮೂಗನಂತಾಗಿದ್ದ. ಅವನಿಗೆ ಅದುವರೆಗೂ ಗೊತ್ತಿರದ ಯಾವುದೊ ಒಂದು ಹೊಸ ಪ್ರಪಂಚವನ್ನು ಎದುರಿಗೆ ತೆರೆದಿಟ್ಟಂತೆ ಆಗಿತ್ತು. ಅದರಲ್ಲಿನ ಸೌಂದರ್ಯ ಸೂರೆಯಾಗಿ ಪ್ರವಹಿಸುತ್ತಿರುವಂತೆ ತೋರಿತು. ಹಗಲಿನಲ್ಲಿ ತನ್ನ ಕೆಲಸಗಳಿಗಾಗಿ ಈ ತಾಣವನ್ನು ಆಶ್ರಯಿಸಿ ಇರುವೆಯಂತೆ ಮುತ್ತಿರುವ ಜನ ಈ ರಸಮಯ ವೇಳೆಯಲ್ಲಿ ಮನೆಯನ್ನು ಆಶ್ರಯಿಸಿರುವರಲ್ಲ! ಎನಿಸಿತು. ತನಗೆ ಈ ಅಪೂರ್ವ ನೋಟವನ್ನು ಒದಗಿಸಿಕೊಟ್ಟ ಶಾಸ್ತ್ರಿಗಳ ಮನದ ರಸಿಕತೆಯನ್ನು ಮೆಚ್ಚಿದ. ಮೌನವಾಗಿ ಮೀನಾಕ್ಷಿಯ ಕೈಯನ್ನು ತನ್ನ ಕೈಲಿ ತೆಗೆದುಕೊಂಡ.

ಹಾಗೆ ಎಷ್ಟು ಹೊತ್ತು ಕಳೆಯಿತೋ ತಿಳಿಯದು. ದೂರದಲ್ಲಿ ಜನ ಮಾತಾಡುತ್ತ ಬರುತ್ತಿರುವುದು ಕೇಳಿಸಿತು ಮೀನಾಕ್ಷಿ ಕೈ ಬಿಡಿಸಿಕೊಂಡು,

"ಅವರೆಲ್ಲ ಬರುತ್ತಿರುವಂತೆ ನಾವೂ ಆ ಕಡೆ ಹೋಗೋಣ...." ಎಂದಳು.

ರಾಮಚಂದ್ರ ಎದ್ದು ನಿಂತು ಹೇಳಿದ. "ಮೀನ-ನಾನು ಇಲ್ಲಿಗೆ ಬರಬಾರದಿತ್ತೇನೋ ಎನಿಸುತ್ತಿದೆ!"

"ಯಾಕೆ ಬೇಸರವಾಯಿತೆ....."

"ಬೇಸರವಿಲ್ಲ....! ಆದರೆ ಈ ಅನುಭವ ಮೊದಲಿನಂತೆ ಏಕಾಗ್ರತೆಯಿಂದ ನನ್ನನ್ನು ಓದಲು ಬಿಡುವುದೇ? ಎಂಬ ಅನುಮಾನ ಬಂದಿದೆ!"

ಮೀನಾಕ್ಷಿ ಮೆಲ್ಲಗೆ ನಕ್ಕಳು. ಆ ನಗು ಮಾತಿಗಿಂತ ಹೆಚ್ಚು ಅರ್ಥವನ್ನು ಕೊಡುವಂತಿತ್ತು.

"ಮೀನ-ಪುನಃ ನಾನು ಇಲ್ಲಿ ಬರಲಾರೆನೆಂದು ತೋರುತ್ತೆ. ಇದೊಂದು ವರ್ಷ ಎಷ್ಟುಕಷ್ಟವಾದರೂ ಅಭ್ಯಾಸವನ್ನು ಮುಂದುವರಿಸಲೇ

ಬೇಕು. ನನ್ನ ಭವಿಷ್ಯದ ಆಸೆಯೆಲ್ಲ ಅದರ ಮೇಲೆ ನಿಂತಿದೆ. ನೀನು ಆಗಾಗ ಪತ್ರ ಬರೆಯುವೆಯ ಮೀನ....?"

"ಬರೆಯದೆ ಏನು ?"

"ಇದುವರೆಗೇಕೆ ಬರೆಯಲಿಲ್ಲ ?"

"ನೀವೇಕೆ ಬರೀಲಿಲ್ಲ....?"

"ನೀನು ಉತ್ತರ ಕೊಡುತ್ತೀಯೋ ಇಲ್ಲವೋ ಎಂದು !"

"ಯಾಕೆ....? ನನಗೆ ಬರೆಯಲು ಬರುವುದಿಲ್ಲವೆಂದು ಅನುಮಾನವಿತ್ತೇನು?'

"ಹಾಗೇನಿಲ್ಲ! ಮದುವೇಲಿ ನೀನಿದ್ದ ರೀತಿ ನೋಡಿ ನೀನು ನನ್ನ ಕಾಗದವನ್ನು ಓದುವೆಯೆಂಬ ಭರವಸೆ ಕೂಡ ಇರಲಿಲ್ಲ. ಇನ್ನು ಅದೇ ಒಂದು ಹಗರಣವಾಗುವುದೇನೋ ಎಂಬ ಹೆದರಿಕೆ ಇತ್ತು!"

ಮೀನಾಕ್ಷಿ ನಕ್ಕಳು ಇಬ್ಬರೂ ಸೋಪಾನದ ಪಾವಟಿಗೆಗಳನ್ನೇರುವ ಹೊತ್ತಿಗೆ ಎಲ್ಲರೂ ಎದುರಿಗೆ ಬಂದರು. ಒಟ್ಟಿಗೆ ಕುಳಿತು ಊಟ ಮಾಡಿದ್ದಾಯಿತು. ಮಾತಾಡುತ್ತ ಎಲೆ ಅಡಿಕೆ ಹಾಕಿಕೊಂಡ. ಪಾತ್ರೆಗಳನ್ನೆಲ್ಲಾ ತೊಳೆದು ಇಟ್ಟರು. ರಾಮಚಂದ್ರ ಒಂದು ಗಳಿಗೆ ಅಳಿಯನೆಂಬ ಬಿಗುಮಾನ ಬಿಟ್ಟು ಎಲ್ಲರೊಡನೆ ಹುಡುಗಾಟ ಮಾಡುತ್ತ ಓಡಾಡಿದ. ಬಡಿಸುವುದಕ್ಕೂ ಒಂದು ಕೈ ಹಾಕಿದ.

ಮೂರನೆ ದಿನ ರಾಮಚಂದ್ರ ಎಲ್ಲರಿಂದಲೂ ಅಪ್ಪಣೆ ಪಡೆದು ಊರಿಗೆ ಹೊರಟ. ತಾಯಿಗೆ ಅಲ್ಲಿ ನಡೆದುದನ್ನೆಲ್ಲ ಸಂಕ್ಷೇಪವಾಗಿ ವರದಿ ಮಾಡಿದ. ಕಾಲೇಜು ಮೊದಲಾಯಿತು. ಎಂದಿನಂತೆ ಪ್ರತಿದಿನದ ವ್ಯವಹಾರ ಯಾಂತ್ರಿಕವಾಗಿ ನಡೆಯಿತು. ಆದರೆ ರಾಮಚಂದ್ರನ ಮನಸ್ಸಿನಲ್ಲಿ ಆ ದಿನ ನದೀ ತೀರದಲ್ಲಿ ಕಳೆದ ರಾತ್ರಿ ಬಾಳಿನ ರಸ ನಿಮಿಷಗಳಲ್ಲೊಂದಾಗಿ ಉಳಿಯಿತು.

× × × ×

ಮುಂದಿನ ಕೆಲವು ದಿನಗಳಲ್ಲಿ ಹೇಳಬೇಕಾದ ಮಹತ್ವದ ವಿಷಯ ಯಾವುದೂ ಇಲ್ಲವೆನ್ನಬಹುದು. ರಾಮಚಂದ್ರನ ತಾಯಿ ಮತ್ತೆ ಎರಡು

ಸಲ ಸೊಸೆಯನ್ನು ಕರೆತರುವ ಪ್ರಸ್ತಾಪ ಮಾಡಿದರು. ಅವನು ಮೊದಲಿನಂತೆ ಆಗುವುದಿಲ್ಲವೆಂದು ಖಂಡಿತವಾಗಿ ಹೇಳಿಬಿಟ್ಟ. ಪರೀಕ್ಷೆಯೊಂದೇ ಅವನ ಗುರಿಯಾಗಿತ್ತು.

ಕೊನೆಗೊಮ್ಮೆ ಪರೀಕ್ಷೆ ಮುಗಿಯಿತು. ಆದರೆ ಅವನ ಯೋಚನೆ ಕಡಿಮೆಯಾಗಲಿಲ್ಲ. ಮುಂದೇನು? ಎಂಬ ಪ್ರಶ್ನೆ ಹಗಲಿರುಳೂ ಬಾಧಿಸುತ್ತಿತ್ತು. ಫಲಿತಾಂಶ ಹೊರಬೀಳಲಿ, ಆಗ ನೋಡೋಣ ಎಂದು ಯೋಚನೆಯನ್ನು ಮುಂದೆ ಹಾಕುತ್ತಿದ್ದ. ಫಲಿತಾಂಶವೂ ಬಂತು. ಎಲ್ಲರೂ ನಿರೀಕ್ಷಿಸಿದ್ದಂತೆ ರಾಮಚಂದ್ರ ಆ ಸಲವೂ ಉತ್ತಮ ದರ್ಜೆಯಲ್ಲಿ ಮೊದಲನೆಯವನಾಗಿ ತೇರ್ಗಡೆ ಹೊಂದಿದ್ದ. ಮೊದಲೆರಡು ದಿವಸ ಅವರಿವರ ಅಭಿನಂದನೆಗಳ ಕೋಲಾಹಲದಲ್ಲಿ ಮನಸ್ಸು ಉಲ್ಲಾಸವಾಗಿದ್ದರೂ, ಕೊನೆಯಲ್ಲಿ ನಿರಾಶೆ ತನ್ನ ನೆಳಲನ್ನು ಕೆಡವಿತ್ತು.

ಕೆಲವು ದಿವಸ ಕೆಲಸಕ್ಕೆ ಪ್ರಯತ್ನಪಡುವುದರಲ್ಲಿ ಕಳೆಯಿತು. ಆಶೆ—ನಿರಾಶೆಗಳ ತಿಕ್ಕಾಟವಾಗುತ್ತಿತ್ತು. ಮನಸ್ಸಿಗೆ ತೀರ ಬೇಸರವಾದಾಗ "ಈ ಪುರುಷಾರ್ಥಕ್ಕಾಗಿ ತಾನೇಕೆ ಮೊದಲನೆಯವನಾಗಬೇಕೆಂದು ಅಷ್ಟು ಶ್ರಮಪಟ್ಟೆನೋ!" ಎನಿಸತೊಡಗಿತ್ತು. ಎಲ್ಲಿ ಯೋಗ್ಯತೆಗೆ ಬೆಲೆಯಿಲ್ಲವೋ ಅಲ್ಲಿ ಇದ್ದು ತಾನೇ ಏನು ಪ್ರಯೋಜನ?

ರಾಮಚಂದ್ರನಿಗೆ ಬೇಕಾದವರೊಬ್ಬರು ಸರ್ಕಾರದಲ್ಲಿ ದೊಡ್ಡ ಹುದ್ದೆಯಲ್ಲಿದ್ದರು. ಅವನು ಅವರ ಮನೆ ಬಾಗಿಲಿಗೆ ಹತ್ತಾರು ಸಲ ಅಲೆದ. ಅವರು ಅವನ ಯೋಗ್ಯತೆಯನ್ನು ತಿಳಿದಿದ್ದರೂ, ಅವನಲ್ಲಿ ವಿಶ್ವಾಸವಿಟ್ಟಿದ್ದರೂ ನಿಜವಾಗಿ ಅವರು ತಮ್ಮ ಸ್ವಂತ ಹಿತದೃಷ್ಟಿಯಿಂದ ಅವನಿಗೆ ಏನೂ ಸಹಾಯ ಮಾಡುವಂತಿರಲಿಲ್ಲ. ಕೊನೆಗೆ ಒಂದು ದಿವಸ ಅವರು ತಾವು ಇಲ್ಲಿ ಏನು ಮಾಡಲೂ ಸಾಧ್ಯವಿಲ್ಲವೆಂದೂ, ಅವನು ಹೊರಗೆ ಹೋಗಲು ಇಷ್ಟಪಟ್ಟರೆ, ಮುಂಬಯಿನಲ್ಲಿನ ತಮ್ಮ ಮಿತ್ರರಿಗೆ ಕಾಗದ ಬರೆದು ಕೊಡುವುದಾಗಿಯೂ ತಿಳಿಸಿ, ಅವನಂತಹ ಬುದ್ಧಿವಂತನಾದ ಹುಡುಗ ಇಲ್ಲಿರುವುದಕ್ಕಿಂತ, ದೊಡ್ಡ ವಲಯದಲ್ಲಿರುವುದು ಒಳ್ಳೆಯದೆಂದು ಉಪದೇಶಿಸಿದರು.

ರಾಮಚಂದ್ರನಿಗೆ ತಾಯಿಯನ್ನು ಬಿಟ್ಟು ಅಷ್ಟು ದೂರ ಹೋಗುವುದು ಸ್ವಲ್ಪವೂ ಇಷ್ಟವಿರಲಿಲ್ಲ. ಆದರೆ ಆಗ ಬೇರೆ ದಾರಿ ಇರಲಿಲ್ಲವಾಗಿ ಒಪ್ಪಿಕೊಂಡ. ಅವನ ತಾಯಿಗೂ ಮಗನನ್ನು ಬಿಟ್ಟಿರುವುದೆಂದರೆ, ಜೀವದ ಸತ್ತು ಬಂದಂತಾಗಿತ್ತು. ಆದರೆ ಅವನ ಅಭ್ಯುದಯವೇ ತಮ್ಮ ಸುಖವೆಂದು ತಿಳಿದಿದ್ದ ಆಕೆ ಸ್ವಲ್ಪವೂ ಹಿಂತೆಗೆಯದೆ ಅವನನ್ನು ಹೋಗುವಂತೆ ಪ್ರೋತ್ಸಾಹಿಸಿದರು.

ರಾಮಚಂದ್ರ ಹೊರಡುವುದಕ್ಕೆ ಎಲ್ಲವನ್ನೂ ಸಿದ್ಧಪಡಿಸಿಕೊಂಡ. ಶಾಸ್ತ್ರಿಗಳಿಗೂ ಬರೆದು ತನ್ನ ಉದ್ದೇಶವನ್ನು ತಿಳಿಸಿದ. ತಾನಿಲ್ಲದಾಗ ತಾಯಿಗೆ ಅನಾನುಕೂಲವಾಗದಂತೆ ಏನು ಮಾಡಬಹುದೋ ಎಲ್ಲವನ್ನೂ ಮಾಡಿದ. ಗೆಳೆಯ ವಿಶ್ವನಾಥನಿಗೆ ಮನೆಯ ಯೋಗಕ್ಷೇಮವನ್ನು ನೋಡಿಕೊಳ್ಳುವಂತೆ ಕೇಳಿಕೊಂಡ. ಅವನ ತಾಯಿ ಮೇಲೆ ಉತ್ಸಾಹವನ್ನು ತೋರಿಸುತ್ತಿದ್ದರೂ ಅವನು ಹೊರಡುವ ದಿನ ಹತ್ತಿರವಾದಂತೆ ಅವರ ಮನಸ್ಸು ಕುಗ್ಗುತ್ತಿತ್ತು. ಅದನ್ನು ತಿಳಿದು ರಾಮಚಂದ್ರ,

"ಅಮ್ಮ—ನಿನಗೆ ಒಬ್ಬಳಿಗೇ ಎಷ್ಟು ಬೇಸರವಾಗುವುದೋ ? ಏನು ಮಾಡಲಮ್ಮ . ...."

ಎಂದು ಕೇಳಿದ. ಅವರು—

"ನನ್ನ ಯೋಚನೆ ಬೇಡಪ್ಪ. ಸುತ್ತ ತಿಳಿದವರಿದಾರೆ. ಹೇಗೋ ಆಗುತ್ತೆ. ವಿಶ್ವನಾಥ ಇದಾನೆ............"

"ಅಮ್ಮ—ಮೀನಾಕ್ಷಿಯನ್ನು ಕರೆಸಬೇಕಮ್ಮ. ನಿನ್ನ ಜೊತೆಗಿದ್ದರೆ ವಾಸಿ .. ....!"

"ಬೇಡಪ್ಪ—ಈಗೇಕೆ ?"

"ಬರಲಮ್ಮ—ಅದಕ್ಕೇನು........?"

"ಇದುವರೆಗೂ ಇಲ್ಲದ್ದು ಈಗೇನು........? ನೀನು ಬಂದ ಮೇಲೆ ಕರೆಸೋಣ !"

ರಾಮಚಂದ್ರ ಸುಮ್ಮನಾದ. ತಾಯಿ ಅಷ್ಟು ಸಲ ಹೇಳಿದರೂ ತಾನು ಒಂದೇ ಹಟದಿಂದ ಮೀನಾಕ್ಷಿಯನ್ನು ಕರೆಸದೆ ಇದ್ದುದು ಸರಿಯಾಗ

ಲಿಲ್ಲವೇನೋ ಎನಿಸಿತು. ಆದರೆ ಈಗ ಏನು ಮಾಡಲೂ ಬರುವಂತಿರಲಿಲ್ಲ. ರಾಮಚಂದ್ರ ಅದನ್ನು ಚೆನ್ನಾಗಿ ತಿಳಿದವನಾಗಿದ್ದ. ಯಾವ ಕೆಲಸವನ್ನೇ ಆಗಲಿ ಕಾಲದಲ್ಲಿ ಮಾಡದೇ ಆಮೇಲೆ ಮಾಡಿದ್ದರೆ ಚೆನ್ನಾಗಿತ್ತು ಎಂದು ಹಲುಬುವುದರಲ್ಲಿ ಅರ್ಥವಿಲ್ಲವೆಂದು ತಿಳಿದು, ಆ ವಿಚಾರವಾಗಿ ಹೆಚ್ಚು ಯೋಚಿಸಲಿಲ್ಲ. ತಾಯಿಯನ್ನೂ ತಂಗಿಯನ್ನೂ ಸಮಾಧಾನಪಡಿಸಿ, ದೂರ ದೇಶಕ್ಕೆ ಅದೃಷ್ಟ ಪರೀಕ್ಷೆಗಾಗಿ ಹೊರಟ. ಅಲ್ಲಿ ಹೋಗಿ ಸ್ವಲ್ಪ ನಿಲ್ಲಲು ಅವಕಾಶ ಸಿಕ್ಕಿದ ಕೂಡಲೇ ಬಂದು ಅವರನ್ನೂ ಕರೆದುಕೊಂಡು ಹೋಗುವುದಾಗಿ ಭರವಸೆ ಕೊಟ್ಟು ಪ್ರಯಾಣ ಬೆಳಸಿದ. ಅವನು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಾಗಿಯೇ ಅದೃಷ್ಟ ಅಲ್ಲಿ ಅವನಿಗಾಗಿ ಕಾದಿತ್ತು.

ಆದರೆ ಅದನ್ನು ಅನುಭವಿಸುವ ಯೋಗ ಅವನ ತಾಯಿಗೆ ಇರಲಿಲ್ಲ. ಮಗ ಊರಿಗೆ ಹೋದ ಕೆಲವು ದಿವಸಕ್ಕೆ ಅವರ ಆರೋಗ್ಯ ಕೆಡುತ್ತ ಬಂತು. ಅದನ್ನು ಅವರು ಯಾರಿಗೂ ತಿಳಿಸಲಿಲ್ಲ. ತಾವೂ ಅಷ್ಟು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಸ್ವಭಾವವಾಗಿಯೇ ಅವರು ತಮ್ಮ ವಿಚಾರವಾಗಿ ಹೆಚ್ಚು ಶ್ರದ್ಧೆ ತೆಗೆದುಕೊಳ್ಳುತ್ತಿರಲಿಲ್ಲ. ಈಗಂತೂ ಉದಾಸೀನ ಮನೆಮಾಡಿತು. ಔಷಧಿಯಿಲ್ಲ ಉಪಚಾರವಿಲ್ಲ. ರೋಗ ಒಳಗೇ ಬೆಳೆಯುತ್ತಿತ್ತು.

ರಾಮಚಂದ್ರನಿಗೆ ಹೋದ ಕೆಲವುದಿನಗಳಲ್ಲೇ ಕೆಲಸ ಸಿಕ್ಕಿತು. ಅದನ್ನು ತಾಯಿಗೆ ತಿಳಿಸಿದಾಗ ಅವರಿಗೆ ಬಹಳ ಸಂತೋಷವಾಯಿತು. ಆದರ ಹುಮ್ಮಸದಲ್ಲಿ ಅವರು ತಮ್ಮ ಖಾಯಿಲೆಯನ್ನೂ ಮರೆತರು. ಮಗನಿಂದ ಬರುತ್ತಿದ್ದ ಪ್ರತಿಕಾಗದವೂ ಅವನ ಮುನ್ನಡೆಯನ್ನು ಸೂಚಿಸುತ್ತಿತ್ತು. "ಕೆಲಸ ಬಹಳ ಅನುಕೂಲವಾಗಿದೆಯೆಂದೂ, ರಜಸಿಕ್ಕಿದ ಕೂಡಲೆ ಬಂದು ಅವರನ್ನು ಕರೆದುಕೊಂಡು ಹೋಗುವುದಾಗಿಯೂ" ಬರೆದಿದ್ದ. ಕಾಗದದ ಪ್ರತಿಯೊಂದು ಪದದಲ್ಲಿಯೂ ತಾಯಿಯನ್ನೂ ತಂಗಿಯನ್ನೂ ಕಾಣುವ ಆತುರ ಎದ್ದು ಕಾಣುತ್ತಿತ್ತು.

ಅದನ್ನು ನೋಡಿದಾಗಲೆಲ್ಲ ತಾಯಿಯ ಕಣ್ಣಲ್ಲಿ ನೀರು ತುಂಬುತ್ತಿತ್ತು. ಈಚೆಗೆ ಅವರಿಗೆ ತಾವು ಮಗ ಬರುವವರೆಗೆ ಇರಲು ಸಾಧ್ಯವೇ?

ಎನಿಸುತ್ತಿತ್ತು. ಈಗ ರೋಗವನ್ನು ಮುಚ್ಚಿಡುವುದು ಹಿಂದಿನವೂತಾಗಿತ್ತು. ಮನೆಯಲ್ಲಿ ಚಿಕ್ಕಹುಡುಗಿ ಇಂದಿರ ಒಬ್ಬಳೇ ಇದ್ದುದರಿಂದ ಹೇಗೋ ಬಲವಂತವಾಗಿ ಓಡಾಡುತ್ತಿದ್ದರು.

ವಿಶ್ವನಾಥನಿಗೆ ಅವರ ಸ್ಥಿತಿ ತಿಳಿಯಲು ಸಾವಕಾಶವಾಗಲಿಲ್ಲ. ಅವನು ಆಗಾಗ ಬಂದು ಔಷಧಿ ತಂದು ಕೊಡುವುದು, ತನ್ನ ಕೈಲಾದ ಸಹಾಯ ಮಾಡುವುದು ನಡೆದಿತ್ತು. ರಾಮಚಂದ್ರನಿಗೆ ಕಾಗದ ಬರೆದು ವಿಷಯವನ್ನು ತಿಳಿಸುವುದಾಗಿ ಇವನು ಎಷ್ಟು ಹೇಳಿದರೂ ಅವರು ಅದಕ್ಕೆ ಒಪ್ಪುತ್ತಿರಲಿಲ್ಲ. ಮಗನಿಗೆ ತಿಳಿದರೆ ಎಲ್ಲಿ ಅವನು ಗಾಬರಿಯಾಗಿ ಬಂದು ಬಿಡುವನೋ, ಸಿಕ್ಕಿರುವ ಕೆಲಸ ಬಿಟ್ಟುಬಿಟ್ಟರೆ ಮುಂದೇನು ಗತಿ ? ಎಂಬ ಯೋಚನೆಯಿಂದ ಅವನಿಗೆ ಸುದ್ದಿಯನ್ನೇ ತಿಳಿಸಿರಲಿಲ್ಲ. ವಿಶ್ವನಾಥ ತಮಗಾಗಿ ಪಡುತ್ತಿದ್ದ ಶ್ರಮವನ್ನು ನೋಡಿದಾಗಲೆಲ್ಲ ಅವರ ಮಾತೃ ಹೃದಯ ತುಂಬಿ ಬರುತ್ತಿತ್ತು—.

"ಅಪ್ಪಾ–ನೀನು ಯಾವ ಜನ್ಮದ ಮಗನೋ ಕಾಣೆ. ಹೊಟ್ಟೆಯ ಮಗ ದೂರ ಇರುವಾಗ, ಮಗನಿಗಿಂತ ಹೆಚ್ಚಾಗಿ ಮಾಡುವೆಯಲ್ಲ! ನಿನ್ನ ಉಪಕಾರ ಹೇಗೆ ಮರೆಯುವುದಪ್ಪ. ನೀನು ರಾಜನಾಗಿ ಬದುಕು. ದೇವರು ಯಾವಾಗಲೂ ನಿನ್ನನ್ನು ಸುಖಿಯಾಗಿಡಲಿ, ಎಂದು ಆಶೀರ್ವಾದ ಮಾಡುತ್ತೇನೆ! ಅದೊಂದು ಮಾತ್ರ ನನ್ನಿಂದ ಸಾಧ್ಯ." ಎನ್ನುತ್ತಿದ್ದರು. ಆ ಮಾತು ಹೇಳುವಾಗ ಅವರ ಕಣ್ಣಿನಲ್ಲಿ ನೀರು ತುಂಬುತಿತ್ತು. ತನ್ನವರೆಂದು ಮಮತೆ ಮಾಡುವರು ಯಾರೂ ಇಲ್ಲದೆ ಬಾಳಿನಲ್ಲಿ ಒಂಟಿಯಾಗಿ ನಡೆದಿದ್ದ ಅವನಿಗಾಗಿ ಅವರ ಹೃದಯ ಮರುಗುತ್ತಿತ್ತು.

ವಿಶ್ವನಾಥ ಇದ್ದಕ್ಕಿದ್ದಂತೆ ಕೆಲವು ದಿವಸ ಕೆಲಸದ ಮೇಲೆ ಹೋಗಬೇಕಾಗಿ ಬಂತು. ಕೆಲಸ ತಪ್ಪಿಸುವಂತೆಯೂ ಇರಲಿಲ್ಲ. ಇವರನ್ನು ಬಿಟ್ಟು ಹೋಗುವುದೂ ಕಷ್ಟವಾಗಿತ್ತು. ಗೆಳೆಯ ತನ್ನನ್ನು ನೆಚ್ಚಿ ವಹಿಸಿದ್ದ ಕರ್ತವ್ಯದಿಂದ ಜಾರುವುದು ಸುಲಭವಾಗಿರಲಿಲ್ಲ. ಯತ್ನವಿಲ್ಲದೆ ಹೋಗಲೇಬೇಕಾಗಿ ಬಂದಾಗ, ರಂಗನೂರಿಗೆ ಶಾಸ್ತ್ರಿಗಳಿಗೆ ಕಾಗದ ಬರೆದು, ಬೇಗ ಬರುವುದಾಗಿ ಇವರಿಗೆ ಆಶ್ವಾಸನೆ ಕೊಟ್ಟು ಹೊರಟ.

ಸಮಾಚಾರ ತಿಳಿದ ಕೂಡಲೇ ಶಾಸ್ತ್ರಿಗಳು ಮೀನಾಕ್ಷಿಯನ್ನು ಕರೆದುಕೊಂಡು ಬೆಂಗಳೂರಿಗೆ ಬಂದರು. ಸೊಸೆಯೊಡನೆ ಸಂಸಾರ ಮಾಡುವ ಆಶೆ ಆಕೆಗೆ ಬಹಳವಾಗಿತ್ತು. ಆದರೆ ತಾವು ಮಲಗಿ ಅವ ಳಿಂದ ಸೇವೆ ಮಾಡಿಸಿಕೊಳ್ಳುವಂತಾದುದಕ್ಕಾಗಿ ಅವರಿಗೆ ವ್ಯಥೆಯಾಗಿತ್ತು. ಶಾಸ್ತ್ರಿಗಳು ಬಂದವರೆ ಮೊದಲು ಡಾಕ್ಟರನ್ನು ಕರೆತಂದು ಪರೀಕ್ಷೆಮಾಡಿಸಿ ಔಷಧಿ ಕೊಡಿಸಲು ಮೊದಲು ಮಾಡಿದರು. ರಾಮಚಂದ್ರನಿಗೆ ಕೂಡಲೆ ಬರುವಂತೆ ತಂತಿ ಕೊಟ್ಟರು.

ಆ ವೇಳೆಗೆ ರಾಮಚಂದ್ರ ಅಲ್ಲಿ ಪ್ರಯತ್ನದಿಂದ ಬಾಡಿಗೆಗೆ ಮನೆ ಯನ್ನು ಹಿಡಿದಿದ್ದ. ಸಾಕಷ್ಟು ದುಡ್ಡೂ ಸೇರಿದ್ದಿತು. ರಜಕ್ಕೆ ಬರೆದುಹಾಕಿ ಬಂದ ಕೂಡಲೆ ಹೊರಡುವುದೆಂದು ನಿಶ್ಚಯಿಸಿದ್ದ. ತಂತಿ ನೋಡಿದ ಕೂಡಲೇ ಅವನ ಜೀವ ಕುಸಿದುಹೋಯಿತು. ನಿಂತಕಾಲಲ್ಲಿ ಹೊರಟು ಬಿಟ್ಟ. ದಾರಿಯಲ್ಲಿ ಎರಡು ದಿವಸ ಹೇಗೆ ಕಳೆಯಿತೋ ಅವನಿಗೇ ಗೊತ್ತಿಲ್ಲ. ಮನೆಗೆ ಬರುವವೇಳೆಗೆ ಹುಚ್ಚನಂತಾಗಿದ್ದ. ಗಾಡಿಯಿಂದ ಇಳಿದ ಕೂಡಲೆ ಅವರು ಮೊದಲು ಸಂಧಿಸಿದ್ದು ಮೀನಾಕ್ಷಿಯನ್ನು. ಅವಳು ಬಾಗಿಲು ಸಾರಿಸಿ ರಂಗವಲ್ಲಿ ಇಡುತ್ತಿದ್ದಳು. ರಾಮಚಂದ್ರ ಗಾಡಿಯಿಂದ ಹಾರಿದವನೇ—

"ಅಮ್ಮ ಹೇಗಿದಾಳೆ ಮೀನ..............?" ಎಂದು ವಿಚಾರಿಸಿದ.

"ಪರವಾಗಿಲ್ಲ. ಸ್ವಲ್ಪ ಹುಷಾರಾಗಿದಾರೆ."

ರಾಮಚಂದ್ರನಿಗೆ ಜೀವ ಬಂದಂತಾಯಿತು. ಸಾಮಾನುಗಳನ್ನು ಇಳಿಸುತ್ತ ಕೇಳಿದ—

"ನೀನು ಯಾವಾಗ ಬಂದೆ ?"

"ನಾಲ್ಕು ದಿವಸವಾಯಿತು..............."

"ಇನ್ಯಾರು ಬಂದಿದಾರೆ ?"

"ಅಪ್ಪ ಬಂದಿದಾರೆ. ನಮಗೂ ಮೊದಲು ಗೊತ್ತಿರಲಿಲ್ಲ. ತಿಳಿದ ಕೂಡಲೆ ಬಂದೆವು."

ಶಾಸ್ತ್ರಿಗಳು ಆ ರೀತಿ ಸಮಯದಲ್ಲಿ ಮಗಳೊಡನೆ ಬಂದುದು ಅವನ ಮನಸ್ಸಿಗೆ ಸಮಾಧಾನವೆನಿಸಿತು. ಮೀನಾಕ್ಷಿಯ ಕೈ ಹಿಡಿದುಕೊಂಡೇ "ಅಮ್ಮಾ......." ಎಂದು ಕೂಗುತ್ತ ಒಳಗೆ ಬಂದ.

ತಾಯಿ ಹಾಸಿಗೆಯ ಮೇಲೆ ಎದ್ದು ಕುಳಿತಿದ್ದರು. ಇಬ್ಬರನ್ನೂ ತಮ್ಮ ಪಕ್ಕದಲ್ಲಿ ಕೂರಿಸಿಕೊಂಡು ಮಗನ ತಲೆ ಸವರುತ್ತ ಕೇಳಿದರು—

"ರಜ ಸಿಕ್ಕಿತೆ ಮಗು? ಯಾಕಿಷ್ಟು ಅವಸರವಾಗಿ ಬಂದೆ....? ನನಗೇನೂ ಹೆಚ್ಚು ಆಯಾಸವಾಗಿರಲಿಲ್ಲ. ಹೇಗೂ ಶಾಸ್ತ್ರಿಗಳು ಬಂದಿದ್ದರು. ಮೀನ ಮಗಳಿಗಿಂತ ಹೆಚ್ಚಾಗಿ ಆರೈಕೆ ಮಾಡುತ್ತಿದ್ದಳು."

ರಾಮಚಂದ್ರ ಮಾತಾಡಲಿಲ್ಲ. ಅವನು ಮಾತಾಡುವ ಸ್ಥಿತಿಯಲ್ಲಿರಲಿಲ್ಲ. ತಾಯಿ ಕ್ಷೀಣಿಸಿಹೋಗಿ ಗುರುತು ಸಿಗದಂತೆ ಆಗಿರುವುದನ್ನು ನೋಡಿ ಅವನ ಗಂಟಲು ಬಿಗಿದು ಬಂದಿತ್ತು. ಕೆಲಸವಾಗಿ ಸಂಪಾದಿಸಲು ಮೊದಲಾದಾಗಿನಿಂದ ಕಟ್ಟಿದ್ದ ಕನಸಿನ ಮನೆ ತಾಯಿಯನ್ನು ನೋಡಿದೊಡನೆಯೆ ಕುಸಿದು ಬಿತ್ತು. ಅವರನ್ನು ಸುಖವಾಗಿಟ್ಟುಕೊಳ್ಳುವ ಬಯಕೆ ಬಯಲಾಯಿತು. ಬಂಡೆಯ ಬಿರುಕಿನಿಂದ ನೀರು ಹರಿವಂತೆ ಹೃದಯ ಒಡೆದು ಕಣ್ಣೀರಾಗಿ ಹರಿಯಿತು.

"ಇದೇನು ರಾಮು....? ಮಗುವಿನಂತಾಡುವೆಯಲ್ಲ! ನೀನು ಹೀಗೆ ಧೈರ್ಯಗೆಟ್ಟರೆ ಹೇಗೆ? ಏಳು-ಕೈ ಕಾಲು ಮುಖ ತೊಳೆದುಕೊ. ಈಗ ನೀನು ಬಂದೆಯಲ್ಲ-ಇನ್ನು ನಾನು ಬೇಗ ಹುಷಾರಾಗುತ್ತೇನೆ. ನೀನೇ ನೋಡುವೆಯಂತೆ!"

ರಾಮಚಂದ್ರ ಎದ್ದು ಮುಖ ತೊಳೆದುಕೊಂಡು ಬಂದ. ಇಂದಿರ ಅಣ್ಣನ ಧ್ವನಿ ಕೇಳಿ ಎದ್ದು ಓಡಿಬಂದು ಅವನ ತೊಡೆಯನ್ನೇರಿದಳು ಮೀನಾಕ್ಷಿ ಕಾಫಿ ಮಾಡಿ ತಂದು ಮುಂದಿಟ್ಟಳು. ಕಾಫಿಯೊಡನೆ ಮಾತೂ ಮುಂದುವರೆಯಿತು. ತಾಯಿಗೆ ಅಲ್ಲಿನ ವಿಷಯ ಎಷ್ಟು ಕೇಳಿದರೂ ತೃಪ್ತಿಯಿಲ್ಲ. ಮಗನ ಅಭ್ಯುದಯ ಕೇಳಿ ಹೃದಯ ಆನಂದದಿಂದ ಉಬ್ಬಿತ್ತು. ಅವರಿಗೆ ಬದುಕಿನಲ್ಲಿ ಯಾವ ಆಸೆಯೂ ಉಳಿಯಲಿಲ್ಲ.

ಡಾಕ್ಟರು ಎಂದಿನಂತೆ ಬಂದು ಹೋಗುತ್ತಿದ್ದರು. ರಾಮಚಂದ್ರ ಮತ್ತೂ ಒಬ್ಬಿಬ್ಬರು ಪ್ರವೀಣರುಗಳನ್ನು ಕರೆಸಿ ತೋರಿಸಿ, ಅವರ ಸಲಹೆ ಪಡೆದ. ಔಷಧಿ, ಉಪಚಾರ ಬಿಡುವಿಲ್ಲದೆ ನಡೆಯಿತು. ಕೆಲಸದ ಮೇಲೆ ಹೋಗುವ ಯೋಚನೆಯೇ ಇಲ್ಲದೆ ಅವರ ಸೇವೆಗೆ ನಿಂತ. ಅವನಿಗಿದ್ದ ರಜ ಮುಗಿಯುತ್ತ ಬಂತು ಇದ್ದ ಸಂದರ್ಭವನ್ನು ತಿಳಿಸಿ ಪುನಃ ರಜಕ್ಕೆ ಬರೆದ.

ಅಷ್ಟು ಔಷಧಿಗಳಲ್ಲಿ ಯಾವುದೂ ತಾಯಿಗೆ ಹಿಡಿಸದುದನ್ನು ನೋಡಿ ರಾಮಚಂದ್ರನಿಗೆ ನಿರಾಶೆಯಾಗಿತ್ತು. ಅವರ ಸ್ಥಿತಿ ದಿನ ದಿನಕ್ಕೆ ಕೆಡುತ್ತ ಬಂದಿತ್ತು. ಸ್ವಲ್ಪವೂ ಗುಣ ಕಾಣಿಸಲಿಲ್ಲ. ಕಡೆಗೆ ವಿಧಿನಿಯಮದ ಮುಂದೆ ಮನುಷ್ಯ ಪ್ರಯತ್ನ ನಿಲ್ಲದಂತಾದಾಗ ಆಕೆ ಮಗನನ್ನೂ, ಸೊಸೆಯನ್ನೂ ಹತ್ತಿರ ಕರೆದು—

"ರಾಮು, ನನಗಾಗಿ ದುಃಖಿಸಬೇಡ. ಎಷ್ಟುಕಾಲ ಬದುಕಿದ್ದರೂ ಇದೇ ಬಾಳು. ನನಗೆ ಇನ್ನೇನಾಗಬೇಕು ? ನೀನು ಸುಖವಾಗಿರುವುದನ್ನು ನೋಡಿಯಾಯಿತು. ಆ....ಮಗು ಇಂದಿರ....ಅದನ್ನು ನಿಮ್ಮ ಮಗುವಿನಂತೆ ನೋಡಿಕೊಳ್ಳಿ....!" ಎಂದು ಹೇಳಿ ಹುಡುಗಿಯನ್ನು ಅವರ ಕೈಲಿಟ್ಟು ಆಕೆ ಕಣ್ಮುಚ್ಚಿದರು.

ರಾಮಚಂದ್ರನಿಗೆ ದಿಕ್ಕೇ ತೋರದಂತಾಯಿತು. ಹೆಚ್ಚು ದಿವಸ ನಿಲ್ಲುವಂತಿರಲಿಲ್ಲ. ಶಾಸ್ತ್ರಿಗಳ ಸಹಾಯದಿಂದ ಹೇಗೋ ತಾಯಿಯ ಕರ್ಮಾಂತರವನ್ನು ಮುಗಿಸಿ, ಮೀನಾಕ್ಷಿಯನ್ನೂ ತಂಗಿಯನ್ನೂ ಕರೆದುಕೊಂಡು ಮುಂಬಯಿಗೆ ಹೊಸ ಸಂಸಾರಕ್ಕೆ ಹೊರಟ. ಅವನು ಮುಂಬಯಿಗೆ ಹೊರಡುವ ಮೊದಲು ಬೆಂಗಳೂರಿನಲ್ಲೇ ಒಂದು ಖಾಸಗಿ ಕೆಲಸ ಸಿಕ್ಕುವಂತಿದೆಯೆಂದು ರಾಮಚಂದ್ರನ ಗೆಳೆಯ ತಿಳಿಸಿದ. ರಾಮಚಂದ್ರ ಸ್ವಲ್ಪ ಪ್ರಯತ್ನಪಟ್ಟಿದ್ದರೆ ಅದು ಸಿಕ್ಕಲೂ ಬಹುದಾಗಿತ್ತು. ಆದರೆ ಈಗ ಅದು ಅವನಿಗೆ ಬೇಕಾಗಿರಲಿಲ್ಲ. ಒಂದು ವರ್ಷಕ್ಕೆ ಮೊದಲು, ತಾಯಿಯನ್ನಗಲಿ ದೂರ ಹೋಗಲು ಮನಸ್ಸಿಲ್ಲದೆ ಒದ್ದಾಡುತ್ತಿದ್ದಾಗ ಆ ಕೆಲಸ

ಸಿಕ್ಕಿದ್ದರೆ ರಾಮಚಂದ್ರ ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದ. ಈಗ ಆ ಮಮತೆಯ ಮಾತೆಯನ್ನು ಕಳೆದು ಕೊಂಡಂದಾಗಿದೆ. ಇನ್ನು ಯಾರಿಗಾಗಿ ಇಲ್ಲಿರಬೇಕು ? ಈ ಜಾಗವೇ ಅವನಿಗೆ ಬೇಸರ ಹಿಡಿಸುವಂತಿತ್ತು. ಆದಷ್ಟು ಬೇಗ ಇಲ್ಲಿಂದ ದೂರ ಹೋದರೆ ಸಾಕೆನಿಸಿತ್ತು. ಆದರಿಂದ ಗೆಳೆಯನ ಮಾತಿಗೆ ಅಷ್ಟಾಗಿ ಮನಸ್ಸುಕೊಡದೆ, ರಾಮಚಂದ್ರ ಒಂದೇ ನಿಶ್ಚಯದಿಂದ ಪುನಃ ಮುಂಬಯಿಗೇ ಹೊರಟ.

ಅಲ್ಲಿ ಹೊಸ ಸಂಸಾರ ಮೊದಲಾಯಿತು. ಮೀನಾಕ್ಷಿ....? ಅವಳೂ ಹುಡುಗಿಯೇ....! ಅದಲ್ಲದೆ ತಾಯಿ ಇಲ್ಲದ ಮಗುವೆಂದು ಅಕ್ಕ ಸಂಸಾರದ ಯಾವ ಕೋಟಲೆಯೂ ತಗಲದಂತೆ ಬೆಳಸಿದ್ದಳು. ಮೀನಾಕ್ಷಿ ಅಕ್ಕನೊಂದಿಗೆ ಮನೆಗೆಲಸದಲ್ಲಿ ನೆರವಾಗಿ ಮೇಲೆ ಮೇಲೆ ಓಡಾಡುತ್ತಿದ್ದಳೇ ವಿನಾ, ಅದರ ಪೂರ್ಣ ಹೊಣೆ ತಲೆಯ ಮೇಲೆ ಬಿದ್ದದ್ದು ಈಗಲೇ! ಹೊಸ ಊರು-ಕಂಡು ಕೇಳಿ ಅರಿಯದ ಜನ ಜೊತೆಗೆ ಚಿಕ್ಕ ಹುಡುಗಿ ಬೇರೆ. ಅನೇಕ ವೇಳೆ ರಾಮಚಂದ್ರ ಬೆಳಗ್ಗೆ ಕೆಲಸದ ಮೇಲೆ ಹೊರಗೆ ಹೋದರೆ, ಮನೆಗೆ ಬರುವ ವೇಳೆಗೆ ರಾತ್ರಿಯಾಗುತ್ತಿತ್ತು. ಹುಡುಗಿ ತಾಯಿಯನ್ನು ನೆನೆದು ಯಾವಾಗಲೂ ಹಟ ಮಾಡುತ್ತಿದ್ದಳು. ಒಂದೊಂದು ಸಲ ಇದೆಲ್ಲದರಿಂದ ಮೀನಾಕ್ಷಿಗೂ ಬೇಸರವಾಗುತ್ತಿತ್ತು. ಆಗ ಅವಳು— ಅಂತಹ ಸಮಯದಲ್ಲಿ ಅಕ್ಕ ತನ್ನನ್ನು ಹೇಗೆ ಕಾಣುತ್ತಿದ್ದಳೆಂಬುದನ್ನು ಜ್ಞಾಪಿಸಿಕೊಂಡು—

"ಅವಳೂ ನನ್ನಂತೆ ತಬ್ಬಲಿ; ನನಗೆ ಅಕ್ಕ ಇದ್ದಳು. ಅವಳಿಗೆ ಅದೂ ಇಲ್ಲ. ನಾನು ಆ ಆರಕೆಯನ್ನು ತುಂಬದೆ ಬೇಜಾರು ಪಟ್ಟುಕೊಂಡರೆ ಆ ಮಗು ಯಾರಲ್ಲಿ ಹೇಳೀತು!"

ಎಂದು ನೊಂದುಕೊಂಡು ತನ್ನ ಮನಸ್ಸಿಗೆ ತಾನೇ ಸಮಾಧಾನ ಮಾಡಿಕೊಳ್ಳುತ್ತಿದ್ದಳು.

ರಾಮಚಂದ್ರನಿಗೆ ಒಂದು ದೊಡ್ಡ ಭಾರವನ್ನು ಇಳುಹಿದಂತಾಯಿತು. ಮೀನಾಕ್ಷಿ ತಂಗಿಯನ್ನು ನೋಡಿಕೊಳ್ಳುತ್ತಿದ್ದ ರೀತಿಯನ್ನು ನೋಡಿ, ಅವನಿಗೆ ಮನೆಯ ಕಡೆ ಇದ್ದ ಅಲ್ಪ ಸ್ವಲ್ಪ ಯೋಚನೆಯೂ ದೂರ

ವಾಯಿತು. ಅವನ ಗುರಿಯೆಲ್ಲ ಕೆಲಸದ ಕಡೆ! ಹೇಗೆ ಜನಗಳಲ್ಲಿ ಗಣ್ಯನಾಗಿ, ಕೆಲಸದಲ್ಲಿ ಗಟ್ಟಿಗನೆಂದು ಹೆಸರು ಪಡೆದು–ಮೇಲಿನವರ ಮನಸ್ಸು ಸಂತೋಷ ಪಡಿಸುವುದು? ಎಂಬ ಒಂದೇ ಯೋಚನೆಯಿಂದ ಶಕ್ತಿಯನ್ನೂ ಮೀರಿ ಉತ್ಸಾಹದಿಂದ ಕೆಲಸ ಮಾಡುತ್ತಿದ್ದ. ಮೇಲಾಟವು ಹೆಚ್ಚಾಗಿದ್ದು ಹೊರಗಿನವರನ್ನು ಸಂಶಯ ದೃಷ್ಟಿಯಿಂದ ನೋಡುತ್ತಿದ್ದ ಆ ಕಾಲದಲ್ಲಿ ಆ ರೀತಿ ಕೆಲಸ ಮಾಡುವುದು ಅಗತ್ಯವೂ ಆಗಿತ್ತು. ಒಂದೊಂದು ಸಲ ಅವನಿಗೆ ಕೆಲಸದ ನಡುವೆ ಮೀನಾಕ್ಷಿಯ ನೆನಪಾಗುತಿತ್ತು.

"ಮೀನಾ ಎಷ್ಟು ಬೇಸರ ಪಟ್ಟುಕೊಂಡಿದಾಳೋ? ಅವಳಿಗೆ ಗುರುತಿನವರು ಯಾರೂ ಇಲ್ಲ. ನಾನು ಅವಳನ್ನು ಸಾಯಂಕಾಲ ಹೊರಗೆ ಕರೆದುಕೊಂಡು ಹೋಗುವುದಕ್ಕೂ ಹೋಗುವುದಿಲ್ಲವಲ್ಲ! ಈ ದಿನ ಖಂಡಿತ ಮುಂಚೆ ಮನೆಗೆ ಹೋಗಬೇಕು."

ಎಂದು ಕೊಳ್ಳುತ್ತಿದ್ದ. ಆದರೆ ಆ ಹೊತ್ತಿಗೆ ಯಾರಾದರೂ ಸ್ನೇಹಿತರು ಸಿಕ್ಕಿದರೂ ಅಥವಾ ಇನ್ನೇನಾದರೂ ಹೆಚ್ಚು ಕೆಲಸ ಬಿದ್ದರೂ—ಆ ಯೋಚನೆ ಅಲ್ಲಿಗೇ ನಿಂತು ಹೋಗುತ್ತಿತ್ತು. ಆ ಸಮಯದಲ್ಲಿ—

"ಅವಕ್ಕೆಲ್ಲಾ ಮುಂದೆ ಬೇಕಾದಷ್ಟು ಅವಕಾಶವಿದೆ. ಮೊದಲು ಯಶಸ್ಸು. ಉಳಿದದ್ದು ನಿಧಾನವಾಗಿ ಆಗುತ್ತೆ. ಇಷ್ಟಕ್ಕೂ ಅವಳು ತಂದೆಯ ಮನೆಗಿಂತ ಇಲ್ಲೇ ಸುಖವಾಗಿದಾಳೆ. ಅಲ್ಲಿ ಇಷ್ಟು ಅನುಕೂಲ ತಾನೇ ಎಲ್ಲಿತ್ತು....? ಮೀನಾ ಇದಕ್ಕೂ ಹೆಚ್ಚಾಗಿ ಬಯಸಿದರೆ ಅದು ದುರಾಶೆ..!" ಎಂದು ಕೊಳ್ಳುತ್ತಿದ್ದ.

ರಾಮಚಂದ್ರನ ಆಶೆ ನೆರವೇರಿತು. ಅಧಿಕಾರದಲ್ಲಿಯೂ, ಜನಗಳ ದೃಷ್ಟಿಯಲ್ಲಿಯೂ ಅವನು ಬೇಗ ಬೇಗ ಮೇಲೇರುತ್ತಿದ್ದ. ಹೊಸ ಜೀವನ ಒಗ್ಗಿ ಹೋಯಿತು. ಹಿಂದೆ ಹುಟ್ಟಿ ಬೆಳೆದ ಊರು, ಅಲ್ಲಿಯ ಜನ—ಕಷ್ಟ ಸುಖಗಳು, ಎಲ್ಲವೂ ಕನಸಿನಂತೆ ತೋರುತ್ತಿತ್ತು. ಆದರೆ ಮೀನಾಕ್ಷಿ ಆ ಬಗೆಗೆ ಬೇಗ ಹೊಂದಿಕೊಳ್ಳಲಿಲ್ಲ. ಅವಳಿಗೆ ಅದು ನುಂಗಲಾರದ ತುತ್ತಿನಂತೆ ಆಗಿತ್ತು. ಅವಳು ನೋಡುತ್ತಿದ್ದ ಜೀವನ, ಬಯಸಿದ ಬಗೆ, ಬೇರೆಯದಾಗಿತ್ತು. ಪ್ರಶಾಂತವಾಗಿ ಸಾಗಿದ್ದ ಆ ಬದುಕೆಲ್ಲಿ....? ಯಾವಾ

ಗಳೂ ಗದ್ದಲ ಗಡಿಬಿಡಿಯಿಂದ ತುಂಬಿದ ಈ ಬಾಳಿಲ್ಲಿ....? ಹಕ್ಕಿಯಂತೆ ಮನೆಯ ತೋಟದಲ್ಲಿ ಹಾರಾಡುತ್ತ ಸ್ವಚ್ಛಂದವಾತಾವರಣದಲ್ಲಿ ಬೆಳೆದವ ಳಿಗೆ ಮುಂಬಯಿಯಲ್ಲಿನ ಎರಡು ಕೋಣೆಯ ವಾಸ ಹಿಡಿಸದಂತಾಗಿತ್ತು. ಒಳ್ಳೆಯ ಗಾಳಿ ಬೇಕೆನಿಸಿದರೂ ಕೂಡ ಹೋಗಬೇಕು ಸಮುದ್ರದ ದಂಡೆಗೆ! ಅವನಿಗೆ ಯಾವಾಗಲೂ ಕೆಲಸದ ಯೋಚನೆ. ಮನಸ್ಸು ಮತ್ತೊಂ ದೆಡೆಗೆ ಹರಿಯಲು ವ್ಯವಧಾನವಿಲ್ಲ. ಮನೆಯಲ್ಲಾಗಲೀ ಮನಸ್ಸಿನಲ್ಲಾ ಗಲೀ ಏಕಾಂತತೆಗೆ ಅವಕಾಶವಿಲ್ಲ. ಕೇವಲ ಊಟ ನಿದ್ರೆ ಇವುಗಳಿಗಾಗಿ ಕಳೆಯುತ್ತಿದ್ದ ವೇಳೆಯನ್ನು ಬಿಟ್ಟರೆ ನನ್ನದೆಂದು ಹೇಳಿಕೊಳ್ಳುವ ಬೇರೆ ಹೊತ್ತಿರಲಿಲ್ಲ. ಅಪರೂಪಕ್ಕೆ ಅವಕಾಶ ಸಿಕ್ಕರೂ, ಅದನ್ನು ಬೇರೆ ವಿಧ ದಲ್ಲಿ ಉಪಯೋಗಿಸುವುದು ಮರೆತಂತಾಗಿತ್ತು. ಕೇವಲ ವ್ಯವಹಾರ ಪ್ರಪಂಚದಲ್ಲಿ ಚಲಿಸುವ ಯಂತ್ರವಾಗಿದ್ದ ರಾಮಚಂದ್ರ. ಇದೆಂತಹ ದಾಸ್ಯ! ಎಂದು ಕೊಳ್ಳುತ್ತಿದ್ದಳು, ಮೀನಾಕ್ಷಿ. ಬೆಳುದಿಂಗಳು ರಾತ್ರಿ ಯಲ್ಲಿ ಕಾವೇರಿ ತೀರದಲ್ಲಿ ನೋಡಿದ್ದ ಪ್ರಣಯಿ ಇಂದು ಮರೆಯಾಗಿದ್ದ. ಬೆಂಗಳೂರಿನಿಂದ ಮುಂಬಯಿಯವರೆಗಿದ್ದ ದೂರಪ್ರಯಾಣದಲ್ಲಿ ಆ ವ್ಯಕ್ತಿತ್ವ ಎಲ್ಲೋ ಕಳೆದು ಹೋದಂತಿತ್ತು!.

ರಾಮಚಂದ್ರನಿಗೆ ಮೀನಾಕ್ಷಿಯ ಈ ಬಗೆ ಅರ್ಥವಾಗುತ್ತಿರಲಿಲ್ಲ. ಅವನು ಹೊಸ ಜೀವನದಲ್ಲಿ ನಾಗಾಲೋಟದಿಂದ ಓಡುತ್ತ, ಕುಂಟುತ್ತ ನಡೆದಿದ್ದ ಅವಳನ್ನು ಎಳೆದುಕೊಂಡು ಹೋಗಲು ಪ್ರಯತ್ನ ಪಡುತ್ತಿದ್ದ ಸಹಾನುಭೂತಿಯಿಂದ ನಿಂತು ಅವಳಿಗೆ ನೆರವಾಗಬೇಕೆಂಬ ಯೋಚನೆ ಅವನಿಗೆ ಬರುತ್ತಿರಲಿಲ್ಲ.

ಮೀನಾಕ್ಷಿ ಹಳ್ಳಿಯ ಹುಡುಗಿ; ಕಲಿತವಳಲ್ಲ—ಎಂಬ ಯೋಚನೆ ರಾಮಚಂದ್ರನಿಗೆ ಈಗೀಗ ಬರತೊಡಗಿತ್ತು. ನಿಜ—ಮೀನಾಕ್ಷಿ ಶಾಲೆಗೆ ಹೋಗಿ ಕಲಿತವಳಲ್ಲ. ಆದರೂ ಶಾಸ್ತ್ರಿಗಳು ಮನೆಯಲ್ಲಿ ಚೆನ್ನಾಗಿ ಪ್ರಪಂಚ ಜ್ಞಾನವುಂಟಾಗುವಂತೆ ತಿಳುವಳಿಕೆ ಕೊಟ್ಟು ಚೆನ್ನಾಗಿ ಓದಿ ಬರೆಯುವುದನ್ನು ಕಲಿಸಿದ್ದರು. ರಾಮಾಯಣ—ಭಾರತಗಳನ್ನು ನೀರು ಕುಡಿದಂತೆ ಅಭ್ಯಾಸ ಮಾಡಿಸಿದ್ದರು. ಶಾಸ್ತ್ರಿಗಳು ಅದ್ವಿತೀಯ ಪಂಡಿ

ತರು. ಮೀನಾಕ್ಷಿಯ ಬುದ್ಧಿ ಅವರೂ ಬೆರಗಾಗುವಷ್ಟು ಚುರುಕಾಗಿತ್ತು. ಕಲಿಸಿದ್ದರೆ ಅವಳೇನೂ ರಾಮಚಂದ್ರನಿಗಿಂತ ಕಡಿಮೆಯಾಗುತ್ತಿರಲಿಲ್ಲ. ಆದರೆ ಅವಳಿಗೆ ಕೊಟ್ಟಿದ್ದ ಶಿಕ್ಷಣ ಅಷ್ಟು....! ಆಗ್ಗ ಅದು ಸಾಕಾಗಿತ್ತು ; ಈಗ ಅದು ಸಾಲದೆಂದು ರಾಮಚಂದ್ರನಿಗೆ ತೋರುತ್ತಿತ್ತು.

ಆ ವೇಳೆಗೆ ಇಂದಿರ ದೊಡ್ಡವಳಾಗಿ ಶಾಲೆಗೆ ಹೋಗುತ್ತಿದ್ದಳು. ಮೀನಾಕ್ಷಿಗೆ ಹೆಚ್ಚು ಬಿಡುವು ದೊರೆಯಿತು. ರಾಮಚಂದ್ರ ಅವಳಿಗೆ ಹಿಂದಿಯನ್ನೂ ಇಂಗ್ಲಿಷನ್ನೂ ಕಲಿಸಲು ಒಬ್ಬ ಉಪಾಧ್ಯಾಯಿನಿಯನ್ನು ಗೊತ್ತು ಮಾಡಿದ. ಸಂಬಳ ಹೆಚ್ಚಾದಂತೆ ಹೊಸದಾಗಿ ನಾಗರೀಕತೆಗೆ ಒಪ್ಪುವ ಬಟ್ಟೆಗಳನ್ನೂ, ಒಡವೆ ವಸ್ತುಗಳನ್ನೂ ತಂದು ಹಾಕುತ್ತಿದ್ದ. ಮೀನಾ ಇದ್ದುದರಲ್ಲಿ ತೃಪ್ತಿಪಟ್ಟು ಬಾಳುವ ಸ್ವಭಾವದವಳು. ಅವಳಿಗೆ ಯಾವುದೂ 'ಇಲ್ಲ'ವೆಂಬ ಕೊರತೆಯೂ ತೋರುತ್ತಿರಲಿಲ್ಲವಾಗಿ, ಹೊಸದಾಗಿ ಏನಾದರೂ ತಂದರೆ ಹೆಚ್ಚು ಸಂತೋಷವೂ ಆಗುತ್ತಿರಲಿಲ್ಲ. ರಾಮಚಂದ್ರನಿಗೆ ಅದು ಸಹಿಸುತ್ತಿರಲಿಲ್ಲ.

ಒಂದು ದಿನ ಸಾಯಂಕಾಲ ಅವನು ಅಪರೂಪವಾಗಿ ಮನೆಗೆ ಬಂದ. ಮೀನಾ ಎಂದಿನಂತೆ ತನ್ನ ಕೆಲಸದಲ್ಲಿ ಮಗ್ನಳಾಗಿದ್ದಳು. ರಾಮಚಂದ್ರ ಸಿಟ್ಟಿನಿಂದ—

" ಮೀನ–ನಾನು ಅಷ್ಟು ಸೀರೆಗಳನ್ನು ತಂದುಹಾಕಿರುವುದು ಯಾರಿಗಾಗಿ ? ದಣಿದು ಮನೆಗೆ ಬಂದರೆ ಕಣ್ಣಿಗೆ ಹಬ್ಬವಾಗುವಂತಿರಬೇಡವೇ ನೀನು....? ನನ್ನ ಸ್ನೇಹಿತರಾಗಲೀ ಅವರ ಮನೆಯ ಹೆಂಗಸರಾಗಲೀ ಅಕಸ್ಮಾತ್ ಬರಬಹುದು. ನೀನು ಹೀಗಿದ್ದರೆ ನನಗೆ ಒಳ್ಳೆಯ ಮಾನ ಬರುತ್ತೆ ! ನಾನು ಬಂದ ಹೊತ್ತಿಗೆ ತಿಂಡಿ ಊಟ ಹಾಕದಿದ್ದರೂ ಸಹಿಸಬಲ್ಲೆ. ಆದರೆ ನೀನು ಮಾತ್ರ ಹೀಗೆ........ಇರಬೇಡ...."

ಎಂದು ಕೂಗಾಡಿದ.

ಮಾರನೇ ದಿನವೂ ರಾಮಚಂದ್ರ ಅದೇ ಹೊತ್ತಿಗೆ ಮನೆಗೆ ಬಂದ. ಮೀನಾಕ್ಷಿ ಅಡಿಯಿಂದ ಮುಡಿಯವರೆಗೂ ಶೃಂಗರಿಸಿಕೊಂಡು ಬಾಗಿಲಿನಲ್ಲೇ ಅವನನ್ನು ಸ್ವಾಗತಿಸಲು ನಿಂತಿದ್ದಳು ರಾಮಚಂದ್ರನಿಗೆ ಆಶ್ಚರ್ಯ

ವಾಯಿತು ; ಸಂತೋಷವಾಗಲಿಲ್ಲ-ಏಕೆಂದರೆ ನಿತ್ಯವೂ ಮೌನವಾಗಿ ಅವನನ್ನು ಸ್ವಾಗತಿಸುತ್ತಿದ್ದ ಮುಗಳ್ನಗೆ ಮುಖದಿಂದ ಮರೆಯಾಗಿತ್ತು !

" ನಿನ್ನೆ ನಾನು ಕಠಿನವಾಗಿ ಮಾತಾಡಿದೆ, ಸಿಟ್ಟು ಬಂತೆ ಮೀನಾ....? "

ರಾಮಚಂದ್ರ ಕೇಳಿದ.

" ಸಿಟ್ಟೇಕೆ....? "

" ನಾನು ಯಾರಿಗಾಗಿ ಇಷ್ಟು ಕಷ್ಟಪಡುವುದು ! ನಿನಗಾಗಿ ಅಲ್ಲವೇ....? ಈ ತಿಂಗಳಿಂದ ನಿನ್ನನ್ನು ಕ್ಲಬ್ಬಿಗೆ ಮೆಂಬರಾಗಿ ಸೇರಿಸಿಕೊಳ್ಳು ವಂತೆ ನನ್ನ ಸ್ನೇಹಿತನ ಹೆಂಡತಿಗೆ ಹೇಳಿದೇನೆ. ನೀನು ಹೋಗುವೆ ತಾನೆ...."

"ಅಲ್ಲಿಗೇಕೆ ಹೋಗಬೇಕು....? "

" ಅಲ್ಲಿ ನಿನ್ನಂತೆ ಎಷ್ಟೋ ಜನ ಬರುತ್ತಾರೆ. ಸಾಯಂಕಾಲದ ಹೊತ್ತು ಎಲ್ಲರೂ ಒಂದು ಕಡೆ ಸೇರಿ ತಮಾಷೆಯಾಗಿ ಆಟಪಾಟಗಳಲ್ಲಿ ಹೊತ್ತು ಕಳೆಯುವುದು, ಅಲ್ಲಿ ಹೋದರೆ ಎಷ್ಟೋ ಜನರ ಪರಿಚಯವಾದಂ ತೆಯೂ ಆಯಿತು. ಇಲ್ಲಿನ ಹೆಂಗಸರು ಎಷ್ಟು ಸರಳವಾಗಿ ಹೊರಗಿನವ ರೊಡನೆ ಓಡಾಡಿಕೊಂಡು ಇರುತ್ತಾರೆ ! ನೀನೂ ಅವರ ಹಾಗಿರುವುದನ್ನು ಕಲಿಯಬೇಕು ಮೀನ."

"ಆಯಿತು....ಮುಂದೆ....!"

"ಮುಂದೇನು....? ಪರಿಚಯವಾದರೆ ಅವರು ನಮ್ಮ ಮನೆಗೆ ಬರ್ತಾರೆ. ಬಂದಾಗ ಸಮಯೋಚಿತವಾಗಿ ನಡೆಯುವುದನ್ನೂ ಮಾತಾಡು ವುದನ್ನೂ ಕಲಿಯಬೇಕು. ಅವರೊಡನೆ ಓಡಾಡುತ್ತಿದ್ದರೆ ಅವೆಲ್ಲ ತಾನಾ ಗಿಯೇ ಬರುತ್ತೆ. ಈಗ ನೀನು ಒಬ್ಬ ಅಧಿಕಾರಿಯ ಹೆಂಡತಿ; ಅದಕ್ಕೆ ತಕ್ಕಂತಿರಬೇಕು. ಹೊರಗಡೆ ಊಟ ತಿಂಡಿಗಳಿಗೆ ನನ್ನೊಡನೆ ಬರಲು ತಯಾರಿರಬೇಕು."

ಮೀನಾಕ್ಷಿ ಕೇಳುತ್ತಿದ್ದಳು. ರಾಮಚಂದ್ರ ಸ್ವಲ್ಪ ಸುಮ್ಮನಿದ್ದು ಪುನಃ ಕೇಳಿದ—

"ಇಂದಿರ....ಎಲ್ಲಿ....?"

"ಅವಳ ಗೆಳತಿಯ ಮನೆಗೆ ಆಟಕ್ಕೆ ಹೋಗಿದ್ದಾಳೆ."

"ಅವಳ ಹುಟ್ಟಿದ ದಿನ ಯಾವಾಗ ಹೇಳು...."

"ಮುಂದಿನ ತಿಂಗಳು ಆಗ ಬಹುದು...."

"ಅವತ್ತು ನನ್ನ ಸ್ನೇಹಿತರನ್ನೆಲ್ಲಾ ಕರೆಯಬೇಕೆಂದಿದೇನೆ. ಆ.... ದಿನವನ್ನ ನಾನು ಎಷ್ಟು ಆಸೆಯಿಂದ ನಿರೀಕ್ಷಿಸುತ್ತಿದೇನೆ ಬಲ್ಲೆಯಾ....? ನಿಜವಾಗಿಯೂ ನೀನು ಈ ಸೀರೆ ಉಟ್ಟರೆ ಎಷ್ಟು ಚೆನ್ನಾಗಿ ಕಾಣಿಸುವೆ ಗೊತ್ತೆ! ಯಾವಾಗ ನಿನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಅವರಿಗೆಲ್ಲ ಪರಿಚಯ ಮಾಡಿಸುವೆನೋ ಎನ್ನಿಸಿದೆ...."

ಮೀನಾಕ್ಷಿ ನಕ್ಕಳು. ರಾಮಚಂದ್ರ ಮನೆಗೆ ಹೊಸ ಫರ್ನಿಚರ್ ತಂದದಿನ ಗೆಳೆಯರನ್ನು ಕರೆದುಕೊಂಡು ಬಂದು ತೋರಿಸಿ, ಅವರು ಅದನ್ನು ಕೊಂಡಾಡಲು—ಅವನು ಹೆಮ್ಮೆ ಪಡುತ್ತ ನಿಂತಿದ್ದುದು ನೆನ ಪಾಯಿತು.

ಇಂದಿರನ ಹುಟ್ಟಿದ ದಿನ ಬಂತು. ಮೀನಾಕ್ಷಿ ರಾಮಚಂದ್ರ ನಿರೀಕ್ಷಿಸಿದುದಕ್ಕಿಂತ ಹೆಚ್ಚು ಗೆಲುವಿನಿಂದ ನಡೆದುಕೊಂಡಳು. ಕ್ರಮೇಣ ಅವನೊಡನೆ ಎಲ್ಲೆಡೆಗೂ ಹೋಗುವುದು ರೂಢಿಯಾಯಿತು. ಆದರೆ ಅದು ಯಾವುದರಿಂದಲೂ ಅವಳಿಗೆ ನಿಜವಾದ ಸಂತೋಷವಾಗುತ್ತಿರಲಿಲ್ಲ. ಅಷ್ಟೆ! ಅದು ರಾಮಚಂದ್ರನಿಗೂ ಗೊತ್ತಿತ್ತು. ಅದನ್ನು ನೆನೆದಾಗಲೆಲ್ಲ ಅವನ ಅಭಿಮಾನಕ್ಕೆ ಧಕ್ಕೆ ತಗುಲಿದಂತಾಗಿ—

"ನೋಡು ಮೀನ....ನಾನೂ ಪುಸ್ತಕ ಹಿಡಿದು ಶ್ಲೋಕ ಹೇಳುತ್ತ ತಿರುಗಿದ್ದರೆ—ನಿನಗೆ ಸುಖವಾಗಿರುತ್ತಿತ್ತು. ಯಾರ ದುರದೃಷ್ಟವೋ, ದೇವರು ನನ್ನನ್ನು ಈ ದಾರಿಗೆ ಹಚ್ಚಿದ....!"

ಎಂದು ಅವಳ ಮನಸ್ಸು ಚುಚ್ಚುವಂತೆ ಮಾತಾಡಿ ಇದ್ದುದರಲ್ಲಿ ಸಮಾಧಾನ ಹೊಂದುತ್ತಿದ್ದ. ಮೀನಾಕ್ಷಿಗೆ ಆ ಬಗೆಯ ಚುಚ್ಚುಮಾತು ಹೊಸದೇನೂ ಅಲ್ಲ. ಅದನ್ನು ಆಗಾಗ ಕೇಳಬೇಕಾಗುತ್ತಿತ್ತು. ಆ ಮಾತು ಅವಳನ್ನು ಗತಕಾಲದ ಕಡೆಗೆ ಒಯ್ಯುತ್ತಿತ್ತು. ಪುಸ್ತಕ ಹಿಡಿದು

ಓಡಾಡುತ್ತಿದ್ದವರೊಡನೆ ಕಳೆದ ಸುಖದ ದಿನಗಳನ್ನು ನೆನಪಿಗೆ ತರುತ್ತಿತ್ತು. ಅಲ್ಲಿಂದ ಬಂದ ಮೇಲೆ ಒಂದು ಸಲವೂ ಆ ಕಡೆ ಹೋಗಿರಲಿಲ್ಲ. ಮೀನಾಕ್ಷಿಗೆ ತನ್ನವರನ್ನೆಲ್ಲಾ ನೋಡಿ ಯುಗಾಂತರವಾಯಿತೇನೋ ಎನಿಸುತ್ತಿತ್ತು.

ಇಂದಿರ ಈಗ ದೊಡ್ಡವಳಾಗಿದ್ದಾಳೆ. ಅವಳನ್ನು ಒಬ್ಬಳನ್ನೇ ಬಿಟ್ಟು ಹೋಗುವಂತಿಲ್ಲ. ಜೊತೆಯಲ್ಲಿ ಕರೆದುಕೊಂಡು ಹೋದರೆ ವಿದ್ಯಾಭ್ಯಾಸಕ್ಕೆ ತೊಂದರೆ! ಹೀಗಾಗಿ ಊರಿನ ಕಡೆ ಹೋಗಲು ಆಗಿರಲಿಲ್ಲ. ಆದಲ್ಲದೆ ರಾಮಚಂದ್ರ ಆ ಕಡೆ ಹೋಗುವುದೆಂದರೆ ಇಷ್ಟ ಪಡುತ್ತಲೂ ಇರಲಿಲ್ಲ.

ಇಂದಿರ ದೊಡ್ಡವಳಾದ ಮೇಲೆ ಮೀನಾಕ್ಷಿಗೆ ಅರ್ಧ ಹೊರೆ ಇಳಿದಂತಾಗಿತ್ತು. ಹುಡುಗಿ ಮೀನಾಕ್ಷಿಯ ಬಳಿ ಬೆಳೆದು ಅವಳು ಸಂಗ್ರಹಿಸಿಕೊಂಡಿದ್ದ ತಿಳುವಳಿಕೆಯನ್ನೆಲ್ಲಾ ಮೈಗೂಡಿಸಿಕೊಂಡಿದ್ದರೂ, ಅಣ್ಣನ ಜೊತೆಗೆ ತಿರುಗಿ ಅವನ ಇಷ್ಟದಂತೆಯೂ ನಡೆಯುತ್ತ ಇಬ್ಬರಿಗೂ ಅಚ್ಚುಮೆಚ್ಚಾಗಿದ್ದಳು. ಮೀನಾಕ್ಷಿ ತಾನು ಹಿಂದೆ ನಿಂತು, ಹೊರಗಿನ ಓಡಾಟ, ಬಂದವರನ್ನು ನೋಡಿಕೊಳ್ಳುವುದು ಇವೆಲ್ಲಾ ಇಂದಿರನಿಂದ ಮಾಡಿಸುತ್ತಿದ್ದಳು. ರಾಮಚಂದ್ರ ಅವಳನ್ನು ನೋಡಿ ತನ್ನ ಪರಾಭವವನ್ನು ಮರೆಯುತ್ತಿದ್ದ. ಮೀನಾಕ್ಷಿ ಅವಳಿಗಾಗಿ ತನ್ನ ಬಂಧುಗಳನ್ನೆಲ್ಲಾ ದೂರಮಾಡಿಕೊಂಡಿದ್ದಳು.

ರಂಗನೂರಿನಲ್ಲಿ ಚಂದುವಿನ ಮದುವೆಯೆಂದು ಕರೆಯೋಲೆ ಬಂತು. ಶಾಸ್ತ್ರಿಗಳು ಮಗಳು ಅಳಿಯ ಇಬ್ಬರಿಗೂ ಆಗ್ರಹ ಪೂರ್ವಕವಾಗಿ ಬರುವಂತೆ ಬರೆದಿದ್ದರು. ಮೀನಾಕ್ಷಿಯ ಹೃದಯ ಮದುವೆಯ ಉತ್ಸವದಲ್ಲಿ ಭಾಗಿಯಾಗಲು ತವಕಗೊಂಡಿತು. ಆದರೇನು....? ಅದೇ ವೇಳೆಗೆ ಇಂದಿರನ ಪರೀಕ್ಷೆ! ಶಾಸ್ತ್ರಿಗಳ ಕಾಗದದ ಧಾಟಿಯನ್ನು ನೋಡಿ ರಾಮಚಂದ್ರನಿಗೆ ಕೂಡ ಹೋಗದೆ ಇರುವುದು ಸಾಧುವಾಗಿ ಕಾಣಿಸಲಿಲ್ಲ.

"ಏನು ಮಾಡುವೆ ಮೀನಾ....?"

ಎಂದು ಹೊರೆಯನ್ನು ಅವಳ ಮೇಲೇ ಹಾಕಿದ

"ಮಾಡುವುದೇನು....? ಹುಡುಗಿಯ ಪರೀಕ್ಷೆ.... ಈಗೆಲ್ಲಿ ಹೋಗೋದು......?"

"ಇಂದಿರನ್ನ ಕೆಲವು ದಿವಸ ಯಾರಾದರೂ ಸ್ನೇಹಿತರ ಮನೆಯಲ್ಲಿ ಬಿಟ್ಟರಾಯಿತು....!"

"ಲಕ್ಷಣವಾಯಿತು. ನನಗೆ ಅಲ್ಲಿ ಮನಸ್ಸು ಸಮಾಧಾನವಾಗಿರ ಬೇಡವೆ....?"

"ಹಾಗಾದರೆ ಅವರಿಗೆ ಏನು ಬರೆಯಲಿ?"

"ಬರೆಯೋದೇನು....? ಇರುವ ವಿಷಯ ತಿಳಿಸಿ ರಜ ಬಂದ ಮೇಲೆ ಬರುವುದಾಗಿ ತಿಳಿಸಿ....ಮತ್ತು ಸಾಧ್ಯವಾದರೆ ಆ ಮಾತು ಉಳಿಸಿ ಕೊಳ್ಳಲು ಪ್ರಯತ್ನ ಪಡಿ.....!"

ಆ ಮಾತು ಅಲ್ಲಿಗೇ ನಿಂತಿತು. ರಾಮಚಂದ್ರ ನಕ್ಕು ಸುಮ್ಮನಾದ.

೫

ರಾಯರ ಹೆಂಡತಿಗೆ ಖಾಯಿಲೆ ಹೆಚ್ಚುತ್ತಲೇ ನಡೆದಿತ್ತು. ಎರಡು ತಿಂಗಳಿನಿಂದ ಮೇಲೆ ಎದ್ದಿರಲಿಲ್ಲ. ಹಾಸಿಗೆ ಹಿಡಿದು ಮಲಗಿ ಬಿಟ್ಟಿದ್ದರು. ಈಗ ಮಣಿಯೇ ಮನೆ ಯಜಮಾನಿಯಾಗಬೇಕಾಯಿತು. ಮಧ್ಯೆ ಕೆಲವು ದಿವಸ ಮಾತ್ರ ಬಿಡುವು ದೊರೆತಂತಿದ್ದು ಪುನಃ ಸಂಸಾರದ ಹೊಣೆ ಯೆಲ್ಲ ಅವಳ ತಲೆಯ ಮೇಲೆ ಬಿದ್ದಿತ್ತು.

ಮಣಿ ಈಗ ಮೊದಲಿನಂತೆ ಆಡುವ, ಕುಣಿಯುವ ಹುಡುಗಿಯಾಗಿ ರಲಿಲ್ಲ. ಸಂಸಾರದ ಈ ಎಲ್ಲ ತಾಪತ್ರಯ ಅವಳ ಮುಖದ ಮೇಲೆ ತಮ್ಮ ಮುದ್ರೆಯನ್ನು ಒತ್ತಿದಂತಿತ್ತು. ಈಚಿನ ಕೆಲವು ದಿನಗಳಲ್ಲಿ ಉದ್ದವಾಗಿ ಬೆಳೆದಿದ್ದಳಾಗಿ, ನೋಡಲು ತೆಳ್ಳಗೆ ಕಾಣಿಸುತ್ತಿದ್ದಳು. ದೇಹಶ್ರಮ ಮನಸ್ಸಿನ ಆತಂಕ ಎರಡೂ ತಮ್ಮ ಪ್ರಭಾವವನ್ನು ಅವಳ ಮೇಲೆ ಕೆಡವಿದ್ದುವು. ಮನೆಯಲ್ಲಿ ಮೊದಲಿನಂತೆ ಆಳು ಕಾಳುಗಳು ಕೆಲಸದವರು–ಇವರ ಓಡಾಟ ಕಡಿಮೆಯಾಗಿತ್ತು.

ರಾಯರ ಸಂಸಾರ ಚಕ್ರ ಈಗ ಮೊದಲಿನಂತೆ ಸರಾಗವಾಗಿ ತಿರುಗುತ್ತಿರಲಿಲ್ಲ. ಸಂಸಾರ ದಿನದಿನಕ್ಕೆ ದೊಡ್ಡದಾಗುತ್ತಿತ್ತು. ಮನೆಯಲ್ಲಿನ ರೋಗ ರುಜಿನಗಳಿಂದಾಗಿ ಖರ್ಚು ಹೆಚ್ಚುತ್ತಿತ್ತು. ಕಾಲವೂ ನಾಜೂಕಾಗುತ್ತ ಬಂದಿತ್ತು. ರಾಯರಿಗೂ ಸಂಪಾದನೆ ಮೊದಲಿನಂತಿಲ್ಲದಿದ್ದರೂ, ವೆಚ್ಚ ಮಾತ್ರ ಕಡಿಮೆಯಾಗುವಂತಿರಲಿಲ್ಲ. ಯುದ್ಧದ ಪರಿಸ್ಥಿತಿಯಿಂದಾಗಿ ತೊಂದರೆಗೆ ಒಳಗಾದವರೆಂದರೆ–ರಾಯರಂಥ ಮಧ್ಯಸ್ಥಿಕೆಯವರು! ಮಾಡುವುದು ಯಾವುದೂ ಬಿಡುವಂತಿಲ್ಲ; ಎಲ್ಲವೂ ಜರೀ ರುಮಾಲಿಗೆ ತಕ್ಕಂತೆ ಜಬರ್ದಸ್ತಾಗಿಯೇ ಆಗಬೇಕು–ಆದರೆ ನಡೆಯುವುದು ಕಷ್ಟ! ಮನೆಯಲ್ಲಿ ಮಾಡುವವರು ದಿಕ್ಕಿಲ್ಲ. ಎಲ್ಲ ಹುಡುಗ ಪಾಳ್ಯ.

ಈ ಎಲ್ಲ ತೊಂದರೆಯಿಂದಾಗಿ ರಾಯರ ಸಹನೆ ಸಡಿಲವಾಗುತ್ತ ಬಂದಿತು. ಮನೆಯೆಂದರೆ ಅವರಿಗೆ ಬೇಸರ ಬರುವಂತ್ತಿತ್ತು. ಕೋರ್ಟು ಕಛೇರಿಗಳಲ್ಲಿ ಕಳೆದು ಉಳಿದ ಕಾಲವನ್ನು ಕ್ಲಬ್ಬಿನಲ್ಲೂ ಸ್ನೇಹಿತರ ಮನೆಗಳಲ್ಲೂ ಕಳೆಯುತ್ತಿದ್ದರು. ಇವೆಲ್ಲಕ್ಕಿಂತ ಹೆಚ್ಚಾಗಿ ಅವರಿಗೆ ತೊಂದರೆ ಕೊಡುತ್ತಿದ್ದ ವಿಷಯವೆಂದರೆ ಮಗಳ ಮದುವೆ!

ವಿಶ್ವನಾಥ ರಾಯರ ಆಶ್ರಯಕ್ಕೆ ಬಂದು ಅವನ ಸ್ವಭಾವ ತಿಳಿದಾಗಿನಿಂದ ರಾಯರು ಅವನನ್ನು ತಮ್ಮ ಭಾವೀ ಅಳಿಯನನ್ನಾಗಿ ಭಾವಿಸಿದ್ದರು. ಅದೇ ಉದ್ದೇಶದಿಂದಲೇ ಅವನಿಗೆ ಸಹಾಯಕರಾಗಿದ್ದರು–ಎಂದರೂ ತಪ್ಪಾಗಲಾರದು. ಅವರು ತಮ್ಮ ಮಾತಿನಲ್ಲಾಗಲೀ ನಡತೆಯಲ್ಲಾಗಲೀ ಅದನ್ನು ಹೊರಗೆ ತೋರಿಸದಿದ್ದರೂ, ಅವರಿಗೆ ಆಪ್ತರಾದವರಿಗೆ ರಾಯರ ಉದ್ದೇಶ ತಿಳಿಯದೆ ಇರಲಿಲ್ಲ. ಮಣಿ ಅವನಲ್ಲಿ ತೋರುತ್ತಿದ್ದ ಸ್ನೇಹ ಮಮತೆಗಳು ಆ ಉದ್ದೇಶವನ್ನು ಬಲಗೊಳಿಸಲು ಸಹಾಯ ಮಾಡಿತ್ತು. ಹುಡುಗ ಓದಿ ಒಂದು ಕಡೆ ನಿಂತರೆ ಆನೇಲೆ ಆ ಯೋಚನೆ ಮಾಡೋಣವೆಂದಿದ್ದರು. ಆದರೆ ಒಮ್ಮಿಂದೊಮ್ಮೆ ವಿಶ್ವನಾಥ ಅವರ ಲೆಕ್ಕಾಚಾರದ ಯೋಚನೆಗಳನ್ನೆಲ್ಲಾ ಚದುರಿಸಿ, ಅವರು ಹಾಕಿ ಕೊಟ್ಟಿದ್ದ ದಾರಿಗೇ ಅಂಟಿಕೊಂಡಿರದೆ ಹೊಸ ಮಾರ್ಗವನ್ನು ತುಳಿದಿದ್ದ. ಆಗಲೆ ಅವರಲ್ಲಿ ಭಿನ್ನಾಭಿಪ್ರಾಯಗಳು ಮೂಡಲು ಮೊದಲಾದದ್ದು. ವಿಶ್ವನಾಥ ತನ್ನ

ಕ್ಷಣವನ್ನು ಮುಗಿಸಿ ಬೆಂಗಳೂರಿನಲ್ಲಿದ್ದಾಗ ಒಂದೆರಡು ಸಲ ರಾಯರಲ್ಲಿಗೆ ಬಂದಿದ್ದ. ಆಗ ಆ ವಿಷಯ ಪ್ರಸ್ತಾಪ ಮಾಡಬೇಕೆಂದು ರಾಯರ ಮನಸ್ಸಿನಲ್ಲಿದ್ದರೂ, ಯಾವುದೋ ಅವ್ಯಕ್ತ ವಾಣಿ ಆ ಕೆಲಸ ಸಫಲವಾಗಲಾರದೆಂದು ನುಡಿಯುತ್ತಿತ್ತು. ಅದರಿಂದಾಗಿ ಅದನ್ನು ಮುಂದೆ ತಳ್ಳುತ್ತ ಬಂದಿದ್ದರು. ಅದಲ್ಲದೆ ಮೊದಲು ಅವನಲ್ಲಿ ಅಳಿಯನನ್ನು ಕಂಡಾಗ ಅವರಿಗೆ ಯಾವ ಉತ್ಸಾಹವಿತ್ತೋ, ಈಗ ಅದು ಬಹು ಮಟ್ಟಿಗೆ ಕಡಿಮೆಯಾಗಿತ್ತು.

"ಕಾಫಿ ಆಯಿತೆ ಮಣಿ....?"

ರಾಯರು ನೀರು ಮನೆಯಿಂದ ಮುಖ ಒರಸಿಕೊಂಡು ಬರುತ್ತ ಕೇಳಿದರು.

"ಆಯಿತಣ್ಣ.... ಕೊಟ್ಟೆ...."

"ನಿದಾನವಾಗಿ ಆಗಲಮ್ಮ; ಅವಸರವೇನಿಲ್ಲ. ಸುಮ್ಮನೆ ಕೇಳಿದೆ...."

"ಇನ್ನೇನು ಆಯ್ತು. ಹಾಲು ಸ್ವಲ್ಪ ಕಾಯಬೇಕು ಅಷ್ಟೆ...."

"ಅಮ್ಮ ರಾತ್ರೆ ನಿದ್ರೆ ಮಾಡಿದಳೇ....?"

"ಹುಂ....ಸುಮಾರಾಗಿ ಮಾಡಿದಳು. ಮಧ್ಯೆ ಒಂದು ಸಲ ಕೆಮ್ಮು ಹೆಚ್ಚಾಯಿತು. ಔಷಧಿ ಕೊಟ್ಟ ಮೇಲೆ ಸ್ವಲ್ಪ ನಿದ್ರೆ ಬಂತು. ಆಮೇಲೆ ನಂಗೂ ನಿದ್ರೆ ಬಂದುಬಿಟ್ಟಿತು. ಈಗಲೇ ಎಚ್ಚರವಾದದ್ದು. ನಿಮಗೆ ಕಾಫಿಗೆ ಹೊತ್ತಾಯಿತು!"

"ಆಯ್ತೇಳು....ಒಂದು ದಿನ ಹೊತ್ತಾದರೆ ಮುಳುಗಿ ಹೋಗೋದೇನು......? ನೀನು ತಾನೇ ಎಷ್ಟು ನಿದ್ರೆಗೆಟ್ಟೀಯೆ......! ರಾಜಣ್ಣ ಹೋದಾಗಿನಿಂದ ಈ ಕೆಲಸವೆಲ್ಲಾ ನಿನ್ನ ತಲೆಗೇ ಕಟ್ಟಿದೆ. ಅಂದಹಾಗೆ ನಿನಗೆ ಹೇಳಲು ಮರೆತಿದ್ದೆ.... ಇವತ್ತು ರಾಜಣ್ಣ ಬರ್ತಾನಂತೆ."

"ಯಾವಾಗ ಬರ್ತಾನಂತೆ......?"

ಮಣಿ ಕಾಫಿ ಸೋಸುತ್ತಿದ್ದವಳು ತಲೆ ಎತ್ತದೆ ಕೇಳಿದಳು.

"ಸಾಯಂಕಾಲದ ರೈಲಿಗೆ ಬರುತ್ತಾನಂತೆ. ಅಮ್ಮನ ದೇಹಸ್ಥಿತಿಯ ವಿಚಾರ ತಿಳಿಸಿದ್ದೆ. ಅದರಿಂದ ನೋಡಲು ಬರಬಹುದು"

ಮಣಿ ಕಾಫಿ ಬೆರಸಿತಂದು ಮುಂದಿಟ್ಟಳು. ರಾಯರು ಅದನ್ನು ಕುಡಿಯುತ್ತ–

"ಈಚಿಗೆ ಕಾಫಿ ರುಚಿಯೇ ಕೆಟ್ಟುಹೋಯ್ತು. ಎಮ್ಮೆತಂದು ಕರೀತಿಲ್ಲವೇನು?"

"ಇಲ್ಲ ಮನೆಯಿಂದ ನೀರು ಹಾಲೇ ತರುತ್ತಾಳೆ. ಎಮ್ಮೆ ಹಸು ಯಾವುದನ್ನೂ ಮನೇ ಹತ್ತಿರ ತರಲುಸಾಧ್ಯವಿಲ್ಲವಂತೆ ...."

"ಇವರಿಗೆಲ್ಲಾ ಏನು ರೋಗ ಬಂದಿದೆಯೋ......? ಇದುವರೆಗೆ ತರುತ್ತಿರಲಿಲ್ಲವೇ...."

"ಅವಳು ಹಾಗೇ ಅಣ್ಣ. ಏನಾದರೂ ಹೆಚ್ಚಿಗೆ ಹೇಳಿದರೆ ಬರುವುದೇಇಲ್ಲ."

"ಸಾಕಾಗಿದೆ ತಾಪತ್ರಯ. ಇನ್ನು ಇರುವ ಸಂಸಾರದ ಜೊತೆಗೆ ನಾವು ಹಸು ಎಮ್ಮೆ ಬೇರೆ ಕಟ್ಟಬೇಕು!"

"ಅಣ್ಣ .... ನಿನ್ನೆ ನೆರೆಮನೆ ಗಂಗತ್ತೆ ಬಂದಿದ್ದರು"

"ಹೂಂ...... ಏನಂತೆ ಆಕೆಗೆ.....?"

"ಅವರಿಗೇನೂ ಇಲ್ಲ. ಅಮ್ಮನಿಗೆ ಗ್ರಹಗತಿ ಚೆನ್ನಾಗಿಲ್ಲವೇನೊ...... ಏನಾದರೂ ದೇವರ ಕೆಲಸ, ಪೂಜೆ ಶಾಂತಿ ಮಾಡಿಸಬಾರದೇ .....? ಎಂದರು"

"ಸರಿ ಸರಿ......ಸದಾ ನರಳುವವರಿಗೆ ಗ್ರಹಗತಿ ಏನು ಬಂತು. ಏನೋ ಅಪರೂಪದ್ದಾದರೆ......"

"ಯಾಕಣ್ಣ.... ಅದನ್ನೂ ಮಾಡಿಸಿ ನೋಡೋಣ. ನಮ್ಮ ಮನಸ್ಸಿಗಾದರೂ ಸಮಾಧಾನವಾಗುತ್ತೆ. ಔಷಧಿಗಾಗಿ ಎಷ್ಟೋ ವೆಚ್ಚವಾಗಿದೆ. ಇದೂ ಒಂದು ಆಗಲಿ."

"ನಿನ್ನ ಮನಸ್ಸಿನಲ್ಲಿದ್ದರೆ ಅದೂ ಆಗಲಿ. ಇವತ್ತು ಪುರೋಹಿತರು ದೇವರ ಪೂಜೆಗೆ ಬಂದಾಗ......ವಿಚಾರಿಸಿ ನೋಡು......"

ರಾಯರು ಕಾಫಿ ಕುಡಿದು ಮುಗಿಸಿ ಎದ್ದರು. ಆಫೀಸಿಗೆ ಹೋಗುವ ಮೊದಲು ಹೆಂಡತಿಯ ಯೋಗಕ್ಷೇಮವನ್ನು ವಿಚಾರಿಸಲು ಅವರ ಕೋಣೆಗೆ ಹೋದರು. ಆಕೆ ಆಗತಾನೆ ಎದ್ದು ದಿಂಬಿಗೆ ಒರಗಿಕೊಂಡು ಕುಳಿತಿದ್ದಳು.

"ಏನು..... ಹೇಗಿದ್ದಿ.... ರಾತ್ರಿ ನಿದ್ರೆ ಬಂತೆ....?"
ರಾಯರು ಕೇಳಿದರು. ಅದು ನಿತ್ಯವೂ ಕೇಳುವ ವಾಡಿಕೆಯ ಪ್ರಶ್ನೆ. ಆ ನಡೆವಳಿಕೆ ಅನುಸರಿಸಬೇಕಾದ ರೂಢಿಯಾಗಿತ್ತೇವಿನಾ, ಅದಕ್ಕೆ ಅಂತಃಕರಣದ ಸೋಂಕಿರಲಿಲ್ಲ.

"ಇದೀನಿ......ಹೀಗೇ ಎಂದಿನಂತೆ ..! ಸ್ವಲ್ಪ ನಿಮಗೆ ಬಿಡುವಿದೆಯೇನು.....?"

"ಯಾಕೆ.... ಏನಾಗಬೇಕಿತ್ತು....?"

"ನಿಂತು ಹಾಗೇ ಹೋಗುವ ಬದಲು ಒಂದು ನಿಮಿಷ ಕೂತುಕೊಂಡರೆ ಆಗಿತ್ತು. ಸ್ವಲ್ಪ ಮಾತಾಡುವುದಿತ್ತು. ಇನ್ನು ಪುನಃ ನಿಮ್ಮ ಮುಖ ಕಾಣುವುದು ನಾಳೆ ಬೆಳಗ್ಗೆ ತಾನೇ.....?"

"ನನಗೆ ಬೇರೆ ಕೆಲಸವಿರಬಾರದೆ....? ಇಲ್ಲಿ ನಿನ್ನ ಮುಂದೆ ಕೂತರೆ ಹೊಟ್ಟೆ ತುಂಬಬೇಕಲ್ಲ ! "

"ಅದು ಸರಿ; ನನ್ನ ಹಣೆಬರಹ ನನಗೆ ಗೊತ್ತಿದೆ. ಅದಕ್ಕಾಗಿ ನಾನು ಯಾರಿಗೂ ದೂರು ಕೊಡುವುದಿಲ್ಲ. "

"ಆಯಿತಲ್ಲ ಬಿಡು. ಇಷ್ಟೆಲ್ಲಾ ಮಾತು ಯಾಕೆ....? ಅದೇನು ಹೇಳಬೇಕೋ ಹೇಳಿಬಿಡು ..."

"ನನಗೆಸಂಕಟ....ಸುಸ್ತು ದಿನದಿನಕ್ಕೆ ಹೆಚ್ಚುತ್ತಿದೆ...."

"ಅದೇನೂ ಹೊಸದಲ್ಲವಲ್ಲ....! "

ರಾಯರು ಹುಸಿ ನಗುವಿನಿಂದ ಹೇಳಿದರು. ಆ ಮಾತು, ಆ ನಗು, ಕತ್ತಿಯ ಅಲುಗಿನಂತೆ ಹರಿತವಾಗಿತ್ತು.

ಆಕೆಯ ಕಣ್ಣಾಲಿಗಳು ನೀರಿನಲ್ಲಿ ತೇಲಿದುವು.

ಸ್ವಲ್ಪ ತಡೆದು ಮೆಲ್ಲನೆ ಹೇಳಿದರು–

"ನನ್ನ ರೋಗ ಹೇಳಿ ಬೇಸರ ಪಡಿಸುತ್ತಿಲ್ಲ. ನನ್ನ ಕಣ್ಮುಚ್ಚುವು ದರಲ್ಲಿ ಮಣಿಗೊಂದು ಮದುವೆ ಮಾಡಿಬಿಡಿ....ಅದನ್ನು ನೋಡಿ...."

"ನನಗೂ ಆ ಯೋಚನೆ ಇದೆ ... ''

"ಬರೀ ಯೋಚನೆ ಇದ್ದರೇನಾಯಿತು. ಅದು ಎಂದಿನಿಂದಿಲೂ ಇದೆ. ಆದರೆ ಕೆಲಸವಾಗಬೇಕಾದರೆ ಅಷ್ಟೇಸಾಕೆ.... ?''

"ಇನ್ನೇನು ಮಾಡಬೇಕೆಂದು ನಿನ್ನಿಷ್ಟ....?ವರಎಲ್ಲಿದೆ....?ಅಷ್ಟು ಸುಲಭದ ಕೆಲಸವೆ ಅದು....?"

"ಸುಲಭದ ಕೆಲಸವಲ್ಲ....ನಿಜ....!ಹಾಗೆಂದು ಬಿಡಲಾಗುವುದೇ....? ಪ್ರಯತ್ನ....ಮಾಡಬೇಕು...."

"ಎಲ್ಲಿಯ ಪ್ರಯತ್ನ....? ವರನೆಂದರೆ ಮಾರುಕಟ್ಟೆಯಲ್ಲಿ ದೊರೆ ಯುವ ವಸ್ತುವೇ.....?"

"ಮಾರುಕಟ್ಟೆಗೆ ಯಾಕೆ ಹೋಗಬೇಕು ? ಬೇಕಾದಲ್ಲಿ ದಾರಿ ಇದ್ದೇ ಇದೆ....!"

"ಆಯಿತು.....ಮಣಿ ಮದುವೆಯಾಗಿ ಹೊರಟುಹೋದರೆ ಮನೆಯ ಗತಿ ಏನು....?"

"ಹಾಗೆಂದು ಅವಳಿಗೆ ಮದುವೆ ಮಾಡದೆ ಮನೆಗೆ ಹೊಣೆ ಮಾಡುವುದೇ... ?"

"ಹಾಗೇನಲ್ಲ....ಮದುವೆಯಾಗಿ ಇಲ್ಲೇ ಇರುವ ವರನಾಗ ಬೇಕು...."

"ವಿಶ್ವನಾಥ........"

"ವಿಶ್ವನಾಥನ ಆಸೆ ಇನ್ನೂ ಇಟ್ಟುಕೊಂಡಿದೀಯಾ....?"

"ನಾನೇಕೆ....ನೀವೂ ಇಟ್ಟದ್ದಿರಿ...."

'ಅದು ಹಳೆಯ ಮಾತು. ಈಗ ಅವನಲ್ಲೋ....ಅವನ ಕೆಲಸ ವೆಲ್ಲೋ....ನಮಗೆ ಕೂಡಿ ಬರುವುದಿಲ್ಲ."

''ನೀವು ಅವನನ್ನೊಮ್ಮೆ ಕೇಳಬಾರದೆ....?"

"ವಿಶ್ವನಾಥನಿಗೆ ಮಣಿಯ ಆಸೆ ಇದ್ದಿದ್ದರೆ ಅವನು ಈ ದಾರಿ ಹಿಡಿಯುತ್ತಿರಲಿಲ್ಲ. ಈ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ತಿಳಿಯದಷ್ಟು ದಡ್ಡನೇ ಅವನು....?"

"ನಿಮಗೆ ಅವನನ್ನು ಕೇಳಲು ಇಷ್ಟವಿಲ್ಲದಿದ್ದರೆ ನಾನೇ ಕೇಳ್ತೀನೆ. ನನ್ನ ಮಾತು ತೆಗೆದುಹಾಕಲಾರ ಅವನು....!"

"ಸರಿ.... ನಿನಗೊಂದು ಹುಚ್ಚು.... ಅಷ್ಟೆ....!"

ರಾಯರು ಮಾತನ್ನು ಅಲ್ಲಿಗೇ ಮುಗಿಸಿ ಎದ್ದುಹೋದರು. ವಿಶ್ವನಾಥ ಸಾಯಂಕಾಲ ಬಂದಾಗ ಮಣಿ ಅವನನ್ನು ಎದುರುಗೊಳ್ಳಲು ಎಲ್ಲರೊಡನೆ ಹೊರಗೆ ಹೋಗಲಿಲ್ಲ. ಒಳಗೆ ಏನೋ ಕೆಲಸದಲ್ಲಿದ್ದಳು. ಅವನ ಮನಸ್ಸಿನ ಬದಲಾವಣೆಯನ್ನು ಮೊದಲು ಕಂಡುಹಿಡಿದವಳು ಮಣಿ. ಒಲುಮೆಯ ಹೃದಯಕ್ಕೆ ಯಾವ ತರ್ಕವಾಗಲೀ.... ಸಿದ್ಧಾಂತವಾಗಲೀ ಬೇಕಿಲ್ಲ. ಅದು ಯಾವುದೋ ಅವ್ಯಕ್ತ ಶಕ್ತಿಯ ಬಲದಿಂದ ತನಗೆ ಬೇಕಾದುದನ್ನು ತಿಳಿಯಬಲ್ಲುದು. ಅದು ವಿಷಯವನ್ನು ಹೀಗೇ ಎಂದು ಸಕಾರಣವಾಗಿ ತೋರಿಸಲಾರದಾದರೂ ಪರಿಣಾಮವನ್ನು, ಅಂದರೆ ಒಲಿದವನು ದೂರವಾಗುತ್ತಿರುವುದನ್ನು ಗ್ರಹಿಸಬಲ್ಲುದು.

ಈ ತಿಳುವಳಿಕೆ ಮೊದಲಸಲ ಮಣಿಗೆ ಬಂದಾಗ ಅವಳ ಹೃದಯ ವ್ಯಥೆಯಿಂದಲೂ ನಿರಾಶೆಯಿಂದಲೂ ತತ್ತರಿಸಿತು. ಅಭಿಮಾನ ಆ ವಿಷಯವನ್ನು ಮುಂದಕ್ಕೆ ಯೋಚಿಸುವುದಕ್ಕಾಗಲೀ, ಮಾತಾಡುವುದಕ್ಕಾಗಲೀ, ಅಡ್ಡವಾಗಿತ್ತು. ತಾಯಿ ಅದೇ ಯೋಚನೆಯಿಂದ ಹಗಲುಗನಸು ಕಟ್ಟುತ್ತಿರುವಾಗ ಮಣಿ ಅದನ್ನು ತಡೆಯಬೇಕೆಂದು ಯೋಚಿಸಿದರೂ, ಅವಳ ಬಾಯಿ ಕಟ್ಟಿದಂತಾಗಿತ್ತು. ಅವರು ಇದ್ದ ಸ್ಥಿತಿಯಲ್ಲಿ ಈ ಹೊಸ ಪೆಟ್ಟು ಏನು ಆಘಾತ ಮಾಡಬಹುದೋ ಎಂಬ ಹೆದರಿಕೆ ಇತ್ತು. ಅದರಿಂದಲೇ, ತಾಯಿ ಆ ಮಾತನ್ನು ತೆಗೆದು ತಮ್ಮ ಆಶೆಯನ್ನು ನೂರು ವಿಧದಲ್ಲಿ ಹೊರಗೆಡುವುತ್ತಿದ್ದಾಗ, ಅವಳು ಅದಕ್ಕೆ ಯಾವ ಉತ್ತರವನ್ನೂ ಕೊಡದೆ.... ಆ ಜಾಗವನ್ನು ಬಿಟ್ಟು ಹೊರಟುಹೋಗುತ್ತಿದ್ದಳು. ಕಣ್ಣೀರೊಂದೇ ಅವಳ ಜೊತೆಗಿದ್ದುದು.

"ಇಷ್ಟಕ್ಕೂ ಆದದ್ದೇನು....?'ರಾಜಣ್ಣ' ರಾಜಣ್ಣನಾಗಿಯೇ ಉಳಿದ....! ಅಷ್ಟೇತಾನೇ....!" ಎಂದು ಸಮಾಧಾನವನ್ನು ತಂದುಕೊಳ್ಳುತ್ತಿದ್ದಳು.

ವಿಶ್ವನಾಥ ಬಂದವನು ರಾಯರನ್ನು ಮಾತಾಡಿಸಿ, ತನ್ನನ್ನು ಮುತ್ತಿದ್ದ ಹುಡುಗರನ್ನು ಸಂತೈಸಿ–ರೋಗಿಯ ಕೋಣೆಗೆ ಹೋಗಿ ಅವರನ್ನು ವಿಚಾರಿಸಿ, ಮಣಿ ಅಲ್ಲೂ ಇಲ್ಲದಿರಲು ಅವಳನ್ನು ಕೂಗುತ್ತ ಒಳಗೆ ಬಂದ. ಮಣಿ ಇದುವರೆಗೆ ತನ್ನ ಅಂತರಂಗವು ಬಯಲಾಗದಂತೆ ಯಾವ ಸ್ಥೈರ್ಯದಿಂದ ತನ್ನ ದುಃಖವನ್ನು ಒತ್ತಿ ಹಿಡಿದಿದ್ದಳೋ–ಆದರ ಬಲದಿಂದಲೇ ಇಂದು ಅವನ ಧ್ವನಿಯನ್ನು ಕೇಳಿ ಕುಳಿತಲ್ಲೇ ನಡುಗಿದರೂ, ಅದನ್ನು ಸ್ವಲ್ಪವೂ ತೋರಗೊಡದೆ 'ರಾಜಣ್ಣ....' ಎಂದು ನಗುತ್ತ ಹೊರಗೆ ಬಂದಳು. ಆದರೆ ಆ ನಗು ರಾಜಣ್ಣನನ್ನು ಮೋಸಗೊಳಿಸಲಿಲ್ಲ. ಅವನು ಆ ನಗುವನ್ನು ನೋಡಿ, ಆ ಧ್ವನಿಯನ್ನು ಕೇಳಿ ಒಂದು ಕ್ಷಣ ಏನೂ ತೋರದೆ ನಿಂತುಬಿಟ್ಟ. ಕೂಡಲೇ ಚೇತರಿಸಿಕೊಂಡು—

"ಮಣಿ.... ನಿನಗೇನಾಗಿದೆ ...?" ಎಂದು ಕೇಳಿದ.

ಈ ಸಲ ಮಣಿ ಜೋರಾಗಿ ನಕ್ಕು ಹೇಳಿದಳು—

"ನನಗೇನಾಗಿದೆ.... ನೀನು ಬರುವೆಯೆಂದು ಒಳ್ಳೊಳ್ಳೆ ಅಡಿಗೆ ತಯಾರಿಸಲು ಒಳಗೆ ಸಹಾಯಮಾಡುತ್ತಿದ್ದೆ... !"

"ಅಣ್ಣ ಹುಷಾರಿಲ್ಲವೆಂದು ಬರೆದಿದ್ದುದು ನಿನಗೊ ಅಥವಾ ಅಮ್ಮನಿಗೋ ಗೊತ್ತಾಗಲಿಲ್ಲ."

"ಅದನ್ನು ನಿದಾನವಾಗಿ ವಿಚಾರಿಸೋಣ. ಈಗ ಕಾಲು ತೊಳೆದುಕೋ ಏಳು. ಹುಡುಗರೆಲ್ಲಾ ನಿನ್ನ ಜೊತೆಗೆ ಊಟ ಮಾಡಲು ಕಾದಿದ್ದಾರೆ."

ಎಲ್ಲರೂ ಊಟಕ್ಕೆ ಕುಳಿತರು. ರಾಯರು ಮಗಳನ್ನೂ ತಮ್ಮ ಜೊತೆಗೆ ಕೂಡುವಂತೆ ಹೇಳಿದರು. ಆದರೆ ಅವಳು ಅಡಿಗೆಯವನ ಮೇಲೇ ಬಡಿಸುವ ಭಾರವನ್ನು ಬಿಡದೆ, ತಾನೂ ಆದರಿಸಿ ಬಡಿಸುತ್ತಿದ್ದಳು. ಎಲ್ಲ

ರದೂ ಊಟವಾದಮೇಲೆ ಅವಳು ಊಟಕ್ಕೆ ಕೂತಾಗ ವಿಶ್ವನಾಥ ಕೈ ಒರಸಿಕೊಳ್ಳುತ್ತ ಒಳಗೆ ಬಂದು—

"ನಾನು ಏನು ಬಡಿಸಲಿ ಮಣಿ ..." ಎಂದು ಕೇಳಿದ

"ಏನೂ ಬೇಡಪ್ಪ. ರಂಗಪ್ಪ ಇದಾರಲ್ಲ ಆಪದ್ಬಂಧು! ಬಡಿಸುತ್ತಾರೆ........."

"ಅದೇನು ದಿನವಹಿ ಇದ್ದೇ ಇದೆಯಲ್ಲ. ಒಂದು ದಿನವಾದರೂ ಬದಲಾವಣೆ ಇರಬೇಡವೇ? ಅಲ್ವೆ ರಂಗಪ್ಪ.....?"

ರಂಗಪ್ಪ ತನ್ನ ಹಣ್ಣು ಮುಖದಲ್ಲಿ ನಗುವನ್ನು ಸೂಸುತ್ತ—

'ರಾಜಣ್ಣೋರು ಸಾಹೇಬರಾದರೂ ಇನ್ನೂ ಹುಡುಗಾಟ ಬಿಟ್ಟಿಲ್ಲ....." ಎಂದು ಹೇಳಿದ.

"ಇದೇನು ರಂಗಪ್ಪ ... ನನ್ನನ್ನು ಸಾಹೇಬನನ್ನಾಗಿ ಮಾಡಿಬಿಟ್ಟೆಯಲ್ಲ. 'ರಾಜಣ್ಣ—ತರಕಾರಿ ಇಲ್ಲ. ತರ್ತೀಯಾ?' ಅನ್ನುತ್ತಿದ್ದವನು ಒಂದೇ ಸಲಕ್ಕೆ ರಾಜಣ್ಣೋರು ಅಂತೀಯೋ! ಮುಂದಿನ ಸಲ ನಾನು ಬಂದಾಗ ದೂರದಲ್ಲೇ ಕಟ್ಟಿಗೆಯಂತೆನಿಂತು ಮಿಲಿಟರಿ ಸಲಾಮು ಹಾಕುವೆಯೋ ಏನೋ!"

"ಅದೂ ಆಗಲಿ .. ಕಲ್ಲುರಾಯಿತು. ಬಗ್ಗಿದ ಬೆನ್ನಾದರೂ ನೆಟ್ಟಗಾದೀತು......!"

"ಇಲ್ಲ ರಂಗಪ್ಪ.... ನೀನು ಸರಿಯಾಗಿ ಬಡಿಸುವುದಿಲ್ಲ. ನಿನ್ನ ಕೈಲಿ ಊಟ ಮಾಡಿ ಮಣಿ ಹೇಗಾಗಿದಾಳೆ ನೋಡು. ತಾ.... ಇಲ್ಲಿ ತುಪ್ಪದ ಪಾತ್ರೆ...."

"ಇದೇನು ರಾಜಣ್ಣ.... ಒಂದೇ ಸಲಕ್ಕೆ ಇಷ್ಟು ತುಪ್ಪ ಹೊಯ್ದರೆ ಹೇಗೆ ಊಟಮಾಡೋದು....? ಆಯಿತಲ್ಲ ಸಾಕು ಬಿಡು. ನೀನೂ ಮಾತಾಡುತ್ತಾ ಕೂತುಕೊಂಡು ಅಲ್ಲಿಯ ವಿಚಾರ ಹೇಳು. ನಾನು ಕೇಳ್ತಾ ಈ ತುಪ್ಪವನ್ನೆಲ್ಲಾ ಮುಗಿಸುತ್ತೇನೆ... ಹು.... ಎಲ್ಲಾ ಸಪ್ಪೆಯಾಯ್ತು.... ಊಟದ ರುಚಿಯೇ ಹೋಯ್ತು .. !"

"ಉಂಟೇ ಅಮ್ಮ....? ರಾಜಣ್ಣ ಬಡಿಸಿದರೆ ರುಚಿ ಹೆಚ್ಚು. ಅವರಿಲ್ಲದೆ ಕೊರಗಿ ನೀವು ಸಣ್ಣಗಾಗೋದು. ತಪ್ಪಿಗೆ ಬಡಪಾಯಿ ರಂಗಪ್ಪ ಹೊಣೆ....!"

ಮಣಿ ನಾಚಿಕೆಯಿಂದ ಕೆಂಪಾದಳು. ಈ ಮುದುಕ ಇನ್ನೇನು ಮಾತು ಹೇಳಿಬಿಡುವನೋ ಎಂದು ಸಂಕೋಚವೂ ಆಯಿತು ಆ ಮಾತು ಕೇಳಿಸದವಳಂತೆ

"ಪ್ರಯಾಣ ಹೇಗಿತ್ತು ರಾಜಣ್ಣ....? ಸುಖವಾಗಿತ್ತೆ?" ಎಂದು ಮಾತು ಬದಲಿಸಿದಳು.

"ಇತ್ತಮ್ಮ....ಎಂದಿನಂತೆ...."

ರಾಜಣ್ಣ ನೀರಸವಾಗಿ ನುಡಿದ.

"ಅಲ್ಲಿ....ನಿಮ್ಮ ಕಡೆ ಏನು ವಿಶೇಷ....?"

"ವಿಶೇಷ ಗೊತ್ತೇ ಇದೆಯಲ್ಲ ... ನೀನು ಪತ್ರಿಕೆ ಓದುವುದಿಲ್ಲವೆ....?"

"ಪತ್ರಿಕೆ ಇರಲಿ. ನೀನು ಹೇಳಬಾರದೆ....!"

"ನಾನು ಯುದ್ಧದ ಸುದ್ದಿ ಪ್ರಚಾರ ಮಾಡಲು ಇಲ್ಲಿ ಬರಲಿಲ್ಲ ಮಣಿ ಆ ಮಾತು ಕೇಳಿ ಬೇಸರ ಬಂದಿದೆ. ಇಲ್ಲಿನ ಸಮಾಚಾರ ಹೇಳಬಾರದೇ?"

"ನಾನು ಮನೆಯಲ್ಲಿರೋಳು. ನಿನ್ನಂಥ ಊರೂರು ತಿರುಗುವವನಿಗೆ ಏನು ಹೊಸ ಸುದ್ದಿ ಹೇಳಲಿ ಹೇಳು....'

"ರಂಗಪ್ಪ....ಮಣಿಗೆ ಇನ್ನಷ್ಟು ಪಲ್ಯ ಹಾಕು. ಸಂಡಿಗೆ ಇನ್ನೊಂದು ಸಲ ಕೇಳು...."

"ಅಯ್ಯೋ....ಸಾಕಪ್ಪ....ಯಾಕೋ ಉಪಚಾರ ಹೆಚ್ಚಾಯಿತು. ಹೀಗೆ ತಿಂದರೆ ಆಯ್ತು...."

"ಏನಾಗೋದು..ಹು..ಅಷ್ಟು ಹಾಕಿಬಿಡಪ್ಪ. ಅದೇನು ಹೆಚ್ಚು....? ಮಣಿ-ಅಮ್ಮ ಯಾವಾಗಿನಿಂದ ಹೀಗಿದಾರೆ....? ತೀರ ಹಾಸಿಗೆ ಹಿಡಿದು ಬಿಟ್ಟಿದಾರಲ್ಲ ..."

"ಈ ಸಲ ಮಲಗಿ ಎರಡು ತಿಂಗಳಾಯಿತು. ಸ್ವಲ್ಪವೂ ಗುಣವಿಲ್ಲ. ದಿನ ದಿನಕ್ಕೆ ಹೆಚ್ಚುತ್ತಿದೆಯೇ ಹೊರತು-ಕಡಿಮೆಯಾಗುವ ಸೂಚನೆಯೇ ಇಲ್ಲ."

"ನೀನೇಕೆ ಹೀಗಿದ್ದಿ....? ಅದನ್ನು ಹೇಳಲೇ ಇಲ್ಲ...."

"ನನಗೇನು....?ನಿನಗೆ ಅಲ್ಲಿ ಊಟ ತಿಂಡಿ ಎಲ್ಲ ಸೌಖ್ಯವಾಗಿದೆಯೆ ರಾಜಣ್ಣ....?"

"ಇಲ್ಲದೇ ಏನು ಧಾಡಿ....?ಹೊಟ್ಟೆ ಬಿರಿಯುವಷ್ಟು ತಿನ್ನ ಬಹುದು. ತಿಂದು–ಅವರ ಕೆಲಸ ಮಾಡಲು ಗಟ್ಟಿಯಾಗಿರಬೇಡವೆ....? ನೋಡು ನಾನೇನಾದರೂ ನಿನ್ನಂತೆ ಒಡಕಲಾಗಿದೇನೆಯೋ....!"

ವಿಶ್ವನಾಥ ಒಂದು ತೆಳ್ಳನೆಯ ತೋಳಿಲ್ಲದ ಜುಬ್ಬವನ್ನು ಹಾಕಿಕೊಂಡಿದ್ದ. ಸಾಧನೆಯಿಂದ ಪುಷ್ಟಿಗೊಂಡಿದ್ದ ತೋಳುಗಳು, ವಿಶಾಲವಾಗಿ ಉಬ್ಬಿದ ಎದೆ, ಇವುಗಳ ಕಡೆ ಮಣಿಯ ನೋಟ ಒಂದು ಕ್ಷಣ ಹರಿಯಿತು. ತಲೆ ಎತ್ತಿ ಅವನ ಮುಖವನ್ನು ನೋಡಿದಳು. ಆ ನೋಟವನ್ನು ಇದಿರಿಸುವುದು ಅವಳಿಂದಾಗಲಿಲ್ಲ. ಹೆಚ್ಚು ಮಾತು ಬೆಳೆಸದೆ ಬೇಗ ಊಟವನ್ನು ಮುಗಿಸಿ ಎದ್ದು ಹೋದಳು.

ಮಾರನೇ ದಿನ ಮಣಿ ತಾಯಿಗೆ ಕಿತ್ತಲೆ ಹಣ್ಣಿನ ರಸ ಮಾಡುತ್ತಿದ್ದಳು. ವಿಶ್ವನಾಥ ಬಳಿಯಲ್ಲಿ ಕುಳಿತು ಬೀಸಣಿಗೆಯಿಂದ ಗಾಳಿ ಹಾಕುತ್ತಿದ್ದ. ಹೊರಗೆ ಬಿಸಿಲು ರಣರಣ ಉರಿಯುತ್ತಿತ್ತು.

"ಮಣಿ–ಹೋಗಿ ಸ್ವಲ್ಪ ಮಲಗಬಾರದೆ. ರಾತ್ರಿ ಎಲ್ಲಾ ನಿದ್ರೆ ಇಲ್ಲ" ತಾಯಿ ಹೇಳಿದರು.

"ಹಾಗ್ಮಾಡು ಮಣಿ; ಅಮ್ಮನ ಹತ್ತಿರ ನಾನಿರ್ತೇನೆ...." ವಿಶ್ವನಾಥ ಹೇಳಿದ.

ಮಣಿ ರಸ ಕುಡಿಸಿ ಹೆಚ್ಚು ಮಾತಾಡದೆ ಎದ್ದು ಹೊರಗೆ ಹೋದಳು. ಆಕೆ ಕ್ಷೀಣಿಸಿ ಹೋಗಿದ್ದ ತಮ್ಮ ಕೈಯಿಂದ ವಿಶ್ವನಾಥನ ಕೈಯನ್ನು ತೆಗೆದು ಹಣೆಯ ಮೇಲಿಟ್ಟುಕೊಂಡು, ಮೃದುವಾಗಿ"ರಾಜಣ್ಣ...."ಎಂದು ಕರೆದರು.

"ಏನಮ್ಮ....?"

ಜ್ವರದ ತಾಪದಿಂದ ಸುಡುತ್ತಿದ್ದ ಅವರ ಹಣೆಯ ಮೇಲೆ ಸವರುತ್ತ ವಿಶ್ವನಾಥ ಕೇಳಿದ.

"ಅಪ್ಪ....ನೀನು ನನ್ನ ಮಗನಾಗಬೇಕಿತ್ತು. ಯಾವ ಜನ್ಮದ ಬಾಂಧವ್ಯವೋ....ಇಲ್ಲದಿದ್ದರೆ ಹೀಗಿರುತ್ತಿರಲಿಲ್ಲ...."

"ಈಗ ಮಗನಾಗಿಯೇ ಇದ್ದೀನಲ್ಲಮ್ಮ....!"

"ಹೌದು....ಮಗು. ಆದರೆ ಮನುಷ್ಯರಿಗೆ ಆಸೆ ಹೆಚ್ಚು. ಮಗನಂತೆ ಇದೀಯೆ ನಿಜ.. ಆದರೆ ಮಣಿಯನ್ನು ನಿನಗೊಪ್ಪಿಸಿ....ನಿನ್ನನ್ನು ಅಳಿಯನನ್ನಾಗಿ ಮಾಡಿ–ನಿಮ್ಮಿಬ್ಬರನ್ನೂ ಕಣ್ತುಂಬ ನೋಡಿ ಕಣ್ಣು ಮುಚ್ಚಬೇಕೆಂದಿದೇನೆ....ನನ್ನ ಆಸೆ ನಡಿಸಿಕೊಡು ರಾಜಣ್ಣ...."

ವಿಶ್ವನಾಥ ಆ ಮಾತಿಗೆ ಬೆಚ್ಚಿ ಹಿಂದೆ ಸರಿದ. ಮೃತ್ಯುಶಯ್ಯೆಯಲ್ಲಿ ಮಲಗಿ ಅವರಾಡುತ್ತಿದ್ದ ಮಾತು ಅವನಿಗೆ ಅಂತಹುದೇ ಬೇರೊಂದು ನೆನಪನ್ನು ತಂದಿತು. ಈ ಸಂದರ್ಭವನ್ನು ಎದುರಿಸಬೇಕಾದ ಸಮಯವು ಬರುವುದೆಂದು ತಿಳಿದು ಅದಕ್ಕೆ ಸಿದ್ಧನಾಗಿದ್ದರೂ, ಅದು ಈ ರೀತಿ ಅಸಹಾಯರಾಗಿದ್ದ ಅವರಿಂದ ಬಂದಾಗ ಅದಕ್ಕೆ ಎದುರಾಡಲು ತೋರದೆ ತಲ್ಲಣಗೊಂಡಿತ್ತು ಅವನ ಮನಸ್ಸು. ಹೃದಯದ ಉದ್ವೇಗದಿಂದ ಮಾತು ಹೊರಡದಂತಾಗಿ, ಮುಖದಲ್ಲಿ ಬೆವರು ಹರಿಯುತ್ತಿತ್ತು.

ಆಕೆಗೆ ಅವನ ಕಳವಳ ತಿಳಿಯದೆ ಇರಲಿಲ್ಲ. ತಮ್ಮ ಹಿಡಿತವನ್ನು ಭದ್ರಮಾಡಿ—

"ಯಾಕೆ ಮಗು....ಅಸಮ್ಮತವೇ...." ಎಂದು ಕಷ್ಟದಿಂದ ಕೇಳಿದರು.

ವಿಶ್ವನಾಥ ಮೆಲ್ಲಗೆ ಅವರ ಹಿಡಿತದಿಂದ ಕೈ ಬಿಡಿಸಿಕೊಂಡು—

"ಅಮ್ಮ ನನ್ನನ್ನು ವಾಗ್ದಾನದಿಂದ ಬಂಧಿಸುವಿಯಾ....?"

ಎಂದು ಕೇಳಿದ. ಅವನ ವಾಣಿಯಲ್ಲಿ ದೀನತೆ ಒಡಮೂಡಿತ್ತು.

"ಇಲ್ಲ....ಮಗು. ಇಲ್ಲಿ ಯಾವ ಬಗೆಯ ಬಂಧನವಾಗಲೀ.... ನಿರ್ಬಂಧವಾಗಲೀ ಇಲ್ಲ. ನೀನು ಸಂತೋಷದಿಂದ ಒಪ್ಪಿಗೆ ಕೊಡುವಂತಿದ್ದರೆ ಆಗಬಹುದು! ಆದರೆ ಈ ಪಾಪಿಯ ಹಣೆಯಲ್ಲಿ ಅಷ್ಟು ಸುಖ ತಾನೇ ಎಲ್ಲಿ ಬರೆದಿದೆ....?"

ಆಕೆ ಕಷ್ಟದಿಂದ ನುಡಿದರು. ಅವರ ಕಣ್ಣಿನಲ್ಲಿ ನೀರು ತುಂಬಿ ಧ್ವನಿ ಭಾರವಾಗುತ್ತ ಬಂತು.

"ಮಣಿ ಒಂದು ರತ್ನ ಅಮ್ಮ. ಅದನ್ನು ಕೂರಿಸಲು ಚಿನ್ನದ ಗೂಡು ಬೇಕು. ಅವಳಿಗೆ ವರ ಸಿಕ್ಕುವುದು ಕಷ್ಟವೇ? ಸೊಗಸಾದ ಗಂಡು ಹುಡುಕಿ ತರುತ್ತೇನೆ. ಭರ್ಜರಿಯಾಗಿ ಮದುವೆ ಮಾಡಿ ಬಿಡೋಣ!"

ವಿಶ್ವನಾಥ ನಗುತ್ತ ಮಾತು ಹಾರಿಸಲು ಪ್ರಯತ್ನಿಸಿದ. ಆಕೆ ಮಾತಾಡಲಿಲ್ಲ. ಕಣ್ಣಿನ ಅಂಚಿನಲ್ಲಿ ನಿಂತಿದ್ದ ನೀರು ಕೋಡಿಯಾಗಿ ಹರಿಯಿತು.

"ಅಮ್ಮ....ನೀನೇ ಯೋಚಿಸು. ನಾನು ಮಣಿಗೆ ತಕ್ಕ ವರನೇ.....? ನನ್ನ ಬಾಳು ನೀನೇ ನೋಡಿದೀಯೆ....ಇಂದು ಇಲ್ಲಿ ನಾಳೆ ಎಲ್ಲೋ....? ಯುದ್ಧದ ಕಾವು ಏರುತ್ತಿದೆ. ಯಾವ ಘಳಿಗೆಗೆ ಎಲ್ಲಿ ಹೋಗಬೇಕೋ ಗೊತ್ತಿಲ್ಲ. ಸಧ್ಯದಲ್ಲೇ ನಾನು ದೂರದೇಶ ಹೋಗುವ ಸಂಭವವಿದೆ. ಅಲ್ಲಿಗೆ ಹೊರಡುವ ಮೊದಲು ಬರಲು ಆಗುವುದೋ ಇಲ್ಲವೋ ತಿಳಿಯದು. ನಿನ್ನನ್ನು ನೋಡುವುದು ಇದೇ ಕೊನೆಯಾಗಬಹುದು. ಹೀಗಿರುವಾಗ ನನ್ನ ಕೊರಳಿಗೆ ಮಣಿಯನ್ನು ಕಟ್ಟಲು ಮನಸ್ಸಾಗುವುದೇನಮ್ಮ....?"

ವಿಶ್ವನಾಥ ಕಣ್ಣೀರನ್ನು ಒರಸುತ್ತ ಕೇಳಿದ.

ಅವರು ಆಗಲೂ ಸುಮ್ಮನಿದ್ದರು. ಅವರ ಮೌನ ಮಾತಿಗಿಂತ ಹರಿತವಾಗಿತ್ತು. ಅದನ್ನು ತಡೆಯಲಾರದೆ ವಿಶ್ವನಾಥನೇ ಪುನಃ ಕೇಳಿದ—

"ನನ್ನ ಮಾತಿನಿಂದ ಸಿಟ್ಟು ಬಂತೇನಮ್ಮ...."

"ಇಲ್ಲಪ್ಪ....ಸಿಟ್ಟೇಕೆ....? ಮುಖ್ಯ ಆ ಹುಡುಗಿ ದುರ್ದೈವಿ....!"

ಇಷ್ಟು ಹೇಳಿ ಆಕೆ ಕಣ್ಣು ಮುಚ್ಚಿಕೊಂಡು ಗೋಡೆಯ ಕಡೆಗೆ ತಿರುಗಿದರು. ವಿಶ್ವನಾಥ ಸ್ವಲ್ಪ ಹೊತ್ತು ಗಾಳಿ ಹಾಕುತ್ತಿದ್ದವನು ಅವರಿಗೆ ನಿದ್ರೆ ಬಂದಿರಬಹುದೆಂದು ಮೆಲ್ಲಗೆ ಎದ್ದು ಹೊರಗೆ ಹೋದ.

ಮೂರು ದಿವಸ ಅಲ್ಲಿದ್ದು ವಿಶ್ವನಾಥ ಊರಿಗೆ ಹೊರಟ. ಆ ಅವಕಾಶ ದಲ್ಲಿ ರಾಯರಿಗೂ ತಾನು ಸಮುದ್ರದಾಚೆ ಹೋಗಬಹುದಾದ ಸಂದರ್ಭ

ವನ್ನು ತಿಳಿಸಿದ್ದ. ಎರಡು ದಿವಸ ಹುಡುಗರನ್ನೆಲ್ಲಾ ಕಟ್ಟಿಕೊಂಡು, ಬೆಟ್ಟ, ಬೃಂದಾವನ ಎಲ್ಲಾ ತಿರುಗಿ ಬಂದಾಯಿತು. ಹೊರಡುವಾಗ ರಾಯರಿಗೆ ನಮಸ್ಕರಿಸಿ ಅವರ ಅಪ್ಪಣೆ ಪಡೆದ. ಅಮ್ಮನಿಗೂ ಹೇಳಿ ಯಾಯಿತು. ಅವರ ಕೋಣೆಯಿಂದ ಹೊರಗೆ ಬರುವಾಗ ಎದುರಿಗೆ ಮಣಿ ಬಂದಳು. ವಿಶ್ವನಾಥ ಅವಳನ್ನುದ್ದೇಶಿಸಿ—

"ನಾನು ಹೊರಡಲೇ....ಮಣಿ....?" ಎಂದು ಕೇಳಿದ.

ಕೈಲಿ ತಾಯಿಗಾಗಿ ತಂದಿದ್ದ ಬಿಸಿ ಗಂಜಿ ಕುದಿಯುತ್ತಿತ್ತು. ಎದೆಯ ಕುದಿಯೂ ಅದಕ್ಕೆ ಕಡಿಮೆಯಾಗಿರಲಿಲ್ಲ. ಮಣಿ ಮಾತಾಡಲಿಲ್ಲ. ತಲೆ ಅಲ್ಲಾಡಿಸಿ ಅನುಮತಿ ಸೂಚಿಸಿದಳು. ಆಗಿನ ಅವಳ ನೋಟ ಅವ ನನ್ನು ಒಂದು ಕ್ಷಣ ಹಿಡಿದು ನಿಲ್ಲಿಸಿತು. ಅದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನ ಪಟ್ಟ. ಬೇಗ ಬಗೆಹರಿಯಲಿಲ್ಲ. ಆ ನೋಟ ಎಲ್ಲೊ ನೋಡಿ ದಂತಿತ್ತು. ಎಲ್ಲಿ ...?ಯಾವಾಗ....?ನೆನಪಿಗೆ ಬರಲೊಲ್ಲದು....? ವಿಶ್ವನಾಥ ಅದನ್ನು ಯೋಚಿಸುತ್ತಲೇ ಕಂಕುಳಲ್ಲಿ ಟೋಪಿಯನ್ನು ಹಿಡಿದು, ಭಾರ ವಾದ ಹೆಜ್ಜೆಯನ್ನು ಹಾಕುತ್ತ ತನಗಾಗಿ ಕಾದಿದ್ದ ಗಾಡಿಯನ್ನು ಹತ್ತಿದ.

ದಾರಿಯಲ್ಲೂ ಅದೇ ಪ್ರಶ್ನೆ ಅವನನ್ನು ಕಾಡುತ್ತಿತ್ತು. ಅದನ್ನೇ ಯೋಚಿಸುತ್ತ ಕಣ್ಮುಚ್ಚಿ ಮಲಗಿದ್ದ. ಬಹಳ ದಿನದ ಹಿಂದೆ ಕೆಲವರು ಹುಡುಗರು ಆಟಕ್ಕಾಗಿ ಬಿಲ್ಲಿನಿಂದ ಹಕ್ಕಿಗಳಿಗೆ ಕವಣೆಯನ್ನು ಬೀರುತ್ತಿ ದ್ದಾಗ ಒಂದು ಪುಟ್ಟ ಮರಿಯ ಎದೆಗೆ ಏಟು ತಗಲಿ ಕೆಳಗೆ ಬಿತ್ತು. ಹುಡುಗರೆಲ್ಲಾ ಸುತ್ತ ನಿಂತಿದ್ದರು. ಆಗ ಅಕಸ್ಮಾತ್ ಆ ದಾರಿಯಲ್ಲಿ ಬಂದ ಅವನು ಅದನ್ನು ಎತ್ತಿ ತೊಡೆಯ ಮೇಲಿಟ್ಟು ಆ ಹುಡುಗರಿಂದಲೇ ನೀರನ್ನು ತರಿಸಿ ಅದಕ್ಕೆ ಸವರಿದಾಗ ಇದೇ ಬಗೆಯ ನೋಟವನ್ನು ಬೀ ರಿತ್ತು ಆ ಪುಟ್ಟ ಹಕ್ಕಿ! ಅದರ ನೆನಪಾದ ಕೂಡಲೇ ಬೆಚ್ಚಿ ಎದ್ದು ಕುಳಿತ ವಿಶ್ವನಾಥ. ಅದಕ್ಕೂ ಇದಕ್ಕೂ ಎಲ್ಲಿಯ ಹೋಲಿಕೆ ? ಎಂದು ಮನಸ್ಸನ್ನು ಸಮಾಧಾನಗೊಳಿಸಲು ಯತ್ನಿಸಿದ. ಅವನ ಮನಸ್ಸಿನಂತೆ ಏರಿಳಿತಗ ಳನ್ನು ಲೆಕ್ಕಿಸದೆ ರೈಲು ಮುಂದೋಡುತ್ತಿತ್ತು.

ಪೂಜೆಯು ಆಗತಾನೇ ಮುಗಿದಿತ್ತು. ಶಾಸ್ತ್ರಿಗಳು ಗೀತೆಯ ಪುಸ್ತಕವನ್ನು ಎರಡು ಸಲ ಕಣ್ಣಿಗೆ ಒತ್ತಿಕೊಂಡು, ಕನ್ನಡಕವನ್ನು ಒರಸಿ ಹಾಕಿಕೊಂಡು-ಪಾರಾಯಣವನ್ನು ಆರಂಭಿಸಿದ್ದರು. ಅದು ಅವರ ನಿತ್ಯ ಪದ್ಧತಿ. ಆ ಹೊತ್ತಿನಲ್ಲಿ ಯಾರೂ ಅವರನ್ನು ಮಾತಾಡಿಸಿ ತೊಂದರೆಪಡಿಸುವ ಗೋಜಿಗೆ ಹೋಗುತ್ತಿರಲಿಲ್ಲ. ಆದರೆ ಅವರ ಮೊಮ್ಮಗ ಹರಿಗೆ ಆ ಕಟ್ಟಳೆಯೇನೂ ಇಲ್ಲ. ಅವನು ಅಂಚೆಯವನು ಕೊಟ್ಟ ಕಾಗದವನ್ನು ತೆಗೆದುಕೊಂಡು ನೆಟ್ಟಗೆ ದೇವರ ಮನೆಗೇ ಹೋಗಿ ಅವರೆದುರಿಗೆ ಹಿಡಿದು—

"ತಾತ....ಕಾಗದ....!" ಎಂದು ಹೇಳಿದ.

"ಹೋಗೋ....ತುಂಟ. ಇಲ್ಲೇಕೆ ಬಂದೆ ಮೈಲಿಗೆಯಲ್ಲಿ....? ಹೊರಗಿಡು—ಆ ಮೇಲೆ ನೋಡ್ತೇನೆ...."

ಹುಡುಗ ಹೊರಟ. ಅವನು ತಿರುಗಿದಾಗ ಕಾಗದದ ಮೇಲಿನ ಅಕ್ಷರ ಗಳು ಕಣ್ಣಿಗೆ ಬೀಳಲು ಶಾಸ್ತ್ರಿಗಳು ಕೈಲಿದ್ದ ಪುಸ್ತಕವನ್ನು ಕೆಳಗಿಟ್ಟು—

"ಇಲ್ಲಿ ಕೊಡೋ—ನೋಡೋಣ...." ಎಂದರು.

ಹುಡುಗ ಕಾಗದವನ್ನು ಅವರ ಮುಂದಿಟ್ಟು ಹೊರಕ್ಕೆ ಓಡಿದ. ಶಾಸ್ತ್ರಿಗಳು ಅದನ್ನು ಎತ್ತಿಕೊಂಡು ಲಕ್ಕೋಟೆಯನ್ನು ಬಿಡಿಸಿ ಕಾಗದ ವನ್ನು ಓದಿದವರೇ ಮಗಳನ್ನು ಕೂಗಿದರು—

"ಅಮ್ಮಯ್ಯ....ತಾಯೀ....ಅಮ್ಮಯ್ಯ, ಬಾಮ್ಮ—ಇಲ್ಲಿ...."

ಶಾಸ್ತ್ರಿಗಳ ಧ್ವನಿಯಲ್ಲಿ ಆತುರತೆ ಇತ್ತು; ಕಾತರತೆ ಇತ್ತು! ಅದನ್ನು ಕೇಳಿ ಅಮ್ಮಯ್ಯ ಒಳಗಡೆ ಏನೋ ಮಾಡುತ್ತಿದ್ದವಳು ಗಾಬರಿಯಿಂದ ಬಂದು—

"ಏನಪ್ಪ....ಏನಾಯ್ತು....?" ಎಂದು ಕೇಳಿದಳು.

"ಮೀನಾ ಬರ್‍ತಾಳಂತೆ! ಇಲ್ಲಿ ನೋಡು ಕಾಗದ!!"

"ಮೀನ ಬರ್‍ತಾಳೆಯೇ....? ನಿಜವಾಗಿಯೂ ಅಪ್ಪ! ಯಾವಾಗ ಬರ್‍ತಾಳೆ....? ಯಾರ್‍ಯಾರು ಬರ್‍ತಾರಂತೆ....?"

"ಎಲ್ಲರೂ ಬರ್‍ತಾರಂತೆ ಈಗಲೇ ಹನ್ನೊಂದು ಗಂಟೆ ಗಾಡಿಯಲ್ಲಿ ಬರಬಹುದು. ರೈಲು ಸರಿಯಾದ ಹೊತ್ತಿಗೆ ಬಂದರೆ, ಇನ್ನೊಂದು ಗಂಟೆ ಒಳಗಾಗಿ ಅವರೆಲ್ಲ ಇಲ್ಲಿರುತ್ತಾರೆ. ಏನು ಕಾರಣವೋ! ನಿನ್ನೆ ಬರಬೇಕಾಗಿದ್ದ ಕಾಗದ ಈಗ ಬಂದಿದೆ....!"

ಶಾಸ್ತ್ರಿಗಳು ಲಕ್ಕೋಟೆಯನ್ನು ತಿರುಗಿಸಿ ಅದರ ಮೇಲಿದ್ದ ತಾರೀಖನ್ನು ಪರೀಕ್ಷಿಸುತ್ತಿದ್ದರು. ಅಮ್ಮಯ್ಯ ಆ ಕಡೆ ನೋಡುತ್ತಿರಲಿಲ್ಲ. ಅವಳ ನೋಟ ವರ್ಷಗಳನ್ನು ದಾಟಿ ಗತಕಾಲದ ಕಡೆಗೆ ಹೋಗಿತ್ತು. ತಂಗಿಯನ್ನು ಕಾಣುವೆನೆಂಬ ಸಂತೋಷದಲ್ಲಿ ಕೈಕಾಲುಗಳ ಶಕ್ತಿಯೇ ಒಂದು ಕ್ಷಣ ಉಡುಗಿಹೋದಂತಿತ್ತು.

"ಅಪ್ಪ—ಮೀನ ಹೊರಟು ಹೋಗಿ ಎಂಟು ವರ್ಷದ ಮೇಲಾಯಿತು ! ಈಗ ಹೇಗಿದ್ದಾಳೋ....?"

ಅಮ್ಮಯ್ಯನ ಕಣ್ಣುಗಳಲ್ಲಿ ನೀರು ತುಂಬಿತು.

"ಹೌದು ತಾಯಿ ...ಅವರ ತಾಯಿ ಹೋದ ಕೂಡಲೇ ಆ ಕಡೆ ಹೋದವರು ಒಂದುಸಲವಾದರೂ ಬರಲಿಲ್ಲ ಅವನ ಮನಸ್ಸಿಗೆ ಏನು ಬೇಸರವಾಗಿತ್ತೋ....! ಅಲ್ಲೇ ನಿಂತುಬಿಟ್ಟ. ಕೊನೆಗೆ ರಜಾದಿನಗಳಲ್ಲಿ ಕೂಡ ಬರಲಿಲ್ಲ. ಏನೋ—ರಾಮಚಂದ್ರ ಈಗಲಾದರೂ ಈ ಕಡೆ ಬರುವ ಯೋಚನೆ ಮಾಡಿದನಲ್ಲ; ಅಷ್ಟೇ ಸಂತೋಷ! ಮಗು ಅಲ್ಲಾದರೂ ಸುಖವಾಗಿದಾಳಲ್ಲ! ನಾನು ನೋಡಿ ಮಾಡುವ ಉದ್ಧಾರವೇನೆಂದು ಸಮಾಧಾನ ಮಾಡಿಕೊಳ್ಳುತ್ತೇನೆ ಆದರೆ ನಿನಗೆ....ತಾಯಿಯಿಲ್ಲದ ಮಗುವನ್ನು ತಾಯಿ ಇಲ್ಲವೆಂಬ ಕೊರತೆ ತೋರದಂತೆ ಸಾಕಿ ದೊಡ್ಡದು ಮಾಡಿದೆ......ನಿನಗೆ ಹಾಗೆನಿಸುವುದೆ....?"

ಮಾತಾಡುತ್ತ ಶಾಸ್ತ್ರಿಗಳ ಕಣ್ಣಿನಲ್ಲೂ ನೀರೂರಿತು. ಅವರು ಕನ್ನಡಕವನ್ನು ತೆಗೆದು ವಸ್ತ್ರದ ಕೊನೆಯಿಂದ ಕಣ್ಣೊರಸಿಕೊಳ್ಳುತ್ತ—

"ಏನು ತಾಯಿ, ಏನಾದರೂ ಫಲಾರದ ಸಿದ್ಧತೆ ಮಾಡು. ಆಯಾಸಪಟ್ಟು ಬರುತ್ತಾರೆ. ಬಂದು ಸ್ನಾನಮಾಡಿ ಊಟವಾಗುವ ಹೊತ್ತಿಗೆ ಹೊತ್ತಾಗುತ್ತೆ. ಸಾಮಾನುಗಳು ಏನು ಬೇಕೋ ನೋಡಿ ಹೇಳಮ್ಮ." ಎಂದರು.

"ಅದೆಲ್ಲಾ ನಾನು ನೋಡ್ಕೊತೀನೆ. ನೀನು ಪಾರಾಯಣಮಾಡಿ ಮುಗಿಸಪ್ಪ. ಚಂದು ಬರುವುದು ಎಷ್ಟು ಹೊತ್ತಾಗುತ್ತೋ ಕಾಣೆ. ಹೇಳಿಕಳಿಸಲು ಯಾರೂ ಇಲ್ಲ.....!"

"ಅತ್ತೆ....ಅಣ್ಣಾ ಬಂದ....!"

ಹರಿ ಕೈ ತಟ್ಟಿ ಕೂಗುತ್ತ ಬಂದ.

"ಬಂದನೇ....! ಚಂದು–ಇದೇನು ಇಷ್ಟು ಬೇಗ ಬಂದೆ. ನಾನು ನಿನಗೆ ಯಾರ ಕೈಲಿ ಹೇಳಿ ಕಳಿಸಲಿ ಎಂತ ಯೋಚನೆ ಮಾಡುತ್ತಿದ್ದೆ, "ಕಣ್ಣರಿಯದಿದ್ದರೆ ಕರಳು ಅರಿಯದೆ!" ಎಂದು ಅಮ್ಮ ಹೇಳುತ್ತಿದ್ದ ಹಾಗೆ—ನಿನಗೂ ಗೊತ್ತಾಯಿತೋ ಅಂತೀನಿ....! ಸೀತ....ಚಂದು ಬಂದ ಕಾಲಿಗೆ ನೀರು ಕೊಡಮ್ಮ."

"ಏನಕ್ಕ....ಅದು....?"

"ಮೀನ ಬರ್ತಾಳಂತೆ....!"

"ಯಾವಾಗ... ?"

"ಈಗ. ಕಾಗದ ಈಗತಾನೇ ಬಂತು. ಮೀನ ನಿನ್ನ ಮದುವೆಗೆ ಸಹ ಬರಲಿಲ್ಲ; ನಿನ್ನ ಮಗನನ್ನು ನೋಡಕ್ಕಾದರೂ ಬರ್ತಾಳಲ್ಲ....! ಲೋ ತುಂಟ! ನೋಡು. ನಿಮ್ಮತ್ತೆ ಬರ್ತಾಳೆ."

ಅಮ್ಮಯ್ಯ ಮಗುವನ್ನೆತ್ತಿಕೊಂಡು ಲೊಟಲೊಟನೆ ಮುದ್ದಿಟ್ಟಳು. ಅವಳ ಸಂತೋಷ ಮುಚ್ಚಿಡುವಂತಿರಲಿಲ್ಲ. ಯಾವ ಕೆಲಸವನ್ನೂ ಸ್ಥಿರವಾಗಿ ಮಾಡುವ ಸ್ಥಿತಿಯಲ್ಲಿರಲಿಲ್ಲ ಅವಳ ಮನಸ್ಸು. ಒಂದು ಸಲ ಅಡಿಗೆ ಮನೆಗೆ ಹೋಗಿ ಕೆಲಸ ಮಾಡುವಳು—ಕೂಡಲೇ ಹೊರಗೆ ಬಂದು ಮನೆಯನ್ನು ಓರಣ ಮಾಡುವ ಕೆಲಸದಲ್ಲಿ ಅಣ್ಣನಿಗೆ ನೆರವಾಗುವಳು!

ಆ ದಿನ ಶಾಸ್ತ್ರಿಗಳಿಗೂ ಪಾರಾಯಣ ಜಿತವಾಗಿ ನಡೆಯಲಿಲ್ಲ. ಮಗಳ ಸಡಗರವನ್ನು ನೋಡಿ ಅವರಿಗೆ ಸಂತೋಷವೂ, ದುಃಖವೂ ಕೂಡಿಯೇ ಆಗುತ್ತಿತ್ತು.

"ಇಂಥಾ ಹುಡುಗಿ ಸಂತೋಷವಾಗಿ ನಾಲ್ಕು ದಿನ ಸಂಸಾರ ಮಾಡಲಿಲ್ಲವಲ್ಲ–ಬೆಳೆಯುವ ಕುಡಿಯನ್ನು ಎಳೆಯದರಲ್ಲೇ ವಿಧಿ ಚಿವುಟಿ ಬಿಟ್ಟಿತಲ್ಲ!" ಎಂದು ಕೊಂಡರು.

ರಾಮಚಂದ್ರನಿಗಾಗಿ ಚಂದುವಿನ ಕೋಣೆಯನ್ನು ತೆರವು ಮಾಡಿದ್ದಾಯಿತು. ಚಂದು ಮದುವೆಯಲ್ಲೂ ಅವರು ಬರಬಹುದೆಂದು ಇದೇ ರೀತಿ ಸಿದ್ಧ ಮಾಡಿದ್ದರು ಆಗಲೂ ಇದೇ ಉತ್ಸಾಹದಿಂದಿದ್ದಳು ಅಮ್ಮಯ್ಯ. ಆದರೆ ಯಾರೂ ಬರಲಿಲ್ಲ. ಮನೆಯವರಾಗಿ ಓಡಾಡಲು ಇದ್ದವಳು ಅವಳೊಬ್ಬಳೇ ಹುಡುಗಿ. ಅವಳನ್ನು ಬಿಟ್ಟೇ ಎಲ್ಲಾ ಮಾಡಿದ್ದಾಯಿತು. ಯಾರೋ ನೆಂಟರು ಬಂದು ಓಡಾಡಿ ಕೆಲಸ ನಡೆಸಿದ್ದರು. ಅಮ್ಮಯ್ಯನಿಗೆ ಇದೆಲ್ಲದರಿಂದ ರಾಮಚಂದ್ರನ ಮೇಲೆ ಸ್ವಲ್ಪ ಅಸಮಾಧಾನವೇ ಇತ್ತು. ಮನೆಗೆ ಸೊಸೆ ಬಂದ ದಿನ ಕೂಡ ಲಕ್ಷಣವಾಗಿ ಕುಂಕುಮ ಇಟ್ಟು ಕರೆಯುವವರು ಒಬ್ಬರಿಲ್ಲ. ಇದೇನು ಹಣೆಯ ಬರಹ—ಎಂದು ಅಮ್ಮಯ್ಯ ಕಣ್ಣೀರು ಹಾಕಿದ್ದಳು. ಮೀನಾ ಇವರ ಕಷ್ಟ ಸುಖಕ್ಕೆಲ್ಲಾ ಹೊರತಾಗಿ ದೂರ ಇದ್ದು ಬಿಟ್ಟಿದ್ದಳು. ಈಗ ಅದೆಲ್ಲಾ ನೆನಪಿಗೆ ಬಂದರೂ, ಅವೆಲ್ಲವನ್ನೂ ಮೀರಿ ಅವಳನ್ನು ಕಾಣುವ ಸಂತೋಷ ತಾನೇ ತಾನಾಗಿತ್ತು.

ಶಾಸ್ತ್ರಿಗಳು ಪಾರಾಯಣವನ್ನು ಮುಗಿಸಿ ಹೊರಗೆ ಬಂದು ಜಗುಲಿಯ ಮೇಲೆ ಕುಳಿತುಕೊಂಡರು. ಚಂದು ತಂಗಿಯನ್ನು ಎದುರುಗೊಳ್ಳಲು ಸ್ಟೇಷನ್ನಿಗೆ ಹೋದ. ಅಮ್ಮಯ್ಯ ಗಳಿಗೆಗೊಂದು ಸಲ ಬಾಗಿಲಿಗೆ ಬಂದು ಬಗ್ಗಿ ನೋಡುತ್ತ ಓಡಾಡುತ್ತಿದ್ದಳು. ಹೊತ್ತು ಬೇಗ ಕಳೆಯಿತು. ಗಾಡಿ ನಿಂತ ಕೂಡಲೇ ಮೀನಾಕ್ಷಿ ಕೆಳಗಿಳಿದುಬಂದು ತಂದೆಗೂ ಅಕ್ಕನಿಗೂ ನಮಸ್ಕಾರ ಮಾಡಿದಳು. ಅವಳ ಹಿಂದಿನಿಂದ ಇಂದಿರ ಬಂದಳು.

ಅಮ್ಮಯ್ಯ ಅವಳ ಕೈ ಹಿಡಿದುಕೊಂಡು—

"ಅಪ್ಪ—ಇಂದಿರ ನೋಡು, ಎಷ್ಟು ಬೆಳೆದಿದ್ದಾಳೆ. ಮೀನನ ಮದುವೆಯಲ್ಲಿ ಇನ್ನೂ ಪುಟ್ಟದಾಗಿ ಲಂಗ ಹಾಕಿಕೊಂಡು ಓಡಾಡುತ್ತಿದ್ದಳು....!" ಎಂದು ಹೇಳಿದಳು.

"ಹೌದು ತಾಯಿ, ಹುಡುಗಿ ಲಕ್ಷ್ಮಿಯಂತಿದ್ದಾಳೆ! ನಮಸ್ಕಾರ ಮಾಡುವೆಯಾ....? ಮಾಡು ತಾಯಿ; ಒಳ್ಳೆಯ ಗಂಡ ಸಿಕ್ಕಿ ಸೌಭಾಗ್ಯವತಿಯಾಗಿ ಬಾಳಮ್ಮ...."

ಮೀನಾಕ್ಷಿ ನಕ್ಕಳು. ಎಂದೂ ಯಾರ ಮುಂದೂ ಮಣಿಯದಿದ್ದ ಇಂದಿರ, ತಂದೆಯನ್ನು ನೋಡಿದ ಕೂಡಲೇ ಬದಲಾಯಿಸಿದ್ದನ್ನು ನೋಡಿ ಅವಳಿಗೆ ಆಶ್ಚರ್ಯವಾಗಿತ್ತು. ಶಾಸ್ತ್ರಿಗಳ ವರ್ಚಸ್ಸೇ ಅಂತಹುದಿತ್ತು—ಮುಖದಲ್ಲಿ ದೊಡ್ಡ ವಿಭೂತಿಯ ಪಟ್ಟಿ–ಕೊರಳಲ್ಲಿ ರುದ್ರಾಕ್ಷಿ, ಹೊದೆದಿದ್ದ ಕೆಂಪು ಶಾಲು–ಮುಖದಲ್ಲಿ ಎದ್ದು ಕಾಣುತ್ತಿದ್ದ ಪಾಂಡಿತ್ಯದ ಪ್ರತಿಭೆ! ಎಂಥವರನ್ನೂ ಬಗ್ಗುವಂತೆ ಮಾಡುತ್ತಿತ್ತು.

"ಮೀನಾ–ನೀನು ನಕ್ಕರೆ ನಿಮ್ಮ ತಾಯಿಯೇ ಎದುರಿಗೆ ನಿಂತಂತೆ ಆಗುತ್ತೆ. ನಮ್ಮ ತಂದೆ ಅವಳನ್ನು "ಮಗೂ–ಆ ಹುಡುಗಿ ಸಮುದ್ರ ದಂತೆ...." ಎಂದು ಹೇಳುತ್ತಿದ್ದರು. ಈಗ ನಿನ್ನ ನೋಡಿದರೆ ಆ ಮಾತು ನೆನಪಿಗೆ ಬರುತ್ತೆ. ಅದರಲ್ಲಿ ಎಷ್ಟು ಅರ್ಥವಿದೆ!"

ಶಾಸ್ತ್ರಿಗಳು ಆ ಮಾತು ಹೇಳಿದಾಗ ನಿಜವನ್ನೇ ನುಡಿದಿದ್ದರು ಅಂದು ಅವರು ಬೀಳ್ಕೊಟ್ಟ ಹುಡುಗಿ ಮೀನಾಕ್ಷಿ, ಇಂದು ದೊಡ್ಡವಳಾಗಿ ಗಂಭೀರೆಯಾಗಿದ್ದಳು. ಇಂದಿರನಿಗೆ ತಾಯಿಯಂತಾಗಿ, ಮುಖದಲ್ಲಿ ತಾಯ್ತನದ ಸ್ನೇಹ ಮಮತೆ ನೆಲಸಿತ್ತು. ಅವಳ ಪ್ರತಿಯೊಂದು ನಡೆ ನುಡಿಯಲ್ಲೂ ದೊಡ್ಡತನ ಕಾಣುತ್ತಿತ್ತು.

ಅಮ್ಮಯ್ಯ ತಂಗಿಯನ್ನಪ್ಪಿ–ತಲೆ ಸವರಿ, ಕೈ ಹಿಡಿದು ಒಳಗೆ ಕರ ತಂದಳು. ಶಾಸ್ತ್ರಿಗಳು ಹಿಂದಿನಿಂದ ಬಂದವರು—

"ರಾಮಚಂದ್ರ–ಎಲ್ಲಮ್ಮ....?" ಎಂದು ಕೇಳಿದರು.

"ಚಂದು ಜೊತೆ ನಡೆದುಕೊಂಡು ಬರುತ್ತಿದಾರೆ. ಅಕ್ಕ ಅತ್ತಿಗೆ ಎಲ್ಲಿ..?"

"ಬಾಮ್ಮ–ಸೀತ. ಒಳಗೇನು ಮಾಡ್ತೀ...."

"ಅತ್ತಿಗೆ–ಎಲ್ಲಿ ಮಗು ? ನಾನು ನೋಡಬೇಡವೇ..!"

"ಅತ್ತೆ ಬಂದಿದಾರೆ, ನೋಡು ಹರಿ. ಅವನಿಗೆ ನಾಚಿಕೆ. ನನ್ನ ಹಿಂದೆ ಅವಿತಿದಾನೆ.....!"

ಹರಿ ತಾಯಿಯ ಸೆರಗಿನಲ್ಲಿ ಮುಖಮುಚ್ಚಿಕೊಂಡಿದ್ದ. ಮೀನಾಕ್ಷಿ ಕರೆದಾಗ ಕೂಡಲೇ ಅವಳ ಬಳಿ ಬರದಿದ್ದರೂ, ಅವಳು ಕೊಟ್ಟ ತಿಂಡಿ, ಹಣ್ಣು– ನಾಚಿಕೆಯನ್ನು ದೂರಮಾಡಿತು.

ಆ ವೇಳೆಗೆ ರಾಮುಚಂದ್ರನೂ ಚಂದುವೂ ಬಂದರು. ಯೋಗ
ಕ್ಷೇಮವಾದಮೇಲೆ ಎಲ್ಲರಿಗೂ ತಿಂಡಿ ಕಾಫಿ ಆಯಿತು. ಅವನನ್ನು
ನೋಡಿ ಶಾಸ್ತ್ರಿಗಳಿಗೆ ಆಶ್ಚರ್ಯವಾಯಿತು. ಮಗಳು ಅಳಿಯ ಇಬ್ಬರನ್ನೂ
ನೋಡಿ ವರ್ಷಗಳಾಗಿದ್ದರೂ ಅವರ ನೆನಪಿನಲ್ಲಿದ್ದುದು ತಾವು ಕಳಿಸಿ
ಕೊಟ್ಟಾಗ ಇದ್ದ ರೀತಿ. ರಾಮುಚಂದ್ರ ಗುರುತಿಸಲೂ ಸಾಧ್ಯವಿಲ್ಲದಂತೆ
ಮಾರ್ಪಟ್ಟಿದ್ದ. ಅವನನ್ನು ಜಂಭ, ಹೆಮ್ಮೆ, ಠೀವಿ ಎಲ್ಲವೂ ಆವರಿ
ಸಿದ್ದವು. ಅವನ ಬಗೆ ಶಾಸ್ತ್ರಿಗಳಿಗೆ ಒಂದು ಬಗೆಯ ಹೊಸ ಅನುಭವ
ವನ್ನು ತಂದಿತು.

ಸ್ವಲ್ಪ ಹೊತ್ತು ಮಾತಿನಲ್ಲಿ ಕಳೆಯಿತು ಅನೇಕ ವರ್ಷಗಳು
ಒಬ್ಬರನ್ನೊಬ್ಬರು ಅಗಲಿದ್ದ ಬಂಧುಗಳು ಒಂದೆಡೆ ಸೇರಿದಾಗ ಆಡ
ಬೇಕಾದ ಮಾತಿಗೆ ಅಭಾವವಿರುವುದಿಲ್ಲ. ಆದರೂ ಮೊದಮೊದಲು
ಮಾತಿನ ಸರಣಿ ಸುಲಭವಾಗಿ ಹರಿಯುವುದಿಲ್ಲ. ಸಂತೋಷದೊಡನೆ
ಒಂದು ಬಗೆಯ ಸಂಕೋಚ ಇದ್ದೇ ಇರುತ್ತದೆ. ಅಪರೂಪಕ್ಕೆ ತೌರಿಗೆ
ಬಂದ ಮೀನಾಕ್ಷಿಗೆ ಅದರ ಅನುಭವ ಆಯಿತು. ತಾನು ಹುಟ್ಟಿ ಬೆಳೆದ
ಮನೆಯಾದರೂ ಅದರಲ್ಲಿ ಆಗಿದ್ದ ಬದಲಾವಣೆಯಿಂದ ಹೊಸತನ ಕಂಡಿತ್ತು.
ಅಂದು ಹುಡುಗನಾಗಿ ಆಟದಲ್ಲೂ ಜಗಳದಲ್ಲೂ ಭಾಗಿಯಾಗಿದ್ದ ಚಂದು
ಇಂದು ಯಜಮಾನನಾಗಿ ಸಂಸಾರಿಯಾಗಿದಾನೆ. ಅತ್ತಿಗೆ ಬಂದಿದಾಳೆ.
ಪುಟ್ಟ ಹುಡುಗ ಬೇರೆ. ಮೀನಾಕ್ಷಿಗೆ ಎಲ್ಲ ಹೊಸತು! ಚಂದು ದೂರ
ನಿಂತು ಮರ್ಯಾದೆಯಿಂದ—

"ಸೌಖ್ಯವಾಗಿದೀಯ ಮೀನ.....?"

ಎಂದು ಕೇಳಿದಾಗ, ರಂಗನೂರಿನಲ್ಲಿ ಅವನೊಡನೆ ಕಳೆದ ಬಾಲ್ಯ
ದೂರದ ಕನಸಿನಂತೆ ತೋರಿ ಮನಸ್ಸಿಗೆ ವ್ಯಥೆಯಾಯಿತು. ಎಲ್ಲರಿಗೂ
ಹಾಗೇ....! ಕಾಲ ಕಳ್ಳನಂತೆ ಸರಿಯುವಾಗ ದಿನ ಹೋದುದು ಗೊತ್ತಾಗು
ವುದಿಲ್ಲ. ಮುಂದೆ ಇದ್ದಕ್ಕಿದ್ದಂತೆ ಒಂದು ದಿನ ಅದರ ನೆನಪಾದಾಗ ಆ
ಸುಖದ ಎಳೆತನ ಕಳೆದು ಹೋಯಿತೇ.....? ಎನ್ನಿಸದಿರದು. ಆದಲ್ಲದೆ

ದೀರ್ಘಕಾಲದ ಅಗಲಿಕೆ ಅವರಲ್ಲಿ ಅಂತರವನ್ನು ಹೆಚ್ಚಿಸಿತ್ತು ಎಂದರೂ ತಪ್ಪಾಗಲಾರದು.

ಮೀನಾಕ್ಷಿ ಊರಿಗೆ ಬಂದ ಸುದ್ದಿ ತಿಳಿದು ನೆರೆ ಹೊರೆಯ ಹೆಂಗಸರು ಅವಳನ್ನು ನೋಡಲು ಬಂದರು. ರಾಮಚಂದ್ರ ತಾನು ಹೊರಗೆ ತಿರುಗಾಡಿಕೊಂಡು ಬರುವುದಾಗಿ ಹೇಳಿ ಹೋದ. ಮೀನಾಕ್ಷಿ ನಗು ನಗುತ್ತ ಅವರ ಯೋಗಕ್ಷೇಮವನ್ನೆಲ್ಲಾ ವಿಚಾರಿಸಿ, ತಾನು ತಂದಿದ್ದ ಹಣ್ಣುಗಳನ್ನು ಕೊಟ್ಟು ಉಪಚರಿಸಿದಳು ಬಂದಿದ್ದವರು ಮೀನಾಕ್ಷಿಗೆ ದೊಡ್ಡತನ ಬಂದಿದ್ದರೂ, ಜಂಭ ಬಂದಿಲ್ಲವೆಂದು ಸಂತೋಷದಿಂದ ಮನೆಗಳಿಗೆ ಹೋದರು.

ಊಟದ ಹೊತ್ತಾಯಿತು ಸಾಮಾನ್ಯವಾಗಿ ಹೊತ್ತಾಗಿಯೇ ಊಟ ಮಾಡುವ ಶಾಸ್ತ್ರಿಗಳಿಗೂ ಊಟದವೇಳೆ ಮೀರಿತು. ಅವರು ಬೆಳಗ್ಗೆ ಕಾಫಿ ಕುಡಿಯುವವರಲ್ಲ. ಪೂಜೆ ಮಾಡಿ ಒಂದು ಉದ್ಧರಣೆ ತೀರ್ಥ ತಗೊಂಡಿದ್ದವರು. ರಾಮಚಂದ್ರ ಇನ್ನೂ ಮನೆಗೆ ಬಂದಿರಲಿಲ್ಲ. ಅಳಿಯನನ್ನು ಬಿಟ್ಟು ಊಟಮಾಡುವಂತಿಲ್ಲ. ಬಹಳ ಹೊತ್ತಾದುದನ್ನು ನೋಡಿ ಮೀನಾಕ್ಷಿ—

"ನೀವು ಊಟ ಮಾಡಿ ಅಪ್ಪ—ಅವರು ದಾರಿಯುದ್ದಕ್ಕೂ ತಿಂಡಿ ತಿಂದಿದಾರೆ. ನಿಧಾನವಾಗಿ ಊಟ ಮಾಡ್ತಾರೆ" ಎಂದಳು.

"ರಾಮಚಂದ್ರ ಎಲ್ಲಿ ಹೋದನೋ ಗೊತ್ತಾಗಲಿಲ್ಲ. ಇಲ್ಲಿ ಅವನ ಸ್ನೇಹಿತರು ಯಾರಿದಾರೆ? ತಿರುಗಾಡುತ್ತ ಇಷ್ಟುಹೊತ್ತು ಎಲ್ಲಿರಬಹುದು!"

"ಹಿಂದಿನ ಬೀದಿ ರಾಮರಾಯರಿಲ್ಲವೇ....? ಅವರ ತಮ್ಮ ನಮ್ಮೂರಿನಲ್ಲಿದಾರೆ. ರಾಮರಾಯರು ಒಂದು ಸಲ ಅಲ್ಲಿಗೆ ಬಂದಿದ್ದರು. ಆಗ ಪರಿಚಯ, ಅಲ್ಲಿಗೆ ಹೋಗಿರಬಹುದು."

"ಬಿಸಲಿನಲ್ಲಿ ಯಾಕೆ ಹೋದನೋ....? ಸಾಯಂಕಾಲವೋ ನಾಳೆಯೋ ಹೋದರೂ ಆಗ್ತಿತ್ತು!"

"ನಾಳೆ ಎಲ್ಲಿ ಹೋಗೋದು....? ಅವರು ರಾತ್ರಿಗೇ ಅವರ ಊರಿಗೆ ಹೊರಡುತ್ತಾರಂತೆ...."

"ಯಾಕೆ.... ಅಷ್ಟು ಅವಸರ. ಎರಡುದಿನ ಇದ್ದು ಆಮೇಲೆ ಹೋದ ರಾಗದೆ....?"

"ಇಲ್ಲಪ್ಪ. ಅಲ್ಲಿ ಸ್ವಲ್ಪ ಭೂಮಿ ಇದೆಯಲ್ಲ, ಅದರ ವಿಚಾರ ಏನೋ ಗಲಾಟೆಯಾಗಿದೆ. ನಿರ್ಧಾರ ಮಾಡುವಂತಿಲ್ಲ. ಅದರಿಂದಲೇ ಈಗ ಇದ್ದಕ್ಕಿದ್ದಂತೆ ಹೊರಟು ಬಂದದ್ದು."

"ಹಾಗೇನು....? ಹೋಗಲಿ ಬಿಡು. ಈ ನೆಪವಲ್ಲಾದರೂ ಬಂದಿರಲ್ಲ. ಅಷ್ಟೇ ಸಾಕು. ಅದೇನು ಗಲಾಟೆ....ನನಗೆ ಒಂದು ವಿಚಾರವೂ ತಿಳೀದು....."

"ಇನ್ನೇನಿಲ್ಲ.... ಅಲ್ಲಿ ಹಿರಿಯರದ್ದಾಗಿ ಒಂದು ಮನೆ, ಸ್ವಲ್ಪ ಜಮೀನು ಇದೆ. ನಾವು ದೂರ ಹೋದಾಗಿನಿಂದ ಅದನ್ನೆಲ್ಲಾ ಅಲ್ಲೇ ಇದ್ದ ಇವರ ಸಂಬಂಧಿ ಒಬ್ಬರು ನೋಡಿಕೊಳ್ಳುತ್ತಿದ್ದರು. ನಾವು ಅದನ್ನು ವಿಚಾರಿಸುತ್ತಲೂ ಇರಲಿಲ್ಲ. ಅವರು ಒಂದೂ ಸರಿಯಾಗಿ ನೋಡದೆ, ಕಂದಾಯವನ್ನೂ ಕಟ್ಟದೆ ಭೂಮಿ ಮಾರಾಟಕ್ಕೆ ಬಂದಿದೆಯಂತೆ. ಮನೆ ಯಲ್ಲಾ ಒಂದು ಕಡೆಯಿಂದ ಬೀಳುತ್ತ ಬಂದಿದೆಯಂತೆ. ಅಲ್ಲಿರುವವರೇ ಒಬ್ಬರು ಕಾಗದ ಬರೆದಿದ್ದರು...."

"ಹಾಗಾದರೆ..... ಈಗೇನು ಮಾಡೋದು... ?"

"ಅವರಿಗೆ ಅದನ್ನ ಮಾರೋದು ಇಷ್ಟವಿಲ್ಲ. ತಂದೆ ತಾಯಿ ಬಾಳಿ ಬದುಕಿದ ಜಾಗ, ಇರಬೇಕೆಂತ ಆಸೆ. ಮನೆ ಸರಿ ಮಾಡಿಸಿ ಯಾರಾ ದರೂ ಸರಿಯಾದವರಿಗೆ ದೀಪ ಹಚ್ಚಿಕೊಂಡು ಇರುವಂತೆಯೋ, ಅಥವಾ ಸ್ಕೂಲಿಗೋ ಕೊಟ್ಟು ಬಿಟ್ಟು, ಜಮೀನನ್ನು ಬೇರೆಯವರಿಗೆ ನೋಡಿ ಕೊಳ್ಳುವಂತೆ ಹೇಳಬೇಕೆಂದು ಮಾಡಿದಾರೆ."

"ಅದೇನೋ ಸರಿಯೆ...."

ಆ ವೇಳೆಗೆ ರಾಮರಾಯರ ಮನೆ ಹುಡುಗ ಬಂದು—

"ರಾಮಚಂದ್ರರಾಯರು ಅಲ್ಲೇ ಊಟಮಾಡ್ತಾರೆ. ತಿಳಿಸಿಬಿಡು ಎಂದರು....."

ಎಂದು ಹೇಳಿದ. ಶಾಸ್ತ್ರಿಗಳು "ಸಂತೋಷಪ್ಪ!"
ಎಂದು ಹೇಳಿ ಊಟಕ್ಕೆ ಎದ್ದರು. ಅವರ ಮುಖ ಚಿಕ್ಕದಾಗಿತ್ತು. ಚಂದುವಿಗೆ ಕೋಪದ ಮಾತು ನಾಲಿಗೆ ತುದಿಯ ವರೆಗೆ ಬಂದಿದ್ದರೂ, ಇಂದಿರ ಅಲ್ಲಿದ್ದುದನ್ನು ನೋಡಿ ಸುಮ್ಮನಾದ.

ಊಟವಾದಮೇಲೆ ಎಲೆ ಅಡಿಕೆ ಹಾಕಿಕೊಳ್ಳುತ್ತ ಎಲ್ಲರೂ ಪುನಃ ಮಾತಿಗೆ ಕುಳಿತರು. ಅಮ್ಮಯ್ಯನಿಗೆ ತಂಗಿಯನ್ನು ಅಲ್ಲಿನ ವಿಚಾರ ಎಷ್ಟು ಕೇಳಿದರೂ ತೃಪ್ತಿಯಿಲ್ಲ. ಶಾಸ್ತ್ರಿಗಳು—

"ಮೀನ ಸ್ವಲ್ಪ ಮಲಗಲಿ ಬಿಡು ತಾಯಿ. ಪ್ರಯಾಣ ಆಯಾಸವಾಗಿದೆ....!'' ಎಂದು ಹೇಳಬೇಕಾಯಿತು.

ಸಾಯಂಕಾಲ ರಾಮಚಂದ್ರ ಮನೆಗೆ ಬರುವ ಹೊತ್ತಿಗೆ ಸೀತ ಸೊಗಸಾಗಿ ರವೆ ಸಜ್ಜಿಗೆ, ಬೋಂಡಮಾಡಿ ಇಟ್ಟಿದ್ದಳು. ರಾಮಚಂದ್ರ ಚಂದುವಿನೊಡನೆ ತಿರುಗಾಡಲು ಹೊರಟ. ಹೆಂಡತಿಯನ್ನೂ ತಂಗಿಯನ್ನೂ ಅಲ್ಲಿ ಬಿಟ್ಟು ಆ ದಿನ ರಾತ್ರಿಯೇ ಸ್ವಂತ ಕೆಲಸದ ಮೇಲೆ ಊರಿಗೆ ಪ್ರಯಾಣ ಬೆಳಸಿದ. ಚಂದು ಅವನೊಡನೆ ಸ್ಟೇಷನ್ನಿಗೆ ಹೋಗಿ ಮನೆಗೆ ಬಂದಾಗಲೂ ಹಾಸಿಗೆಯ ಮೇಲೆ ಒಬ್ಬರ ಪಕ್ಕದಲ್ಲೊಬ್ಬರು ಮಲಗಿ ಅಮ್ಮಯ್ಯ ಮೀನಾಕ್ಷಿ, ಮಾತಾಡುತ್ತಲೇ ಇದ್ದರು. ಚಂದು ನಕ್ಕು—

"ಅಕ್ಕ–ಇವತ್ತು ಜಾಗರಣೆ ಮಾಡುವಿರೇನು....?'' ಎಂದು ಕೇಳಿದ.

ಅವನ ಮಾತಿಗೆ ಅಕ್ಕತಂಗಿಯರಿಬ್ಬರೂ ನಕ್ಕರು.

## ೭

ರಂಗನೂರಿನಲ್ಲಿ ಶಾಸ್ತ್ರಿಗಳಿಗೆ ಬಂಧುಗಳು ಅನೇಕರಿದ್ದರು. ಮೀನಾಕ್ಷಿಗೆ ಅವರುಗಳನ್ನೂ ಮತ್ತು ಸ್ನೇಹಿತರನ್ನೂ ಹೋಗಿ ನೋಡುವುದು, ಆಗಾಗ ಅವರುಗಳ ಮನೆಗೆ ಊಟ ತಿಂಡಿಗಳಿಗೆ ಹೋಗುವುದು–ಇದರಲ್ಲಿ ಹೆಚ್ಚು ಸಮಯವು ಕಳೆದು ಹೋಗುತ್ತಿತ್ತು. ಇಂದಿರ ಮೊದಲು ಎರಡು ದಿನ ಅತ್ತಿಗೆಯೊಡನೆ ಅವರ ಮನೆಗಳಿಗೆ ಹೋಗುತ್ತಿದ್ದಳು. ಆದರೆ ಅವಳಿಗೆ ಅಲ್ಲಿನ ಮಾತುಕತೆಗಳು ಸರಿಹೋಗುತ್ತಿರಲಿಲ್ಲ. ಅದ

ಲ್ಲದೆ ಅವರು ಹೆಚ್ಚಾಗಿ ಹಿಂದೆ ನಡೆದ ಅನೇಕ ವಿಚಾರಗಳನ್ನು ಕುರಿತು ಚರ್ಚೆ ಮಾಡುತ್ತಿದುದರಿಂದ ಅದು ಅರ್ಥವಾಗುತ್ತಲೂ ಇರಲಿಲ್ಲ. ಅವಳಿಗೆ ಮನೆಯಲ್ಲಿ ಬೇಸರ! ಅಮ್ಮಯ್ಯ, ಸೀತ ಇವರುಗಳು ಕೆಲಸ ಮಾಡುತ್ತಿದ್ದರೆ ಅವರ ಹಿಂದೆಯೇ ಓಡಾಡಿಕೊಂಡು ಹೊತ್ತುಕಳೆಯಬೇಕಾಗಿತ್ತು. ಅವಳು ಬಹಳ ಬೇಗ ಅವರೊಡನೆ ಸಲಿಗೆ ಮಾಡಿಕೊಂಡು ಎಲ್ಲ ಕೆಲಸಕ್ಕೂ ಕೈ ಹಾಕಲು ಹೋಗುತ್ತಿದ್ದಳು. ಆದರೆ ಅವರು ಅಳವನ್ನು ಯಾವ ಕೆಲಸವನ್ನೂ ಮಾಡಲು ಬಿಡುತ್ತಿರಲಿಲ್ಲ.

ತಿಳುವಳಿಕೆ ಬಂದಾಗಿನಿಂದ ಮುಂಬಯಿನ ನಾಗರೀಕ ಜೀವನ ವ್ಕೆಗೂಡಿದ್ದ ಅವಳಿಗೆ ರಂಗನೂರಿನ ಆಡಂಬರವಿಲ್ಲದ ಬಾಳ್ವೆ ಸಪ್ಪೆಯಾಗಿ ತೋರುತ್ತಿತ್ತು. ಮನೆಯಲ್ಲಿ ಹೊತ್ತು ಕಳೆಯುವುದೇ ದುಸ್ತರವಾಗಿತ್ತು. ಆದರೂ ಅಲ್ಲಿನ ನದಿಯ ತೀರದ ಸೊಗಸು ಅವಳನ್ನು ಸೆರೆಹಿಡಿದಿತ್ತು. ಅವಳು ದಿನದ ಹೆಚ್ಚು ಭಾಗವನ್ನು ಅಲ್ಲೇ ಕಳೆಯುತ್ತಿದ್ದಳು. ಬೆಳಗ್ಯೆ ನಸುಕಿನಲ್ಲೆದ್ದು ಅಮ್ಮಯ್ಯ ಹೊಳೆಗೆ ಹೋದಾಗ ಇಂದಿರ ಅವಳ ಜೊತೆ ತಾನೂ ಹೋಗುತ್ತಿದ್ದಳು. ಅಮ್ಮಯ್ಯ ಪಾತ್ರೆಗಳನ್ನು ತೊಳೆದು, ಬಟ್ಟೆ ಒಗೆದು ಸ್ನಾನ ಮಾಡುವವರೆಗೂ ಇಂದಿರ ನೀರಿನಲ್ಲಿ ಇರುತ್ತಿದ್ದಳು. ಅಮ್ಮಯ್ಯ ಮೊದಲು ಹುಡುಗಿಗೆ ತಣ್ಣೀರು ವಿರೋಧವಾದೀತು, ಕಾಲು ಜಾರೀತು—ಎಂದು ಹೆದರಿದಳು. ಆದರೆ ಒಂದೆರಡು ದಿನದಲ್ಲೇ ಅವಳಿಗೆ ಇಂದಿರ ಒಳ್ಳೆಯ ಈಜು ಕಲಿತವಳೆಂದು ಗೊತ್ತಾದಮೇಲೆ ಧೈರ್ಯ ಬಂದಿತ್ತು. ಹುಡುಗಿ ಮೀನಿನಂತೆ ನೀರಿನೊಡನೆ ಸರಸವಾಡುವುದನ್ನು ನೋಡಿ ಅಮ್ಮಯ್ಯನಿಗೆ ಆಶ್ಚರ್ಯವಾಗಿತ್ತು. ಇಂದಿರ ನೀರಿಗೆ ಇಳಿದಳೆಂದರೆ ಅವಳನ್ನು ಹೊರಕ್ಕೆ ಕರತರುವುದು ಕಷ್ಟವಾಗುತ್ತಿತ್ತು. ಹುಡುಗಿ ಎಷ್ಟು ಹೊತ್ತಾದರೂ ಬರಲೊಲ್ಲಳು. ಜನ ಹೊಳೆಗೆ ಬರುವ ಮೊದಲು ಮನೆ ಸೇರಬೇಕೆಂದು ಅಮ್ಮಯ್ಯನಿಗೆ ಆತುರ. ಅದಲ್ಲದೆ ರಂಗನೂರಿನಲ್ಲಿ ಹೆಣ್ಣು ಹುಡುಗಿ ಈಜುವುದೆಂದರೆ ಅದೊಂದು ಸೋಜಿಗದ ಸುದ್ದಿಯಾಗಿ, ಜನಗಳಿಗೆ ಮಾತಾಡಲು ಅವಕಾಶವಾಗುತ್ತದೆಯೆಂದು ಅಮ್ಮಯ್ಯ ತಿಳಿದಿದ್ದಳು. ಈಗಾಗಲೇ ಇಂದಿರ ತನ್ನ ನಡೆ ನುಡಿಗಳಿಂದ, ಮತ್ತು ಉಡಿಗೆ

ತೊಡಿಗೆಗಳಿಂದ ಅಲ್ಲಿನ ಹೆಂಗಸರಲ್ಲಿ ಕುತೂಹಲವನ್ನು ಕೆರಳಿಸಿದ್ದ ಅವಳು ಬೀದಿಯಲ್ಲಿ ಹೊರಟರೆ ಕಿಟಕಿಯಿಂದ ಬಾಗಿಲು ಸಂದಿನಿಂದ ಹತ್ತಾರು ಕಣ್ಣುಗಳು ಅವಳನ್ನು ಹಿಂಬಾಲಿಸುತ್ತಿದ್ದುವು.

ಹೀಗಾಗಿ ಬೇಗ ಬರಬೇಕೆಂಬ ಉದ್ವೇಗದಿಂದ ಅಮ್ಮಯ್ಯ ಬಹಳ ಮುಂಚೆಯೇ ಹೊರಟುಬಿಡುತ್ತಿದ್ದಳು. ಹೆಚ್ಚು ಜನ ಇರುವುದಿಲ್ಲ, ಇಬ್ಬರು ಹುಡುಗಿಯರೇ ಹೋಗುತ್ತಾರೆಂದು ಶಾಸ್ತ್ರಿಗಳೂ ಇವರ ಜೊತೆಗೇ ಸ್ನಾನಕ್ಕೆ ಹೊರಡುತ್ತಿದ್ದರು. ಅಮ್ಮಯ್ಯ ಬೇಗ ಕೆಲಸ ಮುಗಿಸಿ ಮನೆಗೆ ಹೊರಟರೆ ಇಂದಿರ ಒಂದೊಂದು ಸಲ ತಾನೂ ಅವಳ ಜೊತೆ ಮನೆಗೆ ಬರುತ್ತಿದ್ದಳು. ಕೆಲವು ವೇಳೆ ನೀರಿನಿಂದ ಹೊರಗೆ ಬಂದರೂ ತೀರವನ್ನು ಬಿಟ್ಟು ಹೋಗಲು ಮನಸ್ಸಿಲ್ಲದೆ ಅಲ್ಲೇ ಇದ್ದು, ಶಾಸ್ತ್ರಿಗಳ ಆಹ್ನೀಕವಾಗುವವರೆಗೂ ಸೋಪಾನದ ಮೇಲೆ ಕುಳಿತು ಬೆಳಗಿನ ಸೊಬಗನ್ನು ನೋಡುತ್ತಿದ್ದಳು ಸೂರ್ಯೋದಯದ ಹೊತ್ತಿಗೆ ಗುಂಪುಗುಂಪಾಗಿ, ಬರುವ ಜನರು ಸೂರ್ಯನಿಗೆ ಎದುರಾಗಿ ಕಣ್ಮುಚ್ಚಿ ಕುಳಿತ ಶಾಸ್ತ್ರಿಗಳನ್ನೂ ಅವರಿಗೆ ಸ್ವಲ್ಪ ದೂರದಲ್ಲಿ ಮುಂಜಾವಿನ ವನದ ಸಿರಿಯಂತೆ ಕಾಣುವ ಹುಡುಗಿಯನ್ನೂ ನೋಡಿ ಬೆರಗಾಗುತ್ತಿದ್ದರು.

ಶಾಸ್ತ್ರಿಗಳಿಗೆ ಅವಳೊಡನೆ ದಾರಿ ನಡೆದುದೇ ಗೊತ್ತಾಗುತ್ತಿರಲಿಲ್ಲ. ದಾರಿ ಉದ್ದಕ್ಕೂ, ಹೋಗುವಾಗ ಬರುವಾಗ, ಅವರೊಡನೆ ಅಲ್ಲಿಯ ವಿಚಾರಗಳನ್ನೂ—ತಮ್ಮ ಕಡೆಯ ಜನರ ನಡೆ ನುಡಿಗಳನ್ನೂ, ಇತರ ವಿಚಾರ ಚರ್ಚಿಸುತ್ತ—ಒಂದು ನಿಮಿಷವೂ ಬಿಡುವಿಲ್ಲದೆ ಮಾತಾಡುತ್ತಿದ್ದಳು. ಒಂದೊಂದು ದಿನ ಅವಳ ಬಲವಂತಕ್ಕಾಗಿ ಶಾಸ್ತ್ರಿಗಳು ಒದ್ದೆ ಬಟ್ಟೆಯನ್ನು ಕೈಲಿ ಹಿಡಿದುಕೊಂಡೇ ದೇವಸ್ಥಾನ—ನದಿಯ ತೋಪು, ಎಲ್ಲವನ್ನೂ ಸುತ್ತಿಕೊಂಡು ಎಷ್ಟೋ ಹೊತ್ತಿನ ಮೇಲೆ ಮನೆಗೆ ಬರುತ್ತಿದ್ದರು. ಅವಳ ವಿಚಾರವಾಗಿ ಮಗಳ ಕೈಲಿ ಹೇಳುತ್ತ—

"ಅಬ್ಬ—ಏನು ತಾಯಿ ಆ ಹುಡುಗಿ! ಈ ವಯಸ್ಸಿಗೆ ಎಷ್ಟು ತಿಳುವಳಿಕೆ.... ಆದರೂ... ನಮ್ಮ ಹರಿಗೂ ಅವಳಿಗೂ ಏನೂ ವ್ಯತ್ಯಾಸವಿಲ್ಲ ಮಕ್ಕಳಂತೆ ಸರಳ ಹೃದಯ...." ಎಂದರು.

ಮೀನಾಕ್ಷಿ ನಕ್ಕು—

"ಹೌದು-ಅಪ್ಪ ಅವಳ ಮಾತು ಕಠಿನ. ದೂರದಿಂದ ನೋಡುವವರಿಗೆ ಒಂದು ತೆರನಾಗಿ ಕಾಣಿಸುತ್ತಾಳೆ. ಅನೇಕರು ನನ್ನ ಹತ್ತಿರವೇ ಅವಳನ್ನು ಗಂಡುಬೀರಿ ಎಂದು ಆಕ್ಷೇಪಣೆ ಮಾಡಿದಾರೆ. ಆದರೆ ನಿಮ್ಮ ಮಾತು ನಿಜ; ಇಂದಿರ ಇನ್ನೂ ಮಗು!" ಎಂದಳು.

ಸಾಯಂಕಾಲ ಚಂದು ಕಛೇರಿಯಿಂದ ಬಂದಕೂಡಲೇ ಇಂದಿರ ಅವನನ್ನೂ ಸೀತನನ್ನೂ ಕರೆದುಕೊಂಡು ತಿರುಗಾಡಲು ಹೊರಡುತ್ತಿದ್ದಳು. ಒಂದಾನೊಂದು ಕಾಲದಲ್ಲಿ ರಾಜಧಾನಿಯಾಗಿ ಮೆರೆದು ಪಾಳುಬಿದ್ದಿದ್ದ ಆ ಊರಿನಲ್ಲಿ ನೋಡುವ ಸ್ಥಳಗಳು ಹೇರಳವಾಗಿದ್ದುವು. ಇಂದಿರ ಅವರಿಬ್ಬರನ್ನೂ ಒಂದುಕಡೆ ಬಿಟ್ಟು ನದಿಯ ದಡದಲ್ಲಿ ಕಲ್ಲುಗಳನ್ನು ಆರಿಸುತ್ತ ಹಕ್ಕಿಯಂತೆ ತಿರುಗುತ್ತಿದ್ದಳು. ಗಂಡನ ಜೊತೆ ಎಂದೂ ತಿರುಗುವುದಕ್ಕೆ ಹೋಗದಿದ್ದ ಸೀತಸಿಗೆ ಒಂದು ಹೊಸ ಅನುಭವ ಉಂಟಾಗಿ ಅವಳು ಹುಡುಗಿಯನ್ನು ಮನಸ್ಸಿನಲ್ಲೇ ಹರಸಿದಳು!

ಆ ದಿನ ಚಂದುವಿಗೆ ಕಛೇರಿಯಲ್ಲಿ ಹೆಚ್ಚು ಕೆಲಸ. ಯಾವುದೊ ಹಳೆಯ ದಫ್ತರವನ್ನು ನೋಡಬೇಕಾಗಿತ್ತು. ಅವನು ಸಂಜೆಯಾದರೂ ಇನ್ನೂ ಮನೆಗೆ ಬಂದಿರಲಿಲ್ಲ. ಸೀತಮ್ಮ ಕೊಡವನ್ನೂ ಪಾತ್ರೆಗಳನ್ನೂ ತೆಗೆದುಕೊಂಡು ಹೊಳೆಗೆ ಹೊರಟಳು ಇಂದಿರ ಮಾತಾಡುತ್ತ ಅವಳನ್ನು ಹಿಂಬಾಲಿಸಿದಳು. ಸೀತ ಪಾತ್ರೆಗಳನ್ನು ಬೆಳಗುತ್ತಿದ್ದಾಗ, ಇಂದಿರ ಕಾಲುಗಳನ್ನು ನೀರಿನಲ್ಲಿ ಇಟ್ಟುಕೊಂಡು—ಕೈಲಿ ನೀರನ್ನು ಕಲಕುತ್ತ, ಆಗಾಗ ಸಣ್ಣ ಕಲ್ಲುಗಳನ್ನು ತೆಗೆದು ಕಾಲುಬಳಿ ಬಂದ ಮೀನಿಗೆ ಎಸೆಯುತ್ತ ಆಟವಾಡುತ್ತಿದ್ದಳು. ಸೀತ ತಲೆಯಮೇಲೂ ಕಂಕುಳಲ್ಲೂ ನೀರುತುಂಬಿದ ಕೊಡಗಳನ್ನು ಇಟ್ಟುಕೊಂಡು ಸೋಪಾನದ ಮೆಟ್ಟಿಲುಗಳನ್ನು ಹತ್ತುತ್ತಿದ್ದಳು. ಇಂದಿರ ಬೇಡವೆಂದರೂ ಕೇಳದೆ ಕನ್ನಡಿಯಂತೆ ಹೊಳೆಯುತ್ತಿದ್ದ ಪಾತ್ರೆಗಳನ್ನು ತುಂಬಿದ್ದ ಬುಟ್ಟಿಯನ್ನು ತಲೆಯ ಮೇಲಿಟ್ಟುಕೊಂಡು, ಅದು ಎಲ್ಲಿ ಬಿದ್ದುಹೋಗುವುದೋ ಎಂಬ ಭಯ

ದಿಂದ ಅದನ್ನು ಭದ್ರವಾಗಿ ಎರಡು ಕೈಲೂ ಹಿಡಿದುಕೊಂಡು ಮೆಲ್ಲಗೆ ಬರುತ್ತಿದ್ದಳು. ಸೀತ ಕೈಬಿಟ್ಟು ನಡೆಯುವುದನ್ನು ನೋಡಿ ಅವಳಿಗೆ ಆಶ್ಚರ್ಯ !

"ಸೀತಮ್ಮ ನೀವು ಕೈಬಿಟ್ಟರೂ ಕೊಡ ಬೀಳೋದೇ ಇಲ್ಲ! ಹೀಗೆ "ಬ್ಯಾಲೆನ್ಸ್'' ಮಾಡೋದನ್ನು ಎಲ್ಲಿ ಕಲಿತಿರಿ....? ಸ್ವಲ್ಪ ಮೆಲ್ಲಗೆ ಹೆಜ್ಜೆ ಹಾಕಿ—ನಾನೂ ಕೈಬಿಟ್ಟು ನಡೀತೇನೆ.....!"

"ಕಲಿಯೋದೇನು ಬಂತು .. ? ಅಭ್ಯಾಸವಾದರೆ ತಾನೇ ಬರುತ್ತೆ.... ಮೊದಲು ನನಗೂ ಹಾಗೆ ಅನ್ನಿಸುತ್ತಿತ್ತು. ಈಗ ಇನ್ನೂ ದೊಡ್ಡ ಕೊಡ ವನ್ನು ಬೇಕಾದರೂ ಹೊರುತ್ತೇನೆ. ಬುಟ್ಟಿ ಇಲ್ಲಿ ಕೊಡಮ್ಮ–ನಿಮ್ಮ ಅಣ್ಣ ನಿಗೆ ತಿಳಿದರೆ ಏನೆಂದುಕೊಂಡಾರು....? ನಿನಗೇಕೆ ಈ ಹಣೆ ಬರಹ....?"

"ಇಲ್ಲ—ಸೀತಮ್ಮ. ನನಗೆ ಆಸೆಯಾಗುತ್ತೆ. ನಾನೇ ತರುತ್ತೇನೆ ಇಲ್ಲಿ ನೋಡಿ—ನಾನೂ ಕೈಬಿಟ್ಟೆ....!"

"ಇಂದಿರ–ಹೊತ್ತಾಯ್ತು ಕೊಡಮ್ಮ. ನೀನು ಇಷ್ಟು ನಿಧಾನ ವಾಗಿ ನಡೆದರೆ, ನಾವು ಮನೆ ಕಾಣುವ ಹೊತ್ತಿಗೆ ರಾತ್ರಿಯಾಗುತ್ತೆ. ಮಂದಿರದಲ್ಲಿ ಮಂಗಳಾರತಿ ಬೇರೆ ಇಟ್ಟುಕೊಂಡಿದ್ದಾರೆ; ಅದಲ್ಲದೆ ಒಲೆ ಮೇಲೆ ಬೇಳೆ ಹಾಕಿ ಬಂದಿದೇನೆ ತಳ ಹಿಡಿದು ಬಿಟ್ಟರೆ....?"

"ನೀವು ಮುಂದೆಹೋಗಿ—ನಾನು ಹೀಗೇ ಹೊತ್ತುಕೊಂಡು ಬಂದು ಮೀನನಿಗೆ ತೋರಿಸಬೇಕು. ಜೋರಾಗಿ ನಡೆದರೆ ಬುಟ್ಟಿ ಬಿದ್ದು ಹೋಗುತ್ತೆ. ನೀವು ಧೈರ್ಯವಾಗಿ ಹೊರಡಿ. ನನಗೆ ದಾರಿ ಗೊತ್ತಿದೆ....!"

ಸೀತಮ್ಮ ಮನಸ್ಸಿಲ್ಲದಿದ್ದರೂ ಯತ್ನವಿಲ್ಲದೆ ಮುಂದೆ ಹೆಜ್ಜೆ ಹಾಕಿ ದಳು. ಇಂದಿರ ಸುತ್ತಲೂ ನೋಡುತ್ತ ನಿಧಾನವಾಗಿ ನಡೆದು ಬರು ತ್ತಿದ್ದಳು. ಹೊಳೆಯ ಕಡೆಯಿಂದ ತಣ್ಣಗೆ ಗಾಳಿ ಬೀಸುತಿತ್ತು. ಅರ ಳಿಯ ಮರದ ಚಿಗುರು ಎಲೆಗಳು ಸಂಜೆಯ ಬಿಸಲಿನಲ್ಲಿ ಥಳಥಳನೆ ಹೊಳೆ ಯುತ್ತ ಬಳುಕುತ್ತಿದ್ದವು. ಕೊಯ್ಯುವವರ ಕೈಗೆ ಸಿಕ್ಕದೆ ಮರೆಯಲ್ಲಿ ಅವಿತಿದ್ದ ಪಾದರೀ ಹೂವುಗಳ ವಾಸನೆಯನ್ನು ಸುತ್ತಲೂ ಬೀರುತಿದ್ದುವು.

ಮಾವಿನ ಗಿಡದಲ್ಲಿ ಸಣ್ಣ ಹೀಚುಗಳು ನೇತಾಡುತ್ತಿದ್ದುವು. ಅವೆಲ್ಲವನ್ನೂ ನೋಡಿ ಇಂದಿರ,

"ಏನು ಸೊಗಸಾಗಿದೆ ಈ ನೋಟ....! ಧೂಳು ತುಂಬಿದ ಪಟ್ಟಣ ದಲ್ಲಿ ಈ ದೃಶ್ಯ ಎಲ್ಲಿ ಸಿಕ್ಕಬೇಕು?"

ಎಂದುಕೊಂಡಳು ಅವಳಿಗೆ ಅಲ್ಲಿಂದ ಹೊರಡಲು ಕಾಲೇ ಬರದು.

ಇಂದಿರ ಬಹಳ ಲಕ್ಷಣವಾದ ಹುಡುಗಿ. ಮರಗಳ ಸಂದಿನಿಂದ ತೂರಿ ಬರುತ್ತಿದ್ದ ಸೂರ್ಯನ ಕೊನೆಯ ಕಿರಣಗಳು ಅವಳ ಕೆನ್ನೆಗಳ ಮೇಲೂ, ಉಟ್ಟಿದ್ದ ಗುಲಾಬಿ ಬಣ್ಣದ ಸೀರೆಯ ಮೇಲೂ ಬಿದ್ದು—ಅದು ಇನ್ನೂ ಕೆಂಪಾಗಿ ಕಾಣುತ್ತ ಅದರ ಛಾಯೇ ಅವಳ ಮುಖದ ಮೇಲೂ ಬೀಳುತ್ತಿತ್ತು. ಹತ್ತಿರದ ದೇವಸ್ಥಾನದಲ್ಲಿ ಸಂಜೆಯ ಮಂಗಳಾರತಿಗೆ ಜಾಗಟೆಯನ್ನು ಬಡಿದರು. ಇಂದಿರ ಹೊತ್ತಾಯಿತೆಂದುಕೊಂಡು ಬೇಗ ಅಡಿಯಿಟ್ಟಳು. ಆ ವೇಳೆಗೆ ಅವಳಿಗೆ ತಲೆಯ ಮೇಲೆ ಬುಟ್ಟಿ ಇದ್ದುದು ಮರೆತು ಹೋಗಿತ್ತೋ ಅಥವಾ ಕೈ ಜಾರಿತೋ....ಬುಟ್ಟಿ ಧಡಾರನೆ ಕೆಳಗೆ ಬಿದ್ದು, ತೊಳೆದಿದ್ದ ಪಾತ್ರೆಗಳೆಲ್ಲಾ ಧೂಳಿನಲ್ಲಿ ಉರುಳಾಡಿದುವು.

ಹಿಂದೆ ಯಾರೋ ಗಟ್ಟಿಯಾಗಿ ನಕ್ಕಂತಾಯಿತು. ಇಂದಿರನಿಗೆ ನಾಚಿಕೆಯಾಯಿತು. ಸಿಟ್ಟೂ ಬಂತು. ಗಾಬರಿಯಿಂದ ಸರಕ್ಕನೆ ತಿರುಗಿ ನೋಡಿದಳು. ಕೈಲಿ ಪೆಟ್ಟಿಗೆ ಹಿಡಿದುಕೊಂಡಿದ್ದ ಒಬ್ಬ ಹುಡುಗ ಅವಳು ಪಾತ್ರೆ ಎತ್ತಿ ಹಾಕಿದುದನ್ನು ನೋಡಿ ನಗುತ್ತ ನಿಂತಿದ್ದ.

ಅವನು ಮೈಸೂರಿನವನು. ಆ ಊರಿನಲ್ಲಿದ್ದ ಸೋದರಮಾವನ ಮನೆಗೆ ಬರುತ್ತಿದ್ದ. ರೈಲಿನಿಂದ ಬರಬೇಕಾದರೆ ಅದೇ ದಾರಿ. ದೂರದಲ್ಲಿ ಬರುತ್ತಿರುವಾಗಲೇ ಸಂಜೆಗೆಂಪಿನಲ್ಲಿ ರಂಜಿಸುತ್ತ ಬಳುಕಿ ನಿಂತಿದ್ದ ಅವಳ ನಿಲುವು ಅವನ ಗಮನವನ್ನು ಆ ಕಡೆ ಎಳೆಯಿತು. ಹತ್ತಿರ ಬಂದ ಮೇಲೆ ಅತ್ಯಂತ ನಾಗರೀಕತೆಯಿಂದ ಕೂಡಿದ ಆವಳ ಉಡುಪು, ಅಭ್ಯಾಸವಿಲ್ಲದೆ ಸೊಟ್ಟ ಸೊಟ್ಟಾಗಿ ಇಟ್ಟುಕೊಂಡಿದ್ದ ಬುಟ್ಟಿ ಇವನ್ನು ಕುತೂಹಲದಿಂದ ನೋಡುತ್ತ,

"ಇನ್ನೇನು ಈ ಬುಟ್ಟಿ ಬಿದ್ದು ಬಿಡಬಹುದು!"

ಎಂದು ಅವನು ಎಣಿಕೆ ಹಾಕುವುದಕ್ಕೂ ಅದು ಬೀಳುವುದಕ್ಕೂ ಸರಿಯಾಗಲು ನಗು ಅವನ ಅಂಕೆಗೆ ನಿಲ್ಲದೆ ಹೊರ ಬಂದಿತ್ತು.

ಹತ್ತಿರದಲ್ಲೇ ನೀರು ಹೊತ್ತುಕೊಂಡು ಹೋಗುತ್ತಿದ್ದ ಒಬ್ಬ ಮುದುಕಿ ಅವಳ ಕಡೆ ನೋಡುತ್ತ ಹಂಗಿಸುವ ಧ್ವನಿಯಲ್ಲಿ

"ಪಾಪ! ಪಟ್ಟಣವಾಸದ ಹುಡುಗಿ—ಚಂಡಾಡುವ ಹಾಗೆ ಎಂದು ಕೊಂಡಳೇನೋ! ಗಡಿಯಾರ ಕಟ್ಟುವ ಕೈಗೆ ಭಾರ ಹೊತ್ತೀತೆ....?" ಎಂದಳು

ಇಂದಿರನ ಮುಖ ಕೆಂಪಾಯಿತು. ಆ ದಿನ ಬೆಳಗ್ಗೆ ಅವರ ಮನೆಯ ಹಿತ್ತಲಿನಲ್ಲಿ ಹರಿಯೊಡನೆ ಚೆಂಡಾಡುತ್ತಿದ್ದುದು ನೆನಪಾಯಿತು. ಹಂಗಿಸಿದ ಮುದುಕಿ ಅದನ್ನು ಎಲ್ಲೋ ಬೀದಿಯಿಂದಲೇ ನೋಡಿರಬೇಕು. ತಾನು ಯಾವ ವಯಸ್ಸಿನಲ್ಲಿ ಅತ್ತೆಯ ಮನೆಯ ಕೋಟಲೆಯನ್ನು ಸಹಿಸಿಕೊಂಡು, ಸಂಸಾರ ಮಾಡುತ್ತ ದಿನವನ್ನು ತಳ್ಳುತ್ತಿದ್ದಳೋ—ಆ ವಯಸ್ಸಿನ ಹುಡುಗಿ ಹಕ್ಕಿಯಂತೆ ಹಾರುತ್ತ ಕುಣಿಯುತ್ತ ಆಟವಾಡುತ್ತಿದ್ದುದನ್ನು ನೋಡಿ ಅವಳ ಮನಸ್ಸು ತಾನು ಅನುಭವಿಸದಿದ್ದ ಆ ಸುಖಕ್ಕಾಗಿ ಬೆಳಗಿನಿಂದಲೂ ತೊಳಲುತ್ತಿತ್ತು. ಅವಳನ್ನು ಹಂಗಿಸುವ ಅವಕಾಶವು ಸಿಕ್ಕಿದಕೂಡಲೇ ಅದನ್ನು ಧಾರಾಳವಾಗಿ ಉಪಯೋಗಿಸಿಕೊಂಡು, ಅವಳಿಗೆ ಸಹಾಯ ಮಾಡುವ ಯೋಚನೆಯೂ ಇಲ್ಲದೆ ಮುದುಕಿ ಮುಂದೆ ಹೊರಟು ಹೋದಳು.

ಇಂದಿರನಿಗೆ ಮುದುಕಿಯ ಮೇಲೆ ಹಿಡಿಸದಷ್ಟು ಕೋಪ ಬಂತು. ಅವಳೊಡನೆ ಬೀದಿಯಲ್ಲಿ ಜಗಳಕ್ಕೆ ನಿಂತರೆ ಮೊದಲೇ ನಕ್ಕವನು ಮತ್ತಷ್ಟು ನಗಬಹುದೆಂದುಕೊಂಡು ಸುಮ್ಮನಾದಳು. ಕೋಪವೆಲ್ಲಾ ನಕ್ಕವನ ಕಡೆ ತಿರುಗಲು ಉರಿಗಣ್ಣುಗಳಿಂದ ಅವನ ಕಡೆ ನೋಡಿದಳು. ಅವನು ಒಳ್ಳೆ ಬಲವಾದ ಆಸಾಮಿ. ನೋಡುವುದಕ್ಕೆ ಎತ್ತರವಾಗಿದ್ದ. ವಿಶಾಲವಾದ ಭುಜ. ಕೆಂಪಗೆ ದುಂಡಗಿದ್ದ ಮುಖ. ದಟ್ಟವಾದ

ಕೂದಲು. ದೊಡ್ಡ ಕಣ್ಣುಗಳು ಆಗಲೂ ನಗುವಿನಿಂದ ಕುಣಿಯುವಂತಿದ್ದುವು.

ಇಂದಿರ ಅವನ ಕಡೆ ನೋಡಿದ ಕೂಡಲೇ ಅವನು ವಿನಯದಿಂದ ಮುಂದೆ ಬಂದು—

"ನಾನು ಸಹಾಯ ಮಾಡಲೇ—?" ಎಂದು ಕೇಳಿದ.

ಇಂದಿರ ಬಗ್ಗಿ ಪಾತ್ರೆಗಳನ್ನು ಒಂದೊಂದಾಗಿ ಬುಟ್ಟಿಗೆ ತುಂಬುತ್ತಿದ್ದವಳು, ತಲೆ ಎತ್ತದೆ—

"ಇಲ್ಲಿ ಯಾರ ಸಹಾಯವೂ ಬೇಕಿಲ್ಲ!"

ಎಂದು ಒರಟಾಗಿ ಹೇಳಿದಳು.

ಸೀತಮ್ಮ ಬಹಳ ದೂರ ಹೋಗಿರಲಿಲ್ಲ. ಮೂಲೆಯನ್ನು ತಿರುಗುವುದರಲ್ಲಿದ್ದಾಗ ಒಂದು ಸಲ ಹಿಂದಕ್ಕೆ ನೋಡಿದಳು. ಕೂಡಲೇ ಬೇಗ ಬೇಗ ಬಂದು ಅವಳನ್ನು ಸಮಾಧಾನ ಮಾಡುತ್ತ—

"ಹೋಗಲಿ ಬಿಡು ಇಂದಿರ. ಮನೆಗೆ ಹೋಗಿ ಇನ್ನೊಂದು ಸಲ ತೊಳೆದರಾಯಿತು. ನಡಿ ಮನೆಗೆ ಹೋಗೋಣ." ಎಂದಳು.

ಇಂದಿರ ಬಗ್ಗಿಕೊಂಡೇ—

"ಬಹಳ ದೊಡ್ಡ ಮನುಷ್ಯರು ಕಣ್ರೀ ಸೀತಮ್ಮ—ನಿಮ್ಮೂರಿನವರು! ನಗುವುದಕ್ಕೆ ಇಲ್ಲಿ ಏನು ಆಶ್ಚರ್ಯವಿತ್ತೋ?" ಎಂದಳು.

"ಯಾರು ನಕ್ಕವರು....?"

"ಯಾರೋ-ನನಗೇನು ಗೊತ್ತು? ಅಲ್ಲಿ ನೋಡಿ!"

ಇಂದಿರ ಅವನನ್ನು ತೋರಿಸಲು ತಲೆ ಎತ್ತಿದಳು. ಆದರೆ ಅವನು ಮುಂದೆ ಹೋಗುತ್ತಿದ್ದ. ಸೀತಮ್ಮ—

"ಯಾರೋ ಮುಖ ಕಾಣಿಸೋದಿಲ್ಲ. ಬಟ್ಟೆ ಬರೆ ನೋಡಿದರೆ ಇಲ್ಲಿಯವರಾಗಿ ಕಾಣಲ್ಲ. ಕೈಲಿ ಪೆಟ್ಟಿಗೆ ಇದೆ. ರೈಲಿನಲ್ಲಿ ಬಂದವರಿರಬೇಕು ನಕ್ಕರೆ ನಗಲಿ! ನಮಗೇನು ನಷ್ಟ. ಹೋಗೋಣ."ಬಾ ಎಂದಳು.

"ಸೀತಮ್ಮ—ನಾನು ನಿಮಗೆ ಒಳ್ಳೆ ಉಪಕಾರ ಮಾಡಿದೆ ಇನ್ನೊಂದು ಸಲ ಪಾತ್ರೆ ತೊಳೆಯುವಂತಾಯಿತು ಬಿಡಿ! ನಾನೇ ಬೇಗ ಹಿಂದಕ್ಕೆ ಹೋಗಿ ತೊಳೆದುಕೊಂಡು ಬರುತ್ತೇನೆ...."

"ಬೇಡಮ್ಮ ಹೊತ್ತಾಯಿತು. ನಿನ್ನ ಆಸೆ ತೀರಿತಲ್ಲ-ಬಿಡು ಇನ್ನೊಂದು ಸಲ ತೊಳೆದರೆ ನನ್ನ ಕೈ ಸವೆಯುತ್ತದೆಯೋ....? ಅದೇನಿಲ್ಲ. ಮಂದಿರಕ್ಕೆ ಹೋಗಲು ಹೊತ್ತಾಯಿತೆಂದು ಅಕ್ಕ ಏನನ್ನುವರೊ....?"

"ಮಂದಿರ.... ಏನಲ್ಲಿ....?"

ಇಲ್ಲಿ ಒಂದು ರಾಮಮಂದಿರ ಇದೆ. ಪ್ರತಿ ಪ್ರದೋಷದಲ್ಲೂ ಅಲ್ಲಿ ಉತ್ಸವ ನಡೆಯುತ್ತೆ. ಒಂದೊಂದು ದಿನ ಒಬ್ಬೊಬ್ಬರ ಸೇವೆ ನಡೆಯುವುದು. ಈ ದಿನ ನಮ್ಮ ಮನೆಯದು. ಅಕ್ಕ ಆಪರೂಪಕ್ಕೆ ಬಂದಿದ್ದಾರೆ. ಎಲ್ಲಾ ಮಂಗಳಾರತಿ ಹೊತ್ತಿಗೆ ಹೋಗೋಣವೆಂದು ಅನ್ನುತ್ತಿದ್ದರು."

"ಸುಮ್ಮನಿರಿ. ನನ್ನಿಂದ ಹೊತ್ತಾಯಿತೆಂದು ಹೇಳುತ್ತೇನೆ. ಹೇಗೂ ತಪ್ಪು ನನ್ನದೇ....!"

ಸೀತಮ್ಮನೂ ಇಂದಿರನೂ ಮನೆಗೆ ಬರುವ ಹೊತ್ತಿಗೆ ಎಲ್ಲರೂ ಮಂದಿರಕ್ಕೆ ಹೊರಡಲು ಸಿದ್ಧರಾಗಿ ಇವರಿಗಾಗಿ ಕಾದಿದ್ದರು. ಶಾಸ್ತ್ರಿಗಳ ಬಾಗಲಿನಲ್ಲೇ ನಿಂತಿದ್ದವರು—

"ಏಕೆ ತಾಯಿ—ಇಷ್ಟು ಹೊತ್ತಾಯಿತು....? ನಾನು ನೋಡಿಕೊಂಡು ಬರೋಣವೆಂದು ಹೊರಟಿದ್ದೆ; ಅಷ್ಟರಲ್ಲಿ ನೀವು ಬರುತ್ತಿರುವುದು ಕಾಣಿಸಿತು!" ಎಂದರು.

ಹುಡುಗಿಯರಿಬ್ಬರೂ ಮುಖವನ್ನು ನೋಡಿಕೊಂಡು ನಕ್ಕರು. ಇಂದಿರ ಮುಂದಾಗಿ ಬಂದು—

"ತಪ್ಪು ನನ್ನದಲ್ಲ. ನಿಮ್ಮೂರಿನ ಹೊಳೆಯದು. ಅಲ್ಲಿ ಕಾಲಿಟ್ಟುಕೊಂಡು ಕೂತರೆ ಏಳುವುದಕ್ಕೇ ಮನಸ್ಸು ಬರುವುದಿಲ್ಲ..!" ಎಂದಳು.

ಆ ವೇಳೆಗೆ ಅಮ್ಮಯ್ಯ ಅಡಿಗೆ ಮಾಡಿ ಮುಗಿಸಿದ್ದಳು. ಬಾಗಿಲಿಗೆ ಬೀಗಹಾಕಿಕೊಂಡು ಎಲ್ಲರೂ ಹೊರಟರು. ಮಂದಿರದ ತುಂಬ ಜನಗಳು

ಸೇರಿದ್ದರು. ಪೂಜೆ—ಮಂಗಳಾರತಿ ಆದ ಮೇಲೆ, 'ಸಂಗೀತ ಮವ ಧಾರಯ' ಸರದಿ ಬಂದಾಗ—ಅರ್ಚಕ ಗಂಭೀರವಾಗಿ ಮಂತ್ರ ಹೇಳಿ ನಾಲ್ಕು ಕಡೆಗೂ ನೋಡಿದ. ಎಲ್ಲರೂ ಒಂದೇ ಸಲ—

"ನಾರಣಪ್ಪ....ನಾರಣಪ್ಪ...." ಎಂದು ಕೂಗಿದರು.

ನಾರಣಪ್ಪ ಮಂದಿರದಲ್ಲಿ ಚಿಲ್ಲರೆ ಕೆಲಸಕ್ಕೆ ಇದ್ದ ಹುಡುಗ. ಅವನಿಗೆ ತಕ್ಕ ಮಟ್ಟಿಗೆ ಸಂಗೀತವೂ ಬರುತ್ತಿತ್ತು. ಇಂಥ ದಿವಸಗಳಲ್ಲಿ ಸಾಮಾನ್ಯವಾಗಿ ಹಾಡುವ ಸರದಿ ಅವನದೇ. ಅವನು ಹೇಳಲು ನಿಂತು ಗಂಟಲು ಸರಿಮಾಡಿಕೊಳ್ಳುವ ವೈಖರಿಯಲ್ಲೇ ಅವನು ಇಂತಹುದೇ ಹಾಡು ಹೇಳುವನೆಂದು ತಿಳಿದುಕೊಳ್ಳುವ ಮಟ್ಟಿಗೆ ಅವನ ಸಂಗೀತ ಅವರಿಗೆ ಅಭ್ಯಾಸವಾಗಿ ಹೋಗಿತ್ತು. ಅವನು ಮಂಗಳಾರತಿಗೆ ಯಾರನ್ನೋ ಕರೆಯಲು ಹೋಗಿದ್ದವನು ಇನ್ನೂ ಬಂದಿರಲಿಲ್ಲ. ಹೊತ್ತಾದುದನ್ನು ನೋಡಿ ಶಾಸ್ತ್ರಿಗಳು—

"ತಾಯಿ ! ಇಂದಿರಮ್ಮ....ಒಂದು ದೇವರನಾಮ ಹಾಡಿಬಿಡಮ್ಮ, ತಂಬೂರಿ ಇಲ್ಲ-ತಾಳ ಇಲ್ಲ, ಎಂದು ನೆವ ಹೇಳಬೇಡ. ದೇವರು ಕೋಗಿಲೆ ಯಂಥ ಶಾರೀರ ಕೊಟ್ಟಿರುವಾಗ ಅವೆಲ್ಲ ಏಕೆ....? ಭಕ್ತಿಯಿಂದ ನೀನು ಎಷ್ಟು ಹೇಳಿದರೆ ಅಷ್ಟೇ ಸಾಕು....!'' ಎಂದರು.

ಇಂದಿರನಿಗೆ ಹೇಳಲು ಮನಸ್ಸಿಲ್ಲ. ಆದರೆ ಶಾಸ್ತ್ರಿಗಳೇ ಹೇಳಿರುವಾಗ ಅವರ ಮಾತನ್ನು ತೆಗೆದು ಹಾಕುವಂತಿಲ್ಲ ಅಂತೂ ಹಾಡಿದಳು. ಅದಲ್ಲದೆ ಅವಳಿಗೆ ಇಲ್ಲಿಗೆ ಬಂದಾಗಿನಿಂದಲೂ ಹಾಡದೆ ಏನೋ ಹಿಡಿದ ಹಾಗಾಗಿತ್ತು ಒಮ್ಮೆ ಹಾಡಲು ಮೊದಲು ಮಾಡಿದುದೇ ತಡ ! ಅದು ಅವಳ ಇಚ್ಛೆಗೆ ನಿಲ್ಲಲಿಲ್ಲ. ಯಾರೂ ಸಾಕೆಂದು ಹೇಳಲೂ ಇಲ್ಲ. ಹುಡುಗಿ ದೇವರ ಮುಂದೆ ನಿಂತು ಹಾಡುತ್ತಿದ್ದಳು. ನೆರೆದ ಜನ ಅಲ್ಲಾಡದೆ ನಿಂತು ಕೇಳುತ್ತಿದ್ದರು. ಕೇಳುತ್ತ ಅರೆ ಮುಚ್ಚಿದ್ದ ಶಾಸ್ತ್ರಿಗಳ ಕಣ್ಣಿನಿಂದ ನೀರು ಉರುಳಿತು.

ಪ್ರಸಾದವನ್ನು ಹಂಚುತಿದ್ದಾಗ ಗುಂಪಿನಲ್ಲಿ ಎಲ್ಲರಿಗಿಂತ ಉದ್ದ ವಾಗಿ ಕಾಣುತ್ತಿದ್ದವನೊಬ್ಬನು ತನ್ನನ್ನೇ ನೋಡುತ್ತಿರುವುದನ್ನು ಇಂದಿರ

ಗಮನಿಸಿದಳು. ಅವನು ಯಾರೆಂದು ಗುರುತಿಸುವುದಕ್ಕೆ ತಡವಾಗಲಿಲ್ಲ ಅವನು ಆಗಲೂ ದಾರಿಯಲ್ಲಿ ನಡೆದುದನ್ನು ನೆನೆದು ಕೀಟಲೆಯಿಂದ ನಗುತ್ತಿರುವಂತೆ ತೋರಿತು. ಅವಳಿಗೆ ಅಲ್ಲಿ ನಿಲ್ಲಲು ಮನಸ್ಸಾಗಲಿಲ್ಲ. ಅಲ್ಲದೆ—ಆಗಲೇ ಜನರ ಸಮೂಹದಲ್ಲಿ ಅವಳ ಹಾಡಿನ ಹೊಗಳಿಕೆಗೆ ಮೊದಲಾಗಿತ್ತು. ನಿಂತು ಅದನ್ನು ಕೇಳುವ ಇಷ್ಟ ಅವಳಿಗಿಲ್ಲ. ಮೀನಾಕ್ಷಿಯ ಬಳಿಗೆ ಹೋಗಿ—

"ಮೀನಾ–ನಾನು ಮನೆಗೆ ಹೋಗುತ್ತೀನೆ. ಏಕೋ ತಲೆ ನೋಯುತ್ತೆ. ನೀವೆಲ್ಲಾ ನಿಧಾನವಾಗಿ ಬನ್ನಿ." ಎಂದಳು.

"ಕತ್ತಲೆ! ಒಬ್ಬಳೇ ಯಾಕೆ ಹೋಗಬೇಕು? ನಡಿ ನಾನೂ ಬರುತ್ತೀನೆ. ಅವರೆಲ್ಲ ನಿದಾನವಾಗಿ ಹಿಂದಿನಿಂದ ಬರಲಿ."

ಎಂದು ಹೇಳಿ ಮೀನಾಕ್ಷಿ ಅವಳನ್ನೂ ಕರೆದುಕೊಂಡು ಹೊರಟಳು.

ಸ್ವಲ್ಪ ಹೊತ್ತಿನ ಮೇಲೆ ಶಾಸ್ತ್ರಿಗಳೂ ಇತರರೂ ಬಂದರು. ಶಾಸ್ತ್ರಿಗಳು ಹೊರಗಿನಿಂದಲೇ—

"ಮೀನಾ–ಮೂರ್ತಿ ಬಂದಿದಾನೆ......"

ಎಂದು ಕೂಗಿದರು.

ಇಂದಿರ ಮೀನಾಕ್ಷಿಯ ತೊಡೆಯ ಮೇಲೆ ತಲೆಯಿಟ್ಟು ಮಲಗಿದ್ದವಳು ತಟಕ್ಕನೆ ಎದ್ದು ಕುಳಿತಳು. ಮೂರ್ತಿ ಒಳಗೆ ಬಂದವನು—

"ಏನು ಮೀನಾ ಸೌಖ್ಯವೇ....? ಯಾವಾಗ ಬಂದದ್ದು......?"

ಎಂದು ವಿಚಾರಿಸಿದ.

"ಏನೋ ಇಷ್ಟರ ಮಟ್ಟಿಗೆ! ಒಳಗೆ ಬಾಪ್ಪ. ಬಗ್ಗಿಕೊಂಡು ಬಾ ಇಲ್ಲದಿದ್ದರೆ ನಮ್ಮ ಮನೆ ಬಾಗಿಲು ತಲೆಯ ಮೇಲೆ ಮಟ್ಟೆ ಬುದ್ಧಿ ಕಲಿಸುತ್ತದೆ! ಎಷ್ಟು ಉದ್ದವಾಗಿ ಬೆಳೆದು ಬಿಟ್ಟೆ ಮೂರ್ತಿ......?"

"ಇನ್ನೇನು....ನೀನು ಇಷ್ಟು ಬೇಗ ನಮ್ಮನ್ನೆಲ್ಲಾ ಜ್ಞಾಪಿಸಿಕೊಂಡು ಈ ಕಡೆ ಬರುತ್ತಿದ್ದರೆ....? ಇನ್ನೊಂದು ಸಲ ನೀನು ಬರುವ ಹೊತ್ತಿಗೆ ತಲೆ ನರೆತು ಹಲ್ಲೂ ಬಿದ್ದಿರಬಹುದು. ಅದರಲ್ಲಿ ಆಶ್ಚರ್ಯ ವೇನು....?"

"ನಿನಗೆ ಹಾಸ್ಯ, ಅಲ್ಲಿಯ ಕಷ್ಟ ಸುಖ ನಿನಗೇನು ಗೊತ್ತು. ಬರಲಿಲ್ಲವೆಂದು ಆಕ್ಷೇಪಣೆ ಮಾಡುವುದು ಸುಲಭ!"

"ಹೋಗಲಿ–ಈಗಲಾದರೂ ಇಲ್ಲಿನ ನೆನಪು ಬಂತಲ್ಲ!"

"ಬರದೇ ಏನು....? ಅಲ್ಲಿದ್ದರೂ ನಿಮ್ಮನ್ನೆಲ್ಲಾ ವಿಚಾರಿಸುತ್ತಲೇ ಇದ್ದೆ. ನಿನಗೆ ಪರೀಕ್ಷೆ ಆದ ವಿಚಾರವನ್ನೂ ಅಪ್ಪ ಬರೆದಿದ್ದರು. ಇನ್ನೇನು ನೀನು ಡಾಕ್ಟರಾಗಿಬಿಟ್ಟೆ. ಇದನ್ನೆಲ್ಲಾ ನೋಡಿ ಸಂತೋಷ ಪಡುವುದಕ್ಕೆ ಅತ್ತೆ ಇಲ್ಲ ಒಂದು ಮಗು ಅಂತ ಎಷ್ಟು ಮುಚ್ಚಟೆಯಾಗಿ ಸಾಕಿದಳೋ...."

"ಏನು ಮಾಡೋದಮ್ಮ, ನಮಗೆ ಲಭ್ಯ ಬೇಕಲ್ಲ ಅವರನ್ನೆಲ್ಲಾ ಇಟ್ಟುಕೊಳ್ಳುವುದಕ್ಕೆ....! ನೀನು ಬಂದಿರುವ ವಿಷಯವೇ ನನಗೆ ಗೊತ್ತಿಲ್ಲ. ನಾನು ಅಕಸ್ಮಾತ್ ಬರದಿದ್ದರೆ ನೀನು ಹಾಗೇ ಹೊರಟೇ ಹೋಗುತ್ತಿದ್ದೆಯೋ ಏನೋ....?"

"ಉಂಟೆ ಮೂರ್ತಿ....! ಇವರು ಹಳ್ಳಿಗೆ ಹೋಗಿದಾರೆ. ಬಂದ ಮೇಲೆ ಮೈಸೂರಿಗೆ ಹೋಗಬೇಕೆಂದಿತ್ತು. ಅಷ್ಟರಲ್ಲಿ ಚಂದುವನ್ನು ಕಳಿಸಿ ನಿನ್ನ ಕರೆಸಬೇಕೆಂದು ಕೂಡ ಅಪ್ಪನಿಗೆ ಹೇಳಿದ್ದೆ...."

"ನೀನು ಯಾವಾಗ ಬಂದದ್ದು....?"

"ಸಂಜೆಯ ರೈಲಿನಲ್ಲೇ ಬಂದೆ. ದಾರಿಯಲ್ಲಿ ಶಂಕರ ಸಿಕ್ಕಿ ಮಾತಿಗೆ ನಿಲ್ಲಿಸಿಕೊಂಡು ಬಿಟ್ಟ. ಮನೆಗೆ ಬಂದ ಮೇಲೆ ನೀವೆಲ್ಲಾ ಮಂದಿರಕ್ಕೆ ಹೋಗಿರುವುದು ತಿಳಿಯಿತು. ನೀನು ಬಂದಿರುವ ವಿಚಾರವೇ ನನಗೆ ತಿಳಿಯದು, ಮೀನಾ! ಮಂದಿರದಲ್ಲಿ ನೋಡಿದ ಮೇಲೇ ಗೊತ್ತಾದುದು...."

"ನೀನೂ ಅಲ್ಲಿಗೆ ಬಂದಿದ್ದೆಯಾ? ಕಾಣಿಸಲೇ ಇಲ್ಲ....!"

"ಇಲ್ಲಿ ಬೀಗ ನೋಡುತ್ತ ಎಷ್ಟು ಹೊತ್ತು ಕೂತಿರಲಿ...? ಬೇಜಾರಾಯಿತು; ಬಂದೆ....! ಆದರೆ....ಸಂಗೀತದಲ್ಲಿ ಮಗ್ನರಾಗಿರುವವರಿಗೆ ನಾನು ಬಂದರೆ ಕಾಣಿಸುವುದೇ...? ರಂಗನೂರಿನಲ್ಲಿ ಅಷ್ಟು ಚೆನ್ನಾಗಿ

ಹಾಡುವವರು ಇದಾರೆಂದು ನನಗೆ ಇದುವರೆಗೂ ಗೊತ್ತಿರಲಿಲ್ಲ! ಅಲ್ಲ.... ಅಲ್ಲಿ ಹಾಡುತ್ತಿದ್ದವರು ಯಾರು ಮೀನ....?"

ಶಾಸ್ತ್ರಿಗಳು ಕಾಲು ಒರಸಿಕೊಳ್ಳುತ್ತ ಒಳಗೆ ಬಂದವರು—

"ಅವಳು ನಮ್ಮ ರಾಮಚಂದ್ರನ ತಂಗಿ. ಶಾಯಿ! ಬಹಳ ಚೆನ್ನಾಗಿ ಹಾಡಿಬಿಟ್ಟಿ. ಸರಸ್ವತಿ ಹುಡುಗಿಗೆ ಒಲಿದು ಬಿಟ್ಟಿದ್ದಾಳೆ....!" ಎಂದರು.

ಆದರೆ ಆ ಹೊಗಳಿಕೆಯನ್ನು ಕೇಳಲು ಇಂದಿರ ಅಲ್ಲಿರಲಿಲ್ಲ. ಯಾವಗಲೋ ಎದ್ದು ಒಳಗೆ ಹೋಗಿ ಬಿಟ್ಟಿದ್ದಳು. ಮೀನಾಕ್ಷಿ ಎಡ ಬಲ ತಿರುಗಿ ನೋಡಿ—

"ಇಂದಿರ!"

ಎಂದು ಕೂಗಿದಳು.

ಇಂದಿರ ಏನೂ ಅರಿಯದವಳಂತೆ ಒಗಿನಿಂದ ಬಂದು—

"ಕರೆದೆಯಾ ಮೀನ....?"

ಎಂದಳು.

"ಅಪ್ಪ ಏನೋ ನಿನ್ನ ಹಾಡಿನ ವಿಷಯ ಹೇಳುತ್ತಿದ್ದರು ಅದಕ್ಕೆ ಕೂಗಿದೆ...."

ಮೀನಾಕ್ಷಿ ಮೂರ್ತಿಯ ಕಡೆ ಕೈ ತೋರಿಸಿ—

"ಇಂದಿರಾ–ಡಾಕ್ಟರ್ ಮೂರ್ತಿ; ನಮ್ಮ ಸೋದರತ್ತೆಯ ಮಗ. ಮೂರ್ತಿ....! ಇಂದಿರ......ಹಾಡುತ್ತಿದ್ದವಳು...." ಎಂದಳು.

ಇಂದಿರ ಅವನ ಕಡೆ ತೀಕ್ಷ್ಣವಾಗಿ ನೋಡಿ—

"ನಮಸ್ಕಾರ" ಎಂದಳು.

ಮೂರ್ತಿ ನಗುತ್ತ ಕೈ ಮುಗಿದ. ಏನೂ ಹೇಳಲಿಲ್ಲ.

ರಾತ್ರಿ ಊಟವಾದ ಮೇಲೆ ಶಾಸ್ತ್ರಿಗಳು, ಚಂದು, ಮೂರ್ತಿ ಮೂರು ಜನವೂ ಕುಳಿತು ಮಾತಾಡುತ್ತಿದ್ದರು. ಮುಖ್ಯ ವಿಷಯ ಮೂರ್ತಿಯ ಕೆಲಸಕ್ಕೆ ಸಂಬಂಧಿಸಿದ್ದು. ಶಾಸ್ತ್ರಿಗಳೇ ಮೊದಲು ಪ್ರಸ್ತಾಪ ಮಾಡಿದರು—

"ಮುಂದೆ ಏನು ಮಾಡಬೇಕೆಂದಿದೀಯಪ್ಪ? ಪರೀಕ್ಷೆ ಆಗಿ ಒಂದು ವರ್ಷ ಆಗುತ್ತಾ ಬಂತು; ಇನ್ನು ಎಷ್ಟು ದಿನಸ ಸುಮ್ಮನೆ ಇರೋದು?"

"ನಾನೂ ಅದೇ ಯೋಚನೆಯಲ್ಲೇ ಇದೀನಿ. ಕೆಲಸ ಸಿಕ್ಕಲಿ ಎಂತ ಎಷ್ಟು ದಿವಸ ಕಾಯೋದು....?"

"ಅದೇನೋ ಆಗ ಆಸ್ಪತ್ರೆಗೆ ಹೋಗುತ್ತಿದ್ದೆಯಲ್ಲ....ಅದೇನಾಯಿತು?"

"ಅದು ಆರು ತಿಂಗಳ ಮಟ್ಟಿಗೆ ಕೊಡುತ್ತಾರೆ. ಅಷ್ಟರಲ್ಲಿ ಕೆಲಸ ಸಿಕ್ಕಿದರೆ ಸರಿ. ಇಲ್ಲದಿದ್ದರೆ ಕೆಲಸವೇನೋ ಮಾಡಬಹುದು. ಸಂಬಳ ಸಾರಿಗೆ ಏನೂ ಇಲ್ಲ!"

"ಮತ್ತೆ ಹೊಟ್ಟೆಪಾಡು ನಡೆಯಬೇಕಲ್ಲ...."

"ಮೂರ್ತಿ–ನನ್ನ ಕೇಳಿದರೆ ಇದಕ್ಕಿಂತ ಸ್ವಂತವಾಗಿ ಒಂದು ವೈದ್ಯಶಾಲೆ ಇಡೋದು ವಾಸಿ. ಈಗ ಹಾಗಿಟ್ಟವರೆಲ್ಲ ಎಷ್ಟು ದುಡ್ಡು ಮಾಡುತ್ತಿದ್ದಾರೆ- ಗೊತ್ತೇ....?"

ಚಂದು ಹೇಳಿದ.

"ಅದೇನೋ ಸರಿ; ಆದರೆ ಅದು ಬರೀ ಬಾಯಿ ಮಾತಲ್ಲ. ಬಂಡವಾಳ ಬೇಕು. ಏನುಮಾಡಲಿ ಮಾವಯ್ಯ....ನಿಮ್ಮ ಹತ್ತಿರ ಇದೆಲ್ಲಾ ಕೇಳಬೇಕೆಂತಲೇ ಬಂದೆ. ನನಗೆ ನಿಮ್ಮ ಹೊರತು ಇನ್ನು ಯಾರಿದಾರೆ....?"

"ನಿನ್ನ ಮಾವಯ್ಯ ತಮ್ಮ ಸಲಹೆ, ಮತ್ತು ಆಶೀರ್ವಾದ ಇಷ್ಟು ಮಾತ್ರ ಕೊಡಬಲ್ಲರು. ನಮ್ಮ ಸ್ಥಿತಿ ನಿನಗೆ ತಿಳಿದೇ ಇದೆ!"

"ಅಷ್ಟೇ ಸಾಕು! ಅದಕ್ಕಿಂತ ಹೆಚ್ಚಾಗಿ ಏನೂ ಬಯಸುವುದಿಲ್ಲ."

"ನಿಮ್ಮ ದೊಡ್ಡಪ್ಪನನ್ನೇಕೆ ಕೇಳಬಾರದು....? ಹೇಗೂ ಅವರ ಬಳಿ ಹೇರಳವಾಗಿ ದುಡ್ಡಿದೆ...."

ಮೂರ್ತಿ ಸುಮ್ಮನಿದ್ದ. ಅವನಿಗೆ ಆ ಯೋಚನೆ ಮೊದಲೇ ಬಂದಿತ್ತು. ಮೂರ್ತಿಯ ತಂದೆ ಅವನು ಹುಡುಗನಾಗಿದ್ದಾಗಲೇ ತೀರಿ

ಹೋಗಿದ್ದರು. ಅವರಿಂದ ಬಂದಿದ್ದ ಸ್ವಲ್ಪ ಆಸ್ತಿಯನ್ನು ವಿದ್ಯಾಭ್ಯಾಸಕ್ಕೆ ಮುಗಿಸಿದ್ದ. ಅವನ ದೊಡ್ಡಪ್ಪ ಲೇವಾದೇವಿ ಮಾಡಿ ಬೇಕಾದ ಹಾಗೆ ಕೂಡಿಟ್ಟಿದ್ದರು. ಅದಲ್ಲದೆ ಮನುಷ್ಯ ಬಹಳ ಜಿಗುಟು! ಹೆಂಡತಿ ಮಕ್ಕಳು ಯಾರೂ ಇಲ್ಲದಿದ್ದರೂ, ಒಬ್ಬರನ್ನೂ ಹತ್ತಿರ ಸೇರಿಸುತ್ತಿರಲಿಲ್ಲ. ಆಸ್ತಿ ಎಲ್ಲವನ್ನೂ ಶಾಶ್ವತವಾಗಿ ತಮ್ಮ ಹೆಸರು ನಿಲ್ಲುವಂತೆ ಧರ್ಮ ಕೆಲಸಕ್ಕೆ ಉಪಯೋಗಿಸುವುದಾಗಿ, ಮೂರ್ತಿಯನ್ನು ಕಂಡಾಗಲೆಲ್ಲಾ ಹೇಳುತ್ತ–ಅವನಿಗೆ ಎಷ್ಟು ಸಮಯವಾದರೂ ಅವರಲ್ಲಿ ಸಹಾಯ ಕೇಳಲು ಅವಕಾಶ ಕೊಡದೇ ಇರುತ್ತಿದ್ದರು. ತಾವು ಕೂಡ ಲಕ್ಷಣವಾಗಿ ಬಟ್ಟೆ ಬರೆ ಕೂಡ ಹಾಕದೆ ಯಾವುದೋ ಎರಡು ಹಳೆಯ ಅಂಗಿಯನ್ನೇ ಹಾಕುತ್ತ, ಸ್ವಂತವಾಗಿ ಅಡಿಗೆ ಮಾಡಿಕೊಂಡು ಊಟಮಾಡುತ್ತ, ಕಾರ್ಪಣ್ಯ ಪಡುತ್ತಿದ್ದರು. ಅಂಥವರನ್ನು ಹೇಗೆ ಕೇಳುವುದೆಂದು ಮೂರ್ತಿ ಅನುಮಾನಿಸುತ್ತಿದ್ದ.

"ಯಾಕೆ ಮೂರ್ತಿ–ಸುಮ್ಮನಾಗಿಬಿಟ್ಟೆ.....? ಅವರನ್ನು ಕೇಳಲು ಇಷ್ಟವಿಲ್ಲವೆ....?"

"ಇಷ್ಟವಿಲ್ಲದೆ ಏನಿಲ್ಲ. ಅವರ ಸ್ವಭಾವ ನಿಮಗೆ ಗೊತ್ತೇ ಇದೆ, ಸುಮ್ಮನೆ ಕೈ ತೋರಿಸಿ ಅವಲಕ್ಷಣ ಅನ್ನಿಸಿಕೊಂಡ ಹಾಗಾದರೆ......!"

"ಏನು ಮಾಡೋದು....ಈಗ ಸಮಯ ಹಾಗಿದೆ. ಅದಲ್ಲದೆ ನೋಡಲು ಹಾಗೆ ಇದ್ದರೂ ಅವರಿಗೆ ನಿನ್ನ ಕಂಡರೆ ಗೌರವ, ವಿಶ್ವಾಸ ಇದೆ. ರಾಯರ ಹತ್ತಿರ ನಿನ್ನ ಬಹಳ ಹೊಗಳಿದರಂತೆ!"

"ಯಾರು .. ಶಾಮರಾಯರೇ....?"

"ಹುಂ....ಅವರವರಿಗೆ ಬಹಳ ಕೇವಲ. ಆಗಾಗ ಅಲ್ಲಿಗೆ ಹೋಗುತ್ತಾ ಇರುತ್ತಾರೆ. ನಾನು ಮೊನ್ನೆ ಮೈಸೂರಿಗೆ ಹೋಗಿದ್ದಾಗ ರಾಯರು ಏನೋ ಮಾತಿನ ಸಂದರ್ಭದಲ್ಲಿ ಹಾಗೆಂದರು. ಮೂರ್ತಿ— ನನಗೊಂದು ಯೋಚನೆ ಬರುತ್ತಿದೆ. ನೀನೇ ಅವರನ್ನು ಕೇಳುವುದಕ್ಕಿಂತ, ರಾಯರ ಕೈಲಿ ಯಾಕೆ ಒಂದುಮಾತು ಹೇಳಿಸಬಾರದು....? ಬೇಕಾದರೆ ನಾನು

ಅವರಿಗೆ ಹೇಳುತ್ತೇನೆ. ಮುದುಕ ಅವರ ಮಾತನ್ನು ತೆಗೆದು ಹಾಕಲಾರರು. ಹೇಗೂ ಎರಡು ಮೂರು ದಿನದಲ್ಲಿ ಅವರ ಮನೆಗೆ ಹೋಗಬೇಕು ?"

"ಅದೇನು .. ?'',

"ರಾಯರ ಮಗಳಿಗೆ ಮುಂದಿನ ತಿಂಗಳು ಮದುವೆ. ಲಗ್ನ ಪತ್ರಿಕೆಗೆ ಖಂಡಿತ ಬರಬೇಕೆಂದು ಬರೆದಿದಾರೆ.

"ಎಲ್ಲಿಗೆ ಕೊಡುತ್ತಾರಂತೆ....?"

"ಕೊಡೋದೇ....ಕೊಡೋದೇನಿಲ್ಲ! ಈ ಸಂದರ್ಭದಲ್ಲಿ ತೆಗೆದುಕೊಳ್ಳೋದೆಂದರೇ ಹೆಚ್ಚಾಗಿ ಒಪ್ಪುತ್ತದೆ. ಅವರಿಗೆ ಮನೆಯಿಲ್ಲಿ ದಿಕ್ಕಿಲ್ಲ. ದೊಡ್ಡ ಸಂಸಾರ. ಇವಳೇ ದೊಡ್ಡ ಮಗಳು. ಮಗಳನ್ನು ಹೊರಗೆ ಕಳಿಸುವಂತಿಲ್ಲ. ಅಳಿಯನೇ ಮನೆಗೆ ಬರಬೇಕು! ಒಬ್ಬ ಹುಡುಗ ಲಾಯರ್ ಪರೀಕ್ಷೆ ಮಾಡಿ ಇವರ ಬಳಿ ಕೆಲಸ ಕಲಿಯುತ್ತಿದ್ದ. ಅವನೊಡನೆ ಮದುವೆ. ಪಾಪ! ಮಣಿ ಬಹಳ ಒಳ್ಳೆ ಹುಡುಗಿ. ನನ್ನನ್ನು ಕಂಡರೆ ಬಹಳ ವಿಶ್ವಾಸ, ಅವಳಿಗಾಗಿ ಹೋಗಬೇಕಾಗಿದೆ."

ಮಾತು ಇದೇ ರೀತಿಯಲ್ಲಿ ಮುಂದುವರೆಯಿತು. ಕೊನೆಗೆ ಶಾಸ್ತ್ರಿಗಳು ಸೂಚಿಸದಂತೆ ಶಾಮುರಾಯರಿಂದ ಮೂರ್ತಿಯು ದೊಡ್ಡಪ್ಪನಿಗೆ ಹೇಳಿಸುವುದೆಂದು ನಿಶ್ಚೈಸಿ, ಬಹಳ ಹೊತ್ತಾಯಿತೆಂದು ಎಲ್ಲರೂ ಮಲಗಿದರು.

ಆದರೆ ಮೂರ್ತಿಗೆ ಬೇಗ ನಿದ್ದೆ ಬರಲಿಲ್ಲ ಶಖೆಯಿಂದಲೂ ಮನಸ್ಸಿನ ಹೊಯ್ದಾಟದಿಂದಲೂ ಹಾಸಿಗೆಯಮೇಲೆ ಉರುಳಾಡುತ್ತಿದ್ದ. ಅವನು ಎದ್ದಾಗ ಆಗಲೇ ಹೊತ್ತಾಗಿತ್ತು. ಶಾಸ್ತ್ರಿಗಳು ಆಗಲೇ ಹೊರಗೆ ಹೋಗಿದ್ದರು. ಬೆಳಗಿನ ತಂಗಾಳಿ ಮಲ್ಲಿಗೆಯ ವಾಸನೆಯನ್ನು ಹೊತ್ತು ಆಹ್ಲಾದಕರವಾಗಿ ಮುಖದ ಮೇಲೆ ಸುಳಿದಾಡುತಿತ್ತು. ಮೂರ್ತಿ ಕಣ್ಣು ಬಿಟ್ಟುಕೊಂಡು ಅದನ್ನು ಸವಿಯುತ್ತ ಮಲಗಿದ್ದ, ಆಮೇಲೆ ಎದ್ದು ಮುಖ ತೊಳೆದು, ಮನೆಯ ಹಿಂದುಗಡೆಯಿಂದ ಬರುತ್ತಿದ್ದ ಮಲ್ಲಿಗೆಯ ಕಂಪನ್ನು ಅರಸಿ ಅಲ್ಲಿಗೆ ಹೋದ.

ಇಂದಿರ ತೋಟದಲ್ಲಿ ಹೂ ಬಿಡಿಸುತ್ತಿದ್ದಳು. ಹರಿ ಒಂದು ಪಾತ್ರೆಯನ್ನು ಹಿಡಿದು ಕೊಂಡು, ಹೂವನ್ನೆಲ್ಲಾ ಅದರಲ್ಲಿ ತುಂಬಿಕೊಳ್ಳುತ್ತಿದ್ದ. ಮೂರ್ತಿ ಒಳಗಿನಿಂದ ಬಂದ ಕೂಡಲೇ ಅವನಿಗೆ ಹರಿ ಕಾಣಿಸಿದ. ಇಂದಿರ ಗಿಡದ ಹಿಂಭಾಗದಲ್ಲಿದ್ದಳು. ಹುಡುಗ ಮಾತಾಡುತ್ತಿದ್ದುದು ಅವನಿಗೆ ಕೇಳಿಸಿತ್ತು. ಆದರೂ ಕಾಣದವನಂತೆ ಹರಿಯನ್ನು ಕರೆದು ಮಾತಾಡಿಸುತ್ತ—

"ಜಾಣ–ಆಗಲೇ ಎಷ್ಟು ಹೂ ಕೊಯ್ದು ಬಿಟ್ಟಿದ್ದೀ! ನನಗಿಂತ ಮುಂಚೆ ಎದ್ದುಬಿಟ್ಟಿದೀಯಲ್ಲೋ ಹರಿ. ಅಣ್ಣ ಎಲ್ಲೋ....?"

"ಒಳಗೇ ಇದಾರೆ...."

"ತಾತ....?"

"ತಾತ–ಹೊಳೆಗೆ ಹೋಗಿದಾರೆ...."

"ನೀನು ಮೈಸೂರಿಗೆ ಬರೋದಿಲ್ಲವೇ ಹರಿ....? ಅಲ್ಲಿ ಸರ್ಕಸ್ ಬಂದಿದೆ. ಹುಲಿ, ಸಿಂಹ, ಒಂಟೆ......"

"ಹುಲಿ, ಸಿಂಹ, ಒಂಟೆ....?"

"ಆನೆ....ಎಲ್ಲಾ ಬಂದಿದೆ. ಎಷ್ಟು ಚೆನ್ನಾಗಿದೆ ಅಂತೀ....!"

"ಅಣ್ಣನ್ನ ಕರೆದುಕೊಂಡು ಹೋಗುವಂತೆ ಹೇಳು."

"ನೀವೇ ಹೇಳಿ...."

"ಯಾಕೋ....ನಿನಗೆ ಹೆದರಿಕೆಯೇನೋ....ಬಿಡು ನಾನೇ ಹೇಳುತ್ತೀನಿ. ಅದು ಸರಿ. ನಿನ್ನ ಬೂಡ್ಸು ಏನಾಯಿತು ಹರಿ....? ಇಲ್ಲೆಲ್ಲಾ ಬರೀ ಕಾಲಿನಲ್ಲೇ ಬಂದಿದೀಯಲ್ಲ....?

"ಯಾವ ಬೂಟ್ಸು....?"

"ನಿನ್ನೆ ಹಾಕಿಕೊಂಡಿದ್ದೆಯಲ್ಲೋ....ಹಿಂದುಗಡೆ ಇಷ್ಟುದ ಗೂಟ ಇರೋದು....!"

"ನನ್ನ ಹತ್ತಿರ ಚಪ್ಪಲಿ ಇದೆ. ಅದಕ್ಕೆ ಗೂಟವೂ ಇಲ್ಲ–ಗೀಟವೂ ಇಲ್ಲ!"

"ಇಲ್ಲವೇ........? ಹೋಗಲಿ....ಗಡಿಯಾರ ಏನಾಯಿತು ? ಅದಾದರೂ ಹೇಳು....!"

"ಗಡಿಯಾರ ಎಲ್ಲಿದೆ ನನಗೆ.....? ಸ್ಕೂಲಿಗೆ ಹೋಗಿ ಪರೀಕ್ಷೆ ಮಾಡು—ಚಿನ್ನದ ಗಡಿಯಾರ ಕೊಡುತೀನಿ ಎಂತ ಅತ್ತೆ ಹೇಳಿದಾಳೆ!"

"ಹಾಗೇನು ........? ನೀನು ಸಂಗೀತ ಬಹಳ ಚೆನ್ನಾಗಿ ಹೇಳ್ತೀಯಂತಲ್ಲ. ನಿನ್ನೆ ರಾಮಮಂದಿರದಲ್ಲಿ ಕೇಳಿದೋರೆಲ್ಲ ಡಂಗಾಗಿ ಹೋಗಿಬಿಟ್ಟರಂತೆ!"

"ನನಗೆ ಸಂಗೀತ ಬರಲ್ಲರೀ....ತಾತ ಶ್ಲೋಕ ಹೇಳಿಕೊಟ್ಟಿದಾರೆ....ಅಷ್ಟೆ....."

"ಪರವಾಗಿಲ್ಲ........ಜಾಣ. ಅಲ್ಲ.... ಹರೀ ಆ ಗುಲಾಬಿಬಣ್ಣದ ಜಾರ್ಜೆಟ್ ಸೀರೆ—ನಿನಗೆ ಎಷ್ಟು ಚೆನ್ನಾಗಿ ಒಪ್ಪುತ್ತಿತ್ತು ಅಂತೀ.....!"

"ಇದೇನ್ರೀ.....ಹೀಗೆ ಕೇಳ್ತೀರಿ.....? ನಾನೇನು ಹೆಂಗುಸೇ....ಸೀರೆ ಉಟ್ಟುಕೊಳ್ಳೋಕೆ ?"

ಹುಡುಗ ನಾಚಿದವನಂತೆ ಮುಖ ಮುಚ್ಚಿಕೊಂಡು ನಗುತ್ತ ಹೇಳಿದ.

"ನಿಜವಾಗಿಯೂ....... ಹರಿ, ಆ ಅಲಂಕಾರ—ಸೊಟ್ಟುಸೊಟ್ಟಾಗಿ ಬುಟ್ಟಿ ಹೊತ್ತಿದ್ದ ರೀತಿ, ಪೂರ್ವ ಪಶ್ಚಿಮ ಎರಡೂ ಒಂದುಕಡೆ ಕೂಡಿದ ಹಾಗಿತ್ತು. ನನ್ನ ಹತ್ತಿರ ಆಗ 'ಕ್ಯಾಮರಾ' ಇದ್ದಿದ್ದರೆ ಫೋಟೋ ತೆಗೆದುಕೊಳ್ಳುತ್ತಿದ್ದೆ! ಅಲ್ರೋ ಮಗು.....ಬುಟ್ಟಿ ಹಾಗೆ ಎತ್ತಿ ಹಾಕಿಬಿಡೋದೇ ನೀನು....?"

"ಯಾವಾಗ—ನಾನು ಎತ್ತಿಹಾಕಿದ್ದು....?"

ಇಂದಿರ ಸರಸರನೆ ಗಿಡದ ಹಿಂದಿನಿಂದ ಬಂದು ಕೈಲಿದ್ದ ಹೂವನ್ನೆಲ್ಲಾ ಹುಡುಗನ ಮುಂದೆ ಸುರಿದು—

"ಹರೀ-ನೀನು ಬಹಳ ದೊಡ್ಡ ಮನುಷ್ಯ. ಯಾರಿಗಾದರೂ ತೊಂದರೆಯಾದರೆ ಸಹಾಯ ಮಾಡುವುದು ಬಿಟ್ಟು, ನಗುತ್ತೀಯಾ....? ಪರವಾಗಿಲ್ಲ.....ಒಳ್ಳೆ ಬುದ್ಧಿ ಕಲಿತಿದೀಯೆ....." ಎಂದಳು.

"ನಮಸ್ಕಾರ–ಇಂದಿರಾದೇವಿ. ನೀವಿದ್ದುದು ಗೊತ್ತಾಗಲಿಲ್ಲ. ಕ್ಷಮಿಸಬೇಕು......!"

ಇಂದಿರ ಮಾತಾಡದೆ ಒಳಗೆ ಹೋದಳು. ಹುಡುಗನಿಗೆ ಯಾವುದೂ ಅರ್ಥವಾಗಲಿಲ್ಲ. ಬೆರಗಾಗಿ ಅವಳು ಹೋದ ಕಡೆಯೇ ನೋಡುತ್ತ—

"ಮೂರ್ತಿ—ಯಾಕ್ರೀ........ಇಂದಿರಕ್ಕ ಹೂವನ್ನೆಲ್ಲಾ ಸುರಿದು ಬಿಟ್ಟಳು.....?" ಎಂದು ಕೇಳಿದ.

ಮೂರ್ತಿ ನಗುತ್ತ––

"ನೀನು ಆರಿಸಿಕೊಂಡು ಪಾತ್ರೆಗೆ ತುಂಬಿಕೊಳ್ಳಲೀ ಎಂತ....!" ಎಂದು ಹೇಳಿದ.

* * * * *

ಮೂರ್ತಿಯ ದೊಡ್ಡಪ್ಪ ಇದ್ದಕ್ಕಿದ್ದಂತೆ ಹೃದ್ರೋಗದಿಂದ ಕಾಲವಾದರೆಂದು ಮಾರನೇ ದಿನ ವರ್ತಮಾನ ಬಂತು. ಮೂರ್ತಿ ಕೂಡಲೇ ಹೊರಟುಬಿಟ್ಟ. ಶಾಸ್ತ್ರಿಗಳು—

"ಮನುಷ್ಯ ಆರು ಯೋಚನೆ ಮಾಡಿದರೆ ದೈವ ಏಳನೇ ಯೋಚನೆ ಮಾಡುತ್ತೆ ಎಂತ ಹಿರಿಯರು ಹೇಳುವುದು ಸುಳ್ಳಲ್ಲ. ನಿನ್ನೆಯೆಲ್ಲಾ ನಾವು ಅಂದಾಜು ಮಾಡಿದ್ದೂ ಮಾಡಿದ್ದೇ! ಈ ದಿನ ಹೀಗೆ ವರ್ತಮಾನ ಬರುತ್ತದೆಯೆಂದು ಯಾರಿಗಾದರೂ ಗೊತ್ತಿತ್ತೆ—? ಹೋಗಿಬಾರಪ್ಪ, ದೇವರು ಮಾಡಿಸಿದಂತಾಗಲಿ!" ಎಂದರು.

ಮೂರ್ತಿ ಮೈಸೂರಿಗೆ ಹೋದ ಮೇಲೆ ಅವನ ದೊಡ್ಡಪ್ಪನ ಕಡೆ ವಕೀಲರಾದ ಶಾಮರಾಯರಿಂದ "ಕೂಡಲೇ ಬಂದು ತಮ್ಮನ್ನು ಕಾಣಬೇಕೆಂದು" ಕಾಗದ ಬಂತು. ಮೂರ್ತಿ ಅಲ್ಲಿ ತಾನು ಮಾಡಬೇಕಾಗಿದ್ದ ಕೆಲಸವೆಲ್ಲ ಮುಗಿದ ಮೇಲೆ ಅವರನ್ನು ನೋಡುವುದಕ್ಕೆ ಹೋದ. ಆಗ ರಾಯರು ಒಳಗಿದ್ದರು. ಆಳು ಅವನನ್ನು ಹೊರಗಿನ ಕೋಣೆಯಲ್ಲಿ ಕುಳ್ಳಿರಿಸಿ, ಅವನ ಆಗಮನವನ್ನು ತಿಳಿಸಲು ಒಳಗೆ ಹೋದ.

ಮೂರ್ತಿ ಅಲ್ಲಿದ್ದ ಒಂದು ಪತ್ರಿಕೆಯನ್ನು ಮಗುಚಿಹಾಕುತ್ತಿದ್ದಾಗ ರಾಯರು ಒಳಗಿನಿಂದ ಬಂದವರು ನಗುಮುಖದಿಂದ ಕುಶಲಪ್ರಶ್ನೆ ಮಾಡಿ

ದರು. ಅದು ಇದು ಮಾತಾಡುತ್ತ ಕ್ರಮ ಕ್ರಮವಾಗಿ ಮೂರ್ತಿಯ ದೊಡ್ಡಪ್ಪ ತಮ್ಮ ಅಪಾರವಾದ ಸಂಪತ್ತಿಗೆಲ್ಲಾ ಮೂರ್ತಿಯನ್ನೇ ಉತ್ತರಾಧಿಕಾರಿಯನ್ನಾಗಿ ಮಾಡಿರುವ ವಿಚಾರವನ್ನು ತಿಳಿಸಿದರು. ಮೂರ್ತಿ ತನ್ನ ಕಿವಿಯನ್ನೇ ನಂಬಲಿಲ್ಲ. ಅವನು ಎಂದೂ ಹಾಗೆ ಯೋಚಿಸಿರಲಿಲ್ಲ. ಅದಲ್ಲದೆ ಅವರ ಬಳಿ ದುಡ್ಡಿದೆ ಎಂದು ಗೊತ್ತಿದ್ದರೂ— ರಾಯರು ಹೇಳಿದ ಸಂಖ್ಯೆ ಅವನನ್ನು ಬೆರಗುಗೊಳಿಸಿತು ಒಂದು ಗಂಟೆಯ ಹಿಂದೆ ಯಾರಾದರೂ ಅವನಿಗೆ "ನೀನು ಲಕ್ಷಾಧಿಕಾರಿಯಾಗುವೆ!" ಎಂದು ಭವಿಷ್ಯ ಹೇಳಿದ್ದರೆ ಅವನು ನಂಬುತ್ತಿರಲಿಲ್ಲ. ಆದರೆ..... ಅದೃಷ್ಟದ ತಿರುಗಣೆಯನ್ನು ಬಲ್ಲವರಾರು....?

ರಾಯರು ಮೂರ್ತಿಯನ್ನು ಎಂದೂ ನೋಡಿರಲಿಲ್ಲ. ಅವನ ದೊಡ್ಡಪ್ಪ ಆಗಾಗ ತಮ್ಮ ಕೆಲಸಕ್ಕಾಗಿ ಇವರ ಬಳಿ ಬರುತ್ತಿದ್ದರೂ, ಅವರ ಬಳಿ ಇಷ್ಟು ಇರುವುದೆಂದು ಇವರಿಗೇ ಗೊತ್ತಿರಲಿಲ್ಲ. ಅವರು ಎಂದೂ ಆ ಮುದುಕನ ಬಗೆಗೆ ಹೆಚ್ಚು ಉತ್ಸಾಹ ತೋರಿರಲಿಲ್ಲ. ಆತ ತಮ್ಮ ಕೃಪಣತನದಿಂದಾಗಿ ಯಾರಿಗೂ ಹೆಚ್ಚು ಬೇಕಾದವರಾಗಿರಲಿಲ್ಲ. ಒಮ್ಮೆಯೇ ಅವರ ಸಂಪತ್ತಿಗೆ ಅಧಿಕಾರಿಯಾಗಿ, ರೂಪು, ಯೌವನ, ವಿದ್ಯಾವಿನಯಗಳಿಂದ ಕೂಡಿದ ಮೂರ್ತಿ ಅವರ ಕಣ್ಣಿಗೆ ಬಿದ್ದಾಗ ರಾಯರ ಕಣ್ಣು ತೆರೆಯಿತು. ಮೂರ್ತಿ ಅವಿವಾಹಿತನೆಂದು ತಿಳಿದ ಮೇಲಂತೂ ರಾಯರು ಇದುವರೆಗೆ ಅವನ ವಿಚಾರ ತಿಳಿದುಕೊಳ್ಳದಿದ್ದುದಕ್ಕಾಗಿ ತಮ್ಮನ್ನೇ ನಿಂದಿಸಿಕೊಂಡರು. ಮಣಿಗೆ ಆಗಲೇ ಮದುವೆ ಗೊತ್ತಾಗಿಬಿಟ್ಟಿದೆ ಆದರೇನು? ಮಣಿಯ ತಂಗಿ ಇದ್ದಾಳಲ್ಲ! ಎಂದು ಲೆಕ್ಕ ಹಾಕುವವರೆಗೂ ಅವರ ಮನಸ್ಸು ಮುಂದುವರೆದಿತ್ತು.

ಅದರಿಂದಲೇ ರಾಯರು ಮೂರ್ತಿಯನ್ನು ಒಳಗೆ ಕರೆದು ಕಾಫಿ ಕೊಟ್ಟು ಉಪಚರಿಸಿದರು. ತಮ್ಮ ಮಕ್ಕಳಿಗೆಲ್ಲ ಪರಿಚಯ ಮಾಡಿಕೊಟ್ಟರು ಮತ್ತು ಕೆಲಸವನ್ನು ಅಂದಿಗೇ ಮುಗಿಸದೆ, ಇನ್ನೊಂದು ದಿನ ಬಂದರೆ ಕಾಗದಪತ್ರಗಳನ್ನು ಅವನ ವಶಪಡಿಸುವುದಾಗಿ ತಿಳಿಸಿದರು.

ಮೂರ್ತಿಗೆ ರಾಯರ ಉದ್ದೇಶ ಅರ್ಥವಾಗದೆ ಇರಲಿಲ್ಲ. ಅವನು ಅವರ ಬಳಿ ವಿರೋಧಕ್ಕೆ ಹೋಗದೆ, ಕೆಲಸವಾಗುವವರೆಗೂ ಸುಮ್ಮನಿದ್ದು, ಅನಂತರ ತನಗೆ ಆಗಲೇ ವಧು ನಿಶ್ಚಯವಾಗಿರುವುದಾಗಿ ತಿಳಿಸಿ ಮೆಲ್ಲಗೆ ಅಲ್ಲಿಂದ ಜಾರಿಕೊಂಡನು. ಆದರೆ ರಾಯರಿಗೆ ಪೂರ್ತ ನಿರಾಶೆಯಾಗದಿರಲೆಂದು ಅವರ ಶ್ರಮಕ್ಕಾಗಿ ಕೊಡಬೇಕಾದುದಕ್ಕೆ ನಾಲ್ಕರಷ್ಟು ಕಾಣಿಕೆ ಕೊಟ್ಟು, ಅವರ ಮನೆಯಿಂದ ಹೊರಬಿದ್ದ.

## ೮

ಆ ದಿನ ಶಾಸ್ತ್ರಿಗಳ ಮನೆಯಲ್ಲಿ ಮಗಳಿಗೆ ಔತಣ. ಹಿಂದಿನ ದಿನ "ತಕ್ಷಣವೇ ಹೊರಟು ಬರಬೇಕೆಂದು" ರಾಮಚಂದ್ರನಿಗೆ ಆಫೀಸಿನಿಂದ ತಂತಿ ಬಂದಿತ್ತು. ಮೊದಲಿನ ಏರ್ಪಾಡಿನಂತೆ ಅವನಿಗೆ ಇನ್ನೂ ರಜವಿತ್ತು. ಆ ಅವಕಾಶದಲ್ಲಿ ಅವನು ಮೀನಾಕ್ಷಿಯೊಡನೆ ಇನ್ನೂ ಕೆಲವು ಬಂಧು ಮಿತ್ರರನ್ನು ನೋಡಿಕೊಂಡು ಬರಬೇಕೆಂದಿದ್ದನು. ಆದರೆ ಕೂಡಲೇ ಹೊರಡಬೇಕಾಗಿ ಬಂದದ್ದರಿಂದ ಯಾವುದೂ ಆಗಲಿಲ್ಲ.

ಶಾಸ್ತ್ರಿಗಳಿಗೆ ಬೇಕಾದವರೆಲ್ಲ ಊಟಕ್ಕೆ ಬಂದಿದ್ದರು. ಶಾಸ್ತ್ರಿಗಳು ಮಗಳಿಗೂ ಇಂದಿರನಿಗೂ ಸೊಗಸಾದ ಸೀರೆಗಳನ್ನು ಉಡುಗೊರೆಯಾಗಿ ತಂದಿದ್ದರು. ಮೀನಾಕ್ಷಿ ಹೊಸ ಸೀರೆ ಉಟ್ಟು ತಂದೆಗೂ, ಅಕ್ಕನಿಗೂ ನಮಸ್ಕಾರ ಮಾಡಿದಾಗ ಅಮ್ಮಯ್ಯ—

"ಮೀನಾ–ನೀನು ಇದ್ದಷ್ಟು ದಿನವೂ ಮೂರು ಗಳಿಗೆಯಂತೆ ಕಳೆದು ಹೋಯಿತು. ಪುನಃ ನಿನ್ನನ್ನು ನೋಡುವುದು ಎಂದೋ ?" ಎಂದು ಕಣ್ಣೀರು ತುಂಬಿದಳು.

ಶಾಸ್ತ್ರಿಗಳು—"ಪುತ್ರವತಿಯಾಗು ತಾಯಿ !" ಎಂದು ಆಶೀರ್ವಾದ ಮಾಡಿದರು. ಮೀನಾಕ್ಷಿಗೆ ಆದುವರೆಗೆ ಮಕ್ಕಳಾಗದೇ ಇದ್ದುದು ಅವರಿಗೆ ಒಂದು ಕೊರತೆಯಾಗಿ ತೋರಿತ್ತು.

"ಅಪ್ಪ—ನೀವೆಲ್ಲಾ ಆಕಡೆ ಒಂದು ಸಲ ಬರಬಾರದೇ? ಬಂದರೆ ಹಾಗೇ ಕಾಶಿ, ಪ್ರಯಾಗ ಎಲ್ಲಾ ಯಾತ್ರೆಯೂ ಮಾಡಬಹುದು!"

"ಆಗಲಮ್ಮ—ಬರೋಣ. ಯಾವುದಕ್ಕೂ ಅವನ ಇಚ್ಛೆ ಬರ ಬೇಕಲ್ಲ! ನಮ್ಮದೇನಿದೆ?"

"ಹಾಗೆನ್ನಬೇಡಿ ಅಪ್ಪ—ನೀವು ಮೊದಲು ಮನಸ್ಸು ಮಾಡಿ. ಅಕ್ಕ ಎಲ್ಲೂ ಹೊರಗೆ ಹೋದೋಳಲ್ಲ. ಈ ನೆವದಲ್ಲಾದರೂ ಬರಲಿ!"

ಶಾಸ್ತ್ರಿಗಳು ನಕ್ಕು ಸುಮ್ಮನಾದರು. ಹರಿ ಎಲ್ಲರಿಗೂ ಮೊದಲು ಹೋಗಿ ಗಾಡಿಯಲ್ಲಿ ಕೂತಿದ್ದ. ಅವನನ್ನು ಸಮಾಧಾನ ಮಾಡಿ ಕೆಳಗಿಳಿಸ ಬೇಕಾದರೆ ಅಮ್ಮಯ್ಯನಿಗೆ ಸಾಕಾಯಿತು. ಮೀನಾಕ್ಷಿ ಹೊರಡುವಳೆಂದು ತಿಳಿದು ಮೂರ್ತಿಯೂ ಮೈಸೂರಿನಿಂದ ಬಂದಿದ್ದ. ಮೀನಾಕ್ಷಿ ಹೊರಡುವ ಮೊದಲು ಅವನನ್ನು ಕರೆದು, ಅವನು ಯಾವುದಾದರೂ ಹೊಸ ಉದ್ಯಮ ವನ್ನು ಕೈಕೊಳ್ಳುವ ಮೊದಲು ಒಂದು ಸಲ ತಮ್ಮ ಕಡೆ ಪ್ರವಾಸ ಬರ ಬೇಕೆಂದು ಆಹ್ವಾನ ಕೊಟ್ಟಳು.

ಅಷ್ಟು ಅವಸರದಲ್ಲಿ ತನ್ನನ್ನು ಏಕೆ ಕರೆಸಿದರೆಂದು ರಾಮಚಂದ್ರನಿಗೆ ಯೋಚನೆಯಾಗಿತ್ತು. ಆದರೆ ಅವನು ಹೆಚ್ಚು ಜಿಜ್ಞಾಸೆ ಮಾಡಬೇಕಾ ಗಿರಲಿಲ್ಲ. ಮಾರನೆಯ ದಿನ ಪ್ರಯಾಣ ಮಾಡುತ್ತಿರುವಾಗಲೇ ಪತ್ರಿಕೆ ಗಳು ದೊಡ್ಡ ದೊಡ್ಡ ಅಕ್ಷರಗಳಲ್ಲಿ ಕಲ್ಕತ್ತೆಯ ಬಳಿ ಆದ ಬಿರುಗಾಳಿಯ ಅನಾಹುತವನ್ನು ಬಣ್ಣಿಸಿದ್ದುವು.

ರಾಮಚಂದ್ರ ಹೋದ ಕೂಡಲೇ ಆಫೀಸಿನಲ್ಲಿ ತಿಳಿಯಬೇಕಾದು ದನ್ನು ತಿಳಿದು ಅನಾಹುತ ನಡೆದ ಕಡೆಗೆ ಪ್ರಯಾಣ ಬೆಳೆಸಿದ. ಆವೇಳೆಗೆ ಆಗಲೇ ಅನೇಕರು ಅವನಿಗಿಂತ ಮುಂದಾಗಿ ಹೋಗಿದ್ದರು. ಆದರೆ ಎಷ್ಟು ಜನ ಹೋದರೆ ತಾನೇ ಅಲ್ಲಿಗೆ ಸಾಕು........! ಮನೆಗಳು ಸಾಲು ಸಾಲಾಗಿ ಉರುಳಿದ್ದುವು ಸೇತುವೆಗಳು ಮುರಿದುಹೋಗಿ ಸಂಚಾರವೇ ನಿಂತುಹೋಗಿತ್ತು. ರೈಲು-ಗಾಡಿಗಳ ಓಡಾಟಕ್ಕೆ ಅವಕಾಶವಿಲ್ಲದೆ, ಕಷ್ಟ ದಲ್ಲಿದ್ದ ಜನಗಳಿಗೆ ಸಹಾಯ ಕಳಿಸುವುದಕ್ಕೂ ತೊಂದರೆಯಾಗಿತ್ತು. ಅವೆಲ್ಲಾ ಆದಷ್ಟು ಬೇಗ ಮಾಡುವ ಕೆಲಸಗಳು. ದೇಶದ ನಾನಾಭಾಗ

ಗಳಿಂದ ಬುದ್ಧಿವಂತರಾದ ಇಂಜಿನಿಯರುಗಳೂ-ದಕ್ಷರಾದ ಕೆಲಸಗಾರರೂ, ಲೆಖ್ಖವಿಲ್ಲದಷ್ಟು ಬಂದು ಹಗಲು ರಾತ್ರಿ ಕೆಲಸ ಮಾಡುತ್ತಿದ್ದರು!

ಮೀನಾಕ್ಷಿಗೆ ಅಲ್ಲಿಯ ದೃಶ್ಯವನ್ನು ನೋಡಿ ಎದೆ ಒಡೆದು ಹೋಯಿತು. ದಾರಿಯಲ್ಲಿ ಹೆಣಗಳು ಅಲ್ಲಲ್ಲಿ ಬಿದ್ದಿದ್ದುವು. ಇನ್ನೂ ಮುರಿದ ಮನೆಗಳಿಂದ ಮಣ್ಣನ್ನೂ, ಇಟ್ಟಿಗೆಯನ್ನೂ ತೆಗೆದು, ಕೆಳಗೆ ಸಿಕ್ಕಿದ್ದವರನ್ನು ಒಬ್ಬೊಬ್ಬರನ್ನಾಗಿ ಎಳೆದು ಹೊರಗೆ ಹಾಕುತ್ತಿದ್ದರು. ಅನೇಕರನ್ನು ಗುರುತಿಸುವುದೇ ಕಷ್ಟವಾಗುವಂತೆ ಮುಖವೆಲ್ಲಾ ಜಜ್ಜಿ ವಿಕಾರವಾಗಿತ್ತು. ಕೆಲವರಿಗೆ ಕೈಕಾಲುಗಳು ಮುರಿದು ಹೋಗಿದ್ದುವು. ಸಾವಿಗೆ ಸಿಕ್ಕದೆ ತಪ್ಪಿಸಿಕೊಂಡವರು, ಮನೆ ಮಠಗಳನ್ನೂ, ಬಂಧುಗಳನ್ನೂ ಕಳೆದುಕೊಂಡು ಹಾಹಾಕಾರ ಮಾಡುತ್ತ ನಿಲ್ಲುವುದಕ್ಕೆ ನೆಲೆಯಿಲ್ಲದೆ ಅಲೆಯುತ್ತಿದ್ದರು. ರೆಡ್-ಕ್ರಾಸ್ ದಳದವರೂ, ಸರ್ಕಾರದವರೂ-ಸ್ವಯಂಸೇವಕರೂ ಅನ್ನ ಬಟ್ಟೆಗಳನ್ನೂ, ವೈದ್ಯಸಹಾಯವನ್ನೂ ಬಿಡುವಿಲ್ಲದೆ ಒದಗಿಸುತ್ತಿದ್ದರು. ಆಗಲೇ ಅಲ್ಲಲ್ಲಿ ಸಾಂಕ್ರಾಮಿಕ ರೋಗಗಳು ತಲೆದೋರುತ್ತಿದ್ದವು.

ಜನಗಳ ಕಷ್ಟ ಹೇಳುವಂತಿರಲಿಲ್ಲ. ಅವರಿವರು ಹಾಕಿದ್ದನ್ನು ತಿಂದು ಭ್ರಮಿಷ್ಟರಂತೆ ತಿರುಗುತ್ತಿದ್ದರು. ಅವರಿಗೆ ಆ ದುರ್ದಿನದ ನೆನಪು ಸಿಡಿಲು ಬಡಿದಂತೆ ಆಗಿತ್ತು. ಅದರ ಹಿಂದಿನ ದಿನ ರಾತ್ರೆ ಊಟ ಮಾಡಿ ಸಂತೋಷವಾಗಿ ಮಾತಾಡುತ್ತ ಯಾವ ಯೋಚನೆಯೂ ಇಲ್ಲದೆ ಮಲಗಿದ್ದರು. ಇಪ್ಪತ್ತನಾಲ್ಕು ಗಂಟೆಗಳೊಳಗಾಗಿ ಸೌಖ್ಯದ ಬೀಡಾಗಿದ್ದ ಜಾಗವು ರುದ್ರಭೂಮಿಯಾಗಿ ಪರಿಣಮಿಸುತ್ತದೆಯೆಂದು ಕಂಡಿದ್ದವರು ಯಾರು....? ಹಟಾತ್ತಾಗಿ ಬೆಳಗಿನ ಜಾವದಲ್ಲಿ ಗಾಳಿ ಮಳೆಗಳು ಮೊದಲಾದುವು. ಏನೆಂದು ಜನ ಎಚ್ಚರಗೊಳ್ಳುವುದರಲ್ಲಿ ಬಿರುಗಾಳಿ ದಾಳಿಯಿಟ್ಟಿತ್ತು! ಆ....ಸದ್ದೇನು....? ಗದ್ದಲವೇನು....? ದೊಡ್ಡ ಮರಗಳು ಉರುಳುತ್ತಿದ್ದವು. ಸಣ್ಣ ಮರಗಳು ಸುತ್ತಿ ಸುತ್ತಿ, ತಿರುಗಿ ತಿರುಗಿ ಗಾಳಿ ಎಸೆದತ್ತ ಹೋಗಿ ಮನೆಗಳ ಮೇಲೂ, ದನಕರುಗಳ ಮೇಲೂ ಬೀಳುತ್ತಿದ್ದುವು. ಮಳೆ ಸುರಿದು-ಕಟ್ಟೆಗಳೊಡೆದು, ನೀರು ಉಕ್ಕಿ ಹರಿದು ಮನೆ

ಗಳನ್ನೂ, ಜನಗಳನ್ನೂ ಉರುಳಿಸುತ್ತ ಬಂದು ಕೊಚ್ಚಿಕೊಂಡು ಹೋದದ್ದೂ ಹೋದದ್ದೇ! ಅದನ್ನು ತಡೆಯುವವರು ಯಾರೂ ಇಲ್ಲ. ಜನರು ದಿಕ್ಕು ತೋರದಂತೆ ಆಗಿದ್ದರು. ಒಬ್ಬರಿಗೊಬ್ಬರು ಸಹಾಯ ಮಾಡುವ ಸ್ಥಿತಿಯಲ್ಲಿರಲಿಲ್ಲ. ಅಸಹಾಯರಾಗಿ ಪ್ರಬಲವಾದ ಶತ್ರುವಿಗೆ ಯಾವ ತಡೆಯೂ ಇಲ್ಲದೆ ದೇಹವನ್ನು ಒಪ್ಪಿಸಿಬಿಡುತ್ತಿದ್ದರು. ಎಲ್ಲೆಲ್ಲಿಯೂ ಗೋಳು! ಚೀತ್ಕಾರ!! ಆದರೆ ಪ್ರಕೃತಿ ವಿಕಟ ಅಟ್ಟಹಾಸದಿಂದ ಸುಯ್ಯನೆ ಕೂಗುತ್ತ ಆ ಆರ್ತಧ್ವನಿ ಇತರರಿಗೆ ಕೇಳಿಸದಂತೆ ಮಾಡಿದ್ದಳು!

ಕೆಲವರು ಏನೆಂದು ತಿಳಿಯುವ ಮೊದಲೇ ಸತ್ತಿದ್ದರು. ಕೆಲವರು ಪೆಟ್ಟು ತಿಂದು ರೋಗಿಗಳಿಗಾಗಿ ಏರ್ಪಡಿಸಿದ್ದ ಶಿಬಿರದಲ್ಲಿ, ಯಾತನೆಯಿಂದ ನರಳುತ್ತ ಬಿದ್ದಿದ್ದರು ಆ ದಿನದ ನೆನಪೇ ಅವರಿಗೆ ಭಯಂಕರವಾಗಿತ್ತು. ಕನಸಿನಲ್ಲೂ ಅದೇ ದೃಶ್ಯ! ಎಚ್ಚರವಾದರೆ ಕಳೆದುಕೊಂಡವರನ್ನು ನೆನೆದು ಅಳುವುದು! ಸೇವೆಯಲ್ಲಿ ಮಗ್ನರಾದವರು ಎಷ್ಟು ಸಮಾಧಾನ ಮಾಡಿದರೂ ಆಗುವಂತಿರಲಿಲ್ಲ. ಸ್ವಲ್ಪ ಹುಷಾರಾಗಿ ಶಿಬಿರದಿಂದ ಹೊರಬಿದ್ದವರು ಸ್ವಪ್ನದಲ್ಲಿದ್ದವರಂತೆ ಹಿಂದೆ ಆ ಜಾಗದಲ್ಲಿ ನಡೆದ ಸುಖದುಃಖಗಳನ್ನು ನೆನೆದು ಹಂಬಲಿಸುತ್ತಿದ್ದರು. ಮಕ್ಕಳು ಅನಾಥರಾಗಿ ತಿರುಗುತ್ತ, ಸಿಕ್ಕಿದೆಡೆ ತಿಂದು ಮಲಗುತ್ತಿದ್ದರು. ತಾಯಿ ತಂದೆಗಳ್ಯಾರೋ........? ಬಡವರು-ಬಲ್ಲಿದರು, ಜಾತಿ-ಮತ ಒಂದೂ ಇಲ್ಲ! ವಿಧಿ ಎಲ್ಲೆಲ್ಲಿದ್ದವರನ್ನೋ ತಂದು ಒಂದೆಡೆ ಎಸೆದಿತ್ತು!

ಹೀಗೆ ಎರಡು ದಿನಗಳು ಕಳೆದ ಮೇಲೆ ಇಲ್ಲಿನ ಸುದ್ದಿ ಹೊರಗೆ ತಿಳಿದು, ಅಲ್ಲಿಂದ ಸಹಾಯ ಬರಲು ಮೊದಲಾದದ್ದು. ಎಷ್ಟು ಜನ, ಎಷ್ಟು ಧನ ಬಂದರೆ ತಾನೇ ಕಳೆದು ಹೋದ ಸುಖ ಮರಳಿ ಬಂದೀತು!

ರಾಮಚಂದ್ರ ಬೇಡವೆಂದರೂ ಕೇಳದೆ ಮೀನಾಕ್ಷಿ ನೊಂದವರಿಗೆ ನೆರವಾಗುವ ಉದ್ದೇಶದಿಂದ ಬಂದಿದ್ದಳು. ರಾಮಚಂದ್ರನಿಗೆ ಅಲ್ಲಿ ಹೋಗಿ ನೋಡಿದ ಮೇಲೆ ಅವಳನ್ನು ಕರೆತಂದದ್ದು ಸರಿಯಲ್ಲವೆಂದು ತೋರಿತು. ಆದರೆ ಅಲ್ಲಿಂದ ಹಿಂದಿರುಗುವುದು ಬಂದದ್ದಕ್ಕಿಂತಲೂ ಹೆಚ್ಚು ಕಷ್ಟವಾಗಿದ್ದುದರಿಂದ ಸುಮ್ಮನಾಗಬೇಕಾಯಿತು.

ಒಂದು ಕಡೆ ನಿರ್ಮಾಣ ಕಾರ್ಯವು ಒತ್ತರದಿಂದ ನಡೆದಿತ್ತು. ಅಧಿಕಾರಿಗಳು, ಕೆಲಸಗಾರರು-ಕೂಲಿಗಳು ಬಿಡುವಿಲ್ಲದೆ ದುಡಿಯುತ್ತಿದ್ದರು. ಅವರ ಕೆಲಸ ಮುನ್ನಡೆಯುತ್ತಿತ್ತು. ಈ ದಿನ ಮಾಡಿದ ಕೆಲಸ ನಾಳೆಗೆ ಬೆಳೆದು ದೊಡ್ಡದಾಗುತ್ತಿತ್ತು! ಆದರೆ ನಿರಾಶ್ರಿತರಾದ ಜನರನ್ನು ಸಮಾಧಾನಗೊಳಿಸಿ-ಕುಗ್ಗಿಹೋಗಿದ್ದ ಮನಸ್ಸನ್ನು ಹುರುಪುಗೊಳಿಸಿ ಅವರನ್ನು ಮತ್ತೆ ಮನುಷ್ಯರನ್ನಾಗಿ ಮಾಡುವ ಕೆಲಸ ಅಷ್ಟು ಸುಲಭವಾಗಿರಲಿಲ್ಲ. ಆ ಕೆಲಸ ಮೇಲೆ ಕಾಣುವಂತಹುದಲ್ಲ; ಅದಲ್ಲದೆ ಅದಕ್ಕೆ ಹೆಚ್ಚು ಸಮಯವೂ, ತಾಳ್ಮೆಯೂ ಬೇಕಾಗಿತ್ತು. ಮೀನಾಕ್ಷಿ ತನ್ನಂತೆಯೇ ಸೇವೆ ಮಾಡಲು ಮನಸ್ಸಿದ್ದ ಕೆಲವರನ್ನು ಜೊತೆ ಮಾಡಿಕೊಂಡು ಆ ಕೆಲಸವನ್ನು ವಹಿಸಿಕೊಂಡಳು. ಮೊದಮೊದಲು ರೋಗಿಗಳ ಶಿಬಿರ ಅವಳ ಹೆಚ್ಚು ಸಮಯವನ್ನು ಎಳೆದುಕೊಳ್ಳುತ್ತಿತ್ತು. ಅಲ್ಲಿನ ಪರಿಸ್ಥಿತಿಯು ಉತ್ತಮಗೊಳ್ಳುತ್ತಿದ್ದರೂ, ನಿರ್ಮಾಣ ಕಾರ್ಯವು ಇನ್ನೂ ಒಂದೆರಡು ವರ್ಷಗಳು ನಡೆಯುವ ಸಂಭವವಿದ್ದುದರಿಂದ ಅಧಿಕಾರಿಗಳಿಗಾಗಿ ಆಗಲೇ ಮನೆಗಳನ್ನು ಕಟ್ಟುತ್ತಿದ್ದರು. ಆಗಿನ ಮಟ್ಟಿಗೆ ರಾಮಚಂದ್ರ ಬಿದ್ದುಹೋಗಿದ್ದ ಒಂದು ಮನೆಯನ್ನು ಅಲ್ಲಲ್ಲಿ ಸರಿಮಾಡಿಸಿಕೊಂಡು ವಾಸಕ್ಕೆ ಅನುಕೂಲ ಮಾಡಿಕೊಂಡಿದ್ದ. ಅದನ್ನು ಮನೆ ಎನ್ನುವುದಕ್ಕಿಂತ ಗುಡಿಸಲು ಎಂದರೇ ಹೆಚ್ಚು ಒಪ್ಪುತ್ತಿತ್ತು ಬೇರೆಬೇರೆ ಕ್ಷೇತ್ರಗಳಲ್ಲಿ ದುಡಿಯುವ ಜೀವಿಗಳು ಒಂದೆಡೆ ಸೇರಿ ರಾತ್ರಿಯನ್ನು ಕಳೆಯುವ ತಾಣದಂತೆ ಇತ್ತು ಅದು!

ರಾಮಚಂದ್ರ ಕೆಲಸ ಮಾಡಿಸುತ್ತಿದ್ದ ಜಾಗ ಅವರಿದ್ದ ಜಾಗಕ್ಕೆ ಬಹಳ ದೂರವಾಗಿದ್ದುದರಿಂದ ಅವನು ಬೆಳಗ್ಗೆ ಹೋದರೆ ಊಟಕ್ಕೂ ಬರುತ್ತಿರಲಿಲ್ಲ. ಮೀನಾಕ್ಷಿ ದಿನದಲ್ಲಿ ಒಂದೆರಡು ಸಲ ಮನೆಗೆ ಬಂದು ತಿರುಗಿ ಶಿಬಿರಕ್ಕೆ ಹೊರಟುಹೋಗುತ್ತಿದ್ದಳು. ಇಂದಿರ ವಿಶೇಷವಾಗಿ ಹೊರಗೆ ಹೋಗುತ್ತಿರಲಿಲ್ಲ. ಮೀನಾಕ್ಷಿ ಅವಳಿಗೆ ಮನೆಯಲ್ಲಿ ಕುಳಿತು ಮಾಡಬಹುದಾದ ಅನೇಕ ಕೆಲಸಗಳನ್ನು ವಹಿಸಿದ್ದಳು. ಬಟ್ಟೆಗಳನ್ನು ಹೊಲಿಯುವುದು-ಖಾಯಿಲೆಯವರಿಗೆ ಪಥ್ಯಕ್ಕೆ ಆಹಾರವನ್ನು ಒದಗಿಸುವುದು, ಅನಾಥರಾದ ಮಕ್ಕಳ ಯೋಗಕ್ಷೇಮವನ್ನು ನೋಡುವುದು— ಮೊದಲಾದ

ಎಷ್ಟೋ ಕೆಲಸಗಳು ಇರುತ್ತಿದ್ದುವು. ಇಂದಿರ ತವರ್ಮ್ಮನೆಯಿಂದ ಕರೆತಂದಿದ್ದ ಹೆಣ್ಣಾಳಿನ ಸಹಾಯದಿಂದ ಅವೆಲ್ಲವನ್ನೂ ನಿರ್ವಹಿಸುತ್ತಿದ್ದಳು

ಮೀನಾಕ್ಷಿ ಮೂರ್ತಿಗೆ ಕಾಗದ ಬರೆದಳು:—

"........ಮೂರ್ತಿ! ದೇವರು ನಿನಗೆ ಅನುಕೂಲವನ್ನು ಕೊಟ್ಟಿದ್ದಾನೆ. ಹೊಟ್ಟೆ ಬಟ್ಟೆಗಾಗಿ ನೀನು ದುಡಿಯಬೇಕಾಗಿಲ್ಲ. ಆದರೆ ಜನರಿಗೆ ಉಪಕಾರವಾಗುವ ವಿದ್ಯೆಯನ್ನು ಸಂಪಾದಿಸಿದ್ದೀಯೆ! ಅದನ್ನು ಉಪಯೋಗಿಸಲು ಇದಕ್ಕಿಂತ ಬೇರೆ ಸಮಯವಿಲ್ಲ. ಇಲ್ಲಿ ಸಹಾಯವಿಲ್ಲದೆ ಇಲ್ಲ; ಆದರೆ ಸಂತೋಷದಿಂದ ನೆರವಾಗುವ ಪ್ರತಿಯೊಂದು ಸಹಾಯ ಹಸ್ತಕ್ಕೂ ಇಲ್ಲಿ ಜಾಗವಿದೆ—ಅಗತ್ಯವಿದೆ....! ಸೇವೆ ಮಾಡುವ ಆಕಾಂಕ್ಷೆ ಇದ್ದರೆ, ಕಷ್ಟದಲ್ಲಿರುವವರ ಗೋಳು ಕೇಳಿ ಹೃದಯವು ಮರುಗುವಂತಿದ್ದರೆ —ಈ ಕಾಗದ ನೋಡಿದ ಕೂಡಲೇ ಹೊರಟು ಬಾ. ಒಂದು ಗಳಿಗೆಯೂ ವಿಳಂಬ ಮಾಡಬೇಡ........!"

ಮೂರ್ತಿ ಕಾಗದದ ಒಕ್ಕಣೆಯನ್ನು ನೋಡಿ ಬೆರಗಾದ. ಅವನಿಗೆ ನಿಜವಾಗಿ ಮೈಸೂರಿನಲ್ಲಿ ಕೆಲಸವೇನೂ ಇರಲಿಲ್ಲ. ಅವನು ಸ್ವಂತ ವೈದ್ಯಶಾಲೆಯನ್ನು ಎಲ್ಲಿ ತೆರೆಯಬೇಕೆಂದು ಇನ್ನೂ ನಿರ್ಧರಿಸಿರಲಿಲ್ಲ. ಅವನ ದೊಡ್ಡಪ್ಪ ಮರಣಪತ್ರದಲ್ಲಿ ಕೆಲವು ಧರ್ಮಕಾರ್ಯಗಳನ್ನು ಮಾಡುವ ಹೊಣೆಯನ್ನು ಮೂರ್ತಿಯ ಮೇಲೆ ಹಾಕಿದ್ದರು ಮೂರ್ತಿ ಅವೆಲ್ಲಕ್ಕೂ ತಕ್ಕ ಏರ್ಪಾಡು ಮಾಡಿ ಅಲ್ಲಿಂದ ಹೊರಟ.

ಮೂರ್ತಿ ಅಲ್ಲಿಗೆ ಬಂದಾಗ ಮಧ್ಯಾಹ್ನ ಮೀರಿತ್ತು. ಮೀನಾಕ್ಷಿ ಮನೆಯಲ್ಲಿರಲಿಲ್ಲ. ಇಂದಿರನಿಗೆ ಮೀನಾಕ್ಷಿ ಕಾಗದ ಬರೆದಿರುವುದೂ, ಅವನು ಬರುವುದೂ, ಒಂದೂ ಗೊತ್ತಿರಲಿಲ್ಲ. ಅವಳು ಹೊಲಿಯುವ ಯಂತ್ರದ ಮುಂದೆ ಬಗ್ಗಿಕೊಂಡು ಹೊಲಿಯುತ್ತಿದ್ದಳು. ಒಂದು ಪಕ್ಕದಲ್ಲಿ ಹೊಲಿದ ಬಟ್ಟೆಗಳು ರಾಶಿಯಾಗಿ ಬಿದ್ದಿದ್ದುವು. ಸಮೀಪದಲ್ಲಿ ಎರಡು ಮೂರು ಮಕ್ಕಳು ಆಟದ ಸಾಮಾನುಗಳನ್ನು ಇಟ್ಟುಕೊಂಡು ಆಡುತ್ತ ಕುಳಿತಿದ್ದುವು. ಮೂರ್ತಿ ಬರುವಾಗಲೇ ಇವರಿರುವ ಜಾಗವನ್ನು ಹುಡುಕುವ ಸಂದರ್ಭದಲ್ಲಿ ಅಲ್ಲೆಲ್ಲಾ ಒಂದು ಸುತ್ತು ಹಾಕಿಕೊಂಡು ಬಂದಿದ್ದ.

ಅಲ್ಲಿನ ಸ್ಥಿತಿಗತಿಗಳು ತಕ್ಕಮಟ್ಟಿಗೆ ಅವನಿಗೆ ಗೊತ್ತಾಗಿತ್ತು. ಅವನು ಬಂದವನು ನೆಟ್ಟಗೆ ಒಳಗೆ ಹೋಗದೆ ಕುತೂಹಲದಿಂದ ನೋಡುತ್ತ ಬಾಗಿಲ ಬಳಿಯಲ್ಲೇ ನಿಂತನು. ಬೆಳಕು ಬರುತಿದ್ದುದು ಮರೆಯಾಗಲು ಇಂದಿರ ತಲೆ ಎತ್ತಿ ನೋಡಿದಳು.

ಮೂರ್ತಿ ನಗುತ್ತ—

"ನಮಸ್ಕಾರ— ಇಂದಿರಾದೇವಿ. ಮಾಡುವುದಕ್ಕೆ ಬಹಳ ಕೆಲಸ ಸಿಕ್ಕಿರುವಂತಿದೆಯಲ್ಲ......!" ಎಂದನು.

ಇಂದಿರ ನೋಡಿದಳು; ನೋಡಿ ಬೆರಗಾದಳು. ಅಲ್ಲಿಗೆ ಹೋದಾಗ ಬಂದ ಎಲ್ಲರ ಮೇಲೂ ಅಲ್ಲಿನ ಆಗಿನ ವಿಷಮ ಪರಿಸ್ಥಿತಿ ತನ್ನ ನೆರಳನ್ನು ಬೀಳಿಸದೆ ಇರಲಿಲ್ಲ. ಆದರೆ ಮೂರ್ತಿ ಎಲ್ಲದರಿಂದಲೂ ಅತೀತನಂತೆ ತೋರುತ್ತಿದ್ದನು. ಅಲ್ಲಿನ ನೋಟ ಅವನ ಮೇಲೆ ಯಾವ ಪರಿಣಾಮವನ್ನೂ ಮಾಡಲಿಲ್ಲ—ಅಥವಾ ಅವನು ಹಾಗೆ ತೋರಿಸಿಕೊಳ್ಳಲಿಲ್ಲ. ಈ ವಿಚಿತ್ರ ಸನ್ನಿವೇಶದ ನಡುವೆ ಇಂದಿರ ಇದ್ದ ರೀತಿ ವಿನೋದವಾಗಿ ತೋರಿದಂತೆ, ಹಾಸ್ಯದಿಂದ ನಗುತ್ತಿದ್ದ.

ಇಂದಿರನಿಗೆ ಹೇಗೋ ಆಯಿತು. ಬೇರೆ ಸಮಯವಾಗಿದ್ದರೆ ಅವಳು ಒರಟಾಗಿ ಮಾತಾಡುವುದಕ್ಕೂ, ಅಥವಾ ಉದಾಸೀನದಿಂದ ಕಾಣದಂತೆ ಒಳಗೆ ಹೋಗುವುದಕ್ಕೂ ಹಿಂದೆಗೆಯುತ್ತಿರಲಿಲ್ಲ. ಆದರೆ ಮೂರ್ತಿ ಪ್ರಯಾಣದಿಂದ ಆಯಾಸಗೊಂಡು ಬಂದಿದ್ದ. ಮೇಲೆ ನಗುತ್ತಿದ್ದರೂ ಮುಖದಲ್ಲಿ ಬಳಲಿಕೆ ಕಾಣುತ್ತಿತ್ತು. ರಾಮಚಂದ್ರ, ಮೀನಾಕ್ಷಿ ಯಾರೂ ಮನೆಯಲ್ಲಿರಲಿಲ್ಲ. ಅತಿಥಿಯಾಗಿ ಬಂದವನನ್ನು ಸತ್ಕರಿಸುವ ಹೊಣೆ ಅವಳದಾಗಿತ್ತು. ಆದ್ದರಿಂದ ಯತ್ನವಿಲ್ಲದೆ ಇಂದಿರ ಮಾಡುತ್ತಿದ್ದ ಕೆಲಸವನ್ನು ಬಿಟ್ಟು, ಬಾಗಿಲ ಬಳಿಗೆ ಬಂದು ಹಸನ್ಮುಖದಿಂದ—

"ಒಳಗೆ........ಬನ್ನಿ.........!" ಎಂದು ಸ್ವಾಗತಿಸಿದಳು.

ಮೂರ್ತಿ ಅವಳು ತೋರಿದ ಕುರ್ಚಿಯಲ್ಲಿ ಕುಳಿತವನೆ ಕೇಳಿದ—

"ಮೀನ... ಇಲ್ಲವೇನು .....?"

"ಇಲ್ಲ....ಶಿಬಿರಕ್ಕೆ ಹೋಗಿದಾಳೆ...."

"ಯಾವ ಶಿಬಿರ........?"

"ರೋಗಿಗಳದ್ದು..........! ನಿಮಗೆ ಇಲ್ಲಿಯ ವಿಷಯ ತಿಳಿಯದೇನೋ ....ಪಾಪ— ಪತ್ರಿಕೆ ಓದುವ ಅಭ್ಯಾಸವಿಲ್ಲವೇನೋ........!"

ಇಂದಿರ ಹಾಸ್ಯ ಮಾಡುವಂತೆ ಹೇಳಿದಳು. ಅವತ್ತು ಅವನು ನಕ್ಕಿದ್ದಕ್ಕೆ ಸೇಡು ತೀರಿಸಿಕೊಳ್ಳುವಂತಿತ್ತು ಅವಳ ನುಡಿ.

ಮೂರ್ತಿ ಸೋಲಲಿಲ್ಲ. ಅವನೂ ಅದೇ ಭಂಗಿಯಲ್ಲಿ ಹೇಳಿದ—

"ಪತ್ರಿಕೆ ಮುಖ ನೋಡಿ ಎಷ್ಟು ದಿನವಾಯಿತೋ........! ಬೆಟ್ಟದ ಮೇಲೆ ಕಣ್ಣು ಮುಚ್ಚಿ ಕುಳಿತವರಿಗೆ ಪತ್ರಿಕೆ ಎಲ್ಲಿ ಬರಬೇಕು....?"

"ಬೆಟ್ಟದ ಮೇಲೆ........!"

"ಹುಂ........ಮೈಸೂರಲ್ಲಿ ಚಾಮುಂಡಿಬೆಟ್ಟ ಇರೋದು ನಿಮಗೆ ಗೊತ್ತಿರಲಾರದು. ಅಲ್ಲೊಂದು ಗುಹೆ ಇದೆ. ನನಗೆ ಅಲ್ಲಿಂದ ಹೊರಗೆ ಬರುವ ಅಭ್ಯಾಸವೇ ಇಲ್ಲ........!"

ಇಂದಿರ ನಕ್ಕಳು. ಮೂರ್ತಿ ತಮಾಷೆ ಮಾಡುವನೆಂದು ತಿಳಿದು ಕೇಳಿದಳು—

"ಇಲ್ಲಿಗೆ ಯಾಕೆ ಬಂದದ್ದು ? ಇದೇನೂ ಸಾಧನೆಗೆ ಅನುಕೂಲವಾದ ಸ್ಥಳವಲ್ಲ !"

"ಬರುವ ಉದ್ದೇಶವೇನೂ ಇರಲಿಲ್ಲ. ಆದರೆ......ವಿಶಾನ ಬರುವಂತೆ ಬರೆದದ್ದರಿಂದ ಬರಬೇಕಾಯಿತು !"

"ಓಹೋ....ಹಾಗೇನು....ಬಂದಾಯಿತಲ್ಲ. ಈಗ ಸ್ನಾನ ಮಾಡ ಬಹುದು. ನಾನು ವಿಶಾನನಿಗೆ ಹೇಳಿಕಳಿಸುತ್ತೇನೆ."

"ರಾಮಚಂದ್ರ ಎಲ್ಲಿ....?"

ಮೂರ್ತಿ ಬಟ್ಟೆ ತೆಗೆದಿಡುತ್ತ ಕೇಳಿದ.

"ಕೆಲಸಕ್ಕೆ ಹೋಗಿದಾನೆ. ಆವನು ಬರುವುದು ಇನ್ನು ಸಾಯಂ ಕಾಲಕ್ಕೇ...."

ಮೂರ್ತಿ ಸ್ನಾನ ಮಾಡಿ ಬರುವ ವೇಳೆಗೆ ಇಂದಿರ ಆಳಿನ ಕೈಲಿ ಅವನ ಸಾಮಾನುಗಳನ್ನೆಲ್ಲ ಒಳಗಿಡಿಸಿ, ಕೆಲಸದವಳಿಂದ ಊಟಕ್ಕೆ ಸಿದ್ಧ

ಹಡಿಸಿದ್ದಳು. ಮೂರ್ತಿ ಬಂದು ಎಲೆಯ ಮುಂದೆ ಕುಳಿತ. ಹಿತವಾಗಿ ಸ್ನಾನ ಮಾಡಿದ್ದರಿಂದ ಪ್ರಯಾಣದ ಆಯಾಸ ಅರ್ಧ ಕಳೆದಂತಾಗಿತ್ತು.

ರಾಮಚಂದ್ರನ ಮನೆಯಲ್ಲಿ ಅತಿಥಿಗಳಿಗೆ ಅಭಾವವಿಲ್ಲ. ಯಾವಾಗಲೂ ಹೋಗಿಬರುವವರು ಇದ್ದೇ ಇರುತ್ತಿದ್ದರು. ಅವರನ್ನು ಉಪಚರಿಸಿ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಮನೆಯಲ್ಲಿ ಎಲ್ಲರಿಗೂ ಅಭ್ಯಾಸವಾಗಿತ್ತು. ಇಂದಿರನಿಗೆ ಇದೇನೂ ಹೊಸದಲ್ಲ. ಸಂಕೋಚವಿಲ್ಲದೆ ಎಲ್ಲರೊಡನೆಯೂ ನಡೆದುಕೊಳ್ಳುತ್ತಿದ್ದವಳಿಗೆ ಇಂದು ಹೇಗೋ ಆಗಿ ಬಾಯಿ ಕಟ್ಟಿದಂತಾಗಿತ್ತು. ಅವನೊಬ್ಬನನ್ನೇ ಊಟ ಮಾಡಲು ಬಿಟ್ಟು ತಾನು ಹೊರಗಿರುವುದು ಸಭ್ಯತನವಲ್ಲವೆಂದು ಅಲ್ಲೇ ಸ್ವಲ್ಪ ದೂರದಲ್ಲಿ ನಿಂತಿದ್ದಳು. ಆಗಾಗ ಕೆಲಸದವಳಿಗೆ ಇನ್ನಷ್ಟು ಬಡಿಸಲು ಹೇಳುತ್ತಿದ್ದಳು. ಮೂರ್ತಿ ತಲೆ ತಗ್ಗಿಸಿ ಮೌನವಾಗಿಯೇ ಊಟವನ್ನು ಸಾಗಿಸುತ್ತಿದ್ದ. ಬಂದವರೊಡನೆ ಅಷ್ಟು ಮಾತಾಡುವ ಇಂದಿರ ಇಂದು ಮೂಕಿಯಂತೆ ನಿಂತುದನ್ನು ನೋಡಿ ಕೆಲಸದವಳು ಆಗಾಗ ಕುತೂಹಲದಿಂದ ಅವಳ ಕಡೆ ನೋಡುತ್ತಿದ್ದಳು. ಅವಳ ನೋಟವನ್ನು ನೋಡಿಯೋ ಅಥವಾ ಮೌನವು ಬೇಸರವಾಗಿಯೋ— ಇಂದಿರ,

"ರಂಗನೂರಿನಲ್ಲಿ ಎಲ್ಲಾ ಚೆನ್ನಾಗಿರುವರೇ ?" ಎಂದು ಕೇಳಿದಳು.

ಮೂರ್ತಿ ಏನೋ ಯೋಚಿಸುತ್ತಿದ್ದವನು ತಟ್ಟನೆ—

"ಹೂಂ...." ಎಂದ.

"ಹರಿ ಹೇಗಿದಾನೆ....?"

"ಅವನಿಗೇನು....ತುಂಟ....ಜೋರಾಗಿದಾನೆ!"

"ಹಾಗಾದರೆ ನೀವು ಆಗಾಗ ಬೆಟ್ಟ ಇಳಿದು ಅಲ್ಲಿಗೆ ಹೋಗೋದುಂಟು....!"

ಮೂರ್ತಿ ಜೋರಾಗಿ ನಕ್ಕ. ಕೆಲಸದವಳು ಅನ್ನ ಬಡಿಸಿ ಒಳಗೆ ಹೋಗುತ್ತಿದ್ದವಳು ಬೆಚ್ಚಿ ತಿರುಗಿ ನೋಡಿದಳು. ಅವಳಿಗೆ ಅವರು ಆಡಿದ ಮಾತು ಅರ್ಥವಾಗದಿದ್ದರೂ ನಕ್ಕದ್ದನ್ನು ನೋಡಿ ತಾನೂ ನಗುಮುಖದಿಂದ ಒಳಗೆ ಹೋದಳು.

ಮೂರ್ತಿ ಕೈತೊಳೆದು ಬರುವ ವೇಳೆಗೆ ನಿಂಗ ಹಾಸಿಗೆ ಸಿದ್ಧ ಮಾಡಿದ್ದ. ಮಲಗಿದ ಕೂಡಲೇ ನಿದ್ರೆ ಬಂದುಬಿಟ್ಟಿತು. ಅವನು ಎದ್ದಾಗ ಸಂಜೆ ಸಮೀಪಿಸುತ್ತಿತ್ತು. ಹೊರಗೆ ಮೀನಾಕ್ಷಿ ಇಂದಿರನೊಡನೆ ಮಾತಾಡುತ್ತಿದ್ದಳು. ಮೂರ್ತಿಯೊಡನೆ ಕುಶಲಪ್ರಶ್ನೆ ಮಾಡಿ, ಆ ದಿನವೇ ಅವನನ್ನು ಶಿಬಿರಕ್ಕೆ ಕರೆದುಕೊಂಡುಹೋದಳು.

* * * * *

ಅಲ್ಲಿಯ ಸ್ಥಿತಿ ಮೂರ್ತಿ ಯೋಚಿಸಿದ್ದಕ್ಕಿಂತ ಹೆಚ್ಚು ಶೋಚನೀಯವಾಗಿತ್ತು. ಸರ್ಕಾರದವರೂ-ಇತರರೂ ಅಷ್ಟು ಪ್ರಯತ್ನ ಮಾಡುತ್ತಿದ್ದರೂ ಅಂಟುರೋಗಗಳು ಹೆಚ್ಚುಹೆಚ್ಚಾಗಿ ಹರಡುತ್ತಲೇ ಇದ್ದುವು. ಬಿರುಗಾಳಿಗೆ ತುತ್ತಾದಂತೆ ಜನರು ರೋಗಕ್ಕೂ ಯಾವ ಪ್ರತಿಭಟನೆಯೂ ಇಲ್ಲದೆ ಸುಲಭವಾಗಿ ಗುರಿಯಾಗಿಬಿಟ್ಟಿದ್ದರು. ಮುಖ್ಯವಾಗಿ ಜನರು ಇವರೊಡನೆ ಸಹಕರಿಸುತ್ತಿರಲಿಲ್ಲ. ಅವರಿಗೆ ರೋಗವನ್ನು ಇದಿರಿಸುವ ಶಕ್ತಿಯಾಗಲೀ, ಅಪೇಕ್ಷೆಯಾಗಲೀ ಉಳಿದಿರಲಿಲ್ಲ. ಬದುಕಬೇಕು-ಮೊದಲಿನಂತೆ ಬಾಳಬೇಕು ಎಂಬ ಆಸೆ ದೂರವಾಗಿತ್ತು. ಇವರು ಹೇಳಿದ್ದೆಲ್ಲವನ್ನೂ ನಿರ್ಬಂಧದಿಂದ ಮಾಡುತ್ತಿದ್ದರು. ಹೀಗಾಗಿ ಇವರು ಮಾಡುತ್ತಿದ್ದ ಕೆಲಸ ಎಷ್ಟು ಆಗಬಹುದಾಗಿತ್ತೋ ಅಷ್ಟು ಅನುಕೂಲವಾಗಿ ನಡಿಯುತ್ತಿರಲಿಲ್ಲ. ಮೂರ್ತಿ ಅದನ್ನು ತಿಳಿದವನಾಗಿ ಮೊದಲು ಆ ಕೆಲಸಕ್ಕೆ ಕೈಹಾಕಿದ. ಒಳ್ಳೆಯ ಮಾತುಗಳಿಂದ ಜನರ ಮನಸ್ಸನ್ನು ಒಲಿಸಿಕೊಂಡು ತನ್ನ ಮಾತುಗಳಲ್ಲಿ ಅವರಿಗೆ ನಂಬಿಕೆ ಹುಟ್ಟುವಂತೆ ಮಾಡಿಕೊಂಡ. ಎರಡನೆಯದಾಗಿ ಯಾವುದನ್ನೂ ನಿರ್ಬಂಧದಿಂದ ಅವರ ಮೇಲೆ ಹೊರಿಸದೆ, ತಾವೇ ಸಂತೋಷದಿಂದ ಮಾಡುವಂತೆ ಪ್ರೇರೇಪಿಸುತ್ತ ಬಂದ. ಅವಕಾಶವಾದಾಗಲೆಲ್ಲಾ ಅವರಿಗೆ—

ಮನುಷ್ಯರಿಗೆ ಕಷ್ಟ ಬಂದ ಮಾತ್ರಕ್ಕೇ ಎದೆಗೆಡಬಾರದೆಂದೂ, ಬದುಕಿದರೆ ಒಂದಲ್ಲ ಒಂದು ರೀತಿಯಲ್ಲಿ ಸುಖವನ್ನು ಕಾಣಬಹುದೆಂದೂ, ಆಶೆಯನ್ನು ತೋರಿಸುತ್ತ—ಹಿಂದೆ ಇದಕ್ಕಿಂತ ಹೆಚ್ಚಿನ ಕಷ್ಟಗಳು ಬಂದಾಗ ಜನರು ಅದನ್ನು ಹೇಗೆ ಧೈರ್ಯದಿಂದ ಎದುರಿಸಿದರೆಂಬುದನ್ನು ಪುರಾಣ

ಗಳಿಂದಲೂ, ಇತರ ದೇಶದ ಇತಿಹಾಸದಿಂದಲೂ ಉದಹರಿಸಿ-ಕತೆ ಹೇಳಿದಂತೆ ಅವರ ಮನಸ್ಸಿಗೆ ಹಿಡಿಯುವಂತೆ ಬೋಧಿಸುತ್ತ ಬಂದ. ಅದು ಯಕ್ಷಿಣಿಯಂತೆ ತನ್ನ ಕೆಲಸವನ್ನು ಮಾಡಿತು. ಅವನಿಗೆ ಮೊದಲೇ ಅಲ್ಲಿ ಕೆಲಸ ಮಾಡುತ್ತಿದ್ದ ಇತರರು ಆಶ್ಚರ್ಯಗೊಳ್ಳುವಂತೆ ಜನ ಉತ್ತಮಗೊಳ್ಳುತ್ತ ಬಂದರು. ಬಂದ ಕೆಲವು ದಿನಗಳಲ್ಲೇ ಮೂರ್ತಿಯ ಹೆಸರು ಎಲ್ಲರ ಬಾಯಿ ಮಾತಾಯಿತು. ಅವನಿಲ್ಲದೆ ಶಿಬಿರದಲ್ಲಿ ಯಾವ ಕಾರ್ಯವೂ ನಡೆಯುತ್ತಿರಲಿಲ್ಲ.

ದಿಕ್ಕಿಲ್ಲದ ಹುಡುಗರನ್ನೆಲ್ಲಾ ಕಲ್ಕತ್ತೆಯ "ಅನಾಥಾಶ್ರಮ"ಕ್ಕೆ ಸಾಗಿಸಿದ್ದರು. ಇಂದಿರನಿಗೆ ಈಗ ಹೆಚ್ಚು ವಿರಾಮ ದೊರೆಯುತ್ತಿತ್ತು. ಆಗಾಗ ಅವಳು ಮೂರ್ತಿಯ ಜೊತೆ, ಕೆಲಸದಲ್ಲಿ ನುರಿತ ದಾದಿಯಂತೆ ಔಷಧಿಯ ಸೀಸೆಗಳನ್ನೂ-ಇತರ ಉಪಕರಣಗಳನ್ನೂ ಹಿಡಿದುಕೊಂಡು, ರೋಗಿಗಳನ್ನು ಉಪಚರಿಸುವುದರಲ್ಲಿ ಅವನಿಗೆ ನೆರವಾಗುತ್ತಿದ್ದಳು. ಇಂದಿರ ನಗುಮುಖದಿಂದ ಓಡಾಡುತ್ತ ನಡುನಡುವೆ ಒಬ್ಬೊಬ್ಬರ ಸಂಗಡ ನಯವಾಗಿ ಒಂದೆರಡು ಮಾತಾಡಿ, ತಮಾಷೆಯನ್ನೂ ಮಾಡುತ್ತ ಅವರ ದುಃಖದಿಂದ ತುಂಬಿದ ಬಾಳಿನಲ್ಲಿ ನಗುವನ್ನು ತರಲು ಪ್ರಯತ್ನಿಸುತ್ತಿದ್ದಳು. ಮೀನಾಕ್ಷಿಗೆ ಇಂದಿರನನ್ನು ಹೊರಗೆ ಕಳಿಸುವುದು ಇಷ್ಟವಿಲ್ಲದಿದ್ದರೂ—"ಅದರಿಂದ ಗುಣವಿದೆ....ಕಳಿಸು...." ಎಂದು ಮೂರ್ತಿ ಹೇಳಿದ್ದರಿಂದ ಒಪ್ಪಿಕೊಂಡಿದ್ದಳು. ಯಾವ ಅಪೇಕ್ಷೆಯೂ ಇಲ್ಲದೆ ಕಷ್ಟವನ್ನೇ ಕಾಣದ ಆ ಶ್ರೀಮಂತ ಕುಟುಂಬದವರು ತಮಗಾಗಿ ಹಗಲಿರುಳೂ ದುಡಿಯುವುದನ್ನು ನೋಡಿ, ಅಲ್ಲಿಯ ಜನರ ಬಾಳಿನಲ್ಲಿ ಹೊಸ ಬೆಳಕು ಮೂಡುತ್ತಿತ್ತು.

ಪರಿಸ್ಥಿತಿ ದಿನದಿನಕ್ಕೆ ಉತ್ತಮಗೊಂಡಿತು. ಕಳವಳವು ಕಡಿಮೆಯಾಯಿತು. ಸ್ವಲ್ಪಸ್ವಲ್ಪವಾಗಿ ಜನರು ತಮ್ಮ ಕೆಲಸ ಕಾರ್ಯಗಳನ್ನು ಮಾಡಲು ಮೊದಲು ಮಾಡಿದರು. ಸಹಾಯಕ್ಕಾಗಿ ಹೊರಗಿನಿಂದ ಬಂದ ಜನರು ತಮ್ಮ ಜಾಗಗಳಿಗೆ ಹೋದರು. ಆದರೆ ಮೀನಾಕ್ಷಿಯ ಕೆಲಸ ಮಾತ್ರ ಕಡಿಮೆಯಾಗಲಿಲ್ಲ. ಜನಗಳ ಜೊತೆ ಹೆಚ್ಚು ಬೆರೆದಂತೆ ಅವರ

ಕಷ್ಟ ಸುಖಗಳು ಹೆಚ್ಚಾಗಿ ಗೊತ್ತಾಗುತ್ತ ಬಂದಿತು. ದೇಶದಲ್ಲಿ ಸಿರಿತನ-ಬಡತನಗಳು ಹೇಗೆ ಬೇರೆ ಬೇರೆಯಾಗಿ ಬೆಳೆಯುತ್ತ ಬಂದಿವೆಯೋ, ಹಾಗೆಯೇ ವಿದ್ಯೆ-ಅಜ್ಞಾನ ಎರಡೂ ಎರಡು ಮುಖವಾಗಿ ಬೆಳೆಯುತ್ತ ಬಂದಿರುವುದು ಗೋಚರಿಸಿತು. ತೀರ ಹೀನಸ್ಥಿತಿಯಲ್ಲಿದ್ದರೂ ಅದರಲ್ಲೇ ತೃಪ್ತರಾಗಿ ಇರುತ್ತಿದ್ದ ಜನರಿಗಾಗಿ–ಅವರ ಮೌಢ್ಯಕ್ಕಾಗಿ ಮೀನಾಕ್ಷಿಯ ಹೃದಯ ತಲ್ಲಣಿಸಿತು. ಅದಲ್ಲದೆ ಜನರು ತಮ್ಮ ಸ್ಥಿತಿಯನ್ನು 'ಅಷ್ಟೇ ಸರಿ' ಎಂದುಕೊಂಡುಬಿಟ್ಟಿದ್ದರು. ತಮ್ಮ ಗುಡಿಸಲು, ಹೊಲ-ತೋಟ ಜಾನುವಾರುಗಳು ...ಇಷ್ಟರಲ್ಲಿ ಅವರ ಪ್ರಪಂಚ ಮುಗಿದುಹೋಗುತ್ತಿತ್ತು. ಅದರಿಂದ ಆಚೆ ಅವರ ಬುದ್ಧಿ ಓಡುತ್ತಿರಲಿಲ್ಲ. ಅದು ಅವರಿಗೆ ಬೇಕಾಗಿಯೂ ಇರಲಿಲ್ಲ. ಅವರ ನಂತರ ಅವರ ಮಕ್ಕಳು ಮೊಮ್ಮಕ್ಕಳು ಆ ಜಾಗವನ್ನು ಆಕ್ರಮಿಸುತ್ತಿದ್ದರು. ಅವರೂ ಅಷ್ಟೆ! ನಾವೂ ಮನುಷ್ಯರೇ —ಮನಸ್ಸು ಮಾಡಿದರೆ ನಾವೂ ಎಲ್ಲರಂತೆ ಆಗಬಹುದು! ಎಂಬುದು ಅವರಿಗೆ ತೋರುತ್ತಿರಲಿಲ್ಲ. ಮೀನಾಕ್ಷಿ ಅವರಿಗೆ—

"ನಮ್ಮನ್ನೂ ನಿಮ್ಮನ್ನೂ ದೇವರು ಒಂದೇ ರೀತಿ ಮಾಡಿದಾನೆ. ಕೇವಲ ಕೂಲಿ ಮಾಡುವುದಕ್ಕೇ ಅಲ್ಲ ನೀವು ಹುಟ್ಟಿರುವುದು! ನೀವು ತಿಳುವಳಿಕೆಯನ್ನು ಸಂಪಾದಿಸಲು ಪ್ರಯತ್ನ ಪಡಬೇಕು........" ಎಂದು ಹೇಳುತ್ತಿದ್ದಳು.

ಅವರುಗಳು ನಗುತ್ತ—

"ಅವೆಲ್ಲಾ ನಮಗೇಕೆ ತಾಯಿ........?"

ಎಂದು ಬಿಡುತ್ತಿದ್ದರು. ಆದರೆ ಮೀನಾಕ್ಷಿ ಅಷ್ಟಕ್ಕೇ ನಿರಾಶಳಾಗಲಿಲ್ಲ. ಆಗಾಗ ಅವರನ್ನೆಲ್ಲಾ ಒಂದು ಕಡೆ ಸೇರಿಸಿ ವರ್ತಮಾನ ಪತ್ರಿಕೆಗಳನ್ನು ಓದಿ ಸಮಾಚಾರ ಹೇಳುವುದು—ಯುದ್ಧದ ವಿಚಾರಗಳನ್ನು ವರ್ಣಿಸುವುದು; ಜೊತೆಗೆ—

"ನೋಡಿ—ನೀವು ಓದಿ ಬರೆಯುವುದನ್ನು ಕಲಿತರೆ, ಕೂತಲ್ಲೇ ಪ್ರಪಂಚದ ವಿಚಾರವನ್ನೆಲ್ಲಾ ತಿಳಿಯಬಹುದು."

ಎಂದು ಹೇಳುತ್ತಿದ್ದಳು.

ಅವಳ ಪ್ರೋತ್ಸಾಹದಿಂದ ಕೆಲವು ಹೆಂಗುಸರು ಅಕ್ಷರಗಳನ್ನು ಕಲಿಯಲು ಮೊದಲು ಮಾಡಿದರು. ಒಬ್ಬರನ್ನು ನೋಡಿ ಒಬ್ಬರು! ದಿನ ದಿನಕ್ಕೆ ಕಲಿಯುವವರ ಸಂಖ್ಯೆ ಹೆಚ್ಚಿತು. ಮೀನಾಕ್ಷಿಯೂ ಇಂದಿರನೂ ಬೇಸರವಿಲ್ಲದೆ ಕಲಿಸುತ್ತಿದ್ದರು. ಜೊತೆಗೆ ನೂಲುವುದು ನೇಯುವುದು— ಚಾಪೆ ಹೆಣೆಯುವುದು ಮೊದಲಾದ ಕೆಲಸಗಳನ್ನೂ ಮಾಡಿಸುತ್ತಿದ್ದರು. ಆ ಕೆಲಸಗಳು ಅವರಿಗೆ ಬಾರದೆ ಇರಲಿಲ್ಲ. ಆದರೆ ನಾಲ್ಕು ಜನ ಒಂದು ಕಡೆ ಸೇರಿ ಒಗ್ಗಟ್ಟಾಗಿ ಕೆಲಸ ಮಾಡಲು ಮೊದಲಾದಮೇಲೆ ಅವರ ಕೆಲಸಕ್ಕೆ ಒಂದು ವ್ಯವಸ್ಥಿತವಾದ ರೂಪು ಬಂತು ಅಷ್ಟೆ! ವಾರದಲ್ಲಿ ಒಂದೆರಡು ದಿನ ಮೀನಾಕ್ಷಿ ರಾಮಾಯಣವನ್ನೋ ಭಾರತವನ್ನೋ ಓದಿ ಅರ್ಥ ಹೇಳುತ್ತಿದ್ದಳು. ಶಾಸ್ತ್ರಿಗಳು ಅವುಗಳನ್ನು ಪಾಠಮಾಡಿಸಿದ್ದು ಆಗಲೀಗ ಸಾರ್ಥಕವಾಯಿತು. ಕೇಳುವವರು ಕಷ್ಟದ ಭಾಗ ಬಂದಾಗ ಕಣ್ಣೀರು ಸುರಿಸುತ್ತ ಸಂತೋಷದ ವಿಚಾರ ಬಂದಾಗ ನಗುತ್ತ, ತಮ್ಮ ದಿನದ ತಾಪತ್ರಯಗಳನ್ನು ಮರೆಯುತ್ತಿದ್ದರು. ಕೇಳುತ್ತ ಅವರಿಗೆ ತಾವೂ ಕಲಿಯಬೇಕೆಂಬ ಉತ್ಸಾಹ ಇಮ್ಮಡಿಯಾಗುತ್ತಿತ್ತು. ಈಗ್ಗ ಅವರು ಮನೆಯಲ್ಲಿ ಯಾರಿಗಾದರೂ ಖಾಯಿಲೆಯಾದರೆ, ಮಾರಿ ಮಸಣಿಗಳನ್ನು ಹುಡುಕಿಕೊಂಡು ಹೋಗುವ ಬದಲು, ಸೀಸೆ ಹಿಡಿದುಕೊಂಡು ಮೂರ್ತಿಯ ಬಳಿಗೆ ಬರುವ ಮಟ್ಟಿಗೆ–ಅವರ ಬಾಳಿನಲ್ಲಿ ಬದಲಾವಣೆ ಆಗಿತ್ತು.

ಅಧಿಕಾರಿಗಳಿಗಾಗಿ ಕಟ್ಟುತ್ತಿದ್ದ ಮನೆ ಮುಗಿಯಿತು. ಒಂದು ಒಳ್ಳೆಯ ದಿವಸ ನೋಡಿ ರಾಮಚಂದ್ರ ಅಲ್ಲಿಗೆ ವಾಸಕ್ಕೆ ಹೊರಡಲು ನಿಶ್ಚಯಿಸಿದ. ಅವರು ಬಂದಾಗ ಅತ್ಯವಶ್ಯಕವಾಗಿ ಬೇಕಾದ ಕೆಲವು ಸಾಮಾನುಗಳನ್ನು ಮಾತ್ರ ತಂದಿದ್ದರು. ಮನೆಯ ಕೆಲಸ ಮುಗಿದ ಕೂಡಲೇ ಇತರರು ತಮ್ಮ ಮನೆಯವರನ್ನು ಕರೆಸಿದರು. ಅವರ ಸಂಗಡ ರಾಮಚಂದ್ರ ತಾವು ಹಿಂದೆ ಬಿಟ್ಟುಬಂದಿದ್ದ ಸಾಮಾನುಗಳನ್ನೆಲ್ಲಾ ತರಿಸಿದ. ಹೊಸಮನೆಗೂ ಇವರು ಇದುವರೆಗೆ ಇದ್ದ ಜಾಗಕ್ಕೂ ಬಹಳ ದೂರ. ಇಲ್ಲಿನ ಕೆಲಸಗಳು ಮುಗಿದ ಮೇಲೂ ಆ ಭಾಗದಲ್ಲಿ ಆಗತಕ್ಕ ಕೆಲಸಗಳೇ ಹೆಚ್ಚಾಗಿ ಇದ್ದುದರಿಂದ, ಮನೆಯನ್ನು ಅಲ್ಲಿಗೆ ಹತ್ತಿರವಾಗುವಂತೆ ಕಟ್ಟಿದ್ದರು.

ಮೀನಾಕ್ಷಿ ಅಷ್ಟು ದೂರ ಹೊರಟುಹೋಗುವಳೆಂದು ತಿಳಿದು ಅವಳ ಹತ್ತಿರ ಓಡಾಡಿಕೊಂಡಿದ್ದ—ಅದರಲ್ಲೂ ಅವಳ ಮೂಲಕ ಬೆಳಕನ್ನು ಕಾಣಲು ಪ್ರಯತ್ನಪಡುತ್ತಿದ್ದ ಜನರಿಗೆ ಬಹಳ ದುಃಖವಾಯಿತು. ಅವರು ಮಕ್ಕಳಂತೆ ಅತ್ತರು. ಮೀನಾಕ್ಷಿ ಅವರೆಲ್ಲರನ್ನೂ ಸಮಾಧಾನಮಾಡಿ ತಾನು ವಾರದಲ್ಲಿ ಒಂದೆರಡು ಸಲವಾದರೂ ಅಲ್ಲಿಗೆ ಬರುವುದಾಗಿಯೂ— ಮೊದಲಿನಂತೆಯೇ ಮೂರ್ತಿಯೊಡನೆ ಬಂದು ಅವರ ಯೋಗಕ್ಷೇಮವನ್ನು ನೋಡಿಕೊಳ್ಳುವುದಾಗಿಯೂ ಭರವಸೆ ಕೊಟ್ಟು ಮಕ್ಕಳಿಗೆ ತಿಂಡಿಯನ್ನೂ-ಬಟ್ಟೆಗಳನ್ನೂ ಹಂಚಿ ಹೊರಟಳು. ಆ ಬಳಗವನ್ನು ಬಿಟ್ಟು ಹೊರಡುವುದು ಅವಳಿಗೂ ಕಷ್ಟವಾಗಿತ್ತು. ಸಾಮಾನು ಕಟ್ಟುತ್ತಿದ್ದಾಗ ಅವಳ ಕಣ್ಣಲ್ಲಿ ನೀರಾಡುತ್ತಿದ್ದುದನ್ನು ನೋಡಿ ರಾಮಚಂದ್ರ—

"ಮೀನಾ—ಇಲ್ಲಿಗೆ ಬಂದಾಗಿನಿಂದ ನಿನ್ನ ನಗುಮುಖವನ್ನು ನೋಡುತ್ತ-ಇಷ್ಟು ತೊಂದರೆಯಲ್ಲೂ ಒಂದು ದಿನವೂ ಕಷ್ಟ ಕಾಣಿಸಲಿಲ್ಲ. ಪಟ್ಟಣದಲ್ಲಿ ಅಷ್ಟು ಅನುಕೂಲಗಳ ನಡುವೆ ಸಿಕ್ಕದಿದ್ದ ಸುಖಶಾಂತಿಗಳು-ಹಳ್ಳಿಯಲ್ಲಿ ಈ ಜನರ ಮಧ್ಯೆ ನಿನಗೆ ದೊರಕುವುದೆಂದು ತಿಳಿದಿದ್ದರೆ, ಮೊದಲೇ ಯಾವುದಾದರೂ ಅಂತಹ ಜಾಗಕ್ಕೆ ವರ್ಗ ಮಾಡಿಸಿಕೊಂಡು ಹೋಗುತ್ತಿದ್ದೆ. ಮೀನಾ....! ಇಲ್ಲಿಂದ ಹೊರಟುಹೋಗುವುದರಿಂದ ಪುನಃ ಅದು ಎಲ್ಲಿ ಮರೆಯಾಗುವುದೋ ಎಂದು ಹೆದರಿಕೆಯಾಗುತ್ತಿದೆ.....!" ಎಂದು ಹೇಳಿದ.

ಮೀನಾಕ್ಷಿ ವಿಷಾದದಲ್ಲೂ ನಗುತ್ತ ಹೇಳಿದಳು—

"ನಿಮ್ಮ ಬಳಿ ನಾನು ಯಾವಾಗಲೂ ಸುಖವಾಗಿಯೇ ಇದ್ದೇನೆ. ಅದು ಈಗ ಹೆಚ್ಚಾಗಿದೆಯೆಂದು ನಿಮ್ಮ ಮನಸ್ಸಿಗೆ ತೋರಿ, ಅದರಿಂದ ನಿಮಗೆ ಸಂತೋಷವಾಗುವಂತಿದ್ದರೆ........ಮುಂದೆಯೂ ನನಗೆ ಆಗಾಗ ಇಲ್ಲಿಗೆ ಬರಲು ಅವಕಾಶ ಕೊಟ್ಟರೆ........"

ರಾಮಚಂದ್ರ ಸಂತೋಷದಿಂದ ಒಪ್ಪಿಕೊಂಡ.

ಹೊಸಮನೆಗೆ ಹೋದ ಮೇಲೆ ಮೊದಲು ಒಂದು ವಾರ ಸಾಮಾನು ಗಳನ್ನು ಸರಿಯಾಗಿಟ್ಟು, ಸಂಸಾರ ಮೊದಲಿನಂತೆ ನಡೆಯಲು ಏರ್ಪಾಡು ಮಾಡುವುದು, ಹೊಸದಾಗಿ ಬಂದಿದ್ದ ನೆರೆಯವರನ್ನು ನೋಡಿಬರುವುದು, ಇದರಲ್ಲಿ ಕಳೆದುಹೋಯಿತು. ಮೂರ್ತಿಗೆ ಅಲ್ಲಿದ್ದು ಮಾಡಬೇಕಾದ ಕೆಲಸವೇನೂ ಇರಲಿಲ್ಲ. ಕೆಲಸವಿಲ್ಲದೆ ಮತ್ತೊಬ್ಬರ ಮನೆಯಲ್ಲಿ ಹೆಚ್ಚು ದಿವಸ ಇರಲು ಅವನಿಗೆ ಇಷ್ಟವಿಲ್ಲ. ಮೈಸೂರಿಗೆ ಹೋಗುವುದೇ ಸರಿ ಯೆಂದು ಯೋಚಿಸಿ ಮೀನಾಕ್ಷಿಗೆ ಅದನ್ನು ತಿಳಿಸಿದ. ಮೀನಾ ಒಪ್ಪಲಿಲ್ಲ.

"ಏಕೆ ಮೂರ್ತಿ—ನಿನಗೆ ಇಲ್ಲೇನು ತೊಂದರೆ....? ಸ್ವತಂತ್ರವಾಗಿ ವೈದ್ಯಶಾಲೆಯನ್ನು ಇಡಬೇಕೆಂದು ಯೋಚಿಸಿರುವವನಿಗೆ ಯಾವೂರಾದರೆ ಏನು? ಇಲ್ಲಿನ ಕೆಲಸದವರು-ಇತರರು, ಮೊದಲಿದ್ದವರು, ಈಗ ಬಂದ ವರು ಎಲ್ಲರೂ ಸೇರಿದರೆ ಜನಸಂಖ್ಯೆ ಯಾವ ದೊಡ್ಡ ಊರಿಗೂ ಕಡಿಮೆ ಯಾಗುವುದಿಲ್ಲ; ಇಂತಹ ಸ್ಥಳದಲ್ಲಿ ವೈದ್ಯಸಹಾಯ ಬೇಡವೇ....? ಅದ ಲ್ಲದೆ ಮೂರ್ತಿ....ನನಗೂ ಮೊದಲಿನಂತೆ ಆರೋಗ್ಯವಿಲ್ಲ. ನಿನ್ನ ಸಹಾಯ ವಿಲ್ಲದೆ ಇಂದಿರ ಒಬ್ಬಳನ್ನೇ ಎಲ್ಲಿಗೂ ಕಳುಹುವಂತಿಲ್ಲ. ನಿನ್ನನ್ನೇ ನಂಬಿ ಕೊಂಡಿರುವ ಆ ಜನಗಳನ್ನು ಇಷ್ಟು ಬೇಗ ಮರೆತುಬಿಡುವೆಯಾ ಮೂರ್ತಿ ........!" ಎಂದಳು.

ಮೂರ್ತಿಗೂ ಅದೇ ಸರಿಯೆನಿಸಿತು. ಅದಲ್ಲದೆ ತನ್ನ ಊರಿನಲ್ಲಿ ಅವನನ್ನು ಆಕರ್ಷಿಸಲು ಬೇರೇನೂ ಇರಲಿಲ್ಲ. ಒಂದೆರಡು ದಿವಸ ಆಲೋಚಿಸಿ, ಹತ್ತಿರದಲ್ಲಿಯೆ ತಾನು ಬೇರೆ ಮನೆ ಮಾಡಿಕೊಂಡು ಇರಲು ಒಪ್ಪುವುದಾದರೆ ಅವನಿಗೆ ಅಲ್ಲಿರಲು ಆಕ್ಷೇಪಣೆಯೇನೂ ಇಲ್ಲವೆಂದು ತಿಳಿಸಿದ. ಆ ಏರ್ಪಾಡಿಗೆ ರಾಮಚಂದ್ರ ಮೀನಾಕ್ಷಿ ಇಬ್ಬರೂ ಒಪ್ಪಿದರು. ಮೂರ್ತಿ ರಾಮಚಂದ್ರನ ಮನೆಗೆ ಸಮೀಪವಾಗಿ ಒಂದು ಮನೆಯನ್ನು ತೆಗೆದುಕೊಂಡು, ಅದರಲ್ಲಿ ಮುಂಭಾಗದ ಎರಡು ಕೋಣೆಗಳನ್ನು ವೈದ್ಯ ಶಾಲೆಯನ್ನಾಗಿ ಮಾಡಿಕೊಂಡ. ಹಿಂಭಾಗದಲ್ಲಿ ವಾಸಮಾಡುವುದೆಂದು

ಗೊತ್ತಾಯಿತು. ಕೆಲವು ದಿವಸಗಳಲ್ಲಿ ಅದಕ್ಕೆ ಬೇಕಾಗುವ ಸಾಮಗ್ರಿಗಳು-ಸಂಸಾರಕ್ಕೆ ಉಪಯೋಗಿಸುವ ಇತರ ಸಾಮಾನುಗಳು, ಆಳು-ಅಡಿಗೆಯವನು ಎಲ್ಲರೂ ಸಿದ್ಧರಾದರು.

ವೈದ್ಯಶಾಲೆಯ ಆರಂಭೋತ್ಸವವನ್ನು ನೆರವೇರಿಸಲು ರಾಮಚಂದ್ರ ತನ್ನ ಗುರುತಿನವರಾದ ಒಬ್ಬ ಶ್ರೀಮಂತ ಸೇಠರನ್ನು ಆಹ್ವಾನಿಸಿದ್ದ. ಸಮಾರಂಭಕ್ಕಾಗಿ ಕಲ್ಕತ್ತೆಯಿಂದಲೂ, ಮುಂಬಯಿಯಿಂದಲೂ ಅನೇಕ ಸ್ನೇಹಿತರು ಬಂದಿದ್ದರು. ಮನೆ ಅತಿಥಿಗಳಿಂದ ತುಂಬಿತ್ತು. ಮೂರ್ತಿ, ಶಾಸ್ತ್ರಿಗಳಿಗೆ ಕಾಗದ ಬರೆದು ತನ್ನ ಉದ್ದೇಶವನ್ನು ತಿಳಿಸಿ ಹಿರಿಯರಾದ ಅವರು ಆ ವೇಳೆಗೆ ಬಂದು ಆಶೀರ್ವದಿಸಬೇಕೆಂದು ಕೇಳಿಕೊಂಡಿದ್ದ. ಶಾಸ್ತ್ರಿಗಳು ಬರದಿದ್ದರೂ ಆ ದಿನ ಅವರ ಹರಕೆಯೋಲೆ ಬಂತು. ಅದರಿಂದ ಮೂರ್ತಿಗೆ ಇದ್ದುದರಲ್ಲಿ ಸಮಾಧಾನವೆನಿಸಿತು.

ಸಾಯಂಕಾಲದ ಹೊತ್ತಿಗೆ ಮುಂದುಗಡೆ ಹಾಕಿದ್ದ ಚಪ್ಪರದಲ್ಲಿ ಆಹ್ವಾನಿತರೆಲ್ಲ ಬಂದು ಸೇರಿದರು. ಬಂದ ಅತಿಥಿಗಳನ್ನು ರಾಮಚಂದ್ರ ಮೂರ್ತಿ ಇಬ್ಬರೂ ಸ್ವಾಗತಿಸುತ್ತಿದ್ದರು. ಮೀನಾಕ್ಷಿ-ಇಂದಿರ ಇತರ ವಿಚಾರಗಳನ್ನೆಲ್ಲಾ ನೋಡಿಕೊಳ್ಳುತ್ತಿದ್ದರು. ಫಲಾಹಾರವಾದ ಮೇಲೆ ಇಂದಿರನ ಸಂಗೀತ. ಅವಳ ಸಂಗೀತದ ಗುರುಗಳೇ ಪಕ್ಕವಾದ್ಯದವರನ್ನು ಕರೆದುಕೊಂಡು ಬಂದಿದ್ದರು. ಆ ದಿನ ಇಂದಿರನಿಗೆ ಬಹಳ ಉತ್ಸಾಹ. ಅವಳು ಎಂದೂ ಅಷ್ಟು ಚೆನ್ನಾಗಿ ಹಾಡಿರಲಿಲ್ಲವೆಂದು ಅವಳ ಗುರುತಿನವರೆಲ್ಲ ಕೊಂಡಾಡಿದರು. ಮುಂಬಯಿಯಲ್ಲಿದ್ದಾಗ ಇಂದಿರ ಆಗಾಗ ಸ್ನೇಹಿತರ ಮನೆಗಳಲ್ಲೂ, ಸಂತೋಷ ಸಮಾರಂಭಗಳಲ್ಲೂ ಹಾಡುತ್ತಿದ್ದಳು. ಆದರೆ ಇಲ್ಲಿಗೆ ಬಂದ ಮೇಲೆ ನಾಲ್ಕು ಜನರ ಮುಂದೆ ಹಾಡಲು ಅವಕಾಶ ಸಿಕ್ಕಿದ್ದು ಆ ದಿನವೇ! ಅದಲ್ಲದೆ ಅಷ್ಟು ದೂರದಿಂದ ಗುರುಗಳು ಬಂದಿದ್ದುದು ಅವಳ ಸಂತೋಷವನ್ನೂ ಹಾಡುವ ಉತ್ಸಾಹವನ್ನೂ ಹೆಚ್ಚಿಸಿತ್ತು. ಕೇಳಿದವರು ಹೊಗಳುವುದು ಹೆಚ್ಚಾದಂತೆ ಗುರುಗಳೂ ಹೆಮ್ಮೆಯಿಂದ ತಲೆದೂಗುತ್ತ ಪ್ರಸನ್ನ ಮುಖದಿಂದ ಕೂತಿದ್ದರು.

ಕರತಾಡನಗಳ ಮಧ್ಯೆ ಸೇಠಜಿಯವರೆದ್ದು ಆರಂಭೋತ್ಸವವನ್ನು ನೆರವೇರಿಸಿ ಪುಟ್ಟ ಭಾಷಣ ಮಾಡಿದರು. ಮೂರ್ತಿಯಂತಹ ತರುಣ, ನೌಕರಿಯ ಆಸೆಗೆ ಬೀಳದೆ ಸೇವಾಭಾವನೆಯಿಂದ ಅಷ್ಟು ದೂರ ಬಂದು ಈ ಉದ್ಯಮದಲ್ಲಿ ತೊಡಗಿರುವುದನ್ನು ಶ್ಲಾಘಿಸಿ, ಇತರ ತರುಣರು ಅವನನ್ನು ಅನುಸರಿಸಿ ದೇಶದ ಅಭ್ಯುದಯಕ್ಕೆ ಕಾರಣರಾಗಬೇಕೆಂದು ಕೋರಿದರು.

ರಾಮಚಂದ್ರ ಮಾತಿನ ಸಂದರ್ಭದಲ್ಲಿ ಸೇಠಜಿಯವರೊಂದಿಗೆ, ಮೂರ್ತಿ ಸದ್ಯದಲ್ಲೇ ವೈದ್ಯಶಾಲೆಯ ಜೊತೆಗೆ ಒಂದು 'ಸ್ಯಾನಿಟೋರಿಯಂ'ನ್ನು ಆರಂಭಿಸಬೇಕೆಂದಿರುವನೆಂದೂ, ಅಲ್ಲಿಯ ಹವಾ ಬಹಳ ಚೆನ್ನಾಗಿರುವುದರಿಂದ ಶ್ವಾಸಕೋಶ ಸಂಬಂಧವಾದ ಖಾಯಿಲೆಯವರಿಗೆ ಅನುಕೂಲವಾಗುವುದೆಂದೂ ತಿಳಿಸಿದ್ದ. ಸೇಠಜಿಯವರ ಬಾಯಲ್ಲಿ ಅದು ಜಾಹೀರಾತಿನಂತೆ ಪ್ರಚಾರಗೊಂಡಿತು. ಶ್ರೀಮಂತರಾದ ವರ್ತಕವೃಂದದಲ್ಲಿ–ಬೆಳಗಿನಿಂದ ಸಂಜೆಯವರಿಗೂ ಜನನಿಬಿಡವಾದ ಸ್ಥಳದಲ್ಲಿ ಕುಳಿತು, ಗಾಳಿ ಬೆಳಕುಗಳಿಗೆ ಹೋಗದೆ ಇರುವವರಲ್ಲಿ ಆ ಬಗೆಯ ರೋಗಕ್ಕೇನೂ ಕೊರತೆ ಇಲ್ಲ. ಕೆಲವು ದಿನಗಳಲ್ಲೇ ಒಬ್ಬಿಬ್ಬರು ಸೇಠಜಿಯವರಿಂದ ಗುರುತಿನ ಪತ್ರ ತೆಗೆದುಕೊಂಡು ಮೂರ್ತಿಯ ಬಳಿಗೆ ಚಿಕಿತ್ಸೆಗಾಗಿ ಬಂದರು. ಅವರು ಗುಣಮುಖರಾಗಿ ಹಿಂದಿರುಗಿದ ಮೇಲೆ ಚಿಕಿತ್ಸೆಗಾಗಿ ಬರುವವರ ಸಂಖ್ಯೆ ಹೆಚ್ಚಾಗಿ ಮೂರ್ತಿಯ ಮನೆ ಸಾಲದಾಯಿತು. ಮೂರ್ತಿ ಅದಕ್ಕಾಗಿ ಹತ್ತಿರವಿದ್ದ ಬೇರೊಂದು ದೊಡ್ಡ ಮನೆಯನ್ನು ತೆಗೆದುಕೊಂಡು, ಏಕಕಾಲದಲ್ಲಿ ಹದಿನೈದು ಇಪ್ಪತ್ತು ಜನ ರೋಗಿಗಳೂ, ಅವರ ಜೊತೆಯಲ್ಲಿ ಬಂದವರೂ ಇರುವುದಕ್ಕೆ ಅನುಕೂಲಿಸುವಂತೆ ಮಾರ್ಪಾಟು ಮಾಡಿದ. ಅಲ್ಲಿಗಾಗಿ ಬೇರೆ ಸಿಬ್ಬಂದಿಯನ್ನು ನೇಮಿಸಿದ.

ಬಂದವರಿಗೆ ಅಲ್ಲಿಯ ಔಷಧಿಗಿಂತ, ಅಲ್ಲಿನ ಸಮುದ್ರತೀರದ ಗಾಳಿ-ಸಾಕಾದಷ್ಟು ವಿಶ್ರಾಂತಿ, ಕೃತ್ರಿಮ ಆಹಾರವಿಲ್ಲದೆ ಹಸುರು ತಿಂದು ಪುಷ್ಟಿಯಾಗಿ ಬೆಳೆದ ಹಸುವಿನ ಹಾಲು, ಎಲ್ಲದಕ್ಕಿಂತ ಮೂರ್ತಿಯಲ್ಲಿ ಅವರಿಗಿದ್ದ ನಂಬಿಕೆ! ಇದರಿಂದಲೆ ಖಾಯಿಲೆ ಗುಣವಾಗುತ್ತಿತ್ತು. ಬೆಳಗ್ಗೆ

ನಿತ್ಯವಿಧಿಯನ್ನು ಮುಗಿಸಿಕೊಂಡು, ಆಜಾನುಬಾಹುವಾದ ಆ ಮನುಷ್ಯ ಲಕ್ಷಣವಾಗಿ ಬಟ್ಟೆ ಹಾಕಿಕೊಂಡು-ನಗುಮುಖದಿಂದ ಮೆಟ್ಟಿಲುಗಳನ್ನು ಹತ್ತಿ ಬರುತ್ತಿರುವಾಗಲೇ ರೋಗಿಗಳಿಗೆ ಒಂದು ಬಗೆಯ ಧೈರ್ಯವೂ, ಉತ್ಸಾಹವೂ ತೋರುತ್ತಿತ್ತು. ಕೆಲವು ವೇಳೆ ರೋಗಿಗಳೇ ಅಲ್ಲದೆ ತಿಂದು ಹೆಚ್ಚಾಗಿ ಬೊಜ್ಜು ಬೆಳೆದವರೂ ಅದನ್ನು ಕರಗಿಸುವ ಸಲುವಾಗಿ ಅಲ್ಲಿಗೆ ಬರುತ್ತಿದ್ದರು. ಮೂರ್ತಿ ಅಂತಹವರಿಗೆ ಆಹಾರವನ್ನು ಕ್ಲುಪ್ತಮಾಡು ವುದರ ಜೊತೆಗೆ ಚೆನ್ನಾಗಿ ತಿರುಗಾಡಿಕೊಂಡಿರಲು ಅವಕಾಶ ಮಾಡಿ ಕೊಟ್ಟು-ತನಗೆ ಬಿಡುವು ದೊರೆತಾಗಲೆಲ್ಲಾ ಕೈಲಿ ಕೋವಿ ಹಿಡಿದು ಅವರ ಸಂಗಡ ಕಾಡನ್ನೆಲ್ಲಾ ಸುತ್ತಿ-ಅವರನ್ನೂ ಸುತ್ತಿಸುತ್ತಿದ್ದ. ಅವನು ಡಾಕ್ಟರಿ ಗಿಂತ ಹೆಚ್ಚಾಗಿ ಒಬ್ಬ ಆಪ್ತನಾದ ಮಿತ್ರನಂತೆ ಇರುತ್ತ ಅವರ ಯೋಗ ಕ್ಷೇಮವನ್ನು ನೋಡಿಕೊಳ್ಳುತ್ತಿದ್ದ. ಹೀಗಾಗಿ ನಗರದಲ್ಲಿ ಹೆಚ್ಚು ಕೆಲಸ ದಿಂದ ಬಿಡುವಿಲ್ಲದೆ ವಿಶ್ರಾಂತಿಯನ್ನು ಬಯಸುವ ಇತರರೂ ಕೆಲವು ವೇಳೆ ಅಲ್ಲಿಗೆ ಬರುತ್ತಿದ್ದರು. ಅವರನ್ನು ಒಂದೊಂದು ಸಲ ಮೂರ್ತಿ ತನ್ನ ಮನೆಗೆ "ಟೀ"ಗಾಗಿ ಕರೆಯುತ್ತಿದ್ದ. ಅಂತಹ ದಿನಗಳಲ್ಲಿ ರಾಮಚಂದ್ರನ ಮನೆಯವರೂ ಅಲ್ಲೇ ಸೇರಿ ಸಂಜೆಯನ್ನು ಎಲ್ಲರೂ ವಿನೋದದಿಂದ-ಆಟ ಗಳಲ್ಲೂ, ಸಂಗೀತದಲ್ಲೂ ಕಳೆಯುತ್ತಿದ್ದರು.

ಸಾಮಾನ್ಯವಾಗಿ ಹಾಗೆ ಬರುವವರೆಲ್ಲ ಅನುಕೂಲಸ್ಥರೇ ಆಗಿದ್ದುದ ರಿಂದ ಅವರಿಂದ ಮೂರ್ತಿಗೆ ಒಂದಕ್ಕೆರಡಾಗಿ ಪ್ರತಿಫಲ ದೊರೆಯುತ್ತಿತ್ತು. ಮೂರ್ತಿ ಅದೆಲ್ಲವನ್ನೂ ವೈದ್ಯಶಾಲೆಯ ಅಭಿವೃದ್ಧಿಗಾಗಿಯೂ ಬಡಬಗ್ಗರ ಔಷಧೋಪಚಾರಗಳಿಗಾಗಿಯೂ ಉಪಯೋಗಿಸುತ್ತಿದ್ದ. ಹೀಗೆ ಅವನ ನಿಲಯ ದಿನದಿನಕ್ಕೆ ಅಭಿವೃದ್ಧಿಯಾಗಿ ಆಧುನಿಕ ಸಲಕರಣೆಗಳಿಂದ ಕೂಡಿದ ಮೊದಲನೆ ದರ್ಜೆಯ ವೈದ್ಯಶಾಲೆಯಾಗಿ ಪರಿಣಮಿಸಿತು.

* * * * *

ಮೀನಾಕ್ಷಿಯ ಆರೋಗ್ಯ ಸರಿಯಾಗಿರಲಿಲ್ಲ. ಅವಳ ದೇಹಸ್ಥಿತಿ ದಿನದಿನಕ್ಕೆ ಸೂಕ್ಷ್ಮವಾಗುತ್ತಿತ್ತು. ಶಿಬಿರದಲ್ಲಿ ಕೆಲಸ ಮಾಡುತ್ತಿದ್ದಾಗ ಕ್ರಮವಾಗಿ ಆಹಾರವಿಲ್ಲದೆ ಇರುವುದು-ಹೆಚ್ಚು ಕೆಲಸ-ನಿದ್ರೆಗೆಡುವುದು

ಇವೆಲ್ಲದರಿಂದಾಗಿ ಮೊದಲಾದ ಆಯಾಸ ಕ್ರಮೇಣ ಖಾಯಿಲೆಯಾಗಿ ಪರಿಣಮಿಸಿತು. ಅವಳು ಮೊದಲು ಮೊದಲು ತನ್ನ ಬಳಗದವರಿಗೆ ಮಾತು ಕೊಟ್ಟಿದ್ದಂತೆ ಆಗಾಗ ಮೂರ್ತಿಯೊಡನೆ ಅವರನ್ನು ನೋಡಲು ಹೋಗುತ್ತಿದ್ದಳು. ಬರಬರುತ್ತ ಹೋಗುವುದು ಕಡಿಮೆಯಾಯಿತು. ಮೀನಾಕ್ಷಿ ದೂರ ಹೋದ ಮೇಲೆ ಅವರೂ ತಮ್ಮ ಕೆಲಸದಲ್ಲಿ ಮೊದಲಿನಷ್ಟು ಶ್ರದ್ಧೆಯನ್ನು ತೋರಿಸುತ್ತಿರಲಿಲ್ಲ. ಅವಳು ಅಷ್ಟು ದೂರ ಮೋಟಾರಿನಲ್ಲಿ ಹೋಗಿ ಬಂದರೆ ಒಂದು ದಿನವೆಲ್ಲಾ ಸುದಾರಿಸಿಕೊಳ್ಳಬೇಕಾಗುತ್ತಿತ್ತು; ಅದಲ್ಲದೆ ಮೂರ್ತಿಗೂ ಕೆಲಸ ಹೆಚ್ಚಾದದ್ದರಿಂದ ಒಂದು ಮಧ್ಯಾಹ್ನವೆಲ್ಲಾ ವೈದ್ಯಶಾಲೆಯನ್ನು ಬಿಟ್ಟು ದೂರ ಇರಲು ಆಗುತ್ತಿರಲಿಲ್ಲ. ರಾಮಚಂದ್ರನೂ ಮೀನಾಕ್ಷಿ ಆ ಸ್ಥಿತಿಯಲ್ಲಿ ಹೊರಗೆ ಹೋಗುವುದನ್ನು ಇಷ್ಟಪಡುತ್ತಿರಲಿಲ್ಲವಾಗಿ ಅಲ್ಲಿಗೆ ಹೋಗುವುದು ನಿಂತೇಹೋಯಿತು.

ಆದರೆ ದುರ್ದೆಶೆಯಲ್ಲಿದ್ದ ಭಾರತದಲ್ಲಿ ಬಡತನಕ್ಕೂ ಅವಿದ್ಯೆಗೂ ಅಭಾವವೇ! ಮೀನಾಕ್ಷಿ ಇದ್ದಲ್ಲಿಯೇ ಅವಳ ಪರಿವಾರ ಬೆಳೆಯುತ್ತಿತ್ತು. ಅಷ್ಟು ಆಯಾಸದಲ್ಲಿಯೂ ಅವಳು ವಾರಕ್ಕೆ ಒಂದು ಸಲವಾದರೂ ಬಡವರ ಗುಡಿಸಲುಗಳಿಗೆ ಭೇಟಿ ಕೊಟ್ಟು ಅವರ ಕಷ್ಟ ಸುಖಗಳನ್ನು ವಿಚಾರಿಸಿ, ತನ್ನ ಕೈಲಾದ ಸಹಾಯ ಮಾಡಿ–ಖಾಯಿಲೆಯುವರಿದ್ದರೆ ನೋಡಿ ಅವರನ್ನು ವೈದ್ಯಶಾಲೆಗೆ ಬರುವಂತೆಯೂ, ಯಾವ ಖರ್ಚೂ ಇಲ್ಲದೆ ಅವರಿಗೆ ಔಷಧಿ ದೊರೆಯುವುದೆಂದೂ ಭರವಸೆ ಕೊಟ್ಟು ಬರುತ್ತಿದ್ದಳು. ಅಂತಹ ಸಮಯಗಳಲ್ಲಿ ಮೂರ್ತಿ-ಇಂದಿರ ನೆರಳಿನಂತೆ ಅವಳನ್ನು ಹಿಂಬಾಲಿಸುತ್ತಿದ್ದರು.

ಇಂದಿರನ ಜೀವನದಲ್ಲಿ ಮೀನಾಕ್ಷಿ ಯಾವಾಗಲೂ ಬೆಳಗುವ ಜ್ಯೋತಿಯಂತೆ; ರಾಮಚಂದ್ರ ಮಿಂಚಿನಂತೆ! ಇಲ್ಲಿಗೆ ಬಂದ ಮೇಲಂತೂ ಅವಳ ಜೀವನದ ರೀತಿಯೇ ಬದಲಾದಂತಿತ್ತು. ರಾಮಚಂದ್ರನ ಸಹವಾಸ ಅಪರೂಪವಾಗುತ್ತ ಬಂತು. ಅವನಿಗೆ ಯಾವಾಗಲೂ ಕೆಲಸ. ಮೀನಾಕ್ಷಿಗೆ ಆರೋಗ್ಯ ಕೆಟ್ಟಾಗಿನಿಂದ ಅವಳೊಡನೆ ಆಡುವುದು ಹೊರಗೆ ತಿರುಗುವುದು ಎಲ್ಲಾ ಕಡಿಮೆಯಾಗಿತ್ತು. ವಿದ್ಯಾಭ್ಯಾಸವು ಒಂದು ಮಟ್ಟಕ್ಕೆ

ಬಂದಂತಾಗಿದ್ದುದರಿಂದ ಅದು ಅಲ್ಲಿಗೇ ನಿಂತಿತು. ಸಂಗೀತದ ಅಭ್ಯಾಸ ವನ್ನು ಬಿಟ್ಟರೆ ಬೇರೆ ಯಾವ ನಿರ್ದಿಷ್ಟವಾದ ಕೆಲಸವೂ ಇರಲಿಲ್ಲ. ಗಿಡ ಗಳನ್ನು ಬೆಳೆಸುವುದರಲ್ಲಿ ಅವಳಿಗಿದ್ದ ಆಸಕ್ತಿಯು, ಈಗ ವಿರಾಮವೂ ಸಿಕ್ಕಿ ಮನೆಯ ಆವರಣವೂ ದೊಡ್ಡದಿದ್ದುದರಿಂದ ಬೆಳಕಿಗೆ ಬಂತು. ಎಲ್ಲೆಲ್ಲಿಂದ ಸೊಗಸಾದ ಬೀಜಗಳನ್ನು ತರಿಸಿ ಮನೆಯ ಸುತ್ತ ಹೂದೋಟವನ್ನು ಮಾಡಿದ್ದಳು. ಅದರಲ್ಲಿ ಯಾವಾಗಲೂ ಬಗೆ ಬಗೆಯ ಹೂಗಳು ಅರಳಿ ಕಣ್ಣಿಗೆ ಹಬ್ಬವನ್ನು ಮಾಡುವಂತೆ ಇದ್ದುವು. ಅದರಿಂದ ಮನೆಯ ಅಂದ ಹೆಚ್ಚಿದಂತೆ ಕಾಣುತ್ತಿತ್ತು.

ಆ ದಿನ ಇಂದಿರನಿಗೆ ಬಹಳ ಬೇಸರವಾಗಿತ್ತು. ಮೀನಾಕ್ಷಿ ಒಳಗೆ ಮಲಗಿದ್ದಳು. ಅವಳು ಆರೋಗ್ಯವಾಗಿದ್ದಾಗ ಸಾಮಾನ್ಯವಾಗಿ ಆ ಹೊತ್ತಿನಲ್ಲಿ ಅವರು ಮನೆಯ ಹಿಂಭಾಗದಲ್ಲಿ 'ಟೆನ್ನಿಸ್' ಆಡುತ್ತಿದ್ದರು. ವಿರಾಮವಿದ್ದಾಗ ಮೂರ್ತಿಯೂ ಬರುತ್ತಿದ್ದ. ಮಧ್ಯೇ ಮಧ್ಯೇ ಇಂದಿರನ ಆಟದ ಮೇಲೆ ಟೀಕೆ ಮಾಡುತ್ತ ಅವಳನ್ನು ರೇಗಿಸುತ್ತಿದ್ದ. ಇಲ್ಲದಿದ್ದರೆ ಅವಳು ಆ ವೇಳೆಯನ್ನು ಸಂಗೀತದ ಅಭ್ಯಾಸದಲ್ಲಿ ಕಳೆಯುತ್ತಿದ್ದಳು. ಈ ದಿನ ಅವಳಿಗೆ ಹಾಡುವುದಕ್ಕೂ ಬೇಕಿಲ್ಲ. ಮೂರ್ತಿ ಯಾವುದೋ ಕೆಲಸಕ್ಕಾಗಿ ಎರಡು ದಿನಗಳ ಹಿಂದೆ ಕಲ್ಕತ್ತೆಗೆ ಹೋಗಿದ್ದವನು ಇನ್ನೂ ಬಂದಿರಲಿಲ್ಲ. ಇಂದಿರ ತೋಟದಲ್ಲಿ ಸುತ್ತಾಡುತ್ತ ಅಲ್ಲೊಂದು ಇಲ್ಲೊಂದು ಅರಳಿರುವ ಹೂಗಳನ್ನು ಕೀಳುತ್ತಿದ್ದಳು. ಕೈ ತುಂಬ ಹೂ ಶೇಖರ ವಾಗಿತ್ತು. ಆದರೂ ಕೀಳುತ್ತ ನಡೆದಿದ್ದಳು. ಎಷ್ಟೋ ಹೊತ್ತಿನಮೇಲೆ ಅದರ ಕಡೆ ಗಮನ ಬೀಳಲು ತನ್ನ ಮರವೆಗೆ ತಾನೇ ನಾಚಿ, ಕೀಳು ವುದನ್ನು ಬಿಟ್ಟು ವೈದ್ಯಶಾಲೆಯತ್ತ ನಡೆದಳು.

ಬಾಗಿಲ ಬಳಿ ನಗುಮುಖದ ಸಿಸ್ಟರ್ ಅವಳನ್ನು ಸ್ವಾಗತಿಸಿ—

"ಡಾಕ್ಟರ್—ಇನ್ನೂ ಬರಲಿಲ್ಲವೇ .......?"

ಎಂದು ವಿಚಾರಿಸಿದಳು.

"ಇನ್ನೂ ಬಂದಿರುವಂತಿಲ್ಲ. ರೋಗಿಗಳೆಲ್ಲಾ ಒಂದೇ ಸಮ ಇರುವರು ತಾನೆ ...?"

"ಓ, ಕೆ! ಹಾಗೇನೂ ಇಲ್ಲ. ಈ ದಿನ ಬರುವುದಾಗಿ ಹೇಳಿದ್ದರು. ಆದರಿಂದ ಕೇಳಿದೆ—ಅಷ್ಟೆ!"

ಇಂದಿರ ಕೈಲಿದ್ದ ಹೂಗಳಲ್ಲಿ ಒಂದೆರಡನ್ನು ಅವಳಿಗಿತ್ತು ಉಳಿದು ದನ್ನು ಅಲ್ಲಿದ್ದ ಹೂ ಪಾತ್ರೆಯಲ್ಲಿಟ್ಟಳು. ಇಬ್ಬರೂ ಮಾತಾಡುತ್ತ ರೋಗಿ ಗಳನ್ನೆಲ್ಲಾ ಒಂದು ಸಲ ನೋಡಿ ಬಂದರು. ಮೂರ್ತಿ ಇಲ್ಲದಿದ್ದರೂ ದಿನದಲ್ಲಿ ಒಂದು ಸಲ ಅಲ್ಲಿಗೆ ಹೋಗಿ ನೋಡಿಕೊಂಡು ಬರುವುದು ಅವಳ ಪದ್ಧತಿಯಾಗಿತ್ತು.

ಇಂದಿರ ಮನೆಯ ಕಡೆ ಹೊರಟಿದ್ದಳು. ತಲೆಯಲ್ಲಿದ್ದ ಹೂವನ್ನು ಕಿತ್ತು ಅದರ ಒಂದೊಂದು ದಳಗಳನ್ನು ಕೀಳುತ್ತ ಅನ್ಯಮನಸ್ಕಳಾಗಿ ನಿದಾನವಾಗಿ ಹೆಜ್ಜೆ ಹಾಕುತ್ತಿದ್ದಳು. ಮೂರ್ತಿಯ ಮನೆಯ ಬಳಿ ಬಂದಾಗ ಅವಳು ಬರುವುದನ್ನೇ ನೋಡುತ್ತ ಗೋಡೆಯ ಮರೆಯಲ್ಲಿ ನಿಂತಿದ್ದ ಮೂರ್ತಿ—

"ಇಂದಿರ"

ಎಂದು ಕೂಗಿದ.

ಇಂದಿರ ಕೂತೂಹಲದಿಂದ ನಾಲ್ಕು ಕಡೆಗೆ ನೋಡಿ—

"ಇದೇನು ಮೂರ್ತಿ....ಹೊಸರೀತಿ....! ಕಣ್ಣು ಮುಚ್ಚಾಲೆ ಆಡಿದ್ದು ಮರೆತು ಹೋಯಿತೆ?"

ಎಂದಳು.

"ಮರೆಯೋದೆಲ್ಲಿ ಬಂತು....ಜೀವನವೇ ಒಂದು ಬಗೆಯ ಕಣ್ಣು ಮುಚ್ಚಾಲೆ. ಒಂದೊಂದು ಕಾಲದಲ್ಲಿ ಒಂದೊಂದು ತರಹ ಅಷ್ಟೆ!"

ಮೂರ್ತಿ ಕಂಬದ ಮರೆಯಿಂದ ಹೊರಗೆ ಬಂದು ಹೇಳಿದ.

"ಬನ್ನಿ—ಮನೆಗೆ ಹೋಗೋಣ. ಸ್ವಲ್ಪ ಚಹಾ ತೆಗೆದುಕೊಳ್ಳುವಿರಂತೆ...."

"ಆಗಲೇ ತೆಗೆದುಕೊಂಡಾಯ್ತು. ಒಳಗೆ ಬಂದು ನೀನು ಸ್ವಲ್ಪ ತೆಗೆದುಕೋ...."

"ಈಗ ಬೇಡ ಮೂರ್ತಿ. ನನಗೆ ಬೇಕಿಲ್ಲ. ಮೀನ ಒಬ್ಬಳೇ ಇದಾಳೆ. ನಾನು ಹೋಗಬೇಕು"

ಇಬ್ಬರೂ ಮಾತಾಡುತ್ತ ರಾಮಚಂದ್ರನ ಮನೆಗೆ ಹೊರಟರು. ಒಳಗೆ ಹೋಗುತ್ತಲೇ ಮೂರ್ತಿ—

"ಇಂದಿರ—ವೈದ್ಯಶಾಲೆಯಲ್ಲಿ ಎಲ್ಲಾ ಸರಿಯಷ್ಟೆ?"

ಎಂದು ವಿಚಾರಿಸಿದ.

"ಓಹೊ....ಎಂದಿನಂತೆ—!"

"ಹಾಗಾದರೆ ಈಗ ನಾನೇನೂ ಹೋಗಬೇಕಾಗಿಲ್ಲ. ರಾತ್ರಿ ಊಟ ಮಾಡಿಕೊಂಡು ಹೋದರಾಯಿತು!"

"ಹಾಗೇ ಮಾಡಬಹುದು. ನಾನು ಈಗಷ್ಟೆ ಅಲ್ಲೆಲ್ಲ ನೋಡಿ ಬಂದೆ!"

ಮೂರ್ತಿ ದೀಪದ ಗುಂಡಿಯನ್ನು ಒತ್ತಿದ. ಕೋಣೆಯ ತುಂಬ ಬೆಳಕು ಚೆಲ್ಲಿತು. ಇಂದಿರನ ಮುಖದ ಕಡೆ ನೋಡುತ್ತ—

"ಯಾಕೆ.... ಈ ದಿನ ಕೋಗಿಲೆ ಹಾಡಿದಂತಿಲ್ಲ! ಬೇಸರವೋ....?" ಎಂದು ಕೇಳಿದ.

ಇಂದಿರ ಹುಬ್ಬುಗಂಟಿಕ್ಕಿಕೊಂಡು ಸಿಡುಕಿನಿಂದ ಹೇಳಿದಳು—

"ಇದೇನು ಮೂರ್ತಿ ಹುಡುಗಾಟ, ಯಾರು ಕೋಗಿಲೆ....? ಚೆನ್ನಾಗಿದೆ—! ಕೋಗಿಲೆ ಹಾಡುವುದು ತನ್ನ ಸಂತೋಷಕ್ಕಾಗಿ; ಇತರರಿಗಾಗಲ್ಲ. ಬೇಡದಿದ್ದಾಗ ಯಾಕೆ ಹಾಡಬೇಕು....?"

"ನಾನೂ ಅದೇ ಹೇಳಿದ್ದು–ಬೇಡದಿದ್ದಾಗ ಯಾಕೆ ಹೇಳಬೇಕು?

"ಅದನ್ನು ನಾನೇ ಹೇಳಿದೆ. ನೀವೇನು ಹೊಸದಾಗಿ ಹೇಳಿದ್ದು!"

"ಬೇಸರವಾದಾಗ ಸಂಗೀತ ಕೂಡ ಬೇಡವಾದೀತು ಎಂದು."

"ಅಬ್ಬ—ಅಷ್ಟಕ್ಕೆ ಎಷ್ಟು ಕೋಪ ಬಂದುಬಿಡ್ತು!"

"ಬರದೆ ಮತ್ತೇನು....? ಮೂರು ದಿನದಿಂದ ಜಗಳಕ್ಕೆ ಅವಕಾಶವೇ ಇರಲಿಲ್ಲ. ಅದಕ್ಕೆ ಬಂದಕೂಡಲೆ ತೆಗೆದಿರೇನೋ..!"

ಬಂದ ಕೂಡಲೆ ಅಲ್ಲ; ನಾನು ಆಗಲೇ ಬಂದೆ. ಮೀನನ ಬಳಿ ಮಾತಾಡುತ್ತ ಇದ್ದೆ. ನೀನು ಒಳಗೆ ಬರುವೆಯೇನೋ ಎಂದು ದಾರಿ

ಕಾಯ್ತು ಸಾಕಾಯ್ತು. ನೀನು ತೋಟದಲ್ಲಿ ಲತೆಯೊಡನೆ ಬಳುಕಿ, ಹೂವುಗಳೊಡನೆ ಹೂವಾಗಿ ನಲಿಯುತ್ತಿರುವಾಗ...."

"ಓಹೋ.... ಸಾಕು ವರ್ಣನೆ. ಯಾರ್ಕೋ ಕವಿತಾವೇಶ ಬಂದಂತಿದೆ. ಆಮೇಲೆ....?"

"ಆಮೇಲೇನು.... ನೀನು ವೈದ್ಯಶಾಲೆಗೆ ಹೊರಟೆ. ನಾನೂ ಮನೆಯ ದಾರಿ ಹಿಡಿದೆ. ಮೀನಾ ಹೇಳಿದಳು...."

"ಏನು, ಹೇಳಿದಳು....?"

"ನಾನಿಲ್ಲದೆ ನಿನಗೆ ಬೇಸರವಾಗಿದೆ....ಎಂದು!"

"ಸರಿ—ಮೀನಾ ಬಂದಿದ್ದರೆ ಒಂದು ತಿಳಿದುಕೋತಾಳೆ. ಬೇಸರ ವಾಗಿದ್ದುದು ನಿಜ....ಆದರೆ ನೀವಿಲ್ಲದೆ ಅಲ್ಲ. ಏಕೋ—ನಿಜವಾಗಿಯೂ ಮೂರ್ತಿ ಇಷ್ಟು ದಿನಕ್ಕೆ ಈ ದಿನ ತಾಯಿಯನ್ನು ನೆನೆದು ಕಣ್ಣೀರ ಹಾಕಿದೆ. ಮೀನನ ಬಳಿ ಇರುವಾಗ ಒಂದು ದಿನವೂ ಏನೂ 'ಬೇಕು' ಎನಿಸಿರಲಿಲ್ಲ...ಒಂದೊಂದು ಸಲ ....."

ಇಂದಿರ ದೂರದಲ್ಲಿರುವ ಏನನ್ನೋ ನೋಡುವಂತೆ ನೋಡುತ್ತ ಮೆಲ್ಲಗೆ ಮಾತಾಡುತ್ತಿದ್ದಳು. ಅವಳ ಧ್ವನಿ ಸಿಡುಕಿನಿಂದ ಇದಕ್ಕಿದ್ದಂತೆ ನಯವಾದುದನ್ನು ನೋಡಿ ಮೂರ್ತಿ ನಗುತ್ತ—

"ಏನು, ಇಂದಿರ ನಿನಗೆ 'ಬೇಕು' ಎನಿಸಿದ್ದು? ತಾಯಿಯೋ..... ಅಥವಾ ....."

ಇಂದಿರ ಸರಕ್ಕನೆ ತಲೆ ಎತ್ತಿ ಮೂರ್ತಿ ನಗುತ್ತಿರುವುದನ್ನು ನೋಡಿ ಸಿಟ್ಟಿನಿಂದ—

"ಮೂರ್ತಿ—ನೀವು ಹೀಗೆಲ್ಲಾ ಮಾತಾಡುವಂತಿದ್ದರೆ ನಾನು ಹೊರಟು ಹೋಗ್ತೀನೆ. ನಿಮಗೆ ಯಾವಾಗಲೂ ಹಾಸ್ಯವೇ....? ಅಲ್ಲ—ನಾನು ಎಲ್ಲರನ್ನೂ ಬಿಟ್ಟು ನಿಮ್ಮ ಬಳಿ ನನ್ನ ಕಷ್ಟವನ್ನು ಹೇಳಿಕೊಳ್ಳ ಬಹುದೆ!"

"ಇಲ್ಲ, ಇಂದಿರ, ನಿನ್ನನ್ನು ನೋಡಿ ನಗಲಿಲ್ಲ. ಮೀನಾ ಒಂದು ಸಲ—"ಇಂದಿರ ಇನ್ನೂ ಮಗು" ಎಂದಿದ್ದಳು. ಅದು ಎಷ್ಟು ನಿಜ

ಅದಕ್ಕಾಗಿ ನಗು ಬಂತು.......ಅದೇನೋ ಒಂದೊಂದು ಸಲ....ಎಂದೆಯಲ್ಲ....ಏನು ಒಂದೊಂದು ಸಲ....?"

"ಒಂದೊಂದು ಸಲ... ಮನೆಯಲ್ಲಿ ಒಂದು ಮಗು ಇದ್ದಿದ್ದರ.........ಎನಿಸುತ್ತದೆ.....!"

ಮೂರ್ತಿ ಅವಳು ಏನು ಹೇಳುವಳೋ ಎಂದು ಆತುರದಿಂದ ನಿರೀಕ್ಷಿಸುತ್ತಿದ್ದವನು ಅವಳ ಉತ್ತರವನ್ನು ಕೇಳಿ ಖಿನ್ನನಾದ. ಆದರೂ ಮೊದಲಿನಂತೆಯೇ ನಗುತ್ತ ಹೇಳಿದ—

"ಅದಕ್ಕೂ ಇನ್ನು ಹೆಚ್ಚು ದಿವಸ ಕಾಯಬೇಕಾಗಿಲ್ಲ; ಆದರೆ...."

"ಏನು ಮೂರ್ತಿ—ಆದರೆ....?"

"ಮೀನ ಬಹಳ ಸುಸ್ತಾಗಿದಾಳೆ. ಹೃದಯ ದುರ್ಬಲವಾಗಿದೆ. ಈಗ ಬಹಳ ಹುಷಾರಾಗಿ ನೋಡಿಕೋ ಬೇಕು. ಅವಳ ಮನಸ್ಸಿಗೆ ಸ್ವಲ್ಪವೂ ಉದ್ವೇಗವಾಗದಂತಿರಬೇಕು. ಹೆಚ್ಚು ಗಲಾಟೆಯಾಗಬಾರದು. ರಾಮಚಂದ್ರ ಹೊರಗಿರುವುದೇ ಹೆಚ್ಚು; ಅದೆಲ್ಲಾ ನಿನಗೇ ಸೇರಿದ್ದು—ಇಂದಿರ...."

"ನನಗೆ ಒಂದೂ ತಿಳಿಯೋದಿಲ್ಲ. ನೀವು ಏನು ಹೇಳಿದರೆ ಅದನ್ನು ಮಾಡುತ್ತೇನೆ. ರಾಮಣ್ಣ ಕಲ್ಕತ್ತೆಯಿಂದ ಅನುಭವಸ್ಥಳಾದ ಒಬ್ಬ ದಾದಿಯನ್ನು ಕಳಿಸುವಂತೆ ಅವನ ಸ್ನೇಹಿತನಿಗೆ ಬರೆದಿದಾನೆ. ಅವಳು ಒಂದೆರಡು ದಿನಗಳಲ್ಲಿ ಬರಬಹುದು. ಮುಖ್ಯ ನನ್ನಿಂದಾಗಿ ಈ ಎಲ್ಲ ತೊಂದರೆ....!"

"ಹಾಗೆಂದರೆ....?

"ಮೀನಾ ನನ್ನನ್ನು ಬಿಟ್ಟು ಹೋಗಲಾರದೆ ರಂಗನೂರಿಗೆ ಹೋಗಲು ಒಪ್ಪಲಿಲ್ಲ. ಈ ಸಮಯದಲ್ಲೂ ಅವಳು ತನ್ನವರ ಹತ್ತಿರ ಇರಬಾರದೆ....?"

"ನಿನ್ನಿಂದಾಗಿ ಅವಳು ಹೋಗಲಿಲ್ಲವೆಂದು ಯಾರು ಹೇಳಿದರು....?"

"ಯಾರು ಏಕೆ ಹೇಳಬೇಕು. ನನಗೆ ಗೊತ್ತಾಗುವುದಿಲ್ಲವೆ?"

"ಇದೇ ನಿನಗೆ ತಿಳಿಯೋದು. ಏನಾದರೂ ಇಲ್ಲದ್ದೊಂದು ಮನಸ್ಸಿಗೆ ಹಚ್ಚಿಕೊಂಡು ..........."

"ಇಲ್ಲದ್ದೇನು ಬಂತು.....?"

"ಮತ್ತೇನು.....? ಮೀನ ಅಷ್ಟು ದೂರ ಪ್ರಯಾಣ ಮಾಡುವುದು ಸರಿಯಲ್ಲವೆಂದು ನಾನೇ ಹೇಳಿದೆ. ಅದರಿಂದ ಅವಳು ಹೋಗಲಿಲ್ಲ."

ಇಂದಿರನಿಗೆ ಆದರೂ ಸಮಾಧಾನವೆನಿಸಲಿಲ್ಲ. ಅದನ್ನು ನೋಡಿ ಮೂರ್ತಿ—

"ಇಂದಿರ—ಕಲ್ಕತ್ತೆಯಿಂದ ಒಂದು ಪಿಯಾನೊ ತಂದಿದೇನೆ. ನೀನು ನೋಡಿ ಅಭಿಪ್ರಾಯ ಕೊಡುವವರೆಗೂ..........."

"ಎಲ್ಲಿ....?"

"ನಿನ್ನ ಹಿಂದುಗಡೆಯೇ ಇದೆ. ಆಗಿನಿಂದ ನಿಂತಿದ್ದರೂ ಅದು ನಿನ್ನ ಕಣ್ಣಿಗೇ ಬಿದ್ದಿಲ್ಲ.....!"

"ನನಗೂ ಅದೇ ಆಶ್ಚರ್ಯ! ಕಾಣಿಸದಿರಲು ಅದೇನು ಪುಟ್ಟ ಪದಾರ್ಥವೇ....? ಮೂರ್ತಿ ನಿಮ್ಮ ಬಳಿ ಅದೇನು ಶಕ್ತಿ ಇದೆಯೋ.... ನೀವು ಹತ್ತಿರ ಇರುವಾಗ ನಿಮ್ಮ ಹೊರತು ಮತ್ತೆ ಯಾವುದರ ಕಡೆಗೂ ಮನಸ್ಸು ಹೋಗುವುದೇ ಇಲ್ಲ....! ಯಾರಿಗೆ ಮೂರ್ತಿ ಅದು?"

"ನನಗೆ!"

"ನಿಮಗೆ? ನಿಮಗೆ ಸಂಗೀತವೂ ಬರುವುದೇನು? ನನಗೇ ಗೊತ್ತಿಲ್ಲ....!"

"ನನ್ನ ಹಿಂದೆ ಓಡಾಡಿ ನೀನು ಗಾಯವಾದರೆ 'ಡ್ರೆಸ್' ಮಾಡಲು ಕಲಿತಿರುವಂತೆ—ನಿನ್ನ ಸಹವಾಸದಿಂದ ನನಗೂ ನೀನು ಹೇಳುವ ಹಾಡು ಗಳಲ್ಲಿ ಅಲ್ಲೊಂದು ಇಲ್ಲೊಂದು ಚರಣ ಬರುತ್ತೆ! ಬೇಕಾದರೆ ಪರೀಕ್ಷೆ ಮಾಡು; ನೀನು ನುಡಿಸು—ನಾನು ಹಾಡುತ್ತೇನೆ...."

ಇಂದಿರ ನಗುತ್ತ ಅದರ ಮುಚ್ಚಳವನ್ನು ತೆಗೆದು, ಅದರ ಮೇಲೆ ಒಂದೆರಡು ಸಲ ಕೈ ಆಡಿಸಿ—

"ಮೂರ್ತಿ—ನೀವು ಪಿಯಾನೋ ಆರಿಸಿರುವುದನ್ನು ನೋಡಿದರೇ ನಿಮಗೆ ಸಂಗೀತ ಬರುವುದೆಂದು ಗೊತ್ತಾಗುತ್ತೆ!"

"ಏಕೆ.... ಚೆನ್ನಾಗಿಲ್ಲವೇ?"

"ಬಹಳ ಚೆನ್ನಾಗಿದೆ. ಇಷ್ಟು ಸುಂದರವಾದ ವಾದ್ಯವನ್ನು ನಾನು ನೋಡಿಯೇ ಇರಲಿಲ್ಲ!"

"ನೀನು ಕೊಟ್ಟ ಹೊಗಳಿಕೆ ನನಗೆ ಸಲ್ಲುವುದಿಲ್ಲ. ಅಂಗಡಿಗೆ ಹೋಗಿ ಎಲ್ಲದಕ್ಕಿಂತಲೂ ಹೆಚ್ಚು ಬೆಲೆಯದನ್ನು ಕೊಂಡೆ; ನೋಡುವುದಕ್ಕೆ ಚೆನ್ನಾಗಿತ್ತು. ನನಗೆ ತಿಳಿದದ್ದು ಅಷ್ಟೆ!"

ಇಂದಿರ ಪೆಚ್ಚಾಗಿ—

"ಹಾಗೇನು....?"

ಎಂದು ಕೇಳಿ, ಬಾರಿಸಲು ಮೊದಲು ಮಾಡಿದಳು. ಮೂರ್ತಿ ಕುರ್ಚಿಯಿಂದ ಎದ್ದು ಬಂದು ಅವಳ ಹಿಂದೆ ನಿಂತುಕೊಂಡ.

"ಬಾಗಿಲೊಳು ಕೈ ಮುಗಿದು ಒಳಗೆ ಬಾ
ಯಾತ್ರಿಕನೆ—ಶಿಲೆಯಲ್ಲವೀಗುಡಿಯು
ಕಲೆಯ ಬಲೆಯು....!"

ನಾದವು ತರಂಗ ತರಂಗವಾಗಿ ಹಬ್ಬಿತು. ಅದು ಅವಳ ಪ್ರೀತಿಯ ಗೀತ. ರಂಗನೂರಿಗೆ ಹೋಗಿದ್ದಾಗ ಅದನ್ನು ಸೀತನಿಂದ ಕಲಿತು ಅದಕ್ಕೆ ಸೊಗಸಾದ ರಾಗಹಾಕಿ ಹಾಡುತ್ತಿದ್ದಳು. ಮೂರ್ತಿ ಹಾಡುವುದನ್ನು ಕೇಳಿ ನಗುತ್ತ, ಇಂದಿರ ತಾನೂ ಹಾಡುತ್ತ ತಲೆ ಎತ್ತಿದಳು; ಬಾಗಿಲ ಬಳಿ ರಾಮಚಂದ್ರ ಕೈಲಿ ಹ್ಯಾಟನ್ನು ಹಿಡಿದುಕೊಂಡು ಮುಖ ಗಂಟಿಕ್ಕಿಕೊಂಡು ನಿಂತಿದ್ದ!

ಇಂದಿರನ ಹಾಡು ನಿಂತಿತು. ರಾಮಚಂದ್ರನಿಗೆ ತಂಗಿಯ ಸಂಗೀತದ ವಿಷಯವಾಗಿ ಬಹಳ ಹೆಮ್ಮೆಯಿತ್ತು. ಹೊರಗಿನಿಂದ ಬಂದಾಗ ಎಷ್ಟೇ ಬಳಲಿದ್ದರೂ ಅವಳು ಹಾಡುತ್ತಿದ್ದರೆ ನಗುತ್ತ ಬಂದು ಅವಳ ಹತ್ತಿರ ನಿಂತು ಕೇಳುತ್ತಿದ್ದ. ಇವತ್ತಿನ ಅವನ ಮುಖದ ಭಾವ ನೋಡಿ ಅವಳ ಕೈ ವಾದ್ಯದ ಮೇಲೆ ಆಡದಾಯಿತು. ತಟ್ಟನೆ ಎದ್ದು ನಿಂತಳು.

"ಏನು ಮೂರ್ತಿ-ಸಂಗೀತ ಕಲಿಯುತ್ತಿರುವಂತಿದೆ! ಡಾಕ್ಟರ್ ಕೆಲಸ ಬೇಜಾರಾಯಿತೋ........?"

"ಎಂದು ವ್ಯಂಗ್ಯವಾಗಿ ನಕ್ಕು ತಂಗಿಯ ಬಳಿಗೆ ಹೋಗಿ—

"ಇಂದಿರಾ—ಮೀನಾ ಅಲ್ಲಿ ಒಬ್ಬಳೇ ಇದಾಳೆ; ನೀನು ಹೀಗೆ ತಾನೆ ನಾನು ಇಲ್ಲದಾಗ ಅವಳನ್ನು ನೋಡಿಕೊಳ್ಳೋದು....?"

ರಾಮುಚಂದ್ರ ಕಟುವಾಗಿ ನುಡಿದ.

ಇಂದಿರ ತಲೆಯನ್ನು ತಗ್ಗಿಸಿ ನಿಂತಿದ್ದಳು ಅವಳಿಗೆ ಮಾತು ಹೊರಡದಂತಾಗಿತ್ತು. ಎಂದೂ ನಿಷ್ಠುರವಾಗಿ ಮಾತಾಡದಿದ್ದ ಅಣ್ಣ, ಆ ದಿನ ಮೂರ್ತಿಯ ಎದುರಿಗೆ ಹಾಗೆ ಅಂದದ್ದು ಅವಳಿಗೆ ಹೇಗೋ ಆಗಿತ್ತು. ಅವನ ಈ ವರ್ತನೆ ಅರ್ಥವಾಗಲಿಲ್ಲ.

ಆದರೆ ಮೂರ್ತಿ ಅವನ ಕಡೆ ನೋಡಿ ಹಾಸ್ಯಮಾಡುವಂತೆ ನಗುತ್ತ, ಆಳಿಗೆ ಪಿಯಾನೊವನ್ನು ತನ್ನ ಮನೆಗೆ ತೆಗಿಸಿಕೊಂಡು ಬರುವಂತೆ ಹೇಳಿ ಹೊರಟುಹೋದ. ರಾಮುಚಂದ್ರ ಮತ್ತೇನೋ ಹೇಳಬೇಕೆಂದಿದ್ದವನು ಸುಮ್ಮನೆ ಮಾತಾಡದೆ ಬಟ್ಟೆ ಬದಲಿಸಲು ಹೋದ.

## ೧೦

ಮೀನಾಕ್ಷಿಯನ್ನು ಬಾಣಂತಿತನಕ್ಕಾಗಿ ರಂಗನೂರಿಗೆ ಕಳುಹುವಂತೆ ಶಾಸ್ತ್ರಿಗಳು ಅಳಿಯನಿಗೆ ಪತ್ರ ಬರೆದಿದ್ದರು. ಅಮ್ಮಯ್ಯನೂ ಖಂಡಿತ ಬರಬೇಕೆಂದು ತಂಗಿಗೆ ಆಗ್ರಹ ಮಾಡಿದ್ದಳು. ಮೀನಾಕ್ಷಿಗೂ ಹೋದರೂ ಹೋಗೋಣವೆನಿಸಿತ್ತು. ಆದರೆ ರಾಮುಚಂದ್ರನಿಗೆ ಮಾತ್ರ ಅದು ಒಪ್ಪಿತವಾಗಿರಲಿಲ್ಲ. ಅವಳನ್ನೂ ತಂಗಿಯನ್ನೂ ಐದಾರು ತಿಂಗಳು ಹೊರಗೆ ಕಳಿಸಲು ಅವನ ಸಮ್ಮತಿ ಇರಲಿಲ್ಲ. ಅದಲ್ಲದೆ ಅವರು ಮಾಡುವುದು ಅಷ್ಟರಲ್ಲೇ ಇದೆ ಎಂಬ ಧೋರಣೆಯೂ ಇದ್ದಿತು.

ಮೀನಾಕ್ಷಿ ದುರ್ಬಲಳಾಗಿರುವಾಗ ಪ್ರಯಾಣ ಮಾಡುವುದು ಬೇಡವೆಂದು ವೈದ್ಯರಿಂದ ಸಲಹೆ ಬಂದದ್ದು ರಾಮುಚಂದ್ರನಿಗೆ ಅನುಕೂಲ

ವಾಯಿತು. ಆ ಕಾರಣವನ್ನೇ ಮುಂದುಮಾಡಿ ಮೀನಾಕ್ಷಿ ಬರಲು ಯತ್ನವಿಲ್ಲವೆಂದೂ, ಶಾಸ್ತ್ರಿಗಳೇ ದಯಮಾಡಿ ಮಗಳೊಡನೆ ತಮ್ಮಲ್ಲಿಗೆ ಬರಬೇಕೆಂದೂ ರಾಮಚಂದ್ರ ಉತ್ತರ ಬರೆದ.

ಶಾಸ್ತ್ರಿಗಳಿಗೆ ಅದನ್ನು ನೋಡಿ ಬೇಸರವೆನಿಸಿತು. ದೇಹಾರೋಗ್ಯ ವನ್ನು ಮುಂದುಮಾಡಿದ್ದರೂ ಅದರ ಹಿಂದಿದ್ದ ಅಳಿಯನ ಮನೋಭಾವ ಅವರಿಗೆ ತಿಳಿಯದೆ ಇರಲಿಲ್ಲ. ಆದರಿಂದಲೇ ಅಮ್ಮಯ್ಯ ಅಲ್ಲಿಗೆ ತಾವೇ ಏಕೆ ಹೋಗಬಾರದೆಂದು ಸೂಚಿಸಿದಾಗ ಅವರು—

"ಬೇಡ ತಾಯಿ. ನಾವು ಅಲ್ಲಿ ಹೋಗಿ ಮಾಡೋದೇನು? ಕಾಯುವ ದೇವರು ಎಲ್ಲೆಡೆಯಲ್ಲೂ ಒಬ್ಬನೇ ತಾನೇ!"

ಎಂದಿದ್ದರು.

ಅವರು ಬಾಯಲ್ಲಿ ಹಾಗೆಂದಿದ್ದರೂ ಮಗಳನ್ನು ಕಾಣುವ ಆತುರ ಅವರಿಗೇನೂ ಕಡಿಮೆ ಇರಲಿಲ್ಲ. ಇತ್ತೀಚೆಗೆ ಅವರ ಆರೋಗ್ಯವೂ ಮೊದಲಿನಂತಿರಲಿಲ್ಲ. ಹೆಚ್ಚು ಆಯಾಸ ತಡೆಯುತ್ತಿರಲಿಲ್ಲವಾಗಿ ಸಂಸ್ಕೃತ ಕಾಲೇಜಿನ ಕೆಲಸವನ್ನೂ ಬಿಟ್ಟಿದ್ದರು. ಹೆಚ್ಚಾಗಿ ಹೊರಗೂ ಹೋಗು ತ್ತಿರಲಿಲ್ಲ. ಮನೆಗೆ ಬರುವ ವಿದ್ಯಾರ್ಥಿಗಳೂ ಕಡಿಮೆಯಾಗಿದ್ದರು. ಆರಿಸಿದ ಕೆಲವರನ್ನು ಮಾತ್ರ ಯತ್ನವಿಲ್ಲದೆ ಶಿಷ್ಯರನ್ನಾಗಿ ತೆಗೆದುಕೊಳ್ಳು ತ್ತಿದ್ದರು.

"ವಯಸ್ಸಾದ ಮೇಲೆ ಹಾಗೆಲ್ಲಾ ಹೊರಗೆ ಹೋಗಬಾರದು. ಯಾವ ಕಾಲಕ್ಕೆ ಏನೋ–ನಾರಾಯಣ ಕೃಷ್ಣ ಎಂತ ಮನೇ ಬಾಗಿಲಿನಲ್ಲಿ ರೋದು ಒಳ್ಳೇದು" ಎಂದುಕೊಂಡು ಸಮಾಧಾನದಿಂದಿದ್ದರು.

ಖಾಯಿಲೆಯಿಂದಾಗಿ ರಾಯರ ಮನೆಯ ಮದುವೆಗೂ ಹೋಗಿರ ಲಿಲ್ಲ. 'ಮಲೇರಿಯಾ' ಅವರ ಮುಪ್ಪಿನ ದೇಹದಮೇಲೆ ಧಾಳಿ ಇಟ್ಟಿತು. ರಾಯರಿಗೆ ಶಾಸ್ತ್ರಿಗಳಲ್ಲಿ ಬಹಳ ಗೌರವ. ಅವರು ಬಾರದ್ದರಿಂದ ಮದು ವೆಯ ಮನೆಯೆಲ್ಲ ಅವರಿಗೆ ಬಣಬಣ ಎನಿಸುತ್ತಿತ್ತು. ಮಣಿಯ ಮದುವೆ ರಾಯರ ಅಂತಸ್ತಿಗೆ ತಕ್ಕಂತೆ ಬಹು ವೈಭವದಿಂದ ನಡೆಯಿತು. ಯಾವು

ದಕ್ಕೂ ಕೊರತೆ ಇರಲಿಲ್ಲ. ಆದರೂ ತಂದೆ ಮಗಳು ಇಬ್ಬರೂ ನಿರುತ್ಸಾಹಿಗಳಾಗಿದ್ದರು.

ಮನೆಯ ಯಜಮಾನಿ ಹಾಸಿಗೆಯಲ್ಲಿ! ಯಾರದೋ ಓಡಾಟ. ಹಿರಿಯ ಅಣ್ಣನಂತಿದ್ದ ಶಾಸ್ತ್ರಿಗಳೂ ಬರಲಿಲ್ಲ. ಹತ್ತಾರು ಕೆಲಸಕ್ಕೆ ನೆರವಾಗುತ್ತಿದ್ದ ವಿಶ್ವನಾಥನೂ ಬರಲಿಲ್ಲ. ಮನೆ ತುಂಬ ಜನರಿದ್ದರೇನು? ಆಪ್ತರಾದವರು ಇಲ್ಲದ ಮೇಲೆ ಅದೊಂದು ದೊಡ್ಡ ಕೊರತೆಯೆನಿಸಿತ್ತು ರಾಯರಿಗೆ.

ವಿಶ್ವನಾಥ ಐನೂರು ರೂಪಾಯಿಗಳನ್ನು ರಾಯರಿಗೆ ಕಳಿಸಿ ಮಣಿಗೆ ಒಂದು ಒಡವೆ ಮಾಡಿಸಿ ತನ್ನ ಹರಕೆಯೊಡನೆ ಕೊಡುವಂತೆ ತಿಳಿಸಿದ್ದ. ಅದು ಮದುವೆಯ ದಿನವೇ ಬಂತಾಗಿ ರಾಯರು ಅದನ್ನೇ ಹಸೆಯ ಮೇಲೆ ಓದಿಸಿದರು. ಅದರಲ್ಲಿ ಏನು ಮಾಡಿಸಬೇಕೆಂಬ ಮಾತು ಬಂದಾಗ ಮಣಿ.

"ಅದರಲ್ಲಿ ನನಗೇನೂ ಬೇಡ. ಹಣವನ್ನು ಯುದ್ಧ ನಿಧಿಗೆ ಕೊಟ್ಟುಬಿಡಿ!"

ಎಂದಳು.

ರಾಯರಿಗೆ ಆಶ್ಚರ್ಯವಾಯಿತು. ಅಷ್ಟು ಹಣವನ್ನು ಒಂದೇ ಸಲಕ್ಕೆ ಕೈಬಿಡಲು ಅವರು ತಯಾರಿರಲಿಲ್ಲ. ಆದರೆ ಮಣಿ ಒಂದೇ ಪಟ್ಟು ಹಿಡಿದದ್ದರಿಂದ ಸುಮ್ಮನಾಗಬೇಕಾಯಿತು.

ಮದುವೆಯ ಗಲಾಟೆಯೆಲ್ಲ ಮುಗಿದ ಮೇಲೆ ರಾಯರು ಮಗಳನ್ನೂ ಅಳಿಯನನ್ನೂ ಜೊತೆಗೊಂಡು ಒಂದು ದಿನ ರಂಗನೂರಿಗೆ ಬಂದರು. ಶಾಸ್ತ್ರಿಗಳಿಗೆ ಜ್ವರಬಿಟ್ಟು ಆಗತಾನೆ. ಮನೆಯಲ್ಲಿ ಎದ್ದು ಓಡಾಡುತ್ತಿದ್ದರು. ಒಂದು ಜೊತೆ ಕಲಾಬತ್ತಿನ ಪಂಚೆಯನ್ನು ತಟ್ಟೆಯಲ್ಲಿಟ್ಟು ದಂಪತಿಗಳು ಅವರಿಗೆ ನಮಸ್ಕಾರ ಮಾಡಿದರು. ಶಾಸ್ತ್ರಿಗಳು ಮನೆಯಲ್ಲಿ ಔತನದ ಅಡಿಗೆ ಮಾಡಿಸಿ ಉಡುಗೊರೆಕೊಟ್ಟು ಎಲ್ಲರನ್ನೂ ಸಾಯಂಕಾಲದವರೆಗೂ ಇಟ್ಟುಕೊಂಡು ಸತ್ಕರಿಸಿದರು. ಮಾತಿನ ಸಂದರ್ಭದಲ್ಲಿ ಮಣಿ ಹಣವನ್ನು ಯುದ್ಧ ನಿಧಿಗೆ ಕೊಟ್ಟ ವಿಚಾರವೂ ಬಂದು ಹೋಯಿತು.

ಅದನ್ನು ಕೇಳಿ ಶಾಸ್ತ್ರಿಗಳು ಮನಸ್ಸಿನಲ್ಲಿ—"ಈಗಿನ ಹುಡುಗರು—ಅವರ ಅಡಿ ಆಳ ಯಾರಿಗೂ ತಿಳಿಯುವಂತಿಲ್ಲ!" ಎಂದುಕೊಂಡರು.

"ಒಟ್ಟಿನಲ್ಲಿ ಕಾಲವೇ ಬದಲಾಗುತ್ತಿದೆ!"

"ಅದೂ ಇಷ್ಟು ತೀವ್ರ ಗತಿಯಲ್ಲಿ!"

"ಇದೆಲ್ಲಾ ಯುದ್ಧದ ಪರಿಣಾಮ—ಅದರಿಂದಾಗಿ ಪ್ರಪಂಚವೇ ಬುಡಮೇಲಾಗುತ್ತಿದೆ!"

ಎಂದೆಲ್ಲ ಯೋಚನೆಗಳು ಈಗೀಗ ಶಾಸ್ತ್ರಿಗಳಿಗೆ ಬರುತ್ತಿದ್ದುವು.

"ಮೂರ್ತಿ, ಅಲ್ಲಿ ಹೋದವನು ಅಲ್ಲೇ ನೆಲಸಿಬಿಟ್ಟ. ವೈದ್ಯಶಾಲೆ ತೆರೆಯಲು ಇಲ್ಲಿ ಜಾಗವಿರಲಿಲ್ಲವೇ ....? ಏನೋ ಎಲ್ಲ ವಿಚಿತ್ರ!"

"ಮುಖ್ಯ ನಮ್ಮ ಕಾಲ ಹಿಂದಾಯಿತು. ಇವರ ನಡೆನುಡಿಗಳಿಗೆ ಅರ್ಥಮಾಡುವುದು ನಮ್ಮಿಂದಾಗದ ಮಾತು" ಎಂದು ಕೊಂಡರು.

ಮೀನಾಕ್ಷಿಯ ಕಾಗದ ಬಂದಾಗ—

"ಹಿಂದೆ ಹೆಣ್ಣು ಮಕ್ಕಳು ತವರಿಗೆ ಕರೆದರೆ ಹಾರಿ ಬರುತ್ತಿದ್ದರು. ಈಗ ಅದು ಕೂಡ ಬಯಲಾಗಿದೆ!"

ಎನಿಸಿತು ಅವರಿಗೆ.

"ಮೊಮ್ಮಗ ಹರಿ ಕೂಡ ವೇದವಿದ್ಯೆಯಲ್ಲಿ ಸಾಕಷ್ಟು ಶ್ರದ್ಧೆ ತೋರುವುದಿಲ್ಲ. ಮೊದಲಿನಂತೆ ಶ್ಲೋಕ ಬಾಯಿಪಾಠ ಕಲಿಯುವುದಿಲ್ಲ. ಯಾವಾಗಲೂ ಹಡುಗರ ಜೊತೆ ಚಂಡು ಹಿಡಿದು ತಿರುಗುತ್ತಾನೆ!"

"ಎಲ್ಲಾ ಕಲಿಯ ಮಹಿಮೆ!"

ಶಾಸ್ತ್ರಿಗಳು ಮನಸ್ಸಿನಲ್ಲೇ ನಕ್ಕರು.

* * * * *

## ೧೧

ಮೀನಾಕ್ಷಿ ಹಾಸಿಗೆಯಮೇಲೆ ಹೊರಳಾಡುತ್ತಿದ್ದಳು. ಹೊರಗೆ ಬಿಸಿಲು ಉರಿಯುತ್ತಿತ್ತು. ಬೀದಿಯಲ್ಲಿ ಜನರ ಓಡಾಟವಿರಲಿಲ್ಲ. ಮರದ

ಎಲೆಗಳು ಕೂಡ ಅಲ್ಲಾಡದೆ ಬಿಸಲಿನಲ್ಲಿ ತಟಸ್ಥವಾಗಿ ನಿಂತಂತಿತ್ತು. ಇಂದಿರ ಅವಳ ಹತ್ತಿರ ಕುಳಿತುಕೊಂಡು ಮಾತಾಡುತ್ತ, ನಡು ನಡುವೆ ಮೀನಾಕ್ಷಿಯ ಹಣೆಯನ್ನು ಸವರುತ್ತಿದ್ದಳು.

"ಇಂದಿರಾ–ಇಷ್ಟು ಸಂಕಟದಲ್ಲೂ ನೀನು ನನ್ನ ಬಳಿ ಇರುವುದರಿಂದ ಎಷ್ಟು ಸುಖವಾಗಿದೆ!"

ಮೀನಾಕ್ಷಿ ಇಂದಿರನ ಕೈ ಹಿಡಿದುಕೊಂಡು ಹೇಳಿದಳು.

"ಮೀನಾ— ಊರಿಗೆ ಕಾಗದ ಬರೆದು ಅಮ್ಮಯ್ಯನನ್ನಾದರೂ ಕರೆಸಿಕೊಂಡಿದ್ದರೆ ಚೆನ್ನಾಗಿತ್ತು. ನನಗೆ ಒಂದೊಂದು ಸಲ ಹೆದರಿಕೆಯಾಗುತ್ತೆ....!"

"ನಿಮ್ಮಣ್ಣನೇ ಬರೆದಿದ್ದರು. ಆದರೆ ಅಕ್ಕ ಬಂದರೆ ಮನೆಯಲ್ಲಿ ಅಪ್ಪನಿಗೆ ತೊಂದರೆ. ಆದಲ್ಲದೆ ಅವರು ಅವಳನ್ನು ಹಾಗೆಲ್ಲಾ ಮನೆಬಿಟ್ಟು ಎಲ್ಲೂ ಕಳಿಸುವುದಿಲ್ಲ........"

"ನೀನು ಅಲ್ಲಿಗೆ ಹೋಗಲಿಲ್ಲವೆಂದು ಅವರಿಗೆ ಸಿಟ್ಟಿರಬಹುದು. ನನ್ನಿಂದಾಗಿ ನಿನಗೆ ಅವರೆಲ್ಲಾ ದೂರವಾಗಿದಾರೆ."

"ಹಾಗೇಕೆ ಹೇಳುವೆ ಇಂದಿರ. ನಾನು ಹೋಗುವುದು ಸರಿಯಲ್ಲವೆಂದು ಡಾಕ್ಟರೇ ಹೇಳಲಿಲ್ಲವೇ? ಅದಕ್ಕೆ ಅವರೇಕೆ ಸಿಟ್ಟಾಗಬೇಕು....?"

"ಮತ್ತೇನು....? ಚಂದು ಮದುವೆಗೆ ಸಹ ನೀನು ಹೋಗಲಿಲ್ಲ. ನನ್ನ ಪರೀಕ್ಷೆ ಅಡ್ಡ ಬಂದಿತ್ತು. ಈಗ ಮತ್ತೆ ಅದೇ...."

"ಸಾಕು–ಸಾಕು. ಈಗೇಕೆ ಅವೆಲ್ಲ ಮಾತು! ನಾನು ಏನೋ ಅಂತಿದ್ದೆ....ಗಂಟೆ ಎಷ್ಟಾಯ್ತು....?"

"..................."

"ಇಂದಿರಾ ...?"

ಇಂದಿರ ಮುಖವನ್ನು ಆ ಕಡೆ ತಿರುಗಿಸಿಕೊಂಡಿದ್ದಳು. ಮೀನಾಕ್ಷಿ ಅವಳ ಮುಖವನ್ನು ತನ್ನ ಕಡೆಗೆ ತಿರುಗಿಸಿಕೊಂಡು—

"ಯಾಕೆ ಅಳುವೆ ನನ್ನ ತಾಯಿ—ಏನಾಯ್ತು?"

ಎಂದಳು.

ಇಂದಿರ ಮಾತಾಡಲಿಲ್ಲ. ಕಣ್ಣಿನಿಂದ ಪಟಪಟನೆ ನೀರುರುಳಿ ಹಾಸಿಗೆಯ ಮೇಲೆ ಬೀಳುತ್ತಿತ್ತು.

"ಎಂದೂ ಇಲ್ಲದ ನೀನು ಇಂದೇಕೆ ಹೀಗೆ.....?"

"ನನಗೇನೂ ಭಯ ಇಲ್ಲ—ಇಂದಿರ. ಹೆಂಗಸರಾಗಿ ಹುಟ್ಟಿ ಇದಕ್ಕೆಲ್ಲಾ ಅತ್ತರೆ ಆಗುವುದೇ....? ನಾನು ನಿನ್ನ ಬಿಟ್ಟು ಹೋಗುವೆನೆಂದು ಅಳುವೆಯಾ? ಇಲ್ಲ....ಇಂದಿರ...."

"ಮೀನ....!"

"ಒಂದು ವೇಳೆ ದೇವರ ಇಚ್ಛೆ ಹಾಗೇ ಇದ್ದರೆ–ಅದನ್ನು ತಪ್ಪಿಸಲು ನಮ್ಮಿಂದ ಸಾಧ್ಯವೇ...."

"ನೀನು ಹಾಗೆಲ್ಲಾ ಅನ್ನಬೇಡ ಮೀನ. ನನಗೆ ಕೇಳಕ್ಕೇ ಆಗಲ್ಲ. ಇಲ್ಲಿಗೆ ಬಂದು ಈ ಪ್ರಳಯವನ್ನು ನೋಡಿದಾಗಿನಿಂದ ನನಗೆ ಪ್ರಪಂಚವೇ ಬೇಸರವಾಗಿದೆ. ಜೀವನವು ಅರ್ಥರಹಿತವೆಂದೂ, ನಿಸ್ಸಾರವಾದುದೆಂದೂ ತೋರುತ್ತಿದೆ...."

"ಬೇಡ ಮಗೂ—ಈಗಲೇ ಅಷ್ಟು ವೈರಾಗ್ಯ ಬೇಡ. ನಿನ್ನ ಅಣ್ಣ ಇದಾರೆ; ಅವರಿಗೆ ನೀನು ಎಂದರೆ ಪ್ರಾಣ! ಮೂರ್ತಿ...."

"ಏನು, ಮೂರ್ತಿ... ?"

"ಬದುಕಿನಲ್ಲಿ ಒಂದು ಸಲ ಮೂರ್ತಿಯಂಥ ಬಂಧುವು ಸಿಕ್ಕಿ—ಅಂತಹ ಪ್ರೇಮವನ್ನು ಪಡೆಯುವ ಭಾಗ್ಯವು ಲಭಿಸಿದರೆ...

ಎಂತಹ ಕಷ್ಟಗಳು ಬಂದರೂ, ಬದುಕು ಸಾರ್ಥಕ. ನಿಸ್ಸಾರವಲ್ಲ—ಜೀವಿಸಲು ಯೋಗ್ಯವಾದದ್ದು....!"

"ಮೀನ—ನಿನ್ನ ಮಾತಿನ ಅರ್ಥ ಗೊತ್ತಾಗಲಿಲ್ಲ. ಒಗಟಿಯಂತಿದೆ!"

"ಒಗಟೇನು ಬಂತು....? ಮೂರ್ತಿ ಯಾರಿಗಾಗಿ ದೇಶಕೋಶವನ್ನೆಲ್ಲಾ ಬಿಟ್ಟು ಬಂದು—ಈ ಕಾಡಿನಲ್ಲಿ ಯಾವ ಪ್ರತಿಫಲದ ಆಶೆಯೂ ಇಲ್ಲದೆ ದುಡಿಯುತ್ತಿರೋದು....ಗೊತ್ತೆ....?"

"ಗೊತ್ತಿಲ್ಲದೆ ಏನು....? ಮಾಡೋದಕ್ಕೆ ಕೆಲಸವಿರಲಿಲ್ಲ. ಕೈಗೆ ದುಡ್ಡು ಬೇರೆ ಬಂತು—ಜೊತೆಗೆ ಸಮಯಕ್ಕೆ ಸರಿಯಾಗಿ ಈ ವಿಪ್ಲವವೂ ಬಂತು, ನೀನು ದೀನ ಸೇವೆಯ ಹುಚ್ಚು ಹಿಡಿಸಿದೆ.....!"

"ಅವೆಲ್ಲಾ ಸ್ವಲ್ಪ ಮಟ್ಟಿಗೆ ನಿಜ; ಆದರೆ ಅದೆಲ್ಲದರ ಹಿಂದೆ ನೀನು ಇರುವೆಯೆಂಬುದನ್ನು ಮರೀಬೇಡ. ನಿನ್ನ ಮೇಲಿನ ಪ್ರೇಮವು ಅಷ್ಟು ಬಲವಾಗಿಲ್ಲದಿದ್ದರೆ, ಮೂರ್ತಿ ಎಂದೋ ಇಲ್ಲಿಂದ ಕಾಲ್ದೆಗೆಯುತ್ತಿದ್ದ. ದೀನಸೇವೆಯೇ ಅವನ ಗುರಿಯಾಗಿದ್ದರೆ—ದೀನರು ಅವನ ಊರಿನಲ್ಲಿಲ್ಲವೇ? ಅವರನ್ನು ಹುಡುಕಿಕೊಂಡು ಇಲ್ಲಿಗೆ ಬರಬೇಕೆ..... ಏನು ಮಾತು ಇಂದಿರ.....! ಈ ವಿಚಾರ ಇಲ್ಲಿ ನಮ್ಮನ್ನು ಬಲ್ಲ ಎಲ್ಲರಿಗೂ ತಿಳಿದಿದೆ."

"......................."

"ಮೊನ್ನೆ ಬಂದ ದಾದಿ ಕೂಡ—

ಮದುವೆ ಯಾವಾಗ ...?"

ಎಂದು ಕೇಳಿದಳು. ಆದರೆ ನೀವು ಅಣ್ಣ ತಂಗಿಯರು ಮಾತ್ರ ಕಣ್ಣುಮುಚ್ಚಿಕೊಂಡೇ ಇದೀರೋ—ಅಥವಾ ಕಂಡೂ ಕಾಣದಂತೆ ಇರುವಿರೊ........ ಇಂದಿರ ... ಇಂ.... ದಿ ..... ರ.... ಹಾ ....."

ಇಂದಿರ ಬೆಚ್ಚಿ ಎದ್ದಳು. ಮೀನಾ ಒದ್ದಾಡುತ್ತಿದ್ದಳು. ಇಂದಿರ ಹುಚ್ಚಿಯಂತೆ—

"ನರ್ಸ್.... ನರ್ಸ್—ಲೋ ನಿಂಗಾ, ಡಾಕ್ಟರ್ ಮೂರ್ತಿಯವರನ್ನು ಕರೆಯೋ.....!"

ಎಂದು ಕೂಗಿಕೊಂಡು ಹೊರಗೆ ಓಡಿದಳು.

ಮೂರ್ತಿ ಊಟಮಾಡಿ ಮಲಗಿದ್ದ. ನಿಂಗ ಹೋಗಿ ಕೂಗಿದ ಕೂಡಲೇ ಬೇಗ ಬೇಗ ಬಟ್ಟೆಹಾಕಿಕೊಂಡು ಬಂದ. ರಾಮಚಂದ್ರ ಮನೇಲಿರಲಿಲ್ಲ. ನರ್ಸ್ ಅಲ್ಲೇ ಇದ್ದಳು. ಮೂರ್ತಿ ಅವಳಿಗೆ ಹೇಳಬೇಕಾದ್ದನ್ನು ಹೇಳಿ ಇಂದಿರನನ್ನು ಹುಡುಕಿಕೊಂಡು ಹೋದ. ಅವಳು ತನ್ನ ಕೋಣೆಯಲ್ಲಿ ಮೇಜಿನಮೇಲೆ ತಲೆ ಇಟ್ಟುಕೊಂಡು ಕುಳಿತಿದ್ದಳು. ಮೂರ್ತಿ ಅವಳ ಕೈ ಕಾಲುಗಳು ನಡುಗುತ್ತಿರುವುದನ್ನು ನೋಡಿ—

"ಇಂದಿರ—ನೀನು ಬಹಳ ಧೈರ್ಯಶಾಲಿಯೆಂದಿದ್ದೆ! ಈಗ ನೋಡಿದರೆ ನಿನ್ನ ಉಪಚಾರಕ್ಕೇ ಇನ್ನೊಬ್ಬರು ಬೇಕಾಗಿದೆ...."

ಎಂದ.

ಮೂರ್ತಿ ನಗುತ್ತಿದ್ದುದನ್ನು ನೋಡಿ ಇಂದಿರನಿಗೆ ಸ್ವಲ್ಪ ಧೈರ್ಯ ಬಂದಂತಾಯಿತು. ತಲೆಯೆತ್ತಿ ಅತ್ತು ಕೆಂಪಾಗಿದ್ದ ಕಣ್ಣುಗಳನ್ನು ಅವನ ಕಡೆ ತಿರುಗಿಸಿ—

"ಮೂರ್ತಿ—ನಿಜವಾಗಿ ಮೀನಾ....ಹುಷಾರಾಗುತ್ತಾಳೆಯೇ?"

ಎಂದು ಕೇಳಿದಳು.

ಮೂರ್ತಿ ಅವಳು ತಲೆ ಬಗ್ಗಿಸಿ ನಡುಗುತ್ತ ಕೂತಿದ್ದುದನ್ನು ನೋಡಿ—

"ಹೆದರಿಕೆಯಿಂದ ಹೀಗಿದಾಳೆ!"

ಎಂದುಕೊಂಡಿದ್ದ. ಅವಳು ಅಳುತ್ತಿರುವುದನ್ನು ನೋಡಿ ಹತ್ತಿರ ಬಂದು ಮಕ್ಕಳನ್ನು ಸಮಾಧಾನ ಮಾಡುವಂತೆ—

ತಲೆ ಸವರಿ,—

"ಹುಚ್ಚು ಹುಡುಗಿ—ಮೀನಾ ಹುಷಾರಾಗುವುದಿಲ್ಲವೆಂದು ಯಾರು ಹೇಳಿದೋರು? ನಿಶ್ಶಕ್ತಿಯಾಗಿದಾಳೆ; ಎಚ್ಚರಿಕೆಯಿಂದ ನೋಡಿಕೋ; ಎಂದು ಹೇಳಿದರೆ ಹೀಗೆಲ್ಲಾ ಅರ್ಥ ಮಾಡುವುದೇ? ಏಳು—ಮುಖ ತೊಳೆದುಕೊಂಡು ಸಕ್ಕರೆ ಸಿದ್ಧಮಾಡಿಕೊ. ನಮಗೆಲ್ಲಾ ಕೊಡುವಿಯಂತೆ!"

ಇಂದಿರ ಸೆರಗಿನಿಂದ ಕಣ್ಣೊರಸಿಕೊಳ್ಳುತ್ತ ಎದ್ದು ನಿಂತಳು.

"ಪೆಟ್ಟಿಗೆ ತುಂಬ ಅಲಂಕಾರಕ್ಕೆ ಕೈ ವಸ್ತ್ರ ತುಂಬಿದ್ದರೂ ಅಳು ಬಂದಾಗ ನಮ್ಮ ಹುಡುಗಿಯರಿಗೆ ಸೆರಗೇ ಗತಿ!"

ಮೂರ್ತಿ ನಗುತ್ತ ತನ್ನ ಜೇಬಿನಿಂದ ವಸ್ತ್ರ ತೆಗೆದು ಮುಂದೆ ಹಿಡಿದ. ಇಂದಿರ ಅದರಿಂದ ಕಣ್ಣು ಮೂಗುಗಳನ್ನು ಒರಸಿಕೊಂಡಳು. ಅವರ ಚುಚ್ಚು ಮಾತು ಅವಳ ಯೋಚನೆಯನ್ನು ಮರೆಮಾಡಿತು. ಅಳುವಿನಲ್ಲೇ ನಗುವನ್ನು ಸೂಸಿ—

"ಈ ವಸ್ತ್ರವೂ ನಾನು ಹೊಲಿದದ್ದೇ....!"

ಎಂದಳು.

"ಇರಬಹುದು....ಆದರೆ ಬಟ್ಟೆ....?"

"ಬಟ್ಟೆಗೇನು....? ಲಕ್ಷಣವಾಗಿ ಹೊಲಿಯೋರೊಬ್ಬರಾದರೆ....!"

"ಹೊಲಿದರೆ ಬಂತೆ ಭಾಗ್ಯ....? ನೀನೂ ಬೇಕಾದಷ್ಟು ಹೊಲಿದು ಸೆಂಟು ಹಾಕಿ ಇಟ್ಟಿದ್ದಿ. ಯಾವಾಗ ಬೇಕೋ ಆಗಿಲ್ಲ .... ಅದಕ್ಕೂ ಬೇಕು....!"

"ಏತಕ್ಕೋ....?"

"ಇರುವ ಪದಾರ್ಥವನ್ನು ಸಮಯವರಿತು ಉಪಯೋಗಿಸಲು ಜಾಣ್ಮೆ ಬೇಕು!"

"ನಿಮಗಾದರೂ ಇದೆಯಲ್ಲ...."

"ಇದೆಯೆಂತಲೆ ಈವರೆಗೆ ಉಳಿದಿದೇನೆ."

"ವಸ್ತ್ರವಿಲ್ಲದಿದ್ದರೂ ಏನೂ ಮುಳುಗಿ ಹೋಗಲ್ಲ. ಹೇಗೂ ನಮ್ಮ ಬಳಿ...."

"ಸೆರಗು ಇದ್ದೇ ಇದೆಯಲ್ಲ!"

"ಇದೇನು? ವಾದ ಎಲ್ಲಿ ಮೊದಲಾಯಿತೋ ಪುನಃ ಅಲ್ಲಿಗೇ ಬಂದಂತಿದೆ!"

"ಅದೇ ನ್ಯಾಯ. ಊರಿಂದ ಹೊರಟವರು ಎಲ್ಲಿ ಸುತ್ತಿದರೂ ಕೊನೆಗೆ ಊರಿಗೇ ಬರಬೇಕು."

"ಇದು ಒಳ್ಳೆ ತರ್ಕ...."

ಇಂದಿರನ ಮಾತು ಅಲ್ಲಿಗೇ ನಿಂತಿತು. ಒಳಗೆ ಮೀನಾಕ್ಷಿ ನರಳುವುದು ಕೇಳಿಸಿತು. ಇಂದಿರನ ಕಣ್ಣು ಪುನಃ ನೀರಿನಲ್ಲಿ ತೇಲಿತು. ಅವಳು ಕಳವಳದಿಂದ—

"ಮೂರ್ತಿ—ರಾಮಣ್ಣನಿಗೆ ಹೇಳಿಕಳಿಸೋಣ. ನನ್ನಿಂದಾಗಿ ಈ ಸಮಯದಲ್ಲಿ ಅವಳ ಬಳಿ ಯಾರೂ ದೊಡ್ಡವರು ಇರದಂತಾಯಿತು. ಅವನಾದರೂ ಮನೇಲಿರಬಾರದೆ....?"

"ರಾಮಣ್ಣನಿಗೆ ನಾನು ಬರುವಾಗಲೇ 'ಫೋನ್' ಮಾಡಿ ಬಂದಿದ್ದೇನೆ. ಇನ್ನೇನು ಬರಬಹುದು.... ಅದೇನೋ ನನ್ನಿಂದಾಗಿ ಅಂದೆಯಲ್ಲ.... ಅದೇನು ?"

"ಇನ್ನೇನು....? ಆಗಲೇ ಹೇಳಿರಲಿಲ್ಲವೆ? ಮೀನ ನನ್ನಿಂದಾಗಿ ತವರಿಗೆ ಹೋಗಲಿಲ್ಲ......"

"ನಾನೂ ಅಂದೇ ಹೇಳಿದ್ದೆ; ಮೀನ ಅಲ್ಲಿಗೆ ಹೋಗದಿದ್ದುದು ನಿನ್ನಿಂದಾಗಲ್ಲ. ಅವಳ ದೇಹಾರೋಗ್ಯ ಸರಿಯಾಗಿಲ್ಲದ್ದರಿಂದ ಎಂತ. ನೀನು ಸುಳ್ಳು ಸುಳ್ಳೇ ಏನಾದರೊಂದು ಮನಸ್ಸಿಗೆ ಹಚ್ಚಿಗೊಂಡು ಕೊರಗುತ್ತೀ ಅಷ್ಟೆ !"

"ಸುಳ್ಳೇನು ಬಂತು ? ನೀವೇನೇ ಹೇಳಿ........ನನಗೆ ಒಂದೊಂದು ಸಲ ನಾನು ಕಲ್ಲಿನಂತೆ ಅವಳ ಕೊರಳಿಗೆ ಗಂಟು ಬಿದ್ದಿದ್ದೇನೇನೋ ಎನಿಸುವುದು."

"ವಜ್ರವೂ ಕಲ್ಲೇ......ಆದರೆ ಅದನ್ನು ಒಡವೆಯಂತೆ ಕೊರಳಲ್ಲಿ ಧರಿಸುವುದಿಲ್ಲವೇ.....?"

"ಒಳ್ಳೇ ಹೋಲಿಕೆ....! ಎಷ್ಟೋ ಸಮಯ ಒಡವೆ ಕೂಡ ಭಾರ ವಾಗೋದುಂಟು."

"ಹಾಗೆ ಭಾರವೆನಿಸಿದರೆ ಅದನ್ನು....ಬೇಕೆನಿಸಿದವರ ಕೊರಳಿಗೆ ಹಾಕೋದು ತಾನೇ....?"

ಇಂದಿರ ಸರಕ್ಕನೆ ಎದ್ದು ನಿಂತು—

"ನಾನು ಹೋಗುತ್ತೇನೆ. ನಿಮ್ಮ ಬಳಿ ಮಾತಾಡೋರಿಗೆ ಬುದ್ಧಿ ಇಲ್ಲ. ರಾಮಣ್ಣ ಬರೋವರೆಗೂ ಅಲ್ಲಿಯೋ ಹೊರಗೆ ಕಾಯುತಾ ಇರೋದು ವಾಸಿ...."

ಎಂದು ಹೇಳುತ್ತ ದಡದಡನೆ ಮೆಟ್ಟಲುಗಳನ್ನಿಳಿದು ಹೋದಳು. ಮೂರ್ತಿ ನಕ್ಕು ಅಲ್ಲೇ ಇದ್ದ ಒಂದು ಪುಸ್ತಕವನ್ನು ಮಗುಚಿಹಾಕುತ್ತಿದ್ದ.

ಸ್ವಲ್ಪ ಹೊತ್ತಿನಲ್ಲಿ ರಾಮಚಂದ್ರ ಬಂದ. ಮೋಟಾರು ನಿಂತ ಕೂಡಲೇ ಇಂದಿರ ಓಡಿ ಹೋಗಿ ಅಣ್ಣನನ್ನು ಹಿಡಿದುಕೊಂಡಳು. ರಾಮ

ಚಂದ್ರ ಅವಳ ಕೈಹಿಡಿದುಕೊಂಡು ಒಳಕ್ಕೆ ಬಂದ. ಮೂರ್ತಿಯೂ ಅವರನ್ನು ಕೂಡಿದ. ಯಾರೂ ಮಾತಾಡ... ಬೆಚ್ಚುತ್ತಲೇ ಇತ್ತು. ಎಲ್ಲರ ಮುಖದಲ್ಲೂ ಉದ್ವಿಗ್ನತೆ... ರಾಮಚಂದ್ರ ಕಣ್ಣಿನಿಂದಲೆ ಮೂರ್ತಿಯನ್ನು—

"ಹೇಗೆ....? ಏನು.....?" ಎಂತ ಪ್ರಶ್ನಿಸಿದ

ಮೂರ್ತಿಯೂ ನೋಟದಿಂದಲೇ......

"ಏನೂ ತೊಂದರೆಯಿಲ್ಲ. ಇನ್ನೆಲ್ಲಾ ಆಗಬೇಕಾಗಿದ್ದೇ!"

ಎಂಬು ಉತ್ತರಿಸಿದ.

ಸ್ವಲ್ಪ ಹೊತ್ತು ಹಾಗೇ ಕಳೆಯಿತು. ಅಲ್ಲಿ ಆವರಿಸಿದ್ದ ಗಂಭೀರ ಮೌನವನ್ನೊಡೆದು ಮಗುವಿನ ಚೀರಾಟ ಮನೆಯನ್ನು ತುಂಬಿತು. ಎಲ್ಲರ ಮುಖವೂ ಅರಳಿ, ಬಿಗಿದಂತಿದ್ದ ವಾತಾವರಣ ಹಗುರವಾಗಿ ಸಂತೋಷ ತಲೆದೋರಿತು. ಸ್ವಲ್ಪ ವೇಳೆಯಮೇಲೆ ನರ್ಸ್ ಹೊರಗೆ ಬಂದು ನಗುಮುಖದಿಂದ—

"ಇಂದಿರಮ್ಮ—ಮಗು ನಿಮ್ಮಂತೆಯೇ ಇದೆ. ಆದರೆ ಸೀರೆ ಉಟ್ಟು ಕೊಂಡು ಅಲಂಕಾರ ಮಾಡಿಕೊಳ್ಳುವಂತಿಲ್ಲ. ಗಂಡು ಮಗು ...."

ಎಂದಳು.

ಇಂದಿರ ಮಗುವನ್ನು ನೋಡುವ ಆತುರದಿಂದ ಒಳಗೆ ಹೋದಳು. ಎಲ್ಲರೂ ಅವಳನ್ನು ಹಿಂಬಾಲಿಸಿದರು.

ಸಾಯಂಕಾಲದ ಹೊತ್ತಿಗೆ ಮೀನಾಕ್ಷಿಗೆ ಮಗು ಹುಟ್ಟಿರುವ ಸುದ್ದಿ ತಿಳಿದು, ಅವಳ ಬಳಗವೆಲ್ಲಾ ಗುಂಪುಗುಂಪಾಗಿ ಬಂದು ಮನೆಯ ಮುಂದೆ ನಿಂತಿದ್ದರು. ಇಂದಿರ ತಟ್ಟೆಯಲ್ಲಿ ಸಕ್ಕರೆ ತುಂಬಿಕೊಂಡು ಅವರಿಗೆಲ್ಲಾ ಹಂಚುತ್ತಿದ್ದಳು. ಮೂರ್ತಿ ರಾಮಚಂದ್ರ ಇಬ್ಬರೂ ಅವಳ ಸಡಗರವನ್ನು ನೋಡಿ ನಗುತ್ತ ನಿಂತಿದ್ದರು.

* * * *

ಮೀನಾಕ್ಷಿ ಸ್ವಲ್ಪ ಸಲ್ಪವಾಗಿ ಚೇತರಿಸಿಕೊಳ್ಳುತಲಿದ್ದಳು. ಈಗ ಮನೆಯಲ್ಲಿ ತಿರುಗಾಡುತ್ತಿದ್ದರೂ ಇನ್ನೂ ಮೊದಲಿನಂತೆ ಶಕ್ತಿ ಬಂದಿರ

ಲಿಲ್ಲ. ಕತ್ತಲಲ್ಲಿಟ್ಟ ಸೊಡರುಗಳಂತೆ ಕಣ್ಣುಗಳು ಮಾತ್ರ ಬೆಳಗುತ್ತಲಿತ್ತು. ಸ್ನೇಹವನ್ನೂ—ಕರುಣೆಯನ್ನೂ ತುಂಬಿಕೊಂಡು ಮಮತೆಯ ಚಿಲುಮೆಗಳಂತೆ ತೋರುತ್ತ, ಹತ್ತಿರ ಇದ್ದವರಿಗೆ ಉತ್ಸಾಹವನ್ನು ತುಂಬುವಂತೆ ಇತ್ತು ಅವಳ ನೋಟ. ರಾಮಚಂದ್ರ ಬತ್ತಿ ಬಡವಾಗಿದ್ದ ಅವಳ ಕೈ ಕಾಲುಗಳನ್ನು ನೋಡಿ—

"ಮೀನಾ ಮೊದಲಿನಂತೆ ಆಗುವಳೆ? ಪುನಃ ಅವಳ ಕೆನ್ನೆಗಳು ರಂಗಾಗುವುವೇ?"

ಎಂದುಕೊಂಡು ಅವಳ ಮುಖದ ಕಡೆ ನೋಡಿದರೆ, ಮೀನಾಕ್ಷಿ ಅವನ ಯೋಚನೆಯನ್ನು ತಿಳಿದವಳಂತೆ ಮೆಲ್ಲಗೆ ನಗುತ್ತಿದ್ದಳು. ಹೊಸದಾಗಿ ಬಂದ ತಾಯ್ತನದ ಹೆಮ್ಮೆಯಿಂದ—ಗೆಲುವಿನ ನಗು ಸೂಸುವಂತೆ ಅವಳ ಕಣ್ಣುಗಳು ಅರಳಿ, ನಗು ಚಿಮ್ಮಿದರೆ ರಾಮಚಂದ್ರ ಆ ಗಳಿಗೆಯಲ್ಲಿ ತೋರಿದ ಭಯವನ್ನು ಮರೆಯುತ್ತಿದ್ದ. ಪ್ರೇಮ ಪಥದಲ್ಲಿ ಅಡಿಯಿಟ್ಟ ಮೂರ್ತಿ, ಆಶೆಯಿಂದ ಆ ಕಣ್ಣುಗಳ ಕಡೆ ನೋಡುತ್ತ—ಆ ನಗುವಿನ ತೆರೆಯ ಹಿಂದೆ ತನಗೆ ಭರವಸೆ ದೊರೆತಂತೆ ಭಾವಿಸುತ್ತಿದ್ದ. ಇಂದಿರನಂತೂ ಆ ಸ್ನೇಹ ಮಮತೆಗಳ ನಡುವೆ ತಾಯ ತೊಡೆಯಲ್ಲಿ ಮಲಗಿದ ಮಗುವಿನಂತೆ—ಪ್ರಪಂಚವನ್ನೇ ಮರೆತಂತೆ ಇದ್ದಳು.

ಇಂದಿರ ಬೆಳಗಿನ ಹೊತ್ತಿನಲ್ಲಿ ಬಹುಭಾಗವನ್ನು ಮಗುವನ್ನು ಆಡಿಸುವುದರಲ್ಲಿ ಕಳೆದು, ಮಧ್ಯಾಹ್ನವಾದ ಮೇಲೆ ಮನೆಗೆ ಹತ್ತಿರದಲ್ಲಿದ್ದ ಶಾಲೆಗೆ ಹೋಗಿ—ಅಲ್ಲಿ ಸೇರಿದ್ದವರಿಗೆ ಅಕ್ಷರಗಳನ್ನು ಕಲಿಸುತ್ತಿದ್ದಳು. ಮೀನಾಕ್ಷಿ ಹೊರಗೆ ಬರುವುದು ನಿಂತಾಗಿನಿಂದ ಕಲಿಸುವ ಭಾರ ಅವಳೊಬ್ಬಳಿಗೇ ಆಗಿತ್ತು. ಅದೊಂದು ಮುರುಕು ಮನೆ. ಮೀನಾಕ್ಷಿ ಅದಕ್ಕೆ ಸುಣ್ಣ-ಬಣ್ಣ ಮಾಡಿಸಿ ಶಾಲೆಯಾಗಿ ಉಪಯೋಗಿಸುತ್ತಿದ್ದಳು. ಅಲ್ಲಿಗೆ ಕಲಿಯಲು ಬರುತ್ತಿದ್ದವರಲ್ಲಿ ತಲೆ ನರೆತ ಮುದುಕಿಯರೂ ಇದ್ದರು. ಅವರು ಆ ವಯಸ್ಸಿನಲ್ಲಿ ಕಲಿಯಲು ತೋರುತ್ತಿದ್ದ ಉತ್ಸಾಹ ಹುಡುಗಿಯರನ್ನೂ ನಾಚಿಸುವಂತಿತ್ತು. ಅವರಲ್ಲಿ ಬಡವರೇ ಹೆಚ್ಚು. ಬೆಳಗಿನಿಂದ ಸಂಜೆಯವರೆಗೂ ದುಡಿದರೂ, ಹೊಟ್ಟೆ ಬಟ್ಟೆ ಕಳೆಯುವುದೆ

ದುಸ್ತರವಾಗಿತ್ತು. ಜೊತೆಗೆ ಕುಡಿತದ ಹಾವಳಿ ಬೇರೆ. ಮೈ ಬೆವರು ಸುರಿಸಿ ಸಂಪಾದಿಸಿದ ದುಡ್ಡಿನಲ್ಲಿ ಹೆಚ್ಚು ಭಾಗ ಸಂಜೆಯ ಮೇಲೆ ಹೆಂಡ ದಂಗಡಿಯನ್ನು ಸೇರುತ್ತಿತ್ತು. ಬೆಳಗಿನಿಂದ ದುಡಿದ ಆಯಾಸವನ್ನು ಗಂಡಸು ಕುಡಿದು ಮೈಮರೆತು ಕಳೆಯುತ್ತಿದ್ದ. ಬೆಳಗಾದರೆ ಮನೆ ಬರಿದು; ಹೆಂಗುಸರು ಮಕ್ಕಳ ಹೊಟ್ಟೆ ಬರಿದು! ಮನೆಯಲ್ಲಿ ಜಗಳ—ಬಡಿದಾಟ!

ಈ ವಿಷಯಗಳನ್ನೆಲ್ಲಾ ಅವರುಗಳ ಮಾತಿನಿಂದ ತಿಳಿದು—ಕುಡಿಯುವುದರ ಕೆಟ್ಟ ಪರಿಣಾಮವನ್ನು ಕುರಿತು, ಇಂದಿರ ಅವರಿಗೆ ತಿಳಿಯ ಹೇಳುತ್ತಿದ್ದಳು. ಹೆಂಗುಸು ಮನಸ್ಸು ಮಾಡಿದರೆ ಗಂಡಸನ್ನು ಆ ದಾರಿಯಿಂದ ಹಿಂದಿರುಗಿಸಬಹುದೆಂದು ಅವಳ ನಂಬಿಕೆ!

"ಅವರಿಗೆ ದುಡ್ಡು ಕೊಡಬೇಡಿ. ಮೂರು ಕಾಸು ಆರು ಕಾಸು ಇಟ್ಟಿರುವ ಜಾಗವನ್ನು ತೋರಿಸಬೇಡಿ. ಮನೆಗೆ ಬಂದ ಕೂಡಲೇ ತಂದಿರುವ ಕೂಲಿಯನ್ನು ತೆಗೆದುಕೊಂಡುಬಿಡಿ."

ಮೊದಲಾಗಿ ಅವರಿಗೆ ಬೋಧಿಸುತ್ತ ಬಂದಳು.

ಸುಧಾರಣೆಗೆ ಹೊರಟ ಬಡವರ ಗುಡಿಸಲಿನಲ್ಲಿ, ಸುಧಾರಣೆಯ ಬದಲು ಜಗಳ ಮೊದಲಾಯಿತು. ಕಲಿತವರಿಗೆ ಆ ದುರಭ್ಯಾಸವನ್ನು ಬಿಡುವುದು ಆಗದ ಮಾತು. ಬದುಕಿನಲ್ಲಿ ಅವರಿಗಿದ್ದುದು ಅದೊಂದೇ ಸಂತೋಷ; ಕಷ್ಟವನ್ನು ಮರೆಯಲು ಅದೊಂದೇ ದಾರಿ! ಸಂಜೆಯಾಗುತ್ತ ಬಂದಂತೆ ಕೆಳಗಿಳಿಯುತ್ತಿರುವ ಸೂರ್ಯನ ಕಡೆ ನಿರೀಕ್ಷೆಯಿಂದ ನೋಡುತ್ತ—ಆ ಹೊತ್ತು ಬರುವುದನ್ನೇ ಕಾಯುತ್ತ ಆತುರದಿಂದ ಮನೆಗೆ ಬಂದರೆ—ಅಲ್ಲಿ ಈ ಅಡ್ಡಿ ಬಂದರೆ ಸೈರಿಸುವುದೆ......? ಮನೆಯಲ್ಲಿ ಪ್ರತಿ ದಿನವೂ ಜಗಳವಾಗಲು ಮೊದಲಾಯಿತು. ಅಂತೂ ಹೋಗುವುದೇನೂ ತಪ್ಪಲಿಲ್ಲ! ಮೊದಲು ಸರಾಗವಾಗಿ ನಡೆಯುತ್ತಿದ್ದ ಕೆಲಸಕ್ಕೆ ಈಗ ರಗಳೆ-ರಂಭಾಟ! ಇದೆಲ್ಲಾ ಮೀನಾಕ್ಷಿಯ ಶಾಲೆಯ ಪ್ರಭಾವವೆಂದು ಅರಿಯಲು ಅವರಿಗೆ ಹೆಚ್ಚು ಕಾಲ ಬೇಕಾಗಲಿಲ್ಲ.

ಅದು ತಿಳಿದ ಕೂಡಲೇ ಅವರ ಮೃಗೀಯ ಮನೋವೃತ್ತಿ ದಂಗೆ ಎದ್ದಿತು. ಸುಖದ ಮಡುವೆ ಮುಳುಗಿರುವವರಿಗೆ ತಮ್ಮ ಒಂದೇ ಸುಖ ಕಿತ್ತು ಹಿಡಿದುಕೊಳ್ಳಲು ಏನು ಅಧಿಕಾರ? ಇದೇ ಏನು ಬೋಧನೆಯ ಸೋಗಿನಲ್ಲಿ ಅವರು ನಮಗೆ ಮಾಡುತ್ತಿರುವ ಉಪಕಾರ....?" ಎಂದು ಅವರ ಬುದ್ಧಿ ಸವಾಲು ಹಾಕಿತು. ಮೂರು ನಾಲ್ಕು ಜನ ಗುಟ್ಟಾಗಿ ಒಂದು ಕಡೆ ಸೇರಿ— ಪ್ರತೀಕಾರದ ಯೋಚನೆಮಾಡಿ ಸಮಯವನ್ನು ಕಾಯುತ್ತಿದ್ದರು. ಮೊದಲು ಅವರ ಯೋಚನೆ ಹಿಂಸೆಯಿಂದ ಕೂಡಿತ್ತಾದರೂ, ಅವರಲ್ಲಿ ಒಬ್ಬನು ಮೀನಾಕ್ಷಿ ತನ್ನ ಮಗುವಿನ ಖಾಯಿಲೆಯಲ್ಲಿ ಮಾಡಿದ ಸಹಾಯವನ್ನು ನೆನೆದು ಅದಕ್ಕೆ ಒಪ್ಪಲಿಲ್ಲ. ಕೊನೆಗೆ ಮನೆಯವರಿಗೆ ತೊಂದರೆ ಮಾಡದೆ ಕೈಗೆ ಸಿಕ್ಕಿದ್ದನ್ನು ದೋಚಿಕೊಂಡು ಬರುವುದೆಂದು ತೀರ್ಮಾನವಾಯಿತು.

ಮೂರು ದಿನಗಳ ಹಿಂದೆ ರಾಮಚಂದ್ರ ಯಾವುದೋ ಕೆಲಸದ ಮೇಲೆ ಮುಂಬಯಿಗೆ ಹೋಗಿದ್ದ. ಮನೆಯಲ್ಲಿ ಮೀನಾಕ್ಷಿ ಇಂದಿರ ಇಬ್ಬರೆ ಇದ್ದುದರಿಂದಲೂ—ಮೀನಾಕ್ಷಿ ಇನ್ನೂ ಖಾಯಿಲೆಯವಳೆಂದೇ ಪರಿಗಣಿಸಲ್ಪಟ್ಟದ್ದರಿಂದಲೂ—ಮೂರ್ತಿ ರಾತ್ರಿಯವೇಳೆ ಬಂದು ಅವರ ಮನೆಯಲ್ಲೇ ಮಲಗುತ್ತಿದ್ದ. ಮೀನಾಕ್ಷಿ ಇಂದಿರ ಇಬ್ಬರೂ ಮಹಡಿಯ ಮೇಲೆ ಒಂದು ಕೊಠಡಿಯಲ್ಲೂ—ದಾದಿ ಮಗುವಿನೊಂದಿಗೆ ಪಕ್ಕದ ಕೊಠಡಿಯಲ್ಲೂ....ಮಲಗುತ್ತಿದ್ದರು. ಬೀದಿಯ ಬಾಗಿಲಿನಲ್ಲಿ ಇಬ್ಬರು ಗಂಡಾಳುಗಳು ಮಲಗುತ್ತಿದ್ದರು. ಮೂರ್ತಿ ಕೆಳಗಡೆ ರಾಮಚಂದ್ರನ ಕೋಣೆಯಲ್ಲಿ ಮಲಗುತ್ತಿದ್ದ. ಅದಕ್ಕೆ ಸೇರಿದಂತೆ ಇದ್ದ ಸಣ್ಣ ಕೊಠಡಿಯಲ್ಲಿ ಪೆಟ್ಟಿಗೆ, ದುಡ್ಡು, ಕಾಸು ಇವೆಲ್ಲಾ ಇಡುತ್ತಿದ್ದರು.

ಆ ದಿವಸವೂ ಎಂದಿನಂತೆ ಮೂರ್ತಿ ಊಟಮಾಡಿಕೊಂಡು ಬಂದ. ಬಹಳ ಹೊತ್ತು ಎಲ್ಲರೂ ಮಾತಾಡುತ್ತ ಕುಳಿತಿದ್ದು ಆಮೇಲೆ ಮಲಗಲು ಹೋದರು. ಮೀನಾಕ್ಷಿಗೆ ಅಷ್ಟು ಹೊತ್ತು ಕಾದಿದ್ದರಿಂದ ಆಯಾಸವಾಗಿ ಮಲಗಿದ ಕೂಡಲೆ ನಿದ್ರೆ ಬಂತು. ಒಂದು ಹೊತ್ತಿನಲ್ಲಿ ಮೂರ್ತಿಗೆ ಮನೆಗೆ ಹಿಂಭಾಗದಲ್ಲಿ ಏನೋ ಸದ್ದು ಆದಂತೆ ಕೇಳಿಸಿತು. ಸದ್ದು ಸ್ವಲ್ಪ

ಹೊತ್ತಿನಿಂದಲೂ ಆಗುತ್ತಿತ್ತು. ಆದರೆ ಅವನಿಗೆ ಎಚ್ಚರವಾದದ್ದು ಆಗ! ಅದು ಏನಿರಬಹುದೆಂದು ಯೋಚಿಸುತ್ತಿರುವಲ್ಲಿ, ಮೆಲ್ಲಗೆ ಯಾರೋ ತಿರುಗಾಡುತ್ತಿರುವಂತೆ ಕೇಳಿಸಿತು. ಮೂರ್ತಿ ದಿಂಬಿನ ಕೆಳಗೆ ಪಿಸ್ತೂಲಿಗಾಗಿ ಹುಡುಕಿದ. ಅದು ಅಲ್ಲಿರಲಿಲ್ಲ. ಅದನ್ನು ಹುಡುಕುವಷ್ಟು ಅವಕಾಶವಿರಲಿಲ್ಲ. ಚಂಗನೆ ಹಾಸಿಗೆಯಿಂದ ಹಾರಿ ಸದ್ದು ಬಂದ ಕಡೆ ನಡೆದ. ಎಡಗೈಲಿ 'ಟಾರ್ಚನ್ನೂ' ಬಲಗೈಲಿ ದೊಣ್ಣೆಯನ್ನೂ ಹಿಡಿದುಕೊಂಡು ಸಣ್ಣ ಕೊಠಡಿಯ ಬಾಗಿಲನ್ನು ಸದ್ದಾಗದಂತೆ ತೆಗೆದು ಒಳಗೆ ಕಾಲಿಟ್ಟ.

ಸಣ್ಣ ಕೊಠಡಿಯಲ್ಲಿ ಪೆಟ್ಟಿಗೆಯ ಬೀಗವನ್ನು ತೆಗೆಯುತ್ತಿದ್ದವರಿಗೆ ಮೂರ್ತಿ ಮಂಚದಿಂದ ಹಾರಿದ್ದು ಕೇಳಿಸಿತು. ಅವರು ಮಾಡುತ್ತಿದ್ದ ಕೆಲಸವನ್ನು ಬಿಟ್ಟು ಕೈಲಿ ದೊಣ್ಣೆಗಳನ್ನು ಹಿಡಿದುಕೊಂಡು ಸಿದ್ಧವಾದರು. ಒಬ್ಬನ ಹತ್ತಿರ ಸಣ್ಣದೊಂದು ಪೆಟ್ಟಿಗೆಯಿತ್ತು. ಮೂರ್ತಿ ಒಂದು ಕ್ಷಣದಲ್ಲಿ ಸಂದರ್ಭವನ್ನು ಗ್ರಹಿಸಿದ. ಅವನು ಒಬ್ಬ; ಅವರು ಮೂರು ಜನ! ಅವನು ಆಳುಗಳನ್ನೂ ಕೂಗಿರಲಿಲ್ಲ. ಒಂದು ನಿಮಿಷದಲ್ಲಿ ಮೂರು ದೊಣ್ಣೆಗಳು ಅವನ ಮೇಲೆ ಬೀಳತಕ್ಕವು. ಅಷ್ಟರಲ್ಲಿ ಮೂರ್ತಿ ಮಲಗಿದ್ದ ಕೊಠಡಿಗೂ ಹಾಲಿಗೂ ನಡುವೆ ಇದ್ದ ಬಾಗಿಲು ತೆಗೆದಂತಾಗಿ ಕೊಠಡಿ ವಿದ್ಯುತ್ತಿನ ಬೆಳಕಿನಿಂದ ತುಂಬಿತು. ಕಳ್ಳರ ಎತ್ತಿದ ಕೈ ಹಾಗೇ ನಿಂತಿತು. ಒಬ್ಬ ಕೆಟ್ಟ ಧ್ವನಿಯಲ್ಲಿ "ಅಯ್ಯಪ್ಪೋ" ಎಂದು ಚೀರಿ ತೆರೆದಿದ್ದ ಕಿಟಕಿಯಿಂದ ಕಾಲಿಗೆ ಬುದ್ಧಿ ಹೇಳಿದ! ಅವನ ಜೊತೆಯವರೂ ಅವನನ್ನೇ ಹಿಂಬಾಲಿಸಿದರು. ಇಷ್ಟೂ ಒಂದು ನಿಮಿಷದಲ್ಲಿ ನಡೆದುಹೋಯಿತು. ಹೊರಗಡೆ ಅವರು ದೊಪ್ ದೊಪ್ ಎಂದು ಗೋಡೆ ಹಾರಿದ ಸದ್ದು ಕೇಳಿಸಿತು. ಮೂರ್ತಿ ಏನೆಂದು ತಿರುಗಿ ನೋಡಿದ. ಬಾಗಿಲಿನ ಬಳಿ ಇಂದಿರ ಕೈಲಿ ಪಿಸ್ತೂಲು ಹಿಡಿದುಕೊಂಡು ನಿಂತಿದ್ದಳು. ಕೆದರಿದ ಕೂದಲು ಕೆಂಪಾದ ಕಣ್ಣುಗಳು ನಿಜವಾಗಿಯೂ ನೋಡುವವರಿಗೆ ಭಯ ವುಂಟುಮಾಡುವಂತಿದ್ದುವು. ಮೂರ್ತಿ ಎವೆಯಿಕ್ಕದೆ ಒಂದು ಕ್ಷಣ ಅವಳನ್ನೇ ನೋಡುತ್ತಿದ್ದವನು ಗಟ್ಟಿಯಾಗಿ ನಗಲಾರಂಭಿಸಿದ. ಇಂದಿರ ಸಿಟ್ಟಿನಿಂದ—

"ಮೂರ್ತಿ! ನಗುವುದಕ್ಕೆ ಇಲ್ಲಿ ಏನು ಆಶ್ಚರ್ಯವಿದೆ! ನೀವು ನಗುವುದರೊಳಗೆ ಕಳ್ಳರು ಓಡಿಹೋಗುತ್ತಾರೆ. ಆಮೇಲೆ ಅವರನ್ನು ಹಿಡಿದಂತೆಯೇ ಆಯಿತು!"

ಎಂದಳು.

"ಆಗಲೇ ಅವರು ಓಡಿದಾರೆ. ನಾವು ಹಿಂದಿನಿಂದ ಹೋದರೂ ಸಿಕ್ಕುವುದಿಲ್ಲ. ಅದಲ್ಲದೆ ಅವರನ್ನು ಹಿಡಿಯುವುದು ಏನೂ ಕಷ್ಟವಿಲ್ಲ. ಓಡಿಹೋದಾಗ ಒಬ್ಬನ ಮುಖ ಕಾಣಿಸಿತು. ಎಲ್ಲೋ ನೋಡಿದಂತೆ ನೆನಪು; ಬಹುಶಃ ನಿಮ್ಮ ಪರಿವಾರದವರಲ್ಲೇ ಒಬ್ಬನಿರಬಹುದು!"

ಹೇಳುತ್ತ ಮೂರ್ತಿ ಮತ್ತೆ ನಕ್ಕ. ಇಂದಿರ ಸುಮ್ಮನೆ ನಿಂತುದನ್ನು ನೋಡಿ—

"ಇಂದಿರ—ನಿನ್ನ ಧೈರ್ಯ ಪ್ರದರ್ಶನಕ್ಕೆ ಈ ಪಿಸ್ತೂಲನ್ನು ಎಲ್ಲಿ ಸಂಪಾದಿಸಿದೆ......?"

ಎಂದು ಕೇಳಿದ.

ಇಂದಿರ ತಿರಸ್ಕಾರದಿಂದ ಹೇಳಿದಳು.

"ಧೈರ್ಯವೋ—ಅಧೈರ್ಯವೋ . ನಾನು ಬರೋದು ಒಂದು ನಿಮಿಷ ತಡವಾಗಿದ್ದರೆ ನಿಮ್ಮ ಗತಿ ಏನಾಗುತ್ತಿತ್ತೋ.....?"

"ಆಗೋದೇನು....? ಗೊತ್ತೇ ಇದೆ.....! ನಿಮ್ಮಗಳ ರಕ್ಷಣೆಗಾಗಿ ಪ್ರಾಣಕೊಟ್ಟೆನೆಂಬ ಸಮಾಧಾನವಂತೂ ಇರುತ್ತಿತ್ತು. ಹೋರಾಟದಲ್ಲಿ.... ಅದೂ ಮತ್ತೊಬ್ಬರಿಗಾಗಿ ಮಡಿದವರಿಗೆ ವೀರ ಸ್ವರ್ಗವಂತೂ 'ರಿಸರ್ವ್' ಆಗಿ ಇದ್ದೆ ಇದೆಯಲ್ಲ!"

"ಮೂರ್ತಿ—ನಿಮ್ಮ ಹುಡುಗಾಟಕ್ಕೆ ವೇಳೆ ಅವೇಳೆ ಎಂಬ ಮಿತಿಯೇ ಇಲ್ಲ!"

"ಆಯಿತಲ್ಲ......ಇನ್ನು ಮೇಲೆ ವೇಳಾಪಟ್ಟಿಯನ್ನು ತಯಾರಿಸಿ ಕೊಟ್ಟರೆ ಅದರಂತೆ ನಡೆಯಲು ಬಂದೀತು?"

"ಇನ್ನು ಅದೊಂದೇ ಬಾಕಿ...."

"ಆದರೆ.... ನಿನ್ನ ಇಂದಿನ ಧೈರ್ಯ ಮೆಚ್ಚತಕ್ಕದ್ದೇ! ಒಟ್ಟಿಗೆ ಏನೂ ಇಲ್ಲದೆ ಬರೀ ಪಿಸ್ತೂಲು ತಂದು ಹೆದರಿಸಿಬಿಟ್ಟೆಯಲ್ಲ. ನಿಜವಾಗಿ ನಿನ್ನ ಸಾಹಸಕ್ಕೆ ಏನು ಕೊಟ್ಟರೂ ಸಾಲದು! ಹ್ಹ... ಹ್ಹ..... ಹ್ಹ!"

ಇಂದಿರ ಆಶ್ಚರ್ಯದಿಂದ—

"ಇದು ಬರಿಯದೆ....? ನಿಜವಾಗಿ ನನಗೆ ಗೊತ್ತಿರಲಿಲ್ಲ!"

ಎಂದಳು.

"ನಾನೇ ಅದನ್ನು ಸಾಯಂಕಾಲ ಒರಸಿ ಎಣ್ಣೆ ಹಾಕುವುದಕ್ಕಾಗಿ ಬರಿದು ಮಾಡಿದ್ದೆ. ಅಷ್ಟರಲ್ಲಿ ಮಿನಾ ಕೂಗಿದಳು. ಪುನಃ ಬಂದು ಒಳಗಿಡುವುದು ಮರೆತು ಹೋಯಿತು. ಈಗ ಸದ್ದು ಕೇಳುತ್ತಲೇ ಅಭ್ಯಾಸ ದಿಂದ ದಿಂಬಿನ ಕೆಳಗೆ ನೋಡಿದೆ. ಅಲ್ಲಿರಲಿಲ್ಲ: ಆಗ ನೆನಪಿಗೆ ಬಂತು!"

"ನನಗೆ ಒಂದೂ ಗೊತ್ತಿಲ್ಲ. ಸದ್ದು ಕೇಳಿಸಿತು. ಏನೆಂದು ನೋಡಲು ಬಂದೆ. ಮೇಜಿನಮೇಲೆ ಇದು ಕಣ್ಣಿಗೆ ಬಿತ್ತು. ಹಾಗೇ ತೆಗೆದುಕೊಂಡು ಬಂದೆ.....ಅಂತೂ ನಿಮಗೆ ನಗುವುದಕ್ಕೆ ದಾರಿಯಾಯ್ತು. ಆದರೂ..... ಅದನ್ನು ನೋಡಿಯೇ ಕಳ್ಳರು ಓಡಿದರೆಂಬುದನ್ನು ನೀವು ಮರೆಯಬಾರದು...........!"

ಇಂದಿರ ಆಳುಗಳನ್ನು ಕೂಗಿದಳು. ದೀಪಹಚ್ಚಿಕೊಂಡು ಮನೆ ಯೆಲ್ಲಾ ಹುಡುಕಿದ್ದಾಯಿತು. ಎಲ್ಲೂ ಏನೂ ಹೋಗಿದ್ದಂತೆ ತೋರಲಿಲ್ಲ. ಪೆಟ್ಟಿಗೆಗೆ ಹಾಕಿದ್ದ ಬೀಗ ಜಜ್ಜಿಹೋಗಿತ್ತೆ ವಿನಾ ಮುರಿದಿರಲಿಲ್ಲ.

"ಇಂದಿರ—ಸಾಮಾನು ಯಾವುದೂ ಹೋಗಿಲ್ಲ ತಾನೇ?"

"ಇಲ್ಲ..... ಎಲ್ಲ ಸರಿಯಾಗಿದೆ."

"ಎಲ್ಲವೂ......?"

"ಏಕೆ ಅಷ್ಟು ಒತ್ತಿ ಕೇಳುತ್ತೀರಿ?"

"ಏನಿಲ್ಲ. ಒಬ್ಬನ ಕೈಲಿ ಒಂದು ಸಣ್ಣ ಪೆಟ್ಟಿಗೆ ಹಿಡಿದಿದ್ದ ಹಾಗಿತ್ತು. ಇಲ್ಲೆಲ್ಲೂ ಬಿಸಾಟಿರುವಂತೆ ಕಾಣಿಸೋದಿಲ್ಲ....!"

"ಪೆಟ್ಟಿಗೆಯೇ....? ಎಂಥಾದ್ದು....?"

ಆಳುಗಳಿಬ್ಬರೂ ಒಟ್ಟಿಗೆ ಕೂಗಿದರು.

"ಪೋಲೀಸಿಗಾದರೂ ದೂರು ಕೊಡೋಣ...."

ಮೂರ್ತಿ ಕೈ ತೋರಿಸುತ್ತ—

"ಸುಮಾರು ಇಷ್ಟಿತ್ತು. ಹಸರು ನೀಲಿ ಬೆರಕೆ ಬಣ್ಣ. ಹೊಳೆಯುತ್ತಾ ಇತ್ತು. ಮೇಲೆ ಏನೋ ಹೆಸರು ಬರೆದಂತಿತ್ತು...."

"ಬಿಳಿಯ ಹಿಡಿ....?"

"ಹೂ....ಹೂ....ಅದೇ—!"

ಈ ಸಲ ನಗುವ ಸರದಿ ಇಂದಿರನದಾಯಿತು. ಅವಳು ಪಿಸ್ತೂಲನ್ನು ಕೆಳಗೆಸೆದು ನಗುತ್ತ—

"ಅಯ್ಯೋ—ಅದು ನನ್ನ ಪೆಟ್ಟಿಗೆ! ಅದನ್ನು ಕೂಡಿಹಾಕಲು ಎಷ್ಟು ಕಷ್ಟ ಪಟ್ಟಿನೋ...."

ಎಂದಳು.

"ಏನಿತ್ತು ಇಂದಿರ ಅದರಲ್ಲಿ? ಸಾಮಾನು ಕಳೆದುಕೊಂಡವರು ಹೀಗೆ ನಗುವುದುಂಟೆ....?"

"ಅಯ್ಯೋ—ಇಷ್ಟಿಷ್ಟು ದಪ್ಪ....ನೀಲಿ....ಹಸರು...."

"ನೀಲಿ....ಹಸರು....!"

"ಕೆಂಪು....ಬೂದು ಬಣ್ಣ....ಚುಕ್ಕಿ ಚುಕ್ಕಿ ಇರೋದು"

"ಕೆಂಪು....ಬೂದು ಬಣ್ಣ....ಚುಕ್ಕಿ ಚುಕ್ಕಿ ಇರೋದು....?"

"ಹೂ....ಮೂಲೆ ಮೂಲೆಯಾಗಿರೋದು. ಚೌಕವಾಗಿದ್ದದ್ದು...."

"ಮೂರ್ತಿ ಗಾಬರಿಯಾಗಿ ಕೇಳಿದ—

"ಏನದು ಇಂದಿರ....? ಬೇಗ ಹೇಳಬಾರದೆ? ಈಗಲೂ ಕೈ ಮಾರಿಲ್ಲ.....?"

"ನಾನು ಅದನ್ನ ಎಷ್ಟೋದಿವಸಗಳಿಂದ ಕೂಡಿ ಹಾಕಿದ್ದೆ. ಅದರಲ್ಲಿ ನಾನು ರಂಗನೂರಿನಿಂದ ತಂದ ಬಿಳಿಯ ಕಲ್ಲೂ ಇತ್ತು. ಅದನ್ನು ಸೀತಮ್ಮ ನನಗೆ ಹೊಳೆಯ ಬಳಿ ಹುಡುಕಿ ಕೊಟ್ಟಿದ್ದರು. ರಾಮಣ್ಣ ನರ್ಮದಾ

ನದಿಯಿಂದ ಒಂದು ಕಲ್ಲು ತಂದು ಕೊಟ್ಟಿದ್ದ! ಅದನ್ನೆಲ್ಲಾ ಶೇಖರಿಸಿ ನಾನು...."

ಮೂರ್ತಿ ನಿಟ್ಟುಸಿರುಬಿಟ್ಟು—

"ಓ....ಅಷ್ಟೇ ತಾನೇ....!"

ಎಂದ.

## ೨೧

ಇಂದಿರ ಮನೆಯ ಹಿಂಭಾಗದಲ್ಲಿದ್ದ ಬೇವಿನ ಮರದ ಕೆಳಗೆ ಕಲ್ಲು ಬೆಂಚಿನಮೇಲೆ ಕುಳಿತುಕೊಂಡು ಮಗುವಿಗೆ 'ಸ್ವೆಟರ್' ಹೆಣೆಯುತ್ತಿದ್ದಳು. ಮೀನಾಕ್ಷಿ ಅವಳ ಪಕ್ಕದಲ್ಲಿ ಕುಳಿತು ಮಾತಾಡುತ್ತಿದ್ದಳು. ನಡು ನಡುವೆ ಅಲ್ಲಿ ಗಿಡಗಳನ್ನು ಕತ್ತರಿಸುತ್ತಿದ್ದ ನಿಂಗನಿಗೆ ಸಲಹೆಗಳನ್ನು ಕೊಡುತ್ತಿದ್ದಳು. ಮಾತಿನ ವಿಷಯ ಸಧ್ಯದಲ್ಲೇ ಅವರ ಮನೆಯಲ್ಲಿ ಜರುಗಲಿದ್ದ ಸಂತೋಷ ಕೂಟವನ್ನು ಕುರಿತಾದುದಿತ್ತು.

ಮೀನಾಕ್ಷಿಗೆ ಮಗುವಾದಾಗಿನಿಂದ ರಾಮಚಂದ್ರನ ಗೆಳೆಯರು ಅವನನ್ನು ತಿಂಡಿಗಾಗಿ ಹಾಸ್ಯಮಾಡುತ್ತಿದ್ದರು. ಅವಳಿಗೂ ಮನಸ್ಸಿನಲ್ಲಿ ತಮಗೆ ಬೇಕಾದವರನ್ನೆಲ್ಲಾ ಒಂದು ದಿನ ಕರೆಯಬೇಕೆಂಬ ಯೋಚನೆ ಮೊದಲಿನಿಂದ ಇದ್ದರೂ, ಅವಳ ಅನಾರೋಗ್ಯ ಅದಕ್ಕೆ ಅವಕಾಶ ಕೊಟ್ಟಿರಲಿಲ್ಲ. ಈಗ ಅವಳು ಓಡಾಡುವಂತಾದ ಮೇಲೆ ರಾಮಚಂದ್ರ ಆ ಪ್ರಸ್ತಾಪವನ್ನು ಪುನಃ ತೆಗೆದಿದ್ದ. ಮಗು ಕೂಡ ಈಗ ಮೈ ತುಂಬಿಕೊಂಡು ಬಹಳ ಲಕ್ಷಣವಾಗಿತ್ತು. ಮೀನಾಕ್ಷಿ ಮಲಗಿದಾಗಿನಿಂದ ಯಾವ ಬಗೆಯ ಓಡಾಟವೂ ಇಲ್ಲದೆ ಬೇಸರಗೊಂಡಿದ್ದ ಇಂಧಿರ ಆ ಸೂಚನೆಗೆ ಸಂತೋಷದಿಂದ ಒಪ್ಪಿದ್ದಳು.

ಮನೆಯಲ್ಲಿ ಮೂರು ನಾಲ್ಕು ದಿನದಿಂದ ಅದೇ ಮಾತಾಗಿತ್ತು. ಏನು ಮಾಡಬೇಕು....ಯಾರು ಯಾರನ್ನು ಕರೆಯಬೇಕು....ಎಂಬ ವಿಷಯವನ್ನು ಎಲ್ಲರೂ ಒಟ್ಟಿಗೆ ಕುಳಿತು ನಿಶ್ಚಯಿಸಿದ್ದರು. ಮನೆಯ

ಆವರಣ ದೊಡ್ಡದಾಗಿ ಅಂದವಾಗಿದ್ದುದರಿಂದ ಅಲ್ಲಿಯೇ ಉಪಾಹಾರ ಮಾಡಬೇಕೆಂದು ಯೋಚಿಸಿ ಮೀನಾಕ್ಷಿ ಅಲ್ಲೆಲ್ಲಾ ಕೆತ್ತಿಸಿ ಬೇಕಾದಂತೆ ಅನುಕೂಲ ಮಾಡಿಸುತ್ತಿದ್ದಳು. ದಿವಸವನ್ನು ಮಾತ್ರ ಗೊತ್ತು ಮಾಡಿರಲಿಲ್ಲ. ಆ ವಾರದಲ್ಲಿಯೇ ಒಂದು ದಿನ ಮಾಡಬಹುದಾದ್ದರಿಂದ ಅದಕ್ಕಾಗಿ ಎಲ್ಲ ಸಿದ್ಧತೆಯೂ ಜೋರಾಗಿ ನಡೆದಿತ್ತು.

"ಇಂದಿರ— ಅಪ್ಪ ಕಾಗದ ಬರೆದಿದಾರೆ...."

"ಯಾವಾಗ....?"

"ಈಗ ಬಂತು. ಅದನ್ನು ಹೇಳಬೇಕೆಂತಲೇ ಬಂದೆ. ನಿನ್ನ ಕೋಣೆಯಲ್ಲಿ ನೋಡಿದೆ. ಇರಲಿಲ್ಲ. ಇಲ್ಲಿರಬಹುದೆಂದು ಬಂದೆ. ಅಷ್ಟರಲ್ಲಿ ಏನೋ ಮಾತು ಬಂತು...."

"ಏನು ಬರೆದಿದಾರೆ... ? ಎಲ್ಲಾ ಸೌಖ್ಯವಷ್ಟೆ....?"

"ಹುಂ. ಅವರಿಗೆ ಮೊಮ್ಮಗನನ್ನು ನೋಡುವ ಆತುರ ಹೆಚ್ಚಿದಂತಿದೆ....!"

"ಬೇಡವೇ....? ನೀನಾದರೂ ಅಲ್ಲಿ ಹೋಗಬೇಕು.... ಅಥವ ಅವರಾದರೂ ಬರಬೇಕು."

"ಅವರೇ ಬರುವರಂತೆ....!"

"ನಿಜವಾಗಿ....?"

"ನಿಜವಾಗಿ....ಅಕ್ಕನೂ ಬರುವಳಂತೆ."

"ಆಹಾ! ನಿಜವಾಗಿ ಅಮ್ಮಯ್ಯನೂ ಬಂದರೆ ಬಹಳ ಸಂತೋಷ. ರಂಗನೂರಿಂದ ಬಂದಾಗಿನಿಂದಲೂ ನನಗೆ ಅವರನ್ನೆಲ್ಲಾ ಇಲ್ಲಿಗೆ ಬರಮಾಡಿ ಎಲ್ಲಾ ಜೊತೆಯಲ್ಲಿ ಇರಬೇಕೆಂದು ಬಹಳ ಆಸೆಯಿತ್ತು."

"ಬಿಡು. ಈಗ ನಿನ್ನ ಆಸೆ ನೆರವೇರುತ್ತಲ್ಲ!"

"ಇನ್ನೂ ಬಂದಾಗ ತಾನೆ....? ನನಗೇಕೋ ಶಾಸ್ತ್ರಿಗಳು ಮನೆಯನ್ನು ಬಿಟ್ಟು ಬರುವರೆಂದರೆ ನಂಬುಗೆಯಾಗಲ್ಲ."

"ಏನೋ... ಈಗ ಮನಸ್ಸು ಮಾಡಿರುವಂತಿದೆ."

"ಯಾವಾಗ ಬರ್ತಾರಂತೆ?"

"ಅದು ಇನ್ನೂ ಗೊತ್ತಿಲ್ಲ. ಬರುವ ಉದ್ದೇಶ ಇದೆ. ಯಾವಾಗ ಎಂಬುದು ಗೊತ್ತಾದ ಮೇಲೆ ಪುನಃ ಬರೆಯುತ್ತಾರಂತೆ."

"ಹಾಗಾದರೆ ಅವರು ಬಂದ ಮೇಲೇ ಎಲ್ಲರನ್ನೂ ಕರೆಯ ಬಹುದಲ್ಲ."

"ಅದು ಇನ್ನೂ ಎಷ್ಟು ದಿವಸದ ಮಾತೋ? ಅದಲ್ಲದೆ ಅವರಿಗೆ ಹೀಗೆ ಗಂಡಸರು ಹೆಂಗುಸರು ಎಲ್ಲ ಒಟ್ಟಿಗೆ ಮೇಜಿನ ಮುಂದೆ ಕುಳಿತು ತಿನ್ನುವುದೆಂದರೆ ಅಷ್ಟಾಗಿ ಹಿಡಿಸುವುದಿಲ್ಲ."

"ಅದೂ ಸರಿಯೆ. ಎಷ್ಟಾದರೂ ಅವರು ಹಳೆಯ ಸಂಪ್ರದಾಯ ದವರು. ಇದೆಲ್ಲಾ ಹೇಗೆ ಒಗ್ಗಬೇಕು?"

"ಅದಕ್ಕೇ ನಾನು ಹೇಳಿದ್ದು. ಇದರ ಪಾಡಿಗೆ ಇದು ಆಗಲಿ. ಬೇಕಾದರೆ ಅವರು ಬಂದ ಮೇಲೆ ಎಲ್ಲರನ್ನೂ ಕರೆದು ಊಟದ ಏರ್ಪಾಡು ಮಾಡೋಣ."

"ಅದೂ ಒಳ್ಳೆಯ ಯೋಚನೆ."

ಮೀನಾಕ್ಷಿ ಏನೋ ಯೋಚಿಸುವಂತೆ ಸ್ವಲ್ಪ ಸುಮ್ಮನಿದ್ದು ಪುನಃ ಹೇಳಿದಳು—

"ಅಪ್ಪ ಇಲ್ಲಿರುವಾಗಲೇ ನಿನ್ನ ಮದುವೆಯ ಮಂಗಳ ಕಾರ್ಯ ವನ್ನೂ ನೋಡಿಯೇ ಹೋಗುವರಂತೆ. ಇಷ್ಟು ದಿನವಾದರೂ ತಮ್ಮ ಕರ್ತವ್ಯವನ್ನು ನಿರ್ವಹಿಸದೆ ತಟಸ್ಥವಾಗಿರುವುದಕ್ಕಾಗಿ ಅಳಿಯಂದಿರನ್ನು ಆಕ್ಷೇಪಣೆಮಾಡಿದಾರೆ!"

ಇಂದಿರ ಸ್ವಲ್ಪ ನಕ್ಕು ಹೇಳಿದಳು—

"ಅವರು ದೊಡ್ಡವರು. ಅವರ ಹೃದಯ ವಿಸ್ತಾರವಾದುದು. ಅಲ್ಲಿ ಎಲ್ಲರ ಹಿತಚಿಂತನೆಗೂ ಎಡೆಯಿದೆ!"

"ಇದೆ! ಆದರೆ ಎಲ್ಲರೂ ಅದನ್ನು ತಿಳೀಬೇಕಲ್ಲ. ನಿಮ್ಮಣ್ಣ ಅದನ್ನು ಕೇಳಿದರೆ—

"ಇವರಿಗೇಕೆ ಅದರ ಗೊಡವೆ? ನಾನಿಲ್ಲವೆ?"

ಎಂದು ಬಿಡುತ್ತಾರೆ.

"ಅದು ಅವನ ಸ್ವಭಾವ........!"

ಮೀನಾಕ್ಷಿ ಏನೋ ಹೇಳಬೇಕೆಂದಿದ್ದಳು. ಅಷ್ಟರಲ್ಲಿ ಮನೆಯ ಒಳಗಿನಿಂದ ಮಗು ಅಳುವುದು ಕೇಳಿಸಿದ್ದರಿಂದ ಅವಳ ಮಾತು ಅಲ್ಲಿಗೇ ನಿಂತಿತು. ಕೂಡಲೇ ಅವಳು ಒಳಗೆ ಹೋದಳು. ಇಂದಿರ ಮೀನಾಕ್ಷಿ ಆಡಿದ ಮಾತನ್ನೇ ನೆನೆಯುತ್ತ ತನ್ನ ಕೆಲಸದಲ್ಲಿ ಮಗ್ನಳಾಗಿದ್ದಳು. ಅವಳ ಯೋಚನೆಯಂತೆ ತಂಪಾಗಿ ಬೇವಿನ ಮರದ ಗಾಳಿ ಸುತ್ತಲೂ ಸುಳಿಯುತ್ತಿತ್ತು.

ರಾಮಚಂದ್ರ ಮನೆಗೆ ಬಂದವನು ಅವಳನ್ನು ಹುಡುಕಿಕೊಂಡು ನೆಟ್ಟಗೆ ಅಲ್ಲಿಗೇ ಬಂದ. ಇಂದಿರ ತಲೆ ಎತ್ತಿ ನೋಡಿ—

"ಇದೇನು ರಾಮಣ್ಣ. ಇವತ್ತು ಇಷ್ಟು ಬೇಗ ಬಂದೆ....? ಟೀ ತಂದು ಕೊಡಲೇ....?"

ಎಂದು ಕೇಳಿದಳು.

ರಾಮಚಂದ್ರ ಜೇಬಿನಿಂದ ವಸ್ತ್ರವನ್ನು ತೆಗೆದು ಬೆಂಚನ್ನು ಒರಸಿ ಅವಳ ಪಕ್ಕದಲ್ಲಿ ಕೂತುಕೊಂಡು—

"ಬೇಡಮ್ಮ....ನನಗೆ ಅಲ್ಲೇ ತಿಂಡಿ ಕಾಫಿ ಎಲ್ಲಾ ಆಯಿತು. ಏನಿದು..........?"

ರಾಮಚಂದ್ರ ಹೆಣೆದಿದ್ದ ಭಾಗವನ್ನು ಕೈಲಿ ತೆಗೆದುಕೊಂಡು ಹೇಳಿದ.

"ಮಗುವಿಗೆ ಸ್ವೆಟರ್ ಹಾಕ್ತಿದೇನೆ."

"ಆಗಲೇ ಅಳಿಯನಿಗೆ ಅಂಗಿಯೋ....?"

"ಹೂ....ಬೇಡವೇ....?"

"ಏನು ಮಾಡುತ್ತಿದಾನೆ ನಿನ್ನ ಅಳಿಯ?"

"ಮಲಗಿದ್ದ. ಅವನ್ನ ಮಲಗಿಸಿಬಿಟ್ಟು ಮನೆಯಲ್ಲಿ ಶಿಖೆಯಾದ್ದರಿಂದ ಇಲ್ಲಿಗೆ ಬಂದೆ."

"ಮೀನಾ ಎಲ್ಲಿ?

"ಅವಳೂ ಇಲ್ಲೇ ಇದ್ದಳು. ಮಗು ಅತ್ತ ಹಾಗಾಯ್ತು. ಈಗ ತಾನೆ

ಒಳಗೆ ಹೋದಳು."

"ಮೀನಾ ಹೇಳಿದಳು ನೀನು ಹಾಡು ಹೇಳದ ಹೊರತು ಅವನು ಮಲಗುವುದೇ ಇಲ್ಲವಂತೆ. ಆಗಲೆ ಅವನಿಗೆ ಹಾಡಿನ ಅಭ್ಯಾಸ ಮಾಡಿಸಿದ್ದೀಯಾ ?"

"ನಾನೇನು ಮಾಡಿಸೋದು. ಅವನೇ ಮಾಡಿಕೊಂಡಿದಾನೆ. ಎಷ್ಟು ಅಳುತ್ತಿದ್ದರೂ ಹಾಡು ಹೇಳಿದರೆ ಸುಮ್ಮನಾಗುತ್ತಾನೆ !"

"ಅದೇ ನಾನು ಹೇಳಿದ್ದು ! ನಾಳೆ ನೀನು ಮದುವೆಯಾಗಿ ಹೊರಟು ಹೋದರೆ.....?"

ಇಂದಿರ ಮೃದುವಾಗಿ ನಕ್ಕಳು. ಬಿಸಿಲಿನ ಝಳದಿಂದ ಕೆನ್ನೆಗಳು ರಂಗೇರಿದ್ದುವು. ಮುಂಗುರಳು ಚದುರಿ ಗಾಳಿಗೆ ಅಲ್ಲಾಡುತ್ತಿತ್ತು. ಕಿವಿಯಲ್ಲಿದ್ದ ಲೋಲಾಕುಗಳು ಅವಳು ಆ ಕಡೆ ಈ ಕಡೆ ತಿರುಗಿದಾಗ ಕುಣಿಯುತ್ತ ಮುಖಕ್ಕೆ ಒಂದು ಬಗೆಯ ಸೊಬಗು ಕೊಡುತ್ತಿದ್ದುವು. ರಾಮಚಂದ್ರ ಮೆಚ್ಚಿಗೆಯಿಂದ ತಂಗಿಯ ಕಡೆ ನೋಡುತ್ತ–

"ಇಂದಿರಾ...."

ಎಂದು ನಯವಾಗಿ ಕರೆದ.

"ಏನಣ್ಣ ?"

"ನೀನು ಒಳ್ಳೆಯ ಸೀರೆಗಳನ್ನು ಉಟ್ಟಿದ್ದೇ ಕಾಣುವುದಿಲ್ಲ. ನೀವಿಬ್ಬರೂ ಇಲ್ಲಿಗೆ ಬಂದಾಗಿನಿಂದ ಎರಡೆರಡು ಚೀಟಿ ಸೀರೆಗಳಲ್ಲೇ ಕಾಲ ಕಳೆಯುತ್ತಿದೀರಿ !"

"ಇಲ್ಲಿಗೆ ಅದೇ ಸಾಕೆಂದು ತೋರುತ್ತೆ....ನಾವು ಇಲ್ಲಿ ಓಡಾಡುವುದು ತೀರ ಬಡಜನಗಳ ನಡುವೆ. ಅವರಲ್ಲಿ ಅನೇಕರಿಗೆ ಎರಡು ಹೊರತು ಮೂರನೆ ಬಟ್ಟೆ ಇಲ್ಲ. ಅವರೆದುರಿಗೆ ನಮ್ಮ ಬಟ್ಟೆಗಳ ಪ್ರದರ್ಶನ ಮಾಡಲು ಮನಸ್ಸಾಗುವುದಿಲ್ಲ...ಆದರೂ ಸಂದರ್ಭ ಬಿದ್ದಾಗಲೆಲ್ಲಾ ಉಡುತ್ತಲೇ ಇರುವೆನಲ್ಲ....!"

"ಈ ದಿನ ನಿನ್ನ ಮೇಘವರ್ಣದ ಸೀರೆ ಉಟ್ಟುಕೊಳ್ಳಬಾರದೇ ?"

"ಬಾರದೆಂದೇನಿಲ್ಲ. ಬೇಕಾದರೆ ಉಡುತ್ತೇನೆ."

"ಹಾಗೇ ಮಾಡು. ಹೇಗೂ ಸಾಯಂಕಾಲ ಸ್ಟೇಷನ್ನಿಗೆ ಹೋಗ ಬೇಕು."

"ಸ್ಟೇಶನ್ನಿಗೇ......ಯಾರು ಬರುತ್ತಾರೆ ?"

"ಯಾರಿರಬಹುದು......ನೀನೇ ಹೇಳು ?"

"ಶಾಸ್ತ್ರಿಗಳು....ಅಮ್ಮಯ್ಯ....ಆದರೆ ಅವರು ಇಷ್ಟು ಬೇಗ ಬರುತ್ತಾರೆಯೇ!"

"ಅಲ್ಲ....ಅಲ್ಲ......ಅವರಲ್ಲ...."

"ಇನ್ಯಾರು....?"

"ಕ್ಯಾಪ್ಟನ್ ವಿಶ್ವನಾಥ್......!"

"ಯಾವ ಕ್ಯಾಪ್ಟನ್....? ನನಗೆ ನೋಡಿದ್ದೇ ನೆನಪಿಲ್ಲ!"

"ನೆನಪಿಲ್ಲವೇ......? ಸ್ವಲ್ಪ ಹಾಗೇ ಜ್ಞಾಪಿಸಿಕೊ...."

"ನಾನು ಎಲ್ಲಿ ನೋಡಿದ್ದು....? ಮುಂಬಯಿಯಲ್ಲೇ....?"

"ಅಲ್ಲ....ಇನ್ನೂ ಬಹಳ ಹಿಂದೆ ಬೆಂಗಳೂರಿನಲ್ಲಿ—ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ!"

ಇಂದಿರ ಜ್ಞಾಪಿಸಿಕೊಳ್ಳುವಂತೆ ಸುಮ್ಮನಿದ್ದಳು. ರಾಮಚಂದ್ರ ಅವಳ ಹತ್ತಿರ ಸರಿದು, ಅವಳ ಕೈಯ್ಯನ್ನು ತನ್ನ ಕೈಲಿಟ್ಟುಕೊಂಡು ಮೆಲ್ಲಗೆ ಸವರುತ್ತ—

"ಇಂದಿರ—ನಿನಗೆ ಅಮ್ಮನ ನೆನಪಿದೆಯೆ?"

ಎಂದು ಕೇಳಿದ.

"ಇದೇನು ರಾಮಣ್ಣ ಹೀಗೆ ಕೇಳುತ್ತಿ? ಅಮ್ಮನ ನೆನಪಿಲ್ಲವೆ ನನಗೆ.....!"

"ಅಮ್ಮ ಖಾಯಿಲೆಯಾಗಿದ್ದಾಗ ನನ್ನ ಸ್ನೇಹಿತ ಒಬ್ಬ ಆಗಾಗ ಬಂದು ಅವಳ ಔಷಧೋಪಚಾರಗಳಿಗೆ ನೆರವಾಗುತ್ತಿದ್ದ. ಅಷ್ಟೇಕೆ...... ಅದಕ್ಕೂ ಮೊದಲು ಅವನು ನಮ್ಮ ಮನೆಗೆ ಆಗಾಗ ಬರುತ್ತಿದ್ದ. ನಾವೆಲ್ಲಾ ಎಷ್ಟೋ ದಿವಸ ಒಟ್ಟಿಗೆ ಕುಳಿತು ಊಟ ತಿಂಡಿಗಳನ್ನು ಮಾಡುತ್ತಿದ್ದೆವು. ಅವನು ಬಂದಾಗಲೆಲ್ಲಾ ನೀನು ಅವನ ಜೇಬನ್ನು ಘುಡುಕಿ "ಪೆಪ್ಪರಮೆಂಟು ತಂದೆಯಾ ?" ಎಂದು ಕೇಳುತ್ತಿದ್ದೆ......"

ದಟ್ಟವಾಗಿ ಮುಸುಗಿದ್ದ ವರ್ಷಗಳ ಪದರದ ಹಿಂದಿನಿಂದ ಮಸಕು ಮಸಕಾಗಿ ಹುಡುಗನ ಮುಖವೊಂದು ಇಂದಿರನ ನೆನಪಿನಲ್ಲಿ ಸುಳಿಯ ಲಾರಂಭಿಸಿತು. ರಾಮಚಂದ್ರ ಪುನಃ ಹೇಳಿದ—

"ನಾನು ಮುಂಬಯಿಯಲ್ಲಿದ್ದಾಗ ಅಮ್ಮ ಮಲಗಿದ್ದು. ನನಗೆ ಸುದ್ದಿಯೇ ತಿಳಿದಿರಲಿಲ್ಲ. ನಾನು ಬರುವ ಮೊದಲು ಅಮ್ಮ ಒಬ್ಬಳೇ ಆ ತುಂಬಿದ ಪಟ್ಟಣದಲ್ಲಿ ಸಹಾಯಕರಿಲ್ಲದೆ ನರಳುತ್ತಿದ್ದಾಗ—ಅವನು ಅವಳಿಗೆ ಸಹಾಯ ಮಾಡುತ್ತಿದ್ದ. ನೀನಿನ್ನೂ ಆಗ ಚಿಕ್ಕವಳು......"

ಇಂದಿರ ಏನನ್ನೋ ಜ್ಞಾಪಿಸಿಕೊಂಡಂತೆ ತಟ್ಟನೆ ಹೇಳಿದಳು—

"ಹೌದು–ನೀನಿಲ್ಲದಾಗಲೂ ಅವನು ಆಗಾಗ ಬಂದು ಅಮ್ಮನನ್ನು ವಿಚಾರಿಸುತ್ತಿದ್ದ. ಅವನು ಕ್ಯಾಪ್ಟನ್ ಹೇಗಾದ?"

"ನಾವು ಬೆಂಗಳೂರಿನಲ್ಲಿದ್ದಾಗ ಅವನು ಕಾಲೇಜಿನಲ್ಲಿ ಓದುತ್ತಿದ್ದ. ಆ ಮೇಲೆ ಏನು ಕಾರಣವೋ....ಅವನಿಗೆ ಓದುವುದು ಬೇಡವೆನಿಸಿ ಸ್ವತಂತ್ರವಾಗಿ ಸಂಪಾದಿಸಬೇಕೆಂಬ ಹುಚ್ಚು ತಲೆಗೆ ಹತ್ತಿತ್ತು. ಅದಕ್ಕೆ ಸರಿಯಾಗಿ ಅನುಕೂಲವೂ ದೊರೆಯಿತು. ಸಿಕ್ಕಿದ ಅವಕಾಶವನ್ನು ಬಿಡದೆ ಉಪಯೋಗಿಸಿಕೊಂಡು ನಾನು ಮುಂಬಯಿಯಿಂದ ಬರುವ ವೇಳೆಗೆ ಸೈನಿಕ ಶಿಕ್ಷಣಕ್ಕಾಗಿ ಅವನು ಹೊರಟು ಹೋಗಿದ್ದ. ಅದೃಷ್ಟವೂ ಚೆನ್ನಾಗಿತ್ತು. ಮುಂದೆ ಬಂದ. ನಾನು ಈ ಸಲ ಮೈಸೂರು ಕಡೆ ಹೋಗಿದ್ದಾಗ ಅವನು ಶಿಕ್ಷಣವನ್ನು ಮುಗಿಸಿ ಕೆಲಸದಲ್ಲಿದ್ದ. ಅವನು ಆಗಲೇ ನಿನ್ನನ್ನು ನೋಡಲು ಇಷ್ಟಪಟ್ಟ. ನೀನು–ಮೀನ ಇಬ್ಬರೂ ಆಗ ಅವಳ ತಂದೆಯ ಮನೆಯಲ್ಲಿದ್ದಿರಿ."

"ಹಾಗೇನು......? ನೀನು ಆ ವಿಚಾರ ನಮಗೆ ಹೇಳಲೇ ಇಲ್ಲ!"

"ಹೇಳಲಿಲ್ಲವೇ.....? ಮರೆತು ಬಿಟ್ಟೆನೋ ಏನೋ! ಅಲ್ಲಿಂದ ಇದ್ದಕ್ಕಿದ್ದಹಾಗೆ ಹೊರಟುಬಿಟ್ಟೆವು. ಆ ಅವಾಂತರದಲ್ಲಿ ಮರೆತು ಹೋಗಿರ ಬಹುದು. ನಾನು ಅವನನ್ನು ರಂಗನೂರಿಗೇ ಕರೆತರಬೇಕೆಂದಿದ್ದೆ. ಅಷ್ಟ ರಲ್ಲಿ ಅವನು ಹಟಾತ್ತನೆ ಸಮುದ್ರದಾಚೆ ಹೋಗಬೇಕಾಗಿ ಬಂದದ್ದರಿಂದ ಆಗಲಿಲ್ಲ. ಅವಕಾಶ ಸಿಕ್ಕಿದ ಕೂಡಲೆ ಬರುವುದಾಗಿ ಹೇಳಿ ಅವನು

ಹೊರಟುಹೋದ. ಈ ಸಾಯಂಕಾಲ ಅವನು ಬರುವುದಾಗಿ ತಂತಿ ಕೊಟ್ಟಿದಾನೆ. ಒಂದು ತಿಂಗಳು ರಜ ದೊರೆತಿದೆಯಂತೆ.......... ನೀನೂ ಸ್ಟೇಷನ್ನಿಗೆ ಬರುವೆ ತಾನೆ.....?"

"ಅಗತ್ಯವಾಗಿ ಬರುವೆ! ಅಮ್ಮನಿಗೆ ಕಷ್ಟ ಕಾಲದಲ್ಲಿ ನೆರವಾದವನಿಗೆ ಅಷ್ಟು ವಿಶ್ವಾಸ ತೋರಿಸಬಾರದೆ? ನೀನು ಈ ವಿಷಯವನ್ನು ಅಲ್ಲಿದ್ದಾಗಲೇ ತಿಳಿಸಿದ್ದರೆ ನಾನು ಮೈಸೂರಿಗೇ ನಿನ್ನೊಡನೆ ಬಂದು ವಂದಿಸಿ ಬರುತ್ತಿದ್ದೆ!"

"ಇಂದಿರ....."

"ಏನಣ್ಣ?"

"ಅಮ್ಮ ಹಳೆಯ ತರಹದಲ್ಲಿ ಹಳ್ಳಿಗರ ನಡುವೆ ಬೆಳೆದವಳು. ಅವಳು ಇದ್ದಿದ್ದರೆ ನಿನ್ನ ಮದುವೆ ಎಂದೋ ಆಗಬೇಕಿತ್ತು. ಅವಳೂ ಹೋದಳು—ಅವಳು ನಿಶ್ಚಯಿಸಿದವರನೂ ದೂರ ಹೋದುದರಿಂದ ನಾನೂ ಸುಮ್ಮನಿರಬೇಕಾಯಿತು...."

"ಅವಳು ನಿಶ್ಚಯಿಸಿದ ವರ....!"

"ಹೌದು— ಇಂದಿರ, ಅಮ್ಮನಿಗೆ ನಿನ್ನನ್ನು ವಿಶ್ವನಾಥನಿಗೆ ಕೊಟ್ಟು ಮದುವೆ ಮಾಡಬೇಕೆಂದು ಮನಸ್ಸಿದ್ದಿತು. ಅವನನ್ನು ಒಪ್ಪಿಸಿ ಅವನಿಂದ ವಾಗ್ದಾನವನ್ನೂ ಪಡೆದಿದ್ದಳು. ಆಗ ನಾವಿದ್ದ ಸ್ಥಿತಿಯಲ್ಲಿ ಅದಕ್ಕಿಂತ ಹೆಚ್ಚು ಆಸೆ ಪಡುವಂತಿರಲಿಲ್ಲ. ಅದಲ್ಲದೆ ಅವನ ಸ್ವಭಾವ, ಅವನು ಆ ಸಮಯದಲ್ಲಿ ಮಾಡಿದ ಸಹಾಯ—ಅಮ್ಮನ ಮನಸ್ಸನ್ನು ಸೂರೆಗೊಂಡಂತಿತ್ತು. ಹುಡುಗ ಲಕ್ಷಣವಾಗಿದ್ದು, ಮುಂದೆ ನುಗ್ಗುವಂತಹವನಾಗಿದ್ದ. ಅದಲ್ಲದೆ ವಿಶ್ವನಾಥ ದೊಡ್ಡ ಮನುಷ್ಯ; ಇಲ್ಲದಿದ್ದರೆ...."

ಇಂದಿರ ಫಕ್ಕನೆ ಎದ್ದುನಿಂತುಕೊಂಡಳು. ಆಶ್ಚರ್ಯ ಭಯ, ದುಃಖ—ಸಂತಾಪ ಎಲ್ಲವೂ ಒಟ್ಟಿಗೆ ಅವಳ ಮುಖದಲ್ಲಿ ಕಾಣುತ್ತಿತ್ತು. ರಾಮಚಂದ್ರ ಎದ್ದು ಎರಡು ಹೆಜ್ಜೆ ಮುಂದಿಟ್ಟು, ಅವಳನ್ನು ಪುನಃ ಕೂರಿಸಿ—

"ಇಂದಿರ.... ಏಕೆ.... ಏನಾಯ್ತು....?

ಎಂದು ಕೇಳಿದ.

ಇಂದಿರ ಮಾತಾಡದೆ ಬೆರಗುಗಣ್ಣುಗಳಿಂದ ಪ್ರಶ್ನಾರ್ಥಕವಾಗಿ ಅಣ್ಣನ ಕಡೆ ನೋಡುತ್ತಿದ್ದಳು, ಬರಬರುತ್ತ ದೃಷ್ಟಿಯು ನೆಲದ ಕಡೆ ಬಿತ್ತು. ಎಷ್ಟು ಹೊತ್ತಾದರೂ ಅವಳು ಮಾತಾಡದಿರುವುದನ್ನು ನೋಡಿ ರಾಮಚಂದ್ರನೇ ಹೇಳಿದ—

"ಇಂದಿರ—ನನ್ನ ಮಾತಿನಿಂದ ನಿನಗೆ ದುಃಖವಾದಂತಿದೆ.... ಆದರೂ....."

"ರಾಮಣ್ಣ—ನೀನು ಈ ವಿಚಾರವನ್ನು ಮೊದಲೇ ಏಕೆ ತಿಳಿಸ ಲಿಲ್ಲ....?"

"ಹೇಳಬೇಕಾಗಿತ್ತು. ಯುದ್ಧಕ್ಕೆ ಹೋಗಿರುವವನು— ಮುಂದೆ ಹೇಗಾಗುತ್ತೋ ನೋಡೋಣವೆಂದು ಸುಮ್ಮನಿದ್ದೆ. ಅದಲ್ಲದೆ...."

"ನಾನು ಈ ಮದುವೆಗೆ ಒಪ್ಪದಿದ್ದರೆ? ನಾನೇನು ಎಳೆಯ ಹುಡುಗಿಯಲ್ಲ. ನನಗೆ ಇಷ್ಟವಿಲ್ಲದ್ದನ್ನು ಯಾರೂ ಬಲವಂತದಿಂದ ನನ್ನ ಮೇಲೆ ಹೊರಿಸಲಾರರು...."

"ಇಲ್ಲ ಇಂದಿರ—ನೀನು ಒಪ್ಪುವೆ. ಖಂಡಿತವಾಗಿಯೂ ಒಪ್ಪುವೆ. ಎಷ್ಟಾದರೂ ನೀನು ಹಿಂದೂ ಬಾಲೆ, ಆರ್ಯಸಂಸ್ಕೃತಿಯಲ್ಲಿ ಬೆಳೆದವಳು. ಹಿರಿಯರಿಗೆ ವಿರುದ್ಧವಾಗಿ—ಅವರ ಅಪ್ಪಣೆಯಿಲ್ಲದೆ ನಿನ್ನ ಭವಿಷ್ಯವನ್ನು ನಿರ್ಧರಿಸುವುದಿಲ್ಲವೆಂದು ಭರವಸೆ ನನಗಿದೆ!"

ಇಂದಿರ ಸುಮ್ಮನೆ ತಲೆತಗ್ಗಿಸಿಕೊಂಡು ಕೇಳುತ್ತಿದ್ದಳು. ಅವಳಿಗೆ ಯೋಚನೆ ಮಾಡುವ ಶಕ್ತಿಯೇ ಉಡುಗಿ ಹೋದಂತಾಗಿತ್ತು. ರಾಮಚಂದ್ರ ಅವಳ ತಲೆಯ ಮೇಲೆ ಕೈ ಆಡಿಸುತ್ತ ಹೇಳಿದ—

"ಇಂದಿರ—ಇದು ಕೇವಲ ನನ್ನ ಮಾತನ್ನು ಉಳಿಸುವುದಕ್ಕಾಗಲ್ಲ. ಅಮ್ಮನ ಕೊನೆಗಾಲದ ಮಾತನ್ನು ನಡೆಸುವುದು ನನಗೆ ಹೇಗೋ ನಿನಗೂ ಹಾಗೇ ಧರ್ಮವಾಗಿದೆ!"

"ಇದುವರೆಗೆ ನನ್ನನ್ನು ಈ ವಿಚಾರದಲ್ಲಿ ಅಂಧಕಾರದಲ್ಲಿಟ್ಟು ಈಗ ಧರ್ಮಕ್ಕೆ ಶರಣು ಹೋಗುವುದು ಸರಿಯೆ?"

"ಸರಿಯಲ್ಲ—ತಪ್ಪು. ನಾನು ಆಗಲೇ ಹೇಳಲಿಲ್ಲವೇ? ಆದರೆ ಸಂದರ್ಭ ಹೀಗೆ ತಿರುಗಬಹುದೆಂದು ನನಗೆ ತೋರಿರಲಿಲ್ಲ! ಅದಲ್ಲದೆ ವಿಶ್ವನಾಥ ಕೂಡ ಅಮ್ಮನಿಗೆ ಕೊಟ್ಟ ಮಾತು ಉಳಿಸುವುದಕ್ಕಾಗಿ, ಮೊದಲಿನಿಂದಲೂ ಅವನಿಗೆ ಸಹಾಯಕರಾಗಿದ್ದ ಲಾಯರು ಶಾಮರಾಯರ ಮಗಳನ್ನು ಮದುವೆಯಾಗದೆ ಅವರ ಸಿಟ್ಟಿಗೂ ಗುರಿಯಾಗಿದಾನೆ. ಈಗ ನಾವು ನಮ್ಮ ಮಾತಿನಿಂದ ಹಿಂದೆ ಹೋಗಬಹುದೆ?"

"ಅದಕ್ಕೆ ನಾವೇನು ಮಾಡಬಹುದು? ಸಂದರ್ಭವನ್ನು ಸರಿಯಾಗಿ ತಿಳಿಯದೆ ಅವನೇಕೆ ಮಾತು ಕೊಟ್ಟ?"

"ಯೌವ್ವನದ ಪ್ರಥಮೋದಯದಲ್ಲಿ ಮಾನವನ ಮನಸ್ಸಿನಲ್ಲಿ ಆಗುವ ಬದಲಾವಣೆಗೆ ನಾನು ಏನು ಹೇಳಬಹುದು. ಅದಕ್ಕೆ ಹೊಣೆ ಅವನಲ್ಲ—ನೀನು! ನಿನ್ನ ಚೆಲುವು! ಇತರ ಹುಡುಗಿಯರೊಡನೆ ನಿನ್ನನ್ನು ಹೋಲಿಸಿ ನೋಡಿದ ಯಾರಾದರೂ ಆ ತೀರ್ಮಾನಕ್ಕೆ ಬರದೆ ಇರರು. ಅವನ ಮನಸ್ಸು ಹಾಗಿರುವಾಗ ಅಮ್ಮ ಕರೆದು ಮಾತು ಕೊಟ್ಟರೆ ಅವನದೇನು ತಪ್ಪು!"

ಇಂದಿರನ ಮುಖ ಕೆಂಪಾಯಿತು. ಸ್ವಲ್ಪ ಬೇಸರದಿಂದಲೇ ಹೇಳಿದಳು—

"ನಾನು ನಿಮ್ಮ ಮಾತನ್ನು ಮೀರಿ ನನ್ನ ಮನಸ್ಸಿನಂತೆ ನಡೆದರೆ....?"

ರಾಮಚಂದ್ರ ಅವಾಕ್ಕಾಗಿ ಕೊನೆಯ ಅಸ್ತ್ರವೆಂದು ಹೇಳಿದ—

"ನೀನು ಸುಖಿಯಾಗುವುದಿಲ್ಲ. ಜೀವನದ ಕೊನೆಯವರೆಗೂ ನಿನ್ನ ಅಂತರಾತ್ಮ ತಾಯಿಯ ಮಾತನ್ನು ನಡೆಸಲಿಲ್ಲವೆಂದು ಕೊರೆಯುತ್ತಲೇ ಇರುತ್ತದೆ ...!"

"ನಿಮ್ಮ ಮಾತಿನಂತೆ ನಡೆದರೂ ನಾನು ಸುಖಿಯಾಗುವುದಿಲ್ಲ....!"

"ಇರಬಹುದು....! ಮೊದಲು ಹಾಗೆನಿಸಿದರೂ ಕರ್ತವ್ಯವನ್ನು ಮಾಡಿದೆನೆಂಬ ಶಾಂತಿಯಾದರೂ ಇರುವುದು. ಕ್ರಮೇಣ ಅದರಲ್ಲೇ ಸುಖವನ್ನು ಕಾಣುವ ಅಭ್ಯಾಸ ಬರಬಹುದು...."

"ಅದು ಹೇಗೆ....?"

"ಇಂದಿರ—ನೀನು ವಿಶ್ವನಾಥನನ್ನರಿಯೆ. ಅದರಿಂದಲೇ ಹಾಗೆ ಹೇಳುವೆ. ನನ್ನ ಅನುಭವದಲ್ಲಿ ಇದುವರೆಗೆ ಅಂತಹವನು ಬೇರೆ ಯಾರೂ ಸಿಕ್ಕಿಲ್ಲ. ಅವನ ಬಳಿ ಯಾರೂ ಸುಖವಾಗಿರಬಹುದು!"

"ಒಬ್ಬ ಮನುಷ್ಯ ಒಳ್ಳೆಯವನಾದ ಮಾತ್ರಕ್ಕೇ ಅವನ ಬಳಿ ಸುಖವಾಗಿರಬಹುದೆಂದು ಹೇಳಲು ಬಂದೀತೇ.....?"

"ಹಾಗೆ ಹೇಳಲು ಬರದಿದ್ದರೂ, ಇಷ್ಟು ಹೇಳಬಹುದು. ಅಲ್ಲಿ ಸುಖವನ್ನು ಕಾಣದಿದ್ದರೆ ಅವರು ಮತ್ತೆಲ್ಲೂ ಅದನ್ನು ಕಾಣಲಾರರು. ಸುಖವನ್ನು ಅನುಭವಿಸುವ ಮನಸ್ಸಿನಲ್ಲೇ ದೋಷವಿರಬೇಕು. ಅಷ್ಟೆ!"

ಇಂದಿರ ಸ್ವಲ್ಪ ಯೋಚಿಸಿ ದೈನ್ಯದಿಂದ ಕೇಳಿದಳು—

"ಅಣ್ಣಾ—ಮಿನನೂ ಇದಕ್ಕೆ ಒಪ್ಪಿರುವಳೇ....?"

"ಇಲ್ಲ—ಅವಳಿಗೆ ಒಂದೂ ಗೊತ್ತಿಲ್ಲ. ಕಾಲ ಬಂದಾಗ ಹೇಳೋಣ. ಈಗಲೇ ಇದನ್ನೆಲ್ಲಾ ಹೇಳುವುದರಿಂದ ಉದ್ವೇಗವಾಗಿ ಆಯಾಸವಾದೀತು. ಇಂದಿರ—ಅವಳಿಗೆ ಒಂದು ಮಾತೂ ತಿಳಿಸ ಕೂಡದು. ಜೋಕೆ....! ಯಾರೋ ನನ್ನ ಸ್ನೇಹಿತರು ಬರುತ್ತಾರೆಂದು ಹೇಳಿಬಿಡು......"

ಇಂದಿರನ ಕಣ್ಣುಗಳಿಂದ ನೀರು ಸುರಿಯಿತು. ರಾಮಚಂದ್ರನ ಕೈಮೇಲೆ ಬೆಚ್ಚಗೆ ನೀರು ಬಿತ್ತು. ಅವನು ತಟಕ್ಕನೆ ಎದ್ದು ನಿಂತುಕೊಂಡ. ತಂಗಿ ಎದುರು ಮಾತಾಡಿದರೆ ಅಥವಾ ಕೋಪಗೊಂಡರೆ ಅವಳನ್ನು ಸಮಾಧಾನಪಡಿಸುವುದು ಅವನಿಗೆ ಗೊತ್ತಿತ್ತು. ಆದರೆ ಅವಳು ಅಳಲು ಮೊದಲು ಮಾಡಿದರೆ ಅವನಿಗೆ ಸೋಲು ಸಿದ್ಧ. ಅದನ್ನು ತಿಳಿದೇ ರಾಮಚಂದ್ರ ಅಲ್ಲಿಂದ ಬೇಗ ಹೊರಡಲು ಯೋಚಿಸಿ,

"ಇಂದಿರ—ವಿಶ್ವನಾಥ ಇಲ್ಲಿರುವಾಗ ನೀನು ಮೂರ್ತಿಯೊಡನೆ ಅಷ್ಟಾಗಿ ಓಡಾಡುವುದು ಚೆನ್ನಾಗಿರುವುದಿಲ್ಲ. ನೀನು ಅವನಿಗೂ ಸೂಕ್ಷ್ಮವಾಗಿ ತಿಳಿಸಿರುವುದು ಒಳ್ಳೇದು ಸ್ಟೇಷನ್ನಿಗೆ ಹೋಗಲು ಹೊತ್ತಾಯ್ತು.

ನೀನು ಬೇಗ ಸಿದ್ಧವಾಗು. ನಾನು ಅಷ್ಟರಲ್ಲಿ ಸ್ವಲ್ಪ ಹೊರಗೆ ಹೋಗಿ ಬಂದುಬಿಡುತ್ತೇನೆ—"

ಎಂದು ಹೇಳಿ ರಾಮಚಂದ್ರ ತಿರುಗಿ ನೋಡದೆ ಹೊರಟುಹೋದ.

## ೧೪

ಇಂದಿರ ತನ್ನ ಕೊಠಡಿಯಲ್ಲಿ ಕನ್ನಡಿಯ ಮುಂದೆ ನಿಂತಿದ್ದಳು. ಮನಸ್ಸಿನಲ್ಲಿ ಏನು ಹೋರಾಟ ನಡೆದಿತ್ತೋ....! ಕೈಗಳೇನೋ ಅಭ್ಯಾಸ ಬಲದಿಂದ ಅಲಂಕರಿಸಿಕೊಳ್ಳುವ ಕೆಲಸದಲ್ಲಿ ತೊಡಗಿದ್ದುವು. ಅಣ್ಣ ಮೊದಲೇ ಹೇಳಿದ್ದ ಸೀರೆಯನ್ನುಟ್ಟು ಅದಕ್ಕೆ ಒಪ್ಪುವಂತೆ ಸಿಂಗರಿಸಿ ಕೊಂಡಿದ್ದಳು.

ಮೂರ್ತಿ ಮೀನಾಕ್ಷಿಯನ್ನು ನೋಡಲು ಹೋಗುತ್ತಿದ್ದ. ಸಾಮಾನ್ಯ ವಾಗಿ ಇಂದಿರನ ಕೊಠಡಿಗೆ ಅವನು ಬರುತ್ತಿರಲಿಲ್ಲ. ಅವರೆಲ್ಲಾ ಒಟ್ಟಿಗೆ ಕುಳಿತು ಮಾತಾಡುತ್ತಿದ್ದುದು ಮೀನಾಕ್ಷಿಯ ಬಳಿಯೇ ಹೆಚ್ಚು; ಈಗ ಮಗು ಬೇರೆ ಇತ್ತು ಅಲ್ಲಿ ಆಕರ್ಷಣೆಗೆ! ಆದರೆ ಈದಿನ ಇಂದಿರನ ಕೊಠ ಡಿಯ ಬಾಗಿಲಿಗೆ ಬಂದಾಗಲೇ ಕನ್ನಡಿಯಲ್ಲಿದ್ದ ಪ್ರತಿಬಿಂಬ ಅವನ ಮನ ಸ್ಸನ್ನು ಸೆಳೆಯಿತು. ಒಂದು ಕ್ಷಣ ಸ್ಥಬ್ಧನಾಗಿ ನಿಂತುಕೊಂಡ. ಅವನ ನೆರಳೂ ಕನ್ನಡಿಯಲ್ಲಿ ಬಿತ್ತು. ಇಂದಿರ ತಿರುಗಿನೋಡಿ—

"ಮೂರ್ತಿ–ಹೆಂಗಸರು ಸಿಸ್ತುಮಾಡಿಕೊಳ್ಳುತ್ತಿರುವಾಗ ಕೇಳದೆ ಒಳಗೆ ನುಗ್ಗುವುದು ಯಾವ ಸಂಪ್ರದಾಯ....?" ಎಂದಳು.

"ನಾನು ಒಳಗೆ ನುಗ್ಗಿಲ್ಲ. ಇಲ್ಲೇ ಬಾಗಿಲ ಬಳಿಯೇ ನಿಂತಿ ದೇನೆ! ಹೆಂಗುಸರು ಬಾಗಿಲು ತೆಗೆದಿಟ್ಟುಕೊಂಡು ಅಲಂಕಾರ ಮಾಡಿ ಕೊಳ್ಳುವುದು ಯಾವ ಸಂಪ್ರದಾಯ? ನಾನು ಕೇಳಬಹುದೇ....!"

ಎಂದು ಹೇಳಿ ದಡಾರನೆ ಬಾಗಿಲು ಮುಚ್ಚಿ, ಹೊರಗಿನಿಂದ ಮೆಲ್ಲಗೆ ಉಗುರಿನಿಂದ ಬಡಿದು–

"ಒಳಗೆ ಬರಬಹುದೇ......?"

ಎಂದು ಕೇಳಿದ.

ಇಂದಿರ ನಕ್ಕು–

"ಬರಬಹುದು....!"

ಎಂದಳು.

ಮೂರ್ತಿ ಒಳಗೆ ಬಂದ. ಇಂದಿರ ಮೇಜನ್ನೊರಗಿ ನಿಂತಿದ್ದಳು. ಮೇಜಿನ ಮೇಲೆ ಅಲಂಕಾರದ ಸಾಮಾನುಗಳೆಲ್ಲಾ ಹರಡಿದ್ದುವು. ಅದರ ಪರಿಮಳ ಅಲ್ಲೆಲ್ಲಾ ತುಂಬಿತ್ತು. ಕಿಟಕಿಗೆ ಹಾಕಿದ್ದ ನೀಲಿ ಬಣ್ಣದ ತೆರೆಯ ಸಂದಿನಿಂದ ಸಂಜೆಯ ಬಿಸಿಲುತೂರಿ ಬರುತ್ತಿತ್ತು. ಕುರ್ಚಿಯ ಮೇಲೆ ತೆರೆದಿದ್ದ ಪುಸ್ತಕ ಹಾಗೇ ಇತ್ತು. ಮೂರ್ತಿ ತನ್ನ ನೋಟವನ್ನು ಒಂದು ಸಲ ಕೋಣೆಯ ಸುತ್ತ ಹೊರಳಿಸಿದ. ಅಲ್ಲಿನ ಸುಂದರ ಸನ್ನಿವೇಶ ಅವನನ್ನು ಮುಗ್ಧಗೊಳಿಸಿತು. ಅಲ್ಲಿದ್ದ ಪ್ರತಿಯೊಂದು ವಸ್ತುವಿನಲ್ಲಿ ಹೆಣ್ಣು ಮಕ್ಕಳಿಗೇ ಮೀಸಲಾದ ಒಂದು ಬಗೆಯ ಸೊಗಸು ಇರುವಂತೆ ತೋರಿತು. ಅವನು ಅದುವರೆಗೆ ಅರಿಯದಿದ್ದ ಒಂದು ಹೊಸ ಅನುಭವ ವಾಗಿ ಮನಸ್ಸು ಉಲ್ಲಾಸಗೊಂಡಿತು.

ಇಂದಿರ ಪುಸ್ತಕ ಎತ್ತಿಟ್ಟು ಕುರ್ಚಿಯನ್ನು ಅವನ ಬಳಿ ಸರಿಸಿದಳು. ಮೂರ್ತಿ ಅದರ ಮೇಲೆ ಕುಳಿತುಕೊಂಡು ಮಾತಾಡದೆ ಅವಳನ್ನೇ ದಿಟ್ಟಿಸುತ್ತಿದ್ದ. ಅವನು ನೋಡುವ ರೀತಿ ಅವಳಿಗೆ ಹೇಗೋ ಆಗಿ, ದೃಷ್ಟಿಯನ್ನು ಕೆಳಗೆ ತಗ್ಗಿಸಿ, ಏನೋ ಹುಡುಕುವಂತೆ ಆ ಕಡೆ ಈ ಕಡೆ ಬಗ್ಗಿ ನೋಡುತ್ತಿದ್ದಳು. ಎಷ್ಟು ಹೊತ್ತಾದರೂ ಅವಳು ತಲೆ ಎತ್ತದೆ ಇರುವುದನ್ನು ನೋಡಿ ಮೂರ್ತಿ ನಗುತ್ತ ಕೀಟಲೆಯ ಧ್ವನಿಯಲ್ಲಿ–

"ಏಕೆ ಇಂದಿರ.......ಏನು ಸಮಾಚಾರ........?"

ಎಂದು ಕೇಳಿದ.

"ಸಮಾಚಾರವೇನು ಬಂತು?"

"ನೀನು ಈ ಕಡೆ ನೋಡೋದೆ ಇಲ್ಲ....ನನ್ನ ಕಣ್ಣು ತಪ್ಪಿಸಲು ಪ್ರಯತ್ನ ಪಡುವಂತಿದೆಯಲ್ಲ!"

ಎಂದೂ ಕಾಣದ ಯಾವುದೋ ಅಪರೂಪ ವಸ್ತುವನ್ನು ನಿರೀಕ್ಷಿಸು ವಂತೆ ನೀವು ಹೀಗೆ ನೋಡುತ್ತಿದ್ದರೆ ಇನ್ನೇನು ಮಾಡೋದು... ?"

"ಇಂದಿರ—ಆ ದಿನ ಹೊಳೆಯ ದಾರಿಯಲ್ಲಿ ಬುಟ್ಟಿ ಎತ್ತಿ ಹಾಕಿದ್ದು ನೆನಪಿದೆಯೇ ....?"

"ನಾನು ಮರೆಯಬೇಕೆಂದರೂ ನೀವು ಅವಕಾಶ ಕೊಡುವುದಿಲ್ಲ ವಲ್ಲ......!"

"ಹೇಗೆ ಕೊಡೋದು.....? ಬಾಳಿನಲ್ಲಿ ಅಪರೂಪವಾಗಿ ಬರುವ ರಸನಿಮಿಷಗಳನ್ನು ಮರೆಯಲು ಸಾಧ್ಯವೇ? ಈಗಲೂ ಅದು ನನ್ನ ಕಣ್ಣಿಗೆ ಕಟ್ಟಿದಂತಿದೆ......!"

"ಅದರಲ್ಲಿ ಏನು ವಿಶೇಷವೋ......ನನಗಂತೂ ತೋರುವುದಿಲ್ಲ......!"

"ನಿನಗೆ ಹೇಗೆ ತಿಳಿದೀತು.....! ಆ ದಿನ ನೋಡಿದ್ದಕ್ಕೆ ಈ ಹೊತ್ತೇ ನೀನು ಹಾಗೆ ಕಾಣಿಸುತ್ತಿರೋದು. ಅಷ್ಟು ದಿನದಿಂದಲೂ ಕಾದು, ಒಂದೊಂದು ಸಲ ಆ ದಿನ ನನ್ನ ಕಣ್ಣೇ ಮಂಜಾಗಿತ್ತೇನೊ......? ಇಲ್ಲ ದಿದ್ದರೆ ಪುನಃ ಎಂದೂ ಹಾಗೆ ಕಾಣಲಿಲ್ಲವೇಕೆ.....? ಎಂದು ಕೊಳ್ಳುತ್ತಿದೆ. ನನ್ನ ಕಣ್ಣು ಸರಿಯಾಗಿದೆಯೆಂದು ಧೈರ್ಯವಾಯಿತು......ಆ....ಯಾರನ್ನು ಮರುಳು ಮಾಡುವುದಕ್ಕೆ ಈ ಅಲಂಕಾರ....?"

"ಈ ದಿನ ನನ್ನ ವರ ಬರುತ್ತಾನೆ! ಅವನನ್ನು ಎದುರುಗೊಳ್ಳ ಬೇಕು....?"

"ನಿಜವಾಗಿ......? ನಿನ್ನ ವರ ಎಲ್ಲಿಂದ ಬರಬೇಕು? ಇಲ್ಲೇ ಇದಾ ರಲ್ಲ.....ಇಂದಿರ! ಇನ್ನೆಷ್ಟು ದಿನ ಕಣ್ಣುಮುಚ್ಚಾಲೆ......?"

"ಅಯ್ಯೋ......ನಿಜವಾಗಿಯೂ ಹಾಗಾಗಿದ್ದರೆ......!"

ಎಂದುಕೊಂಡಳು. ಇಂದಿರ ಕೈಯಿಂದ ಜಾರಿಕೊಂಡಾಗ ಗೊತ್ತಾ ಗಿತ್ತು; ಅವಳಿಗೆ ತಾನು ಕಳೆದುಕೊಂಡುದು ಏನು ಎಂಬುದು! ಮೀನಾ ಕ್ಷಿಯ ಪ್ರೇಮದ ತಳಹದಿಯ ಮೇಲೆ ಅವಳ ಜೀವನ ಸುಖವಾಗಿ ನಡೆಯು ತ್ತಿತ್ತು. ಮೀನಾಕ್ಷಿಯ ಆರೋಗ್ಯ ಕೆಟ್ಟಮೇಲೆ, ಆ ಪ್ರೇಮದ ತೊರೆ ಯಲ್ಲಿ ಅರಕೆ ತೋರದಂತೆ ಮೂರ್ತಿ ತನ್ನ ಭಾಗವನ್ನು ಅದರಲ್ಲಿ ಸೇರಿ

ಹಿದ್ದ. ಆದರೆ ಇಂದಿರನಿಗೆ ಅದು ಗೊತ್ತಿರಲಿಲ್ಲ. ಅವಳು ಎಷ್ಟರ ಮಟ್ಟಿಗೆ ಮೀನಾಕ್ಷಿಯ ಪ್ರೇಮವನ್ನು ತನ್ನ 'ಹಕ್ಕು' ಎನ್ನುವಂತೆ ತಿಳಿದು ನಿಸ್ಸಂಕೋಚವಾಗಿ ಉಪಯೋಗಿಸಿಕೊಳ್ಳುತ್ತಲಿದ್ದಳೋ, ಮೂರ್ತಿಯದನ್ನೂ ಹಾಗೇ ತಿಳಿದು–ಮೀನಾ ಮಲಗಿದ ಮೇಲೆ ತನ್ನ ತೊಂದರೆಗಳನ್ನು ಅವನ ಬಳಿಗೆ ತೆಗೆದುಕೊಂಡು ಹೋಗುತ್ತಿದ್ದಳು. ಅವಳಿಗೆ ಸಂತೋಷವಾಗಲೀ ಬೇಸರವಾಗಲೀ, ಅದನ್ನು ಅವನೊಡನೆ ಹಂಚಿಕೊಳ್ಳದೆ ಅವಳಿಗೆ ಸಮಾಧಾನವಾಗುತ್ತಿರಲಿಲ್ಲ. ಅದು ಅವನಿಗೆ ಬೇಕೆ....? ಬೇಡವೇ.....?ಎಂಬ ಯೋಚನೆ ಅವಳಿಗೆ ಬರುತ್ತಿರಲಿಲ್ಲ! ಮೂರ್ತಿ ಅವಳೊಡನೆ ನಗುತ್ತ—ಬೇಸರವಾದಾಗ ಕೀಟಲೆಮಾಡಿ ನಗಿಸುತ್ತ ಅಥವಾ ಬೇರೆ ರೀತಿಯಲ್ಲಿ ಅವಳಿಗೆ ಸಮಾಧಾನ ಮಾಡುತ್ತ ಅವಳಿಗೆ ತಿಳಿಯದಂತೆ ಊರುಗೋಲಾಗಿದ್ದನು. ಆ ಕೆಲಸಗಳಿಂದ ಎಷ್ಟು ತೊಂದರೆಯಾಗಲೀ ಅದನ್ನು ಗಮನಿಸುತ್ತಿರಲಿಲ್ಲ. ಎಷ್ಟೋ ಸಲ ಅವಳು ತಿಳಿದೋ ತಿಳಿಯದೆಯೋ ಆಡಿದ ಮಾತನ್ನು ನಡೆಸುವುದಕ್ಕಾಗಿ ಲೆಖ್ಖವಿಲ್ಲದೆ ದುಡ್ಡು ಸುರಿಯುತ್ತಿದ್ದ.

"ಇವೆಲ್ಲವನ್ನೂ ಅವನು ನನಗಾಗಿ ಏಕೆ ಮಾಡಬೇಕು?"

ಎಂಬ ಯೋಚನೆ ಅವಳಿಗೆ ಬರುತ್ತಿರಲಿಲ್ಲ.

"ಅವನೊಡನೆ ಓಡಾಡಬೇಡ....!"

ಎಂದು ರಾಮಚಂದ್ರ ಹೇಳಿದಾಗಲೇ ಅವಳಿಗೆ ಅದರಲ್ಲಿ ತನ್ನ ಸುಖವಿತ್ತೆಂದೂ, ತಾನು ಓಡಾಡುತ್ತಿದ್ದುದು ತನಗಾಗಿಯೇ ಹೊರತು—ಅವನಿಗಾಗಿಯಾಗಲೀ ಅವನ ರೋಗಿಗಳನ್ನು ಉಲ್ಲಾಸಪಡಿಸುವುದಕ್ಕಾಗಲಿ ಅಲ್ಲವೆಂದು ತಿಳಿದುದ!

ಮೂರ್ತಿ ಅವಳ ಉತ್ತರಕ್ಕಾಗಿ ಕಾಯುತ್ತಿದ್ದ. ಇಂದಿರ ಮನಸ್ಸನ್ನು ಹುರಿ ಮಾಡುತ್ತಿದ್ದಳು. ಆ ದಿನ ಮೂರ್ತಿ ಅವಳ ಕಣ್ಣಿಗೆ ಕಂಡಂತೆ ಹಿಂದೆ ಎಂದೂ ಕಂಡಿರಲಿಲ್ಲ.........ಅಥವಾ ಅವಳು ಆ ದೃಷ್ಟಿಯಿಂದ ನೋಡಿರಲಿಲ್ಲ! ಅವಳು ಒಂದು ದಿನವೂ ಅವನ ಕಾಲಿನ ಜೋಡಿನ ಹೊಳಪು ಮಾಸಿದ್ದನ್ನಾಗಲೀ, ಅಥವಾ ಬಟ್ಟೆಯ ಮಡಿಕೆ ಸಡಲಿದ್ದನ್ನಾಗಲೀ, ನೋಡಿರಲಿಲ್ಲ. ತನ್ನ ಮನೆಯಿಂದ ಇಲ್ಲಿಗೆ ಬರಬೇಕಾದರೂ

ಹಾಗೇ ಬರುತ್ತಿದ್ದ. ಅದಕ್ಕಾಗಿ ಇಂದಿರ ಅವನನ್ನು ಎಷ್ಟೋ ಸಲ ಹಾಸ್ಯಮಾಡಿ—

"ದೀನರ ನಡುವೆ ಇದ್ದು ಅವರ ಸೇವೆಮಾಡಲು ಬಯಸುವವರಿಗೆ ಈ ಆಡಂಬರವೇಕೆ.....?"

ಎಂದು ಹಂಗಿಸಿದ್ದಳು.

ಆದರೆ ಈ ದಿನ ಅವನು ಹೊಸ ಸೂಟು ಹಾಕಿಕೊಂಡು ಅವಳ ಕಡೆ ನಿರೀಕ್ಷಣೆಯಿಂದ ನೋಡುತ್ತಿದ್ದಾಗ ಅವಳಿಗೆ—

"ಮನಸ್ಸು ಮಾಡಿದರೆ ಗಂಡಸರು ಹೆಂಗಸರಿಗಿಂತ ಹೆಚ್ಚು ಸಿಸ್ತಾಗಿರಬಹುದು. ಅಲಂಕಾರವನ್ನೆಲ್ಲಾ ನಾವೇ ಗುತ್ತಿಗೆಗೆ ತೆಗೆದು ಕೊಂಡಿಲ್ಲವಲ್ಲ!"

ಎನಿಸಿತು.

ಮಾತಾಡುವುದು ಕಷ್ಟವಾಗಿ, 'ಅಣ್ಣ ಈ ಕೆಲಸವನ್ನು ತಾನೇ ಮಾಡದೆ ನನಗೇಕೆ ವಹಿಸಿದನೋ?'

ಎಂದುಕೊಂಡಳು.

"ಏಕೆ ಇಂದಿರ....ಮಾತೇ ಇಲ್ಲ! ನಾನು ಕೇಳಿದ್ದು ತಪ್ಪಾಯಿತೆ.....?"

ಇಂದಿರ ಕಷ್ಟದಿಂದ ಹೇಳಿದಳು—

"ಮೂರ್ತಿ—ನೀವು ಹೇಳಿದ್ದು ಸರಿಯಲ್ಲ. ನಾನು ಹುಡುಗಾಟ ಮಾಡುತ್ತಿಲ್ಲ. ಅಮ್ಮ ಇದ್ದಾಗಲೇ ನನಗೆ ವರನನ್ನು ನಿಶ್ಚಯ ಮಾಡಿದ್ದರು. ಅವರು....ಸೈನ್ಯಕ್ಕೆ ಸೇರಿ ದೂರದೇಶದಲ್ಲಿದ್ದರು. ಈ ದಿನ ಬರುತ್ತಾರೆ. ನಾನು.....ರಾಮಣ್ಣ ಇಬ್ಬರೂ ಅವರನ್ನು ಕರೆದುಕೊಂಡು ಬರಲು ಹೋಗುತ್ತೇವೆ."

"ಓಹೋ....ಹೊಸ ಸಮಾಚಾರ! ನಿನಗೆ ಇದು ಮೊದಲೇ ತಿಳಿದಿತ್ತೋ.....ಇಲ್ಲ ನಿನಗೂ ಹೊಸದೋ....?"

"ನನಗೆ ಗೊತ್ತಿತ್ತು! ಬೆಂಗಳೂರಿನಲ್ಲಿ ರಾಮಣ್ಣ ಓದುತ್ತಿದ್ದಾಗ ನಿತ್ಯವೂ ನಮ್ಮ ಮನೆಗೆ ಬರುತ್ತಿದ್ದರು.....ಆಗಿನಿಂದ ಪರಿಚಯ—!"

"ಇಂದಿರ—ಬೆಂಕಿಯೊಡನೆ ಸರಸವಾಡಬಾರದು. ಮನುಷ್ಯರ ಹೃದಯವೆಂದರೆ ಆಟದ ವಸ್ತುವಲ್ಲ....! ನೀನು ಅದನ್ನು ತಿಳಿದೂ ನನ್ನ ಬಳಿ....?''

"ಅದರಲ್ಲಿ ತಪ್ಪೇನು....? ನೀವು ಮೀನನ ಬಂಧು. ನನಗೂ ಬಂಧು ಎಂದುಕೊಂಡು ರಾಮಣ್ಣನ ಹತ್ತಿರ ವರ್ತಿಸುವಂತೆ ನಿಮ್ಮ ಬಳಿ ಸ್ನೇಹದಿಂದ ನಡೆಯುತ್ತಿದ್ದೆ. ನೀವು ಅದನ್ನು ತಪ್ಪು ತಿಳಿದುಕೊಂಡರೆ....?"

"ಹಾಗಾದರೆ....ನಿನಗೆ ನನ್ನ ವಿಚಾರದಲ್ಲಿ ಬೇರೆ ಅಭಿಪ್ರಾಯವಿರಲಿಲ್ಲ.....?"

"ಇಲ್ಲ...."

"ಹೋಗಲಿ ಬಿಡು, ನನ್ನದೇ ತಪ್ಪು! ನಿನ್ನ ವರ ಯಾರೆಂದೆ....? ಸಿಪಾಯಿಯೆ....!''

"ಅಲ್ಲ....ಕ್ಯಾಪ್ಟನ್....!"

"ಕ್ಯಾಪ್ಟನನೂ ಸಿಪಾಯಿಯೆ! ಹಿಂದೆ ಯೂರೋಪು ದೇಶದಲ್ಲಿ ಇಂತಹ ಪ್ರಸಂಗ ಬಂದರೆ ಎದುರಾಳಿಗಳು ದ್ವಂದ್ವಯುದ್ಧ ಮಾಡಿ ನ್ಯಾಯವನ್ನು ಪರಿಶೀಲಿಸುತ್ತಿದ್ದರು. ಇದು ನಿನಗೆ ಗೊತ್ತಿರಬಹುದು!"

"ಗೊತ್ತಿದೆ. ಆದರೆ ಇಲ್ಲಿಯ ನ್ಯಾಯ ಅದನ್ನು ಒಪ್ಪುವುದಿಲ್ಲ. ಹೇಗೂ ನಿಮಗೆ ಅವಕಾಶ ಕಡಿಮೆ....."

"ಅದು ಹೇಗೆ....? ನಾನು ಗುರಿ ಹೊಡೆಯುವುದನ್ನು ನೀನೇ ನೋಡಿದೀಯೆ.....!"

"ಇರಬಹುದು....ಆದರೂ....."

"ಆದರೂ ಎದುರಾಳಿ ನನ್ನನ್ನು ಸೋಲಿಸುವ ಸ್ಥಿತಿಯಲ್ಲಿರಲಾರ....!"

"ಏಕೆ?"

"ಏಕೆ.....? ಚಟುವಟಿಕೆಯ ಕೆಲಸದಲ್ಲಿದ್ದವರನ್ನು ಈ ವಿಷಮ ಸ್ಥಿತಿಯಲ್ಲಿ ಸುಮ್ಮನೆ ರಜಕೊಟ್ಟು ಮನೆಗೆ ಕಳಿಸುವುದಿಲ್ಲ. ಗಾಯಗೊಂಡಿರಬೇಕು—ಅಥವಾ ಆರೋಗ್ಯ ಕೆಟ್ಟಿರಬೇಕು....ಹಾಸಿಗೆ ಸಿದ್ಧ ಮಾಡಿ, ಉಪಚಾರಕ್ಕೆ ಒಬ್ಬರನ್ನು ಗೊತ್ತುಮಾಡಿಕೊಂಡಿರಿ....!"

ಮೂರ್ತಿ ಕೊನೆಯ ಮಾತನ್ನು ಹಂಗಿಸುವಂತೆ ಹೇಳಿದ.

ಇಂದಿರ ತಾನೂ ಅದೇ ಧ್ವನಿಯಲ್ಲಿ ಹೇಳಿದಳು—

"ಆಗಲಿ. ಅಂತಹ ಕಾಲ ಬಂದರೆ ನಿಮ್ಮನ್ನೇ ಕರೆಯಲು ಬರುತ್ತೇನೆ!"

"ನಾನು ಬರಲಾರೆನೆಂದು ತೋರುತ್ತೆ. ನೀನು ಈಗಿನಿಂದಲೇ ಬೇರೆ ಏರ್ಪಾಡು ಮಾಡಿಕೊಂಡಿರೋದು ಒಳ್ಳೇದು....!"

ಒಂದು ಕ್ಷಣ ಮೌನ. ಅದನ್ನು ಸಹಿಸುವುದು ಮಾತಿಗಿಂತ ಕಠಿಣವಾಗಿತ್ತು. ಇಂದಿರ ಗಡಿಯಾರದ ಕಡೆ ನೋಡಿ—

"ಮೂರ್ತಿ–ರಾಮಣ್ಣ ಬರುವ ಹೊತ್ತಾಯಿತು. ನೀವು.....ಹೊರಡುವುದು ಒಳ್ಳೇದು...."

"ನೀನು ಹೇಳಬೇಕಾಗಿಲ್ಲ. ನಾನೇ ಹೋಗುತ್ತೇನೆ. ಇಂದಿರ.... ಇಷ್ಟು ದಿನವೂ ಹೊರಡಲು ಎದ್ದರೆ—"ಏನು ಅವಸರ....?" "ಎನ್ನುತ್ತಿದ್ದೆ .....ಈಗ......'?

"ಅದೊಂದು ಕಾಲ....!"

"ಇದೊಂದು ಕಾಲ! ಅಲ್ಲವೇ?"

ಮೂರ್ತಿ ಜೋರಾಗಿ ನಕ್ಕ. ಇಂದಿರ ಬೆಚ್ಚಿದಳು. ನಿಂತಂತೆ ನೆಲಕ್ಕೆ ಕುಸಿದುಬಿದ್ದಳು. ಅವನು ಹೊರಟುಹೋದರೂ ಆ ನಗು ಇನ್ನೂ ಅವಳ ಕಿವಿಯಲ್ಲಿ ಹೊಳಲು ಕೊಡುತ್ತಿತ್ತು.

## ೧೪

ಮೂರ್ತಿಯ ಭವಿಷ್ಯ ಸುಳ್ಳಾಗಲಿಲ್ಲ. ವಿಶ್ವನಾಥ ಬಂದಾಗ ಬಹಳ ದುರ್ದೆಶೆಯಲ್ಲಿದ್ದ. 'ನ್ಯೂಮೋನಿಯಾ' ಆಗಿ ಆಗ ತಾನೆ ಆಸ್ಪತ್ರೆಯಿಂದ ಹೊರಬಿದ್ದಿದ್ದ. ಜೊತೆಗೆ ಎಡತೋಳಿಗೆ ಬಲವಾದ ಪೆಟ್ಟು ಬಿದ್ದಿತ್ತು. ಅದಕ್ಕೆ ಹಾಕಿದ್ದ ಕಟ್ಟನ್ನು ಕೆಲವು ದಿನಗಳ ಹಿಂದೆ ತೆಗೆದು, ಮುಂಜಾಗ್ರತೆ

ಗಾಗಿ ಬಟ್ಟೆಯನ್ನು ಬಿಗಿದಿದ್ದರು. ಅನಾರೋಗ್ಯದ ಜೊತೆಗೆ ಪ್ರಯಾಣದ ಆಯಾಸವೂ ಸೇರಿತ್ತು. ಇಂದಿರ ಅವನನ್ನು ನೋಡಿ ಏನೆಂದುಕೊಂಡಳೊ.....? ಅವನಿಗೇನೋ ಅವಳನ್ನು ನೋಡಿ ಹಿಡಿಸಲಾರದಷ್ಟು ಸಂತೋಷವಾಯಿತು.

ರಾಮಚಂದ್ರ ತನ್ನ ಸ್ವಂತ ಕೋಣೆಯನ್ನು ಅವನಿಗಾಗಿ ತೆರವು ಮಾಡಿ, ತನ್ನ ಆಪ್ತ ಸೇವಕನಾದ ನಿಂಗನನ್ನು ಅವನ ಸೇವೆಗೆ ನೇಮಿಸಿದ. ನಿಂಗ ರಾಮಚಂದ್ರನ ತಂದೆಯ ಕಾಲದಿಂದಲೂ ಅವರ ಮನೆಯಲ್ಲಿದ್ದು ರಾಮಚಂದ್ರನನ್ನು ಎತ್ತಿ ಆಡಿಸಿದವನು. ರಾಮಚಂದ್ರ ಈ ಸಲ ಹಳ್ಳಿಗೆ ಹೋಗಿದ್ದಾಗ, ಮುದುಕ ಜೀವನಕ್ಕೆ ಕಷ್ಟಪಡುತ್ತಿರುವುದನ್ನು ನೋಡಿ, ತನ್ನ ಸಂಗಡ ಕರೆದುಕೊಂಡು ಬಂದಿದ್ದ. ಮನೆಯಲ್ಲಿ ಕಷ್ಟದ ಕೆಲಸ ವೇನೂ ಅವನ ಪಾಲಿಗೆ ಬೀಳುತ್ತಿರಲಿಲ್ಲ. ಇತರ ಆಳುಗಳ ಕೈಲಿ ಕೆಲಸ ತೆಗೆಸುತ್ತ–ಮನೆಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ. ಅಷ್ಟೆ!

ವಿಶ್ವನಾಥನ ಸ್ಥಿತಿ ನಿಜವಾಗಿಯೂ ಕಠಿಣವಾಗಿತ್ತು. ಮಧ್ಯಾಹ್ನ ದಿಂದಲೇ ಪುನಃ ಜ್ವರವು ಕಾಣಿಸಿಕೊಂಡಿತ್ತು. ರಾಮಚಂದ್ರನಿಗೆ ಅವನು ಆ ರೀತಿ ಬರಬಹುದೆಂಬ ನಿರೀಕ್ಷಣೆಯೇ ಇರಲಿಲ್ಲವಾಗಿ ಬಹಳ ಗಾಬರಿ ಯಾಗಿದ್ದ. ಮೀನಾಕ್ಷಿ ಅತಿಥಿಯನ್ನು ಎದುರುಗೊಳ್ಳಲು ಬಾಗಿಲಿಗೆ ಬಂದವಳು, ಅವನು ಕುಳಿತುಕೊಳ್ಳುವ ಸ್ಥಿತಿಯಲ್ಲಿಲ್ಲದಿರುವುದನ್ನು ನೋಡಿ ಹಾಸಿಗೆಯನ್ನು ಸಿದ್ಧಪಡಿಸಲು ಒಳಗೆ ಹೋದಳು.

ರಾಮಚಂದ್ರ ಕೈಕೊಟ್ಟು ಅವನನ್ನು ಇಳಿಸಿ, ಮೆಲ್ಲಗೆ ಭುಜಕ್ಕೆ ಒರಗಿಸಿಕೊಂಡು ಕರೆದುಕೊಂಡು ಬಂದು ಹಾಸಿಗೆಯು ಸಿದ್ಧವಾದ ಕೂಡಲೆ ಅದರ ಮೇಲೆ ಮಲಗಿಸಿದ. ಮೀನಾಕ್ಷಿ ಅವನ ಯೋಗಕ್ಷೇಮವನ್ನು ವಿಚಾರಿಸಿ, ಅವನಿಗೆ ಕುಡಿಯಲು ಏನಾದರೂ ಬಿಸಿ ಪಾನೀಯವನ್ನು ತರಲು ಒಳಗೆ ಹೋದಳು. ಇಂದಿರ ಸೂತ್ರದ ಬೊಂಬೆಯಂತೆ–ಅಣ್ಣ ಹೇಳಿದಂತೆ ಮಾಡುತ್ತ ಈ ಕಡೆಯಿಂದ ಆ ಕಡೆಗೆ ಓಡಾಡುತ್ತಿದ್ದಳು. ನಿಂಗ ಅವನ ಸಾಮಾನುಗಳನ್ನೆಲ್ಲ ಒಳಗೆ ತಂದು ಎಲ್ಲವನ್ನೂ ಸರಿಯಾ ಗಿಟ್ಟ. ರಾಮಚಂದ್ರ ತಂಗಿಯನ್ನು ಹತ್ತಿರ ಕರೆದು ಮೆಲ್ಲಗೆ—

"ಇಂದಿರ–ಡಾಕ್ಟರ್ ಮೂರ್ತಿಯನ್ನು ಕರೆಯಲು ಯಾರನ್ನಾದರೂ ಕಳಿಸು. ಜ್ವರ ಹೆಚ್ಚಾಗಿರುವಂತಿದೆ...." ಎಂದು ಹೇಳಿದ.

ಇಂದಿರ ಹೊರಗೆ ಹೋದವಳು ಆಳನ್ನು ಕೂಗಲಿಲ್ಲ. ಏನೋ ಯೋಚಿಸಿಕೊಂಡು ತಾನೇ ಹೋದಳು. ಮೂರ್ತಿ ತನ್ನ ರಾತ್ರಿಯ ಸುತ್ತನ್ನು ಮುಗಿಸಿಕೊಂಡು ಆಗ ತಾನೇ ವೈದ್ಯಶಾಲೆಯಿಂದ ಮನೆಗೆ ಬಂದಿದ್ದ. ಇಂದಿರ ಬಾಗಿಲ ಬಳಿ ನಿಂತುಕೊಂಡು,

"ಡಾಕ್ಟರ್.....!" ಎಂದಳು.

ಮೂರ್ತಿ ಅವಳ ಧ್ವನಿಯನ್ನು ಗುರುತಿಸದವನಂತೆ—

"ಯಾರು....? ಒಳಗೆ ಬನ್ನಿ....!" ಎಂದ.

ಇಂದಿರ ಒಳಗೆ ಬಂದಳು. ಮೂರ್ತಿ ಎದ್ದು ನಿಂತು—

"ಏನು ಇಂದಿರ....ಇಷ್ಟು ಹೊತ್ತಿನಲ್ಲಿ ಬಂದೆ....?" ಎಂದು ಕೇಳಿದ

"ಮೂರ್ತಿ— ನೀವು ದಯವಿಟ್ಟು ಬರಬೇಕು. ಕ್ಯಾಪ್ಟನ್‌ರವರಿಗೆ ....ವಿಪರೀತ ಜ್ವರ....!"

ಇಂದಿರ ಎತ್ತಲೋ ನೋಡುತ್ತಿದ್ದಳು. ಗಾಳಿಯಲ್ಲಿ ಬಂದುದರಿಂದ ತಲೆಯ ಕೂದಲೆಲ್ಲಾ ಅಸ್ತವ್ಯಸ್ತವಾಗಿತ್ತು. ಏಕೋ ಧ್ವನಿ ಭಾರವಾದಂತಿತ್ತು. ಮೂರ್ತಿ ಅವಳ ಕಡೆ ತೀಕ್ಷ್ಣವಾಗಿ ನೋಡಿ—

"ಇಂದಿರ—ನಾನು ಮೊದಲೇ ಹೇಳಿದ್ದೆ....ಆದರೂ ನೀನು ಯಾವ ಭರವಸೆಯ ಮೇಲೆ ಬಂದೆ....?" ಎಂದ.

ಇಂದಿರ ಸ್ವಲ್ಪ ತಡೆದು ಹೇಳಿದಳು—

"ನಿಮಗೆ ಗೊತ್ತಿದೆ; ಸಮೀಪದಲ್ಲಿ ಬೇರೆ ಯಾರೂ ಇಲ್ಲವೆಂದು. ವೈದ್ಯರಾಗಿ........ಕಷ್ಟದಲ್ಲಿರುವವರಿಂದ ಕರೆ ಬಂದರೆ, ಅವರು ಯಾರೇ ಆಗಿರಲಿ....'ಬರುವುದಿಲ್ಲ'ವೆಂದು ಹೇಳಲು ನಿಮಗೆ ಅಧಿಕಾರವಿಲ್ಲ!"

"ನಾನು ಯಾರ ಅಧಿಕಾರದಲ್ಲೂ ಇಲ್ಲ. ಬರುವುದು, ಬಿಡುವುದು ನನ್ನ ಇಷ್ಟ!"

"ಮೂರ್ತಿ—ನಿಮ್ಮ ದೊಡ್ಡತನದಲ್ಲಿ ನನಗೆ ನಂಬಿಕೆ ಇದೆ. ನೀವು ನಿಮ್ಮ ಕರ್ತವ್ಯವನ್ನು ಮರೆಯುವುದಿಲ್ಲವೆಂದೂ ಬಲ್ಲೆ. ಎಂತಲೇ ಸಾಹಸ ಮಾಡಿ ಬಂದೆ...."

ಮೂರ್ತಿ ಸ್ವಲ್ಪ ಸುಮ್ಮನಿದ್ದು, ಬಳಿಕ ಅವಳನ್ನು ಹಿಂಬಾಲಿಸಿ ಹೊರಟ. ದಾರಿಯಲ್ಲಿ ಯಾರೂ ಮಾತಾಡಲಿಲ್ಲ. ಇಂದಿರ ಅವನನ್ನು ಕೊಠಡಿಯ ಬಳಿ ಬಿಟ್ಟು ಮಹಡಿಯ ಮೇಲೆ ಮಗುವಿನ ಬಳಿಗೆ ಹೋದಳು.

ಎರಡು ದಿನಗಳು ವಿಶ್ವನಾಥ ಜೀವನ ಮರಣಗಳ ನಡುವೆ ತೂಗಾಡುತ್ತಿದ್ದ. ಒಂದು ಗಳಿಗೆ ಎಚ್ಚರ–ಒಂದು ಗಳಿಗೆ ಮರೆವು. ಮೂರ್ತಿ ರಾಮಚಂದ್ರ ಇಬ್ಬರೂ ರಾತ್ರಿ ಹಗಲು ಅವನ ಪಕ್ಕದಲ್ಲಿದ್ದು ನೋಡಿಕೊಳ್ಳುತ್ತಿದ್ದರು. ಮೂರನೆಯ ದಿನ ಜ್ವರ ಇಳಿಮುಖವಾಯಿತು. ಪ್ರಾಣಭಯವಿಲ್ಲವೆಂದು ಹೇಳಿ ಮೂರ್ತಿ ಮನೆಗೆ ಹೋದ.

ಮಾರನೆಯ ದಿನ ಮೂರ್ತಿ ಬಂದಾಗ ವಿಶ್ವನಾಥ ಆಗ ತಾನೆ ಕಾಫಿ ಕುಡಿದು ಎಚ್ಚರವಾಗಿ ಮಲಗಿದ್ದ. ಅವನಿಗಿಂತ ಹೆಚ್ಚಾಗಿ ರಾಮಚಂದ್ರನ ಮುಖ ಗೆಲುವಾಗಿತ್ತು. ಅವನು ಸಂತೋಷದಿಂದ ಮೂರ್ತಿಯನ್ನು ಆದರಿಸಿ, ವಿಶ್ವನಾಥನಿಗೆ ಅವನ ಪರಿಚಯ ಮಾಡಿಕೊಟ್ಟ.

ವಿಶ್ವನಾಥ ಅಲ್ಲಿಗೆ ಬಂದು ಹದಿನೈದು ದಿನಗಳಾಗಿತ್ತು. ಈಗೀಗ ಅವನು ಸುದಾರಿಸಿಕೊಳ್ಳುತ್ತಿದ್ದ. ತೋಳಿನ ಮೇಲಿನ ಘಾಯವೂ ಮಾಯುತ್ತ ಬಂದಿತ್ತು. ಮೂರ್ತಿ ಬೆಳಗ್ಗೆ ಸಾಯಂಕಾಲ ಎರಡು ಹೊತ್ತೂ ಬಂದು ನೋಡಿಕೊಂಡು ಹೋಗುತ್ತಿದ್ದ. ರಾಮಚಂದ್ರ ಕೆಲಸದ ನಡುವೆ ಬಿಡುವು ಮಾಡಿಕೊಂಡು ದಿನದಲ್ಲಿ ಒಂದೆರಡು ಸಲ ಮನೆಗೆ ಬರುತ್ತ, ಒಟ್ಟಿನಲ್ಲಿ ಅವನನ್ನು ನೋಡಿಕೊಳ್ಳುವ ಭಾರವನ್ನು ಇಂದಿರನಿಗೆ ವಹಿಸಿಬಿಟ್ಟಿದ್ದ. ವಾಸ್ತವವಾಗಿ ಇಂದಿರ ಏನೂ ಮಾಡುತ್ತಿರಲಿಲ್ಲ. ನಿಂಗ ರೋಗಿಯ ಕೊಠಡಿಯನ್ನು ಬಿಟ್ಟು ಅಲ್ಲಾಡುತ್ತಿರಲಿಲ್ಲ. ಸದಾ ಅವನ ಸಮೀಪದಲ್ಲಿದ್ದು ಮಾಡಬೇಕಾದ್ದನ್ನೆಲ್ಲಾ ಮಾಡುತ್ತಿದ್ದ. ಮೀನಾಕ್ಷಿ ಹೊತ್ತಿಗೆ ಸರಿಯಾಗಿ ಪಥ್ಯ ಪಾನಾದಿಗಳನ್ನು ಒದಗಿಸುತ್ತಿದ್ದಳು. ಇಂದಿರ ಅದನ್ನು ತಂದು ಮುಂದಿಡುವುದು- ಗಂಟೆ ನೋಡಿ ಔಷಧಿಯನ್ನು ಬಗ್ಗಿಸಿ ಕೊಡುವುದು! ಇಷ್ಟೇ ಮಾಡುತ್ತಿದ್ದರೂ, ವಿಶ್ವನಾಥ–ರಾಮಚಂದ್ರ ಇಬ್ಬರೂ, ಎಲ್ಲವನ್ನೂ ಇಂದಿರನೇ ನಡೆಸುತ್ತಿರುವಳೆಂದು ಭಾವಿಸುತ್ತಿದ್ದರು.

ವಿಶ್ವನಾಥ ಆಗಾಗ ತನ್ನ ಸೈನಿಕ ಜೀವನದ ಅನುಭವಗಳನ್ನು ವಿವರಿಸುತ್ತ, ಅವಳು ಅನ್ಯಮನಸ್ಕಳಾಗಿ ಕೇಳುತ್ತಿದ್ದರೆ, ಅವಳು ತನ್ನ ಮಾತಿನ

ವೈಖರಿಯಲ್ಲಿ ವ್ಯೈ ಮರೆತಿರುವಳೆಂದು ಭಾವಿಸಿ ಸಂತೋಷಪಡುತ್ತಿದ್ದ. ಇಷ್ಟು ದಿನಗಳಲ್ಲಿ ಮೂರ್ತಿ ಒಂದು ದಿನವೂ ಇಂದಿರನನ್ನು ನೋಡಿರಲಿಲ್ಲ. ಅವನು ಬರುವ ಹೊತ್ತನ್ನು ತಿಳಿದು, ಇಂದಿರ ಏನಾದರೂ ನೆವಹೇಳಿ ಅಲ್ಲಿಂದ ಜಾರುತ್ತಿದ್ದಳು. ಮೂರ್ತಿ ಈಗ ಮೊದಲಿನಂತೆ ಸ್ನೇಹಿತನಾಗಿ-ಮನೆಯವರಲ್ಲಿ ಒಬ್ಬನಾಗಿ ಬರುತ್ತಿರಲಿಲ್ಲ. ರೋಗಿಯನ್ನು ನೋಡಲು ಬರುವ ವೈದ್ಯನಂತೆ ಬಂದು, ತನ್ನ ಕೆಲಸ ಮುಗಿದ ಕೂಡಲೆ ಹೊರಟು ಹೋಗುತ್ತಿದ್ದ. ಸಾಮಾನ್ಯವಾಗಿ ಮೀನಾಕ್ಷಿ ಅವನು ಬರುವ ವೇಳೆ ಯಲ್ಲಿ ರೋಗಿಯ ಕೊಠಡಿಯಲ್ಲೇ ಇರುತ್ತಿದ್ದಳಾಗಿ ಅವಳನ್ನು ಮಾತಾಡಿ ಸುವುದಕ್ಕಾದರೂ ಒಳಗೆ ಹೋಗ ಬೇಕಾಗಿರಲಿಲ್ಲ. ರಾಮಚಂದ್ರನಿಗೆ ಮೂರ್ತಿ ಕೇವಲ ಅಪರಿಚಿತನಂತೆ ನಡೆಯುತ್ತಿರುವುದು ತಿಳಿದರೂ, ಅವನಿಗೆ ಅದೇ ಬೇಕಾಗಿತ್ತಾಗಿ, ಕಾಣದವನಂತೆ ಸುಮ್ಮನಿದ್ದ. ಮನೆಯಲ್ಲಿ ಆಳು ಕಾಳುಗಳಿಗೂ ಕೂಡ ಮನೆಯ ಸ್ನೇಹದಿಂದ ತುಂಬಿದ ವಾತಾವರಣ ದಲ್ಲಿಯೇ ಏನೋ ಬದಲಾವಣೆಯಾದಂತೆ ತೋರುತ್ತಿತ್ತು. ಯಾರೂ ಏನೂ ಹೇಳದಿದ್ದರೂ ನಿಂಗ ಎಲ್ಲವನ್ನೂ ತಿಳಿದಿದ್ದ. ಇಂದಿರ ವಿಶ್ವ ನಾಥನ ಕೊಠಡಿಯಿಂದ ಹೊರಗೆ ಬರುತ್ತಿರುವಾಗ ಬಾಗಿಲಬಳಿ ನಿಂತು ಅವನು ಕನಿಕರದಿಂದ ನೋಡುತ್ತಿದ್ದ. ಆ ನೋಟದಲ್ಲಿ ಅಡಗಿದ್ದ ಸಹಾನು ಭೂತಿಯನ್ನು ನೋಡಿ ಇಂದಿರನಿಗೆ ಇದ್ದುದರಲ್ಲಿ ಸಮಾಧಾನವೆನಿಸುತ್ತಿತ್ತು. ಅವಳು ತನ್ನ ಆಧಾರದಂತೆ ಇದ್ದ ಇಬ್ಬರ ಬಳಿಯಲ್ಲೂ ಮನಸ್ಸು ಬಿಚ್ಚಿ ಮಾತಾಡುವಂತಿರಲಿಲ್ಲವಾಗಿ ಅವಳಿಗೆ ಏನೋ ಬರಿದಾಗಿ ತೋರುತ್ತಿತ್ತು. ಅಂಥ ಸಮಯದಲ್ಲಿ ಆ ಮೂಕ ನೋಟ ಬೀರುತ್ತಿದ್ದ ಬೆಂಬಲ ಅಷ್ಟಿಷ್ಟಲ್ಲ!

ರಾಮಚಂದ್ರ ದಿನದಿನಕ್ಕೆ ತಂಗಿಯನ್ನು ನಿರ್ಬಂಧ ಪಡಿಸುವುದು ಹೆಚ್ಚಾಯಿತು.

"ಸಂಜೆಯ ಹೊತ್ತು ಅವನ ಬಳಿ ಕುಳಿತು ಏನಾದರೂ ಓದು; ಅಥವಾ ಹಾಡು ಹೇಳು! ಅವನಿಗೆ ಹೊತ್ತು ಹೋಗುವುದು ಹೇಗೆ....?" ಎಂದು ಕೇಳುತ್ತಿದ್ದ.

ಇಂದಿರ ಯತ್ನವಿಲ್ಲದೆ ಮೀನಾಕ್ಷಿಯ ಬಳಿ ದೂರು ಹೇಳಿದಳು. ಮೀನಾಕ್ಷಿಗೂ ಈಚೆಗೆ ಅನುಮಾನ ಬರತೊಡಗಿತ್ತು. ರಾಮಚಂದ್ರ ಅವನ ವಿಚಾರದಲ್ಲಿ ತೋರುತ್ತಿದ್ದ ಶ್ರದ್ಧೆ, ತಂಗಿಯನ್ನು ಅವನ ಉಪ ಚಾರಕ್ಕೆ ನೇಮಿಸಿರುವುದು–ಎಲ್ಲದಕ್ಕಿಂತಲೂ ಹೆಚ್ಚಾಗಿ ಮೂರ್ತಿಯ ವರ್ತನೆ. ಎಲ್ಲವೂ ಅವಳ ಅನುಮಾನವನ್ನು ಬಲಪಡಿಸುತ್ತಿದ್ದುವು. ಆದರೂ ಯಾರೂ ಅವಳ ಬಳಿ ಈ ವಿಚಾರವಾಗಿ 'ಚ' ಕಾರವನ್ನೂ ಹೇಳಿರ ಲಿಲ್ಲವಾಗಿ ಅವಳು ಯಾವುದನ್ನೂ ನಿರ್ಧರಿಸಲಾರದೆ ಇದ್ದಳು. ಒಂದೊಂದು ಸಲ ಅವಳಿಗೆ ಈ ಗುಟ್ಟಿನಲ್ಲಿ ಎಲ್ಲರೂ ಸೇರಿರುವುದಾಗಿಯೂ, ತಾನೊ ಬ್ಬಳು ಮಾತ್ರ ಹೊರತೆಂದೂ ತೋರುತ್ತಿತ್ತು. ಸಂದರ್ಭವು ಹೀಗಿದ್ದರೂ ಇಂದಿರ ದೂರು ಹೇಳಿದಾಗ ಅವಳು ಏನೂ ಅರಿಯದವಳಂತೆ–

"ಅದರಲ್ಲಿ ತಪ್ಪೇನು ಇಂದಿರ? ನೀನು ಓದುವುದರಿಂದ ಅವರ ಮನಸ್ಸಿಗೆ ಸಂತೋಷವಾಗುವಂತಿದ್ದರೆ, ಏಕೆ ಓದಬಾರದು? ಆಗ ಅವಿ ಶ್ರಾಂತವಾಗಿ ಅಷ್ಟು ಜನರ ಸೇವೆ ಮಾಡುತ್ತಿರಲಿಲ್ಲವೇ....? ಅವರೆಲ್ಲ ನಮಗೆ ಏನಾಗಬೇಕು?" ಎಂದಳು.

ಮನಸ್ಸಿನಲ್ಲಿ ಆ ದಿನವೇ ರಾಮಚಂದ್ರನೊಡನೆ ಪ್ರಸ್ತಾಪ ಮಾಡ ಬೇಕೆಂದೂ, ಹೀಗೇ ಮುಂದೊರೆಯಲು ಅವಕಾಶ ಕೊಡಬಾರ ದೆಂದೂ ಯೋಚಿಸಿ, ನಿಂಗನನ್ನು ಗುಟ್ಟಾಗಿ ಕರೆದು, ಇಂದಿರ ರೋಗಿಯ ಬಳಿ ಇರುವಾಗ ಏನಾದರೂ ಹೆಚ್ಚು ಮಾತು ಕತೆ ನಡೆದರೆ ತನಗೆ ತಿಳಿಸ ಬೇಕೆಂದು ಕಟ್ಟುಮಾಡಿದಳು. ಅಂತೆಯೇ ಸಮಯವನ್ನು ಸಾಧಿಸಿ ರಾಮಚಂದ್ರ ಒಬ್ಬನೇ ಇದ್ದಾಗ—ಅವನಿಗೆ ತನ್ನ ಅನುಮಾನವನ್ನು ತಿಳಿಸಿ—

"ಇದಕ್ಕೆಲ್ಲಾ ಅರ್ಥವೇನು? ವಯಸ್ಸು ಬಂದ ಹುಡುಗಿಯನ್ನು ಹಾಗೆಲ್ಲ ಬಿಡುವುದು ಸರಿಯೆ?"

ಎಂದು ಕೇಳಿದಳು.

ರಾಮಚಂದ್ರ ಸ್ವಲ್ಪ ಯೋಚಿಸಿ ಹೇಳಿದ—

"ಮೀನ— ನಿನ್ನ ಮಾತು ಕೇಳಿದರೆ ನನಗೆ ಆಶ್ಚರ್ಯವಾಗುತ್ತೆ. ನೀನು ಮಾತ್ರ ಅವಳಿಗೆ ಮೂರ್ತಿಯ ಸಂಗಡ ಅಷ್ಟು ಸಲುಗೆಯಾಗಿರಲು ಹೇಗೆ ಅವಕಾಶಕೊಟ್ಟೆ....?"

"ಅದು ಬೇರೆ ವಿಚಾರ; ನಾನು ಹಾಗೆ ಮಾಡಲು ಉದ್ದೇಶವಿತ್ತು!"

"ನಾನೂ ಉದ್ದೇಶವಿಲ್ಲದೆ ಕೆಲಸ ಮಾಡುವುದಿಲ್ಲ. ಮೀನಾ! ವಿಶ್ವನಾಥ ಓಡಾಡುವಂತೆ ಆದ ಕೂಡಲೆ ಅವನೊಡನೆ ಇಂದಿರನ ಮದುವೆ ಮಾಡುತ್ತೇನೆ!"

"ಏನು......?"

"ನಾನು ಹೇಳುವುದನ್ನು ಸ್ಪಷ್ಟವಾಗಿಯೇ ಹೇಳಿದೇನೆ. ಪುನಃ ಹೇಳಬೇಕಾಗಿಲ್ಲವೆಂದು ತೋರುತ್ತೆ...."

"ನನಗೆ ತಿಳಿಯದಂತೆ ಎಷ್ಟು ದಿನಗಳಿಂದ ಈ ಆಲೋಚನೆಯನ್ನು ಮಾಡಿದ್ದಿರಿ?"

"ನಿನಗೆ ತಿಳಿಯಬಾರದೆಂದಲ್ಲ ಮೀನ! ನೀನು ಇನ್ನೂ ಅಶಕ್ತಳಾಗಿಯೇ ಇದ್ದುದರಿಂದ ಈಗಿನಿಂದಲೇ ನಿನಗೆ ಏಕೆ ತೊಂದರೆ ಪಡಿಸೋಣವೆಂದು ಹೇಳಲಿಲ್ಲ. ಅಷ್ಟು ಗಾಬರಿಯಾಗಬೇಡ ಮೀನಾ...."

"ಮೂರ್ತಿ ಏನಾಗಿದಾನೆ?"

"ಮೂರ್ತಿಯ ವಿಚಾರದಲ್ಲಿ ನನಗೆ ಯಾವ ಆಕ್ಷೇಪಣೆಯೂ ಇಲ್ಲ. ಆದರೆ ಇದು ನಿನ್ನೆ ಮೊನ್ನೆಯ ಏರ್ಪಾಡಲ್ಲ. ಅಮ್ಮ ಇದ್ದಾಗಲೇ ನಿಶ್ಚಯವಾಗಿತ್ತು. ಅವಳ ಕೊನೆಯ ಬಯಕೆ....ಅದನ್ನು ನಾನು ನೀನು ಯಾರೂ ಮೀರುವಂತಿಲ್ಲ."

"ಇಂದಿರ ಇದಕ್ಕೆ ಒಪ್ಪುವಳೇ?"

"ಇಂದಿರ ನನ್ನ ಮಾತನ್ನು ಮೀರುವುದಿಲ್ಲ!"

"ಅಯ್ಯೋ-ಇದು ಶುದ್ಧ ಅನ್ಯಾಯ. ಅಮ್ಮನೇ ಈಗ ಇದ್ದು ನೋಡಿದ್ದರೆ ಈ ಸಂಬಂಧವನ್ನು ಒಪ್ಪುತ್ತಿರಲಿಲ್ಲ. ಇಂದಿರನಿಗೆ ತಕ್ಕ ವರನೇ ಅವನು? ನಿಮಗಿಂತ ವಯಸ್ಸಾದವನಂತೆ ಕಾಣುತ್ತಾನೆ...."

"ಹೌದು-ಮೀನ. ಅವನದು ಶ್ರಮ ಜೀವನ. ಸುಖವಾಗಿ ಮನೆಯಲ್ಲಿದ್ದುಕೊಂಡು ಔಷಧಿ ಕೊಡುವುದಕ್ಕೂ, ಅದಕ್ಕೂ ಬಹಳ ವ್ಯತ್ಯಾಸವಿದೆ. ಅದಲ್ಲದೆ ಅವನಿಗೆ ಹೆಂಗಸರಂತೆ ಶೃಂಗಾರಮಾಡಿಕೊಳ್ಳು ವುದಕ್ಕೂ ಬರುವುದಿಲ್ಲ!"

"ಅವನ ಕೆಲಸ ಅಪಾಯದಿಂದ ಕೂಡಿದ್ದು. ಅವನಿಗೆ ಇಂದಿರನನ್ನು ಕೊಡಲು ಮನಸ್ಸಾದರೂ ಬರುವುದೇ....?"

"ಮೀನಾ....! ಇಂದಿರ 'ನನ್ನ' ತಂಗಿ ಎಂಬುದನ್ನು ನೀನು ಮರೆ ತಂತೆ ಕಾಣುತ್ತೆ! ಅವಳ ಸುಖದ ಯೋಚನೆ ನನಗಿಲ್ಲವೇ? ವಿಶ್ವನಾಥನ ಆರೋಗ್ಯ ಸರಿಯಾಗಿಲ್ಲವಾಗಿ ಅವನನ್ನು ಪುನಃ ಚಟುವಟಿಕೆಯ ಕೆಲಸಕ್ಕೆ ಹಾಕುವ ಸಂಭವ ಕಡಿಮೆ."

"ಅದು ಹೇಗೆ ಗೊತ್ತು....?"

"ಒಂದು ವೇಳೆ ಹಾಕಿದರೆ ತಾನೇ ಏನು....? ಸಾವು ಎಲ್ಲಿದ್ದರೆ ತಾನೇ ಬರುವುದಿಲ್ಲ. ಇನ್ನೂ ಮೊನ್ನೆ ನೀನೇ ನೋಡಿದೀಯೆ! ಊರಿಗೆ ಊರೇ ಕೊಚ್ಚಿ ಹೋಯಿತಲ್ಲ. ಇಲ್ಲಿ ಒಂದು ಬಾಂಬು ಬಿದ್ದರೆ ನಾವೆಲ್ಲಾ ಏನಾಗುತ್ತೇವೋ....? ಸುಮ್ಮನೆ ಇದನ್ನೆಲ್ಲಾ ಎಣಿಸಿಕೊಂಡು ಕೂತರೆ ಆಗುತ್ತದೆಯೆ?"

"ನೀವು ಒಂದು ಮಾತ್ರ ಯೋಚಿಸಲಿಲ್ಲ. ವಿಶ್ವನಾಥನ ಕೈ ಮೇಲು ನೋಟಕ್ಕೆ ಸರಿಯಾಗಿ ಕಂಡರೂ, ಇನ್ನು ಅದರಿಂದ ಏನು ಕೆಲಸವೂ ಆಗುವುದಿಲ್ಲ"

"ಒಂದು ವೇಳೆ ಮದುವೆ ಆದಮೇಲೆ ಆಗಿದ್ದರೆ ಏನು ಮಾಡು ತ್ತಿದ್ದೆ?"

"ಅದು ಹಣೆಯ ಬರಹ!"

"ಈಗಲೂ ಹಾಗೇ ತಿಳಿದುಕೋ....!"

"ಅದು ಹೇಗೆ ಸಾಧ್ಯ. ಇದುವರೆಗೂ ಸುಮ್ಮನಿದ್ದು ಬಿಟ್ಟು, ಈಗ ಅವಳ ಮನಸ್ಸು ಬೇರೆ ಕಡೆ ಇರುವಾಗ ಹೀಗೆ ಬಲವಂತ ಪಡಿಸುವುದು ಸರಿಯೇ? ಇದನ್ನು ತಿಳುವಳಿಕೆಯುಳ್ಳ ಯಾರೂ ಮನ್ನಿಸುವುದಿಲ್ಲ."

## ೧೭೦

ರಾಮಚಂದ್ರ ಜೋರಾಗಿ ನಕ್ಕು ಹೇಳಿದ—

"ಇದೊಂದು ಹುಚ್ಚು ನಿಮಗೆ! ಮದುವೆಯಾದರೆ ಮನಸ್ಸು ತಾನಾಗಿಯೇ ಸರಿಹೋಗುತ್ತೆ. ಈಗ ನೀವೆಲ್ಲಾ ಒಪ್ಪಿ ಮದುವೆಯಾದರೇನು? ನಮ್ಮ ಸಂಸಾರ ಏನಾಗಿದೆ. ಪ್ರತಿಯೊಬ್ಬ ಹೆಂಡತಿಯೂ ನಿನ್ನಂತೆ ಇದ್ದರೆ ಮನೆ ಸ್ವರ್ಗವಾದೀತು....!"

"ಅದು ಬೇರೆ ಮಾತು. ಈಗಿನ ಸಂದರ್ಭ ಬೇರೆ. ಅದೇನು ನಿಮಗೆ ತಿಳಿಯದೆ ಇಲ್ಲ....!"

"ತಿಳಿದರೂ ನಾನು ಏನೂ ಮಾಡುವಂತಿಲ್ಲ. ಆಗುವುದು ಆಗಲೇ ಬೇಕು."

"ಹೇಗೆ ಆಗುವುದೋ ನೋಡೋಣ. ನನ್ನ ಶರೀರದಲ್ಲಿ ಉಸಿರಿರುವವರೆಗೂ ಈ ಮದುವೆಯಾಗದಂತೆ ತಡೆಯುತ್ತೇನೆ!"

"ಬೇಡ-ಮೀನ. ನಾನು ಎಂತಹ ಹಟಗಾರನೆಂದು ನಿನಗೆ ಗೊತ್ತಿದೆ. ನೀನು ಪ್ರತಿಭಟಿಸಿದಷ್ಟೂ ನನ್ನ ಹಟ ಹೆಚ್ಚುವುದೇ ಹೊರತು, ಕಡಿಮೆಯಾಗುವುದಿಲ್ಲ!"

ರಾಮಚಂದ್ರ ಅಲ್ಲಿ ನಿಲ್ಲದೆ ಹೊರಟು ಹೋದ.

## ೧೫

ವಿಶ್ವನಾಥ ಬಂದವನೆ ಖಾಯಿಲೆ ಮಲಗಿದ್ದರಿಂದ ಗೆಳೆಯರನ್ನೆಲ್ಲಾ ಒಂದು ದಿವಸ ಉಪಾಹಾರಕ್ಕೆ ಕರೆಯಬೇಕೆಂದಿದ್ದ ಯೋಚನೆ ಅಲ್ಲಿಗೇ ನಿಂತಿತ್ತು. ಈಗ ವಿಶ್ವನಾಥ ಸ್ವಲ್ಪ ಹುಷಾರಾದ ಮೇಲೆ ರಾಮಚಂದ್ರ ಪುನಃ ಆ ಪ್ರಸ್ತಾಪ ಮಾಡಿದ. ಆದರೆ ಈ ಸಲ ಮೀನಾಕ್ಷಿ ಇಂದಿರ ಇಬ್ಬರೂ ಅದರಲ್ಲಿ ಸ್ವಲ್ಪವೂ ಉತ್ಸಾಹ ತೋರಿಸದೆ ಉದಾಸೀನದಿಂದ ಇದ್ದರು. ರಾಮಚಂದ್ರ ಅಷ್ಟಕ್ಕೆ ಬಿಡುವ ಸ್ವಭಾವದವನಲ್ಲ. ಅವನ ಮನಸ್ಸಿಗೆ ಬಂದುದು ಆಗಲೇ ಬೇಕು. ಅಲ್ಲದೆ ಗೆಳೆಯರಿಗೆ ಆಗಲೇ

ಮಾತು ಕೊಟ್ಟಿದ್ದನಾಗಿ ಅದನ್ನು ಬಿಡುವಂತೆಯೂ ಇರಲಿಲ್ಲ. ಮೊದಲು ಮಾಡಿಕೊಂಡಿದ್ದಷ್ಟು ಅದ್ಧೂರಿಯಾಗಲ್ಲದಿದ್ದರೂ, ಕೇವಲ ಬೇಕಾದವರನ್ನಾದರೂ ಕರೆಯಬೇಕೆಂದು ನಿಶ್ಚಯಿಸಿದ. ಅದಲ್ಲದೆ ಅವರಿಗೆಲ್ಲ ವಿಶ್ವನಾಥನನ್ನು ಪರಿಚಯ ಮಾಡಿಕೊಡುವ ಉದ್ದೇಶವೂ ಇತ್ತು.

ಮೊದಲೇ ಗೊತ್ತಾಗಿದ್ದಂತೆ ತೋಟವನ್ನೆಲ್ಲಾ ಸಿಂಗರಿಸಿ ಗಿಡಗಳ ನಡುವೆ ಚಿಕ್ಕ ಮೇಜುಗಳನ್ನೂ ಅದರ ಸುತ್ತ ಕುರ್ಚಿಗಳನ್ನೂ ಹಾಕಿದ್ದರು. ಅತಿಥಿಗಳು ನಾಲ್ಕು ಗಂಟೆಗೇ ಬರಲು ಮೊದಲಾಯಿತು. ಮೀನಾಕ್ಷಿ ಮಗುವಿಗೆ ಲಕ್ಷಣವಾಗಿ ಬಟ್ಟೆ ಹಾಕಿ ಅಲಂಕಾರಮಾಡಿ ಎತ್ತಿಕೊಂಡು ನಗುಮುಖದಿಂದ ಬಂದವರನ್ನು ಸ್ವಾಗತಿಸುತ್ತಿದ್ದಳು. ಬಂದವರು ಚಿಕ್ಕ ಚಿಕ್ಕ ಗುಂಪಾಗಿ ಅಲ್ಲಲ್ಲಿ ಕುಳಿತು ಮಾತಾಡುತ್ತಿದ್ದರು. ವಿಶ್ವನಾಥ ಒಂದು ಆರಾಮ ಕುರ್ಚಿಯಲ್ಲಿ ಅರ್ಧ ಮಲಗಿದಂತೆ ಕುಳಿತ್ತಿದ್ದ. ರಾಮಚಂದ್ರ ಬಂದವರಿಗೆಲ್ಲ ಬಹಳ ಉತ್ಸಾಹದಿಂದ ತನ್ನ ಗೆಳೆಯನ ಪರಿಚಯ ಮಾಡಿಕೊಡುತ್ತಿದ್ದ. ಇಂದಿರ ಯಾರ ಗುಂಪಿಗೂ ಸೇರದೆ ಎಲ್ಲರಿಂದ ದೂರವಾಗಿದ್ದ ಒಂದು ಕೊನೆಯಲ್ಲಿ ಮರದ ಕೆಳಗೆ ತನ್ನ ಇಬ್ಬರು ಗೆಳತಿಯರೊಂದಿಗೆ ಕುಳಿತಿದ್ದಳು.

ಅವಳು ದೂರ ಇದ್ದರೂ ಬಂದವರೆಲ್ಲಾ ಅವಳಿದ್ದಲ್ಲಿಗೇ ಹೋಗಿ ಮಾತಾಡಿಸಿ ಬರುತ್ತಿದ್ದರು. ಇಂದಿರ ಎಲೆ ಹಸರು ಬಣ್ಣದ ತೆಳುವಾದ ಸೀರೆ ಉಟ್ಟು ಮಂಜಿನಂತೆ ಶುಭ್ರವಾದ ರವಿಕೆ ತೊಟ್ಟಿದ್ದಳು. ಕತ್ತಿನ ಸುತ್ತ ರಟ್ಟೆಯ ದಪ್ಪದ ಉಲ್ಲನ್ ಬಟ್ಟೆಯನ್ನು ಸುತ್ತಿಕೊಂಡು, ಗಂಟಲು ನೋವೆಂದು ಹೆಚ್ಚು ಮಾತಾಡದೆ ನಗುವಿನಲ್ಲೇ ಮುಗಿಸುತ್ತಿದ್ದಳು. ಹಾಡು ಹೇಳಲು ತಪ್ಪಿಸಿಕೊಳ್ಳುವ ಉಪಾಯವೆಂದು ಗೆಳತಿಯರು ನಗೆಯಾಡಿದರು.

ಮೂರ್ತಿ ಇನ್ನೂ ಬಂದಿರಲಿಲ್ಲ. ಬಂದವರೆಲ್ಲ ಅವನನ್ನು ಕೇಳುವವರೇ ಆದರು. ರಾಮಚಂದ್ರ ನಿಂಗನನ್ನು ಎರಡು ಮೂರು ಸಲ ಅವನ ಮನೆಗೆ ಕಳಿಸಿದ. ಯಾವುದೋ ಜರೂರು ಕೇಸನ್ನು ನೋಡಲು ಹೋದವನು ಇನ್ನೂ ಬಂದಿಲ್ಲವೆಂದು ಉತ್ತರ ಬಂತು.

ಕೊನೆಗೆ ಹೊತ್ತಾಯಿತೆಂದು ತಿಂಡಿ ಕೊಡಲು ಮೊದಲು ಮಾಡಿದರು. ಪರಿಚಾರಕರು ತಟ್ಟೆಗಳಲ್ಲಿ ತಿಂಡಿಯನ್ನೂ ಹಣ್ಣುಗಳನ್ನೂ ತುಂಬಿಕೊಂಡು ಹಂಚುತ್ತಿದ್ದರು. ಟೀ, ಎಲೆ ಅಡಿಕೆ ಆದಮೇಲೆ ಗಂಧ ಹೂವುಗಳನ್ನು ಕೊಟ್ಟಾಯಿತು. ರಾಮಚಂದ್ರನ ಮನೆಯಲ್ಲಿ ಏನಾದರೂ ಸಂಗೀತದ ಸುಗ್ಗಿ. ಇಂದು ಎಲ್ಲರಿಗೂ ಅದೇ ನೆನಪು. ಗೆಳತಿಯರೆಲ್ಲ ಇಂದಿರನನ್ನು ಹಾಡುವಂತೆ ಆಗ್ರಹ ಮಾಡಿದರು. ಅವಳು ಸಾಧ್ಯವಿಲ್ಲವೆಂದು ಹೇಳಿದ್ದರಿಂದ ಇಂದಿರನ ಗೆಳತಿಯೇ ಹಾಡಲು ಮೊದಲು ಮಾಡಿದಳು.

ವಿಶ್ವನಾಥ ಕುಳಿತಲ್ಲಿಂದಲೇ ಎಲ್ಲವನ್ನೂ ಗಮನಿಸುತ್ತಿದ್ದ. ಅವನ ನೋಟ ಇಂದಿರನಲ್ಲಿ ನೆಟ್ಟಂತಿತ್ತು. ಗುಂಪಿನ ನಡುವೆ ಇದ್ದರೂ ಅವನ ಮನಸ್ಸು ಉಲ್ಲಾಸವಾಗಿರಲಿಲ್ಲ. ಇಂದಿರ ಒಂದು ಸಾರಿಯಾದರೂ ಈ ಕಡೆ ಬರದೆ ದೂರವಾಗಿದ್ದುದು ಅವನಿಗೆ ಅರ್ಥವಾಗಲಿಲ್ಲ. ಅವಳು ಎಲ್ಲರೊಡನೆ ನಗುತ್ತ ಮಾತಾಡುತ್ತಿದ್ದರೂ, ಅದು ಸಹಜವಾದುದಾಗಿರದೆ ಸೋಗಿನಂತೆ ತೋರುತ್ತಿತ್ತು. ಅವಳು ತನಗೆ ಸ್ವಲ್ಪವೂ ಬೇಸರವಿಲ್ಲದೆ ಉಪಚಾರ ಮಾಡುತ್ತಿದ್ದರೂ, ಅದು ಕೂಡ ಅವಳು ಮನಮುಟ್ಟಿ ಮಾಡುತಿಲ್ಲವೇನೋ ಎಂಬ ಸಂಶಯ ಆಗಾಗ ಬರುತ್ತಿತ್ತು. ವಿಶ್ವನಾಥ ಪ್ರಯತ್ನ ಪೂರ್ವಕವಾಗಿ ಆ ಯೋಚನೆಯನ್ನು ದೂರ ಮಾಡುತ್ತಿದ್ದ.

ಬಹಳ ಹೊತ್ತಾದ ಮೇಲೆ ಮೂರ್ತಿ ಬಂದ. ಆಗಲೇ ಕೆಲವರು ಅತಿಥಿಗಳು ಹೊರಟು ಹೋಗಿದ್ದರು. ಅವನು ಬರುತ್ತಿರುವುದನ್ನು ನೋಡಿ ವಿಶ್ವನಾಥನ ಮುಖ ಅರಳಿತು. ದೂರದಲ್ಲಿ ಅವನು ಕಾಣಿಸುತ್ತಲೇ ಎದ್ದು ನಿಂತು–

"ಡಾಕ್ಟರ್–ಡಾಕ್ಟರ್ ಹೀಗೆ ಬನ್ನಿ!"

ಎಂದು ಕೈ ಬೀಸಿ ಕರೆದ.

ಮೂರ್ತಿ ಮತ್ತೆಲ್ಲೋ ಕೂರಲು ಹವಣಿಸುತ್ತಿದ್ದವನು ನಿರ್ವಾಹವಿಲ್ಲದೆ ಬಂದು ಅವನ ಪಕ್ಕದಲ್ಲಿ ಕುಳಿತು ದೇಹಸ್ಥಿತಿಯ ಬಗ್ಗೆ ವಿಚಾರಿಸಿದ. ಮೀನಾಕ್ಷಿ ಬಂದು ಮಾತಾಡಿಸಿ ತಿಂಡಿ ತರಿಸಿ ಮುಂದಿಟ್ಟಳು.

ಇಂದಿರನಿಗೆ ಅವನು ಬಂದುದು ಗೊತ್ತಾದರೂ ಕಾಣದಂತೆ ಇದ್ದು ಬಿಟ್ಟಳು. ಮೂರ್ತಿ ಮಿಠಾಯಿಯನ್ನು ಅಗಿಯುತ್ತ ವಿಶ್ವನಾಥನ ಮಾತನ್ನು ಕೇಳು ತ್ತಿದ್ದರೂ ಅವನ ನೋಟ ಆಗಾಗ ಇಂದಿರನ ಕಡೆ ಹೊರಳುತಿತ್ತು. ಅಲ್ಲಿದ್ದ ತಂಬೂರಿಯನ್ನು ನೋಡಿ–

"ಯಾರಾದರೂ ಹಾಡಿದರೇನು.....?"

ಎಂದು ಕೇಳಿದ.

ರಾಮಚಂದ್ರ ಆ ವೇಳೆಗೆ ಅಲ್ಲಿಗೆ ಬಂದವನು,

"ಇಂದಿರ ಹಾಡಲಿಲ್ಲ. ಅವಳ ಗೆಳತಿ ಹಾಡಿದಳು. ಬಹಳ ಚೆನ್ನಾಗಿತ್ತು!"

ಎಂದು ಹೇಳಿದ.

ಮೂರ್ತಿ, ಇಂದಿರ ಸುತ್ತಿಕೊಂಡಿದ್ದ ಕೊರಳ ಪಟ್ಟಿಯ ಕಡೆ ನೋಡಿ ಒಂದು ಸಣ್ಣ ನಗೆ ಬೀರಿ ಸುಮ್ಮನಾದ.

ವಿಶ್ವನಾಥ ಯುದ್ಧದ ಸಮಾಚಾರವನ್ನು ಹೇಳುತ್ತ, ಯುದ್ಧ ಮುಖ ದಲ್ಲಿದ್ದ ತನ್ನ ಗೆಳೆಯನಿಂದ ಬಂದಿದ್ದ ಪತ್ರದಲ್ಲಿದ್ದ ಹೊಸ ಸುದ್ದಿಗಳನ್ನು ತಿಳಿಸಿದ. ಮೂರ್ತಿ ಯಾವುದೋ ಮನಸ್ಸಿನಿಂದ ಕೇಳುತ್ತ ತಾನೂ ಏನಾದರೂ ಹೇಳದಿದ್ದರೆ ಚೆನ್ನಾಗಿರುವುದಿಲ್ಲವೆಂದು–

"ನಮ್ಮ ಪತ್ರಿಕೆಗಳಲ್ಲಿ ಈ ಸುದ್ದಿ ಬರಬೇಕಾದರೆ ಇನ್ನೂ ಎಷ್ಟು ದಿವಸ ಬೇಕೋ? ಅವಕ್ಕೆ ಹಳೆಯ ಸುದ್ದಿಯೇ ಗತಿ!"

ಎಂದು ಗೊಣಗಿದ.

"ಅದರಲ್ಲಿ ಪತ್ರಿಕೆಗಳದ್ದೇನೂ ತಪ್ಪಿಲ್ಲ. ಯುದ್ಧ ಕಛೇರಿಯಿಂದ ಅನುಮತಿ ಪಡೆಯದೆ ಅವರು ಯಾವುದನ್ನೂ ಪ್ರಕಟಿಸುವಂತಿಲ್ಲ!"

ವಿಶ್ವನಾಥ ತಾನು ಹೇಳಿದ ಮಾತಿನ ಪ್ರಾಮುಖ್ಯತೆಯನ್ನು ಸ್ಪಷ್ಟ ಪಡಿಸುವಂತೆ ಹೇಳಿದ.

ಮಾತು ಅದೇ ಧಾಟಿಯಲ್ಲಿ ಮುಂದುವರೆಯುತ್ತಿತ್ತು. ಇಂದಿರ ತನ್ನ ಗೆಳತಿಯರನ್ನು ಬೀಳ್ಕೊಡಲು ಮುಂಬಾಗಿಲಿನ ವರೆಗೆ ಬಂದವಳು ಈ ಕಡೆ ನೋಡದವಳಂತೆ ನೆಟ್ಟಗೆ ಮನೆಯ ಒಳಗಡೆ ಹೋದಳು.

## ೧೭೪

ಮೂರ್ತಿ ಹೊರಡಲು ಎದ್ದು ನಿಂತ. ವಿಶ್ವನಾಥ ಅವನ ಕೈ ಹಿಡಿದು-

"ಡಾಕ್ಟರೇ ಇಂದಿರನಿಗೆ ಗಂಟಲು ನೋವಂತೆ, ಒಂದು ಸಲ ನೋಡಿದ್ದರಾಗುತಿತ್ತು !"

ಎಂದು ಸೂಚಿಸಿದ.

ಮೂರ್ತಿ ಉದಾಸೀನದಿಂದ ನಕ್ಕು-

"ಈಗ ಹೇಗೂ ಕತ್ತಲೆ ; ಬೆಳಗ್ಗೆ ನೋಡಿದರಾಯಿತು. ಬೇಕಾದರೆ ಮನೆಗೆ ಹೋಗಿ ಮಾತ್ರೆ ಕಳಿಸುತ್ತೇನೆ!"

ಎಂದು ಹೇಳಿ ಹೊರಟುಹೋದ.

ವಿಶ್ವನಾಥನಿಗೆ ಅವನ ಬಗೆ ಅರ್ಥವಾಗಲಿಲ್ಲ. ರಾಮಚಂದ್ರ ಮೀನಾಕ್ಷಿ ಯಾರೂ ಹೇಳದೆ ತಾನಾಗಿ ಹೇಳಿದ್ದರಿಂದ ಅವನು ಆ ರೀತಿ ಅಂದಿರಬಹುದು. ತನಗೂ ಇಂದಿರನಿಗೂ ಮುಂದೆ ಆಗಲಿರುವ ಸಂಬಂಧ ಅವನಿಗೆ ತಿಳಿದಿರಲಾರದು ಎಂದುಕೊಂಡು ಮನಸ್ಸಿಗೆ ಸಮಾಧಾನ ಮಾಡಿ ಕೊಂಡ!

## ೧೭

ವಿಶ್ವನಾಥ ಆರಾಮ ಕುರ್ಚಿಯ ಮೇಲೆ ದೊಡ್ಡ ದಿಂಬನ್ನು ಒರಗಿ ಕೊಂಡು ಕುಳಿತಿದ್ದ. ಇಂದಿರ ಔಷಧಿಯನ್ನು ತೆಗೆದುಕೊಂಡು ಒಳಗೆ ಬಂದಳು. ಅದನ್ನು ಕುಡಿದಮೇಲೆ ವಿಶ್ವನಾಥ—

"ಇಂದಿರ–ಆಗಲೇ ಹೊರಟು ಬಿಟ್ಟೆ.... ಏನಾದರೂ ಕೆಲಸವಿದೆಯೆ ?"

ಎಂದು ಕೇಳಿದ.

"ಏನೂ ಇಲ್ಲ....."

ಇಂದಿರ ಅನುಮಾನಿಸುತ್ತ ನುಡಿದಳು.

"ಸ್ವಲ್ಪ ಕುಳಿತುಕೊಳ್ಳುವಿಯಾ ಇಂದಿರ....?"

ಇಂದಿರ ಅಲ್ಲಿದ್ದ ಕುರ್ಚಿಯನ್ನು ಸ್ವಲ್ಪ ದೂರ ಎಳೆದುಕೊಂಡು ಕುಳಿತಳು.

"ನಿನ್ನ ಗಂಟಲು ನೋವು ಹೇಗಿದೆ....?"

"ಈಗ ಎರಡು ದಿನದಿಂದಲೂ ಏನೂ ಇಲ್ಲ. ಅವತ್ತಿಲ್ಲೋ ಸ್ವಲ್ಪ ತೊಂದರೆಯಾಗಿತ್ತು.....ಅಷ್ಟೆ......"

"ಅವತ್ತು....ಮೂರ್ತಿ ಔಷಧಿ ಕಳಿಸಿದರೇನು ?"

"ಯಾರಿಗೆ....?"

"ನಿನಗೆ....!"

"ಇಲ್ಲ. ಅವರಿಗೆ ಗೊತ್ತಿರಲಾರದು....ನಾನು ಔಷಧಿಗೆ ಯಾರನ್ನೂ ಕಳಿಸಿರಲಿಲ್ಲ...."

"ನಾನು ಅವರಿಗೆ ಹೇಳಿದ್ದೆ....ಮನೆಗೆ ಹೋಗಿ ಮಾತ್ರೆ ಕಳಿಸುವುದಾಗಿ ಹೇಳಿದ್ದರು....!"

ಇಂದಿರ ನಾಚಿದಳು. ಅದನ್ನು ಮರೆಸುವಂತೆ ನಕ್ಕು....

"ಓ................"

ಎಂದಳು.

"ನಿನ್ನ ಪಾಠಶಾಲೆಯ ಕೆಲಸ ಆಯಿತೆ......ಇಂದಿರ ?"

"ಆಯ್ತು—ಈಗತಾನೆ ಅಲ್ಲಿಂದ ಬಂದೆ."

"ನಾನು ಬೆಳಿಗ್ಗೆ ಹೇಳಿದ ಮಾತಿನಿಂದ ನಿನಗೆ ಅಸಮಾಧಾನವಾಯಿತೆ....?"

"ಅಸಮಾಧಾನವೇಕೆ....?

"ನಿನ್ನನ್ನು ನೋಯಿಸಬೇಕೆಂದಾಗಲೀ, ಅಥವಾ ಬಿರುಗಾಳಿಯು ಅನಾಹುತದಲ್ಲಿ ನೀವು ಮಾಡಿದ ಕೆಲಸವನ್ನು ಹಳಿಯಬೇಕೆಂದಾಗಲೀ ನನ್ನ ಅಭಿಪ್ರಾಯವಿರಲಿಲ್ಲ. ಆ ಬಗೆಯ ನೋಟ ನಿಮಗೆ ಹೊಸಬು; ನಮಗೆ ಅದು ನಿತ್ಯದ ಅನುಭವ! ಇದರ ಹತ್ತರಷ್ಟು ಅನಾಹುತವನ್ನು ನಮ್ಮ ಬಾಂಬುಗಳು ದಿನವೂ ಮಾಡುತ್ತವೆ. ಇದಕ್ಕೆ ಮೀರಿದ ಕಷ್ಟವನ್ನು

ಜನರು ಅನುಭವಿಸುತ್ತಿದಾರೆ. ನಾವು ಇದಕ್ಕೆಲ್ಲಾ ಎದೆಯೊಡೆದು ಮರುಗುತ್ತ ಕುಳಿತರೆ ಆಗುವುದೆ....?"

"ನಾನು ಹೇಳಿದ್ದೂ ಅದೇ.....! ಯುದ್ಧ—ನಿಮ್ಮಲ್ಲಿ ಮನುಷ್ಯತ್ವ ವನ್ನು ದೂರಮಾಡಿದೆ. ಕಷ್ಟವನ್ನು ಕಂಡರೆ ಹೃದಯ ಕರಗುವುದಿಲ್ಲ!"

"ನಮ್ಮ ಜೀವನದ ದಾರಿಯೇ ಹಾಗೆ. ಸೈನಿಕನ ಎದೆ ಉಕ್ಕಿನಂತಿ ರಬೇಕು—ಬೆಣ್ಣೆಯಂತಲ್ಲ! ಎಂದ ಮಾತ್ರಕ್ಕೇ ಮನುಷ್ಯತ್ವವನ್ನು ಮರೆತಿಲ್ಲ ಇಂದಿರ! ಗುಣವನ್ನು ಕಂಡಕಡೆ—ತನಗಿಂತಲೂ ಹಿರಿದಾದು ದನ್ನು ನೋಡಿದೆಡೆ, ಅವನೂ ಮಣಿಯುತ್ತಾನೆ. ಅವನಿಗೂ ಇತರರಂತೆ ಮೋಹ ಮಮತೆಗಳೂ, ರಾಗದ್ವೇಷಗಳೂ ಇವೆ .....!"

ಇಂದಿರ ಸುಮ್ಮನಿದ್ದಳು. ವಿಶ್ವನಾಥ ಸ್ವಲ್ಪ ಕಾದು ಬಳಿಕ ನಯವಾಗಿ—

"ಇಂದಿರ..."

ಎಂದು ಕರೆದ.

"ಏನು....?"

"ನೀನು ಎಷ್ಟು ಚೆನ್ನಾಗಿ ಹಾಡುವೆ. ನನಗೆ ಗೊತ್ತೇ ಇರಲಿಲ್ಲ. ನಿನ್ನೆ ರಾಮಚಂದ್ರ ಬಲವಂತ ಮಾಡಿ ಹೇಳಿಸಿದ್ದರಿಂದ ತಿಳಿಯಿತು."

"......................................"

"ಇಂದಿರ—ಆಸ್ಪತ್ರೆಯಲ್ಲಿದ್ದಾಗ ನಾನು ಉಳಿಯುವ ಭರವಸೆ ಇರಲಿಲ್ಲ. ಎಡತೋಳನ್ನು ಕತ್ತರಿಸಿಬಿಡಬೇಕೆಂದು ಯೋಚಿಸಿದ್ದರು. ಹಾಗೆ ಬದುಕಿರುವುದಕ್ಕಿಂತ ಸಾಯುವುದೇ ಮೇಲೆಂದು ತೋರುತ್ತಿತ್ತು. ನನಗಾಗಿ ಅಳುವವರು ಯಾರೂ ಇರಲಿಲ್ಲ..........."

ವಿಶ್ವನಾಥ ಬೆಚ್ಚಿದವನಂತೆ ತಟ್ಟನೆ ಮಾತು ನಿಲ್ಲಿಸಿದ. ಸಿಡಿಲೆರಗುವ ಮುನ್ನ ಹಾಯುವ ಮಿಂಚಿನಂತೆ ಮಣಿಯ ರೂಪು ಅವನ ಮನಸ್ಸಿನ ಮುಂದೆ ಹಾಯ್ದು ಹೋಯಿತು. "ಇದು ಎಂಥ ದ್ರೋಹಿ ಹೃದಯ....! ನನಗೆ ಯಾರೂ ಇರಲಿಲ್ಲವೇ? ಮಣಿ ನನಗಾಗಿ ಕಣ್ಣೀರು ಕಾಲುವೆ ಯನ್ನು ಹರಿಸುತ್ತಿರಲಿಲ್ಲವೆ.....?" ಎಂದು ಚಿತ್ತ ತಳಮಳಗೊಂಡಿತು.

ಇಂದಿರ ಉದಾಸೀನದಿಂದ ಕೇಳುತ್ತಿದ್ದವಳು ಅವನು ತಟ್ಟನೆ ಸುಮ್ಮನಾದ್ದರಿಂದ ಅವನ ಕಡೆ ನೋಡಿದಳು. ಅವನ ಕಳವಳವನ್ನು ನೋಡಿ ಕನಿಕರವಾಯಿತು. ಅವನ ಮಾತಿನಲ್ಲಿ ಆಸಕ್ತಿಯನ್ನು ಹೊಂದಿದಂತೆ ನಗುಮುಖದಿಂದ—

"ಆಮೇಲೇನಾಯಿತು ?" ಎಂದಳು.

ಇಂದಿರನ ನಗುಮುಖ ಮಣಿಯು ಚಿತ್ರದ ಮೇಲೆ ತೆರೆ ಎಳೆಯಿತು. ಅವನು ಉತ್ಸಾಹದಿಂದ ಹೇಳಿದ—

"ಒಂದು ಸಲ ಆ ಯೋಚನೆ ಬಂದಾಗ ನಿನ್ನ ನೆನಪಾಯಿತು. ನಾನು ಕೊನೇ ಸಲ ನಿನ್ನ ನೋಡಿದ್ದು ನಿಮ್ಮ ತಾಯಿ ಸತ್ತಾಗ. ಆಗ ನೀನು ಇನ್ನೂ ಲಂಗ ಹಾಕಿಕೊಂಡು ಪ್ರಪಂಚವನ್ನು ಅರಿಯದೆ ಇದ್ದೆ. ನಿನ್ನ ನೆನಪು ಬಂದರೆ ನನ್ನ ಕಣ್ಣು ಮುಂದೆ ನಿಲ್ಲುತ್ತಿದ್ದುದು ಆ ಚಿತ್ರ! ನಾನು ಹೊರಡುವ ಮೊದಲು ಒಂದು ಸಲ ನಿನ್ನ ನೋಡಬೇಕೆಂದು ಆಸೆಯಿತ್ತು. ನೀನೂ ಆಗ ಆ ಕಡೆ ಬಂದಿದ್ದೆ. ಆದರೆ ನಾನು ನಿಂತ ಗಳಿಗೆಯಲ್ಲಿ ಹೊರಡಬೇಕಾದ್ದರಿಂದ ಆಗಲಿಲ್ಲ. ಇಂದಿರ..........ಆಗ ಒಂದು ಸಲ ನಿನ್ನನ್ನು ನೋಡಿದ್ದರೆ........ಜೀವನವನ್ನು ಹಗುರವಾಗೆಣಿಸಿ, ಅಪಾಯವನ್ನು ಹುಡುಕಿಕೊಂಡು ಮುನ್ನುಗ್ಗುತ್ತಿರಲಿಲ್ಲವೇನೋ....? ಆಗ ಬಾಳು ನೀರಸವಾಗಿತ್ತು. ಅದರಿಂದಲೇ ಆಗ ತಿಂಗಳು ಗಟ್ಟಲೆ ಉಪಚಾರಮಾಡಿದರೂ ಕಡಿಮೆಯಾಗದ ರೋಗ, ಇಲ್ಲಿಗೆ ಬಂದ ಕೆಲವು ದಿವಸಗಳಲ್ಲೇ ಗುಣವಾದದ್ದು! ಈಗ ಹೊಸ ಮನುಷ್ಯನಂತೆ ಆಗಿದೇನೆ...."

ಇಂದಿರ ಮುಖವನ್ನು ಬೇರೆ ಕಡೆ ತಿರುಗಿಸಿಕೊಂಡು ಕೇಳುತ್ತಿದ್ದವಳು, ಆ ಮಾತನ್ನು ಮುಂದುವರಿಸಲು ಇಷ್ಟವಿಲ್ಲದೆ—

"ಏನಾದರು ಓದಲೇ......?" ಎಂದು ಕೇಳಿದಳು.

ವಿಶ್ವನಾಥನ ಉತ್ಸಾಹಕ್ಕೆ ತಣ್ಣೀರು ಎರಚಿದಂತಾಯಿತು. ಅವನು ಈ ಮಾತುಗಳನ್ನು ಅವಳಿಗೆ ಹೇಳಬೇಕೆಂದು ಬೆಳಗಿನಿಂದಲೂ ಅಣಿ

ಮಾಡಿಕೊಂಡಿದ್ದ. ಅವಳಿಗೆ ಆ ಮಾತು ಇಷ್ಟವಿಲ್ಲವೆಂದು ತೋರಿ ಖಿನ್ನನಾದ. ಸ್ವಲ್ಪ ಹೊತ್ತಿನ ಮೇಲೆ—

"ಓದಬಹುದು....!"

ಎಂದು ನಿದಾನವಾಗಿ ಹೇಳಿದ.

ಇಂದಿರ ಮೇಜಿನ ಮೇಲಿದ್ದ ಪುಸ್ತಕವನ್ನು ತೆಗೆದುಕೊಂಡು ಹಿಂದಿನ ದಿನ ನಿಲ್ಲಿಸಿ ಗುರುತು ಮಾಡಿಟ್ಟ ಜಾಗದಿಂದ ಓದಲು ಮೊದಲು ಮಾಡಿದಳು.

"ನೀನು ಓದೋದು ಕೇಳಿಸೋದೇ ಇಲ್ಲ! ಕುರ್ಚಿ ಇನ್ನು ಸ್ವಲ್ಪ ಈ ಕಡೆ ಎಳೆದುಕೊಂಡರೆ ಒಳ್ಳೇದು....."

ಇಂದಿರ ಎದ್ದು ಕುರ್ಚಿಯನ್ನು ಜರುಗಿಸುತ್ತಿದ್ದಳು. ವಿಶ್ವನಾಥ ಕೇಳಿದ—

"ಇಂದಿರ—ನೀನು.... ಈ ದಿನವೂ ಹಾಡುವಿಯೇನು.....?"

"ಇಲ್ಲ.... ಹ್ಞೂ....!"

"ಎರಡೂನೋ....!"

"......................."

"ಇಂದಿರ—ನಿನ್ನೆ ರಾತ್ರೆ ಯಾರೋ ಜೋಗುಳ ಹಾಡುತ್ತಿದ್ದರು. ನಾನು ಹಾಸಿಗೆ ಮೇಲೆ ಮಲಗಿದ್ದೆ. ಕಿಟಕಿಯಿಂದ ತಿಂಗಳ ಬೆಳಕು ಹರಿದು ಬರುತ್ತಿತ್ತು. ಕೇಳುವುದಕ್ಕೆ ಏನು ಹಿತವಾಗಿತ್ತು ಅಂತೀ! ಮಗುವಿಗೆ ನಿದ್ರೆ ಬಂತೋ ಇಲ್ಲವೋ.....? ನನಗೇನೋ ನಿದ್ರೆ ಬಂದದ್ದೇ ತಿಳಿಯಲಿಲ್ಲ!"

"ಮುಂದಕ್ಕೆ.... ಓದಲೇ....?"

"ಹುಂ—ಓದು. ನಿನಗೆ ಬೇಗ ಮುಗಿಸಿಬಿಟ್ಟು ಹೋಗೋಣವೆಂದು ಇಷ್ಟವಿರುವಂತಿದೆ.....!"

ಇಂದಿರನಿಗೆ ಹೇಗೋ ಆಯಿತು. ಪುಸ್ತಕ ಎಸೆದು ಹೊರಟು ಹೋಗೋಣವೆನಿಸಿತು. ಮುಖ ಸಿಟ್ಟಿನಿಂದ ಕೆಂಪೇರಿತು. ಆದರೆ ಎದ್ದು ಹೋಗಲಿಲ್ಲ. ಸುಮ್ಮನೆ ತಲೆ ತಗ್ಗಿಸಿಕೊಂಡು ಓದುತ್ತಿದ್ದಳು. ವಿಶ್ವನಾಥ

ಅವಳ ಗಲ್ಲಳದ ಮೇಲೆ ಬಿಸಿಲುಕೋಲು ಸುಳಿದಾಡುವುದನ್ನು ನೋಡು ತ್ತಿದ್ದ.

ಬಾಗಿಲಲ್ಲಿ ನಿಂಗ ಜೋರಾಗಿ ಕೆಮ್ಮಿದ. ಬೇರೆ ಸಮಯವಾಗಿದ್ದರೆ ಇಂದಿರ ಆ ಕಡೆ ತಿರುಗಿ ನೋಡುತ್ತಿದ್ದಳು. ಆಗ ಏಕೋ ಅವಳಿಗೆ ತಲೆ ಯೆತ್ತಲು ಮನಸ್ಸಾಗಲಿಲ್ಲ. ವಿಶ್ವನಾಥನೂ ತನ್ನ ನೋಟವನ್ನು ಅದು ಇದ್ದ ಜಾಗದಿಂದ ಕದಲಿಸಲು ಇಷ್ಟವುಳ್ಳವನಾಗಿರಲಿಲ್ಲ.

"ನಮಸ್ಕಾರ ಕ್ಯಾಪ್ಟನ್! ಹೇಗಿದ್ದೀರಿ......?"

ಇಂದಿರ ಬೆಚ್ಚಿ ತಿರುಗಿ ನೋಡಿದಳು. ಮೊದಲೇ ರಂಗೇರಿದ್ದ ಮುಖ ಮತ್ತಷ್ಟು ಕೆಂಪಾಯಿತು. ಪುಸ್ತಕ ಕೈಯಿಂದ ಜಾರಿ ನೆಲಕ್ಕೆ ಬಿತ್ತು. ತಟಕ್ಕನೆ ಎದ್ದು ದೂರ ಸರಿದಳು. ಮೂರ್ತಿ ಒಂದು ನಿಮಿಷ ಬಾಗಿಲ ಬಳಿ ನಿಂತಿದ್ದು—ಅವಳನ್ನು ನೋಡದವನಂತೆ ನೆಟ್ಟಗೆ ವಿಶ್ವ ನಾಥನ ಬಳಿಗೆ ಹೋದ. ವಿಶ್ವನಾಥ ಬೆರಗಾಗಿ ಇಬ್ಬರ ಕಡೆಗೂ ನೋಡು ತ್ತಿದ್ದ. ಇಂದಿರ ಇದ್ದುದರಲ್ಲಿ ಬೇಗ ಚೇತರಿಸಿಕೊಂಡು—ಕುರ್ಚಿಯನ್ನು ಮುಂದೆ ನೂಕಿ,

"ಕುಳಿತುಕೊಳ್ಳಿ ಡಾಕ್ಟರ್—ರಾಮಣ್ಣನನ್ನು ಕರೆಯುತ್ತೇನೆ!"

ಎಂದು ಹೇಳಿ ಸರ ಸರನೆ ಹೊರಟು ಹೋದಳು.

ವಿಶ್ವನಾಥ ಆಶ್ಚರ್ಯದಿಂದ ಅವಳು ಹೋದ ಕಡೆಯೇ ನೋಡು ತ್ತಿದ್ದ. ಮೂರ್ತಿಯ ಮುಖದಲ್ಲಿ ಮಂದಹಾಸ ಕಾಣಿಸಿತು. ರಾಮಚಂದ್ರ ಮನೆಯಲ್ಲಿಲ್ಲವೆಂದು ಇಬ್ಬರಿಗೂ ಗೊತ್ತಿತ್ತು!

"ಕ್ಯಾಪ್ಟನ್........ನಾನು ಬಂದ ಹೊತ್ತು ಸರಿಯಾಗಿಲ್ಲ ಕ್ಷಮಿಸಿ!"

"ಓ—ಪರವಾಗಿಲ್ಲ. ಆದಕ್ಕೇನಂತೆ....?"

"ನಾನು ಸ್ನೇಹಿತನ ಮನೆಗೆ ಟೀ ಗೆ ಹೋಗಬೇಕಿತ್ತು. ಬರುವುದು ಹೊತ್ತಾಗಬಹುದೆಂದು ಈಗಲೆ ಬಂದೆ...."

ನಿಜವಾಗಿಯೂ ಮೂರ್ತಿ ಅಲ್ಲಿಗೆ ಹೊರಟಿದ್ದವನು ಹಾಗೇ ಬಂದಿದ್ದ. ಆದಕ್ಕೆ ತಕ್ಕಂತೆ ಬಟ್ಟೆ ಹಾಕಿಕೊಂಡಿದ್ದ. ನಿತ್ಯದಂತೆ ಬಿಳಿಯ

ನಿಲುವಂಗಿಯನ್ನು ತೊಟ್ಟಿರಲಿಲ್ಲ. ವಿಶ್ವನಾಥ ಅವನ ಕಡೆಯೇ ನೋಡುತ್ತ ಕೈ ನೀಡಿದ.

"ಈಗ ಎದೆನೋವು ಹೇಗಿದೆ.....?"

"ಸ್ವಲ್ಪ ವಾಸಿ. ಕೆಮ್ಮು ಮಾತ್ರ ನಿಂತಿಲ್ಲ."

"ನೀವು ಆ ದಿನ ಅಷ್ಟು ಹೊತ್ತು ತಂಡಿಯಲ್ಲಿ ಹೊರಗೆ ಕುಳಿತದ್ದು ತಡಿಯಲಿಲ್ಲ. ಈಗತಾನೆ ಎಲ್ಲ ಒಂದು ಹತೋಟಿಗೆ ಬರುತ್ತಾ ಇದೆ. ಈಗ ಬಹಳ ಎಚ್ಚರಿಕೆಯಿಂದಿರಬೇಕು. ಸಾಯಂಕಾಲ ಹೊರಗೆ ಹೋದರೂ ಅಷ್ಟೆ...........ಬಿಸಿಲಿರುವಾಗಲೇ ಬಂದು ಬಿಡಿ. ಇನ್ನು ಸ್ವಲ್ಪ ದಿನ ಅಷ್ಟೆ! ಆಮೇಲೆ ಬೇಕಾದ ಹಾಗೆ ಮಾಡಬಹುದು. ನಾನು ಬರಲೇ....?

"ನಮಸ್ಕಾರ........"

"ನಮಸ್ಕಾರ........!"

## ೧೭

ಇಂದಿರ ತನ್ನ ಕೊಠಡಿಯಲ್ಲಿ ಒಬ್ಬಳೇ ಕುಳಿತಿದ್ದಳು. ಹೊರಗೆ ಬೆಳಕಿದ್ದರೂ ಕೂಡ-ಕಿಟಕಿಯ ತೆರೆಗಳಿಂದ ಒಳಗೆ ಕತ್ತಲಾಗೇ ಇತ್ತು. ಇಂದಿರ ಎದ್ದು ತೆರೆಯನ್ನು ಓರೆಮಾಡಿ ಕಿಟಕಿಯಿಂದ ಹೊರಗೆ ನೋಡುತ್ತಿದ್ದಳು. ಮೀನಾಕ್ಷಿ ಬಂದು ಹತ್ತಿರ ನಿಂತುಕೊಂಡಳು. ಆದರೂ ಅವಳು ತಿರುಗಲಿಲ್ಲ. ಮೀನಾಕ್ಷಿ ಅವಳ ಭುಜವನ್ನು ಹಿಡಿದು ಅಲ್ಲಾಡಿಸಿ-

"ಇಂದಿರ........"

ಎಂದು ಕೂಗಿದಳು.

ಇಂದಿರ ನಿಧಾನವಾಗಿ ನೀರುತುಂಬಿದ ಕಣ್ಣುಗಳನ್ನು ಅವಳ ಕಡೆ ತಿರುಗಿಸಿದಳು. ಅದನ್ನು ನೋಡಿ ಮೀನಾಕ್ಷಿಯ ಹೃದಯ ಕುಸಿದು ಹೋಯಿತು. ಅವಳನ್ನು ಹತ್ತಿರ ಕೂರಿಸಿಕೊಂಡು ಹೇಳಿದಳು.

"ಇಂದಿರ-ಏನಾಗಿದೆ ಹೇಳಬಾರದೆ? ನಿನ್ನೆಯಿಂದಲೂ ಶಾಲೆಗೇ ಹೋಗಿರುವಂತಿಲ್ಲ.....!"

"ನಾನೇನು ಮಾಡಲಿ......? ರಾಮಣ್ಣ ನಿನಗೆ ಏನೂ ತಿಳಿಸ ಕೂಡ ದೆಂದು ಕಟ್ಟು ಮಾಡಿದಾನೆ. ಈಗ ನೋಡಿದರೆ ನಿನಗೂ ಗೊತ್ತಿರು ವಂತಿದೆ. ಆದರೂ ಕೇಳುವೆಯಲ್ಲ ಮೀನ! ನೋಡಿಲ್ಲವೇ...... ಮೂರು ದಿನಗಳಿಂದಲೂ ರಜ ತೆಗೆದುಕೊಂಡು ನನಗೆ ಕಾವಲಾಗಿ ಕುಳಿತಿರೋದು? ಬೀಗ ಹಾಕಿಲ್ಲ ಅಷ್ಟೆ! ಎಲ್ಲಿಗೂ ಹೋಗಕೂಡದಂತೆ. ನಿತ್ಯವೂ ಸಾಯಂಕಾಲ ಕ್ಯಾಪ್ಟನ್‌ರವರ ಜೊತೆಯಲ್ಲಿ ತಿರುಗಾಡಲು ಹೋಗ ಬೇಕಂತೆ. ಹೊರಗೆ ಹೋಗಿದ್ದು ಈಗತಾನೇ ಅಲ್ಲಿಂದ ಬಂದೆವು. ನನ್ನನ್ನು ಇಲ್ಲಿ ಬಿಟ್ಟು ರಾಮಣ್ಣ ಅವರಿಗೆ ವೈದ್ಯಶಾಲೆಯನ್ನು ತೋರಿಸಲು ಕರೆದು ಕೊಂಡು ಹೋದ. ನಾನೂ ಅವರ ಜೊತೆ ಹೋಗಲಿಲ್ಲವೆಂದು ಅವನಿಗೆ ಸಿಟ್ಟು!"

"ಇಂದಿರ—ಮೂರ್ತಿ ಎಲ್ಲಿ? ಬಂದಿದ್ದೇ ಕಾಣುವುದಿಲ್ಲವಲ್ಲ...... ಕ್ಯಾಪ್ಟನ್‌ರವರನ್ನು ನೋಡುವುದಕ್ಕೂ ಬರುವುದಿಲ್ಲವೆ......?"

"ಇನ್ನೇಕೆ ಬರಬೇಕು......ಅವರು ಆರೋಗ್ಯವಾಗಿದಾರಲ್ಲ. ಬಂದು ಎಂಟು ದಿವಸವಾಯಿತು!"

ಮೀನಾಕ್ಷಿ ಮನಸ್ಸಿನಲ್ಲಿ—

"ಅದಕ್ಕೇ ಕಿಟಕಿಯಲ್ಲಿ ನೋಡುತ್ತಿರುವುದು!" ಎಂದುಕೊಂಡು—

"ಇಂದಿರ—ನೀನೇಕೆ ಈ ಮದುವೆಗೆ ಒಪ್ಪಿಕೊಂಡೆ?" ಎಂದು ಕೇಳಿದಳು.

"ಮೀನಾ—ತಂದೆಯ ನೆನಪೇ ಇಲ್ಲ—ತಾಯಿಯೂ ಇಲ್ಲ. ತಾಯಿ ತಂದೆಗಳಂತಿರುವ ನೀವೇ ಈ ರೀತಿ ಮಾಡಲು ಯೋಚಿಸಿರುವಾಗ ನಾನೇನು ಮಾಡುವಂತಿದೇನೆ....?"

"ನನ್ನನ್ನೂ ಅವರ ಜೊತೆಗೆ ಸೇರಿಸುವೆಯಾ....?"

"ಇಲ್ಲ........ಆದರೇನು? ನನಗೂ ಒಂದೂ ತೋರದಾಗಿದೆ. ಮೀನ....ನೀನೂ ಇದಕ್ಕೆ ಒಪ್ಪಿರುವೆಯಾ......?"

ಇಂದಿರ ಮೀನಾಕ್ಷಿಯು ತೊಡೆಯಮೇಲೆ ತಲೆ ಇಟ್ಟು ಹುಡುಗಿಯಂತೆ ಅತ್ತಳು. ಮೀನಾಕ್ಷಿಯ ಕಣ್ಣುಗಳಿಂದಲೂ ನೀರು ಉದುರಿ ಇಂದಿರನ ಕೂದಲು ರಾಶಿಯಲ್ಲಿ ಸೇರಿಹೋಯಿತು.

"ನಾನು ಎಂದಾದರೂ ಒಪ್ಪುವೆನೆ? ಅದು ನಿನಗೆ ತಿಳಿಯದೆ......?"

"ನನಗೆ ಗೊತ್ತು. ಆದರೆ ನೀನು ತಾನೆ ಏನು ಮಾಡುವೆ......?"

"ಏನು ಮಾಡಲು ಸಾಧ್ಯವೋ ನೋಡೋಣ!"

"ಅದು ಬರಿಯ ಭ್ರಮೆ! ರಾಮಣ್ಣ ಒಂದೇ ಹಟ ಹಿಡಿದಿದಾನೆ. ಅದಕ್ಕೆ ಧರ್ಮ ಕರ್ತವ್ಯ ಇವುಗಳ ಹೊದಿಕೆ ಬೇರೆ......!"

"ಹಾಗೇ ಆಗಲೇಳು. ನಾವೂ ಧರ್ಮವನ್ನೇ ಮುಂದು ಮಾಡೋಣ. ಇದುವರೆಗೂ ಸುಮ್ಮನಿದ್ದು ಈಗ ಈ ರೀತಿ ನಿರ್ಬಂಧ ಮಾಡುವುದು ಧರ್ಮವಲ್ಲವೆಂದು ಅವರಿಗೆ ತಿಳಿಯುವಂತೆ ಮಾಡಬೇಕು"

"ಈಗ ಅದು ನಡೆಯುವಂತಿಲ್ಲ......"

"ಇಂದಿರ—ನೀನು ಅಷ್ಟು ಸುಲಭದಲ್ಲಿ ಒಪ್ಪಬಾರದಾಗಿತ್ತು. ಅವರಿಗೆ ಅಷ್ಟು ಇಷ್ಟವಿದ್ದಿದ್ದರೆ ನಿನಗೆ ಆಗಲೇ ಮದುವೆ ಮಾಡಬೇಕಾಗಿತ್ತು. ಇದುವರೆಗೂ ಸ್ವತಂತ್ರವಾಗಿರಲು ಅವಕಾಶಕೊಟ್ಟು ಬೆಳಸಿ ಈಗ ಈ ರೀತಿ ಮಾಡುವುದು ಸರಿಯಲ್ಲ. ನೀನೇ ಇನ್ನೊಂದು ಸಲ ಹೇಳಿ ನೋಡು......"

"ಈಗ ಕೈಮೀರಿ ಹೋಯಿತು. ಆ ದಿನ ಅಣ್ಣ ಹೇಳಿದಾಗಲೇ ನಾನು ಖಂಡಿತ ಆಗುವುದಿಲ್ಲವೆಂದು ಹಟಮಾಡಬೇಕಾಗಿತ್ತು. ಆಗ ನನಗೆ ಏನೂ ತಿಳಿಯಲಿಲ್ಲ. ನಿನ್ನ ಬಳಿ ಬರುವುದಕ್ಕೂ ಅವಕಾಶ ಕೊಡಲಿಲ್ಲ. ಅದಲ್ಲದೆ......ಆಗ ನನ್ನಿಂದ ಹಾಗೆ ಇರುವುದು ಸಾಧ್ಯವೆಂದಿದ್ದೆ. ಈಗ ದಿನದಿನಕ್ಕೂ ರಾಮಣ್ಣ ತಾನು ಹಿಂದೆ ಆಡಿದ ಮಾತನ್ನು ಹೊಸದು ಮಾಡುತ್ತ—ದಿನದಿನಕ್ಕೆ ಅವರ ಮನಸ್ಸಿನ ಭರವಸೆಯನ್ನು ಬೆಳಸುತ್ತ ಬಂದಿದಾನೆ. ಸಂದರ್ಭ ಹಿಂದಿರುಗದಷ್ಟು ಮುಂದೆ ಹೊರಟುಹೋಗಿದೆ...... ಮೀನ!"

"ಇಂದಿರ–ಹಾಗಾದರೆ ನಾನು ಒಂದು ಮಾತು ಹೇಳುತ್ತೇನೆ. ಕೇಳುತ್ತೀಯಾ ?"

"ಅದರಿಂದ ರಾಮಣ್ಣನಿಗೆ ದುಃಖವಾಗದಂತಿದ್ದರೆ ಆಗಬಹುದು !"

"ಅದು ಹೇಗೆ ಸಾಧ್ಯ ಇಂದಿರ......? ನೋಡು....ಅವರಂತೆ ನನಗೂ ಕನ್ಯಾದಾನಮಾಡಲು ಹಕ್ಕಿದೆ. ನಾನೂ ನಿನ್ನನ್ನು ತಾಯಿಯಂತೆ ಬೆಳಸಿದೇನೆ. ಈ ರಾತ್ರಿಯೇ ನಿನ್ನನ್ನು ಮೂರ್ತಿಗೆ ಧಾರೆ ಎರೆದುಬಿಡುತ್ತೇನೆ. ಈಗಿಂದೀಗಲೇ ಹೊರಟು ಊರಿಗೆ ಹೋಗಿ ಶಾಸ್ತ್ರೋಕ್ತವಾಗಿ ಮದುವೆ ಮಾಡಿಕೊಳ್ಳಿ............ಅಥವಾ ಮದುವೆಯನ್ನು 'ರಿಜಿಸ್ಟರ್'ಮಾಡಿಸಿಬಿಡಿ. ಆಮೇಲೆ ದೇವರು ಮಾಡಿಸಿದಂತಾಗಲಿ. ಅದಕ್ಕೆಲ್ಲಾ ನಾನು ಹೊಣೆಯಾಗಿದೇನೆ !"

ಇಂದಿರ ಕಣ್ಣೊರಸಿಕೊಂಡು ತಲೆಯೆತ್ತಿ ಮೀನಾಕ್ಷಿಯ ಮುಖವನ್ನು ನೋಡಿದಳು.

ಆ ಗಳಿಗೆಯಲ್ಲಿ ಕೊಠಡಿಯಲ್ಲಿ ಸಿಡಿಲು ಬಡಿದಿದ್ದರೂ ಅವಳಿಗೆ ಅಷ್ಟು ಆಶ್ಚರ್ಯವಾಗುತ್ತಿರಲಿಲ್ಲ.

"ಮೀನಾಕ್ಷಿಯು ಆರೋಗ್ಯವಾಗಿದಾಳೆ ತಾನೇ............ಇಲ್ಲ ಏನಾದರೂ....."

ಎಂದುಕೊಂಡಳು.

ತನ್ನ ಮಾತಿನ ಪರಿಣಾಮವನ್ನು ನೋಡಲು ಮೀನಾಕ್ಷಿ ಇಂದಿರನ ಮುಖವನ್ನೇ ದಿಟ್ಟಿಸುತ್ತಿದ್ದಳು. ಸ್ವಲ್ಪ ಹೊತ್ತಿನಮೇಲೆ ಇಂದಿರ—

"ಮೀನ—ನನ್ನನ್ನು ಏನೆಂದು ತಿಳಿದೆ....?"

ಎಂದು ಕೇಳಿದಳು.

"ಯಾಕೆ..........ಮಗು.........."

"ನೀನು ಹೀಗೆ ಮಾಡಿದಳೆಂದು ರಾಮಣ್ಣನಿಗೆ ತಿಳಿದರೆ,..... ಮುಂದಿನ ಪರಿಣಾಮ ಏನಾಗುವುದೆಂದು ಗೊತ್ತಿದೆಯೆ ?"

"ಗೊತ್ತಿದೆ....!"

"ಮೀನಾ—ನೀನು ನನಗಾಗಿ ಏನು ಬೇಕಾದರೂ ಮಾಡಲು ಸಿದ್ಧವಾಗಿದೀಯೆ. ಅದು ನನಗೆ ಗೊತ್ತು. ಆದರೆ ನೀನೇ ಯೋಚಿಸಿ

ನೋಡು.... ಅದು ಸರಿಯೆ ? ರಾಮಣ್ಣ ಈ ಅವಮಾನವನ್ನು—ತನ್ನ ಮಾತು ಹುಸಿಯಾದುದನ್ನು ಸುಮ್ಮನೆ ಸಹಿಸುವನೆ....? ಅದರ ಪ್ರತೀಕಾರ ಮೂರ್ತಿಗೆ ತಗುಲುವುದಿಲ್ಲವೇ ?—ಇಷ್ಟಕ್ಕೂ ಮೂರ್ತಿ ಇದಕ್ಕೆಲ್ಲಾ ಒಪ್ಪುವರೆ....? ಅವರನ್ನೇ ನಂಬಿರುವ ರೋಗಿಗಳ ಗತಿ ಏನು.....?"

ಇಂದಿರ—ಮೂರ್ತಿ ಆ ದಿನ ತನ್ನ ಕಡೆಗೆ ಬೀರಿದ ನೋಟವನ್ನು ನೆನೆದು ನಿದಾನವಾಗಿ ಹೇಳಿದಳು.

"ನೀನು ವಿಶ್ವನಾಥನನ್ನು ಮದುವೆಯಾಗಿ ಹೊರಟುಹೋದ ಮೇಲೂ ಮೂರ್ತಿ ಇಲ್ಲಿ ವೈದ್ಯಶಾಲೆಯನ್ನಿಟ್ಟುಕೊಂಡಿರುವನೆಂದು ತಿಳಿದಿರುವಿಯೇನು.....?"

"ಅದು ಬೇರೆ ವಿಚಾರ. ಇಲ್ಲಿಲ್ಲದಿದ್ದರೆ ಮತ್ತೊಂದು ಕಡೆ. ಅವರಂತಹವರು ಎಲ್ಲಿದ್ದರೆ ತಾನೇ ಬೇಡ ? ಆದರೆ ಅವರ ನಿರ್ಮಲವಾದ ಹೆಸರಿಗೆ ಕಲಂಕ ಹತ್ತಿದರೆ ತೀರಿತು ! ಅವರ ಅಭಿವೃದ್ಧಿ ಆಗುವುದಿಲ್ಲ. ಜನರು ಅವರನ್ನು ಮೊದಲಿನಂತೆ ನಂಬುವುದಿಲ್ಲ. ವೈದ್ಯನಾದವನಲ್ಲಿ ಎಲ್ಲದಕ್ಕಿಂತಲೂ ಮೊದಲು ಇರಬೇಕಾದುದು ಅದು. ಮೀನಾ—ಮುಂದೆ ಮೂರ್ತಿ ತನ್ನ ಭವಿಷ್ಯವನ್ನು ಹಾಳು ಮಾಡಿದವಳೆಂದು ನನ್ನನ್ನು ದ್ವೇಷಿಸದಿರುವರೆ....?"

"ಹುಚ್ಚು ಹುಡುಗಿ ! ಅದು ನಿನಗೇನು ಗೊತ್ತು? ಮೂರ್ತಿ ಹೇಗಾಗಿ ಹೋಗಿದಾನೆ ? ಒಂದು ಸಲ ಗಮನಿಸಿ ನೋಡು......ಈ ಸ್ಥಿತಿ ಯಲ್ಲಿ ಅವನ ಭವಿಷ್ಯವೇನೂ ಸುಗಮವಾಗಿಲ್ಲ!"

"ಈಗ ಹೊಸದು....ಮುಂದೆ ಸರಿಹೋದೀತು....! ಹಾಗೂ ಅವರ ಬಾಳು ಸುಗಮವಾಗದಿದ್ದರೆ ಅದಕ್ಕೆ ನಾನೇನು ಮಾಡಬಹುದು....?"

"ನೀನು ಮಾಡಬಹುದಾದುದನ್ನು ನಾನು ಹೇಳಿದೆನಲ್ಲ....!"

"ಬೇಡ—ಮೀನ. ನನ್ನನ್ನು ಆಸೆಗೆ ಸಿಕ್ಕಿಸಬೇಡ. ನಾನು ಅದನ್ನಾದರೂ ಸಹಿಸಬಲ್ಲೆ. ಆದರೆ........ರಾಮಣ್ಣ.... ಯಾವ ತಂದೆಯೂ ತನ್ನ ಮಗಳನ್ನು ಅಷ್ಟು ಪ್ರೀತಿಯಿಂದ ಕಾಣಲಾರ.... ಅಂಥವನಿಗೆ ದುಃಖವುಂಟು ಮಾಡಿ, ನಿಮ್ಮಿಬ್ಬರ ನಡುವೆ ಮನಸ್ತಾಪವನ್ನು

ತಂದಿಟ್ಟು.........ಅದರ ತಳಹದಿಯ ಮೇಲೆ ನನ್ನ ಭವಿಷ್ಯವನ್ನು ಕಟ್ಟಲೆ! ಅದು ಮಾತ್ರ ಸಾಧ್ಯವಿಲ್ಲ. ಒಳಗೇ ಕೊರಗಿ ಪ್ರಾಣವನ್ನಾದರೂ ಬಿಡುವೆನೇ ಹೊರತು ಹೀಗೆ ಮಾತ್ರ ಮಾಡಲಾರೆ. ನಿನ್ನ ಅನಂತವಾದ ಪ್ರೀತಿಗೆ ಇದೇನೇ ನಾನು ತೋರುವ ಪ್ರತಿಫಲ....? ನಾನೂ ನಿನ್ನ ಬಳಿಯೇ ತಯಾರಾಗಿದೇನೆ....ನನಗೂ ತ್ಯಾಗಮಾಡಲು ಬರುತ್ತೆ ಮೀನಾ.....!"

ಮೀನಾಕ್ಷಿ ಸುಮ್ಮನಿದ್ದಳು. ಅವಳ ಕಣ್ಣಿನ ತುದಿಯಲ್ಲಿ ನೀರು ಆರದಿದ್ದರೂ, ಮುಖದಮೇಲೆ ಮೆಚ್ಚುಗೆಯ ಭಾವವು ತೋರುತ್ತಿತ್ತು. ರಾಮಚಂದ್ರ ಹೊರಗಿನಿಂದ ಬಂದವನು ಮೆಟ್ಟಲಿನ ಬಳಿ ನಿಂತು ಕೊಂಡು—

"ಇಂದಿರ....ಬಾ...."

ಎಂದು ಕರೆದ.

ಇಂದಿರ ಮೀನಾಕ್ಷಿಯ ಕಡೆ ನೋಡಿ ಸ್ವಲ್ಪ ನಗುತ್ತ ಹೊರಟು ಹೋದಳು. ಬಾಯಲ್ಲಿ ಆಡದಿದ್ದರೂ ತನ್ನ ಮಾತಿನಿಂದ ಅವಳಿಗೆ ಸಮಾಧಾನವಾಗಿದೆ ಎಂಬುದು ಗೊತ್ತಾಗುತಿತ್ತು.

ರಾಮಚಂದ್ರ ತಂಗಿಯನ್ನು ಕರೆದುಕೊಂಡು ಹೊರಗೆ ಬಂದ. ಮನೆಯ ಮುಂಭಾಗದಲ್ಲಿ ಹಾಕಿದ್ದ. ಕುರ್ಚಿಯ ಮೇಲೆ ಕುಳಿತು ಕೊಂಡು ವಿಶ್ವನಾಥ ನೀಲಿಯಾಗಸವನ್ನು ದಿಟ್ಟಿಸುತ್ತಿದ್ದ. ಅಲ್ಲೊಂದು ಇಲ್ಲೊಂದು ಬಿಳಿಯ ತುಂಡು ಮೋಡಗಳು ನೆಲೆಯಿಲ್ಲದೆ ಅಲೆಯು ತ್ತಿದ್ದವು. ವಿಶ್ವನಾಥ ಮನಸ್ಸಿನಲ್ಲಿ—"ಅವೂ ನನ್ನಂತೆ!" ಎಂದುಕೊಂಡ.

ಇಂದು ಮಣಿಯ ನೆನಪು ಬೇಡವೆಂದರೂ ಅವನನ್ನು ಬಿಡದೆ ಕಾಡುತ್ತಿತ್ತು. ಹಿಂದೆ ಎಂದೂ ಕಾಣದಿದ್ದ ಯಾತನೆ ತೀಕ್ಷ್ಣವಾಗಿ ಕತ್ತಿಯ ಅಲುಗಿನಂತೆ ಎದೆಯನ್ನು ಇರಿಯುತ್ತಿತ್ತು. ಆ ಅನುಭವ ಮನಸ್ಸಿಗೆ ಆದಾಗಲೆಲ್ಲ ಮಣಿ ಅಂದು ಕೊನೆಯ ಬಾರಿ ಎಸೆದ ನೋಟ ನೆನಪಿಗೆ ಬರುತ್ತಿತ್ತು....!

"ಅದೆಲ್ಲಾ ಕಳೆದುಹೋಯಿತು. ಈಗೇಕೆ ಅದರ ಯೋಚನೆ.....!"

ಎಂದು ಅದನ್ನು ಹಿಂದೆ ತಳ್ಳಲು ಪ್ರಯತ್ನ ಪಟ್ಟರೂ ಗತಕಾಲದ ಒಂದೊಂದು ನೆನಪೂ ಅವನನ್ನು ಮುತ್ತುತ್ತಿದ್ದುವು. ಅವನಿಗೆ ಹೊತ್ತು ಜಾರಿದುದೇ ತಿಳಿಯಲಿಲ್ಲ. ಬರಬರುತ್ತ ಆಗಸವು ಕಪ್ಪಾಗಿ ಅಲ್ಲೊಂದು ಇಲ್ಲೊಂದು ತಾರೆಗಳು ಕುತೂಹಲದಿಂದ ಇಣಿಕಿ ನೋಡಿದುವು. ವಿಶ್ವನಾಥನ ನೋಟ ಅದರಾಚೆ ಏನೋ ಹುಡುಕುವಂತಿತ್ತು. ಅವನು ಹೀಗೆ ತನ್ನ ಯೋಚನೆಯಲ್ಲಿ ಮೈಮರೆತಿರುವಾಗ—ರಾಮಚಂದ್ರ ತಂಗಿಯೊಡನೆ ಬಂದು ಅವನ ಮುಂದೆ ನಿಂತು—

"ಏನು ಕ್ಯಾಪ್ಟನ್—ನಕ್ಷತ್ರ ಎಣಿಸುತೀರೋ ?"

ಎಂದು ನಗೆಯಾಡಿದ.

ವಿಶ್ವನಾಥ ತಲೆ ಎತ್ತಿ ನೋಡಿದ.

ಎದುರಿಗೆ ಜೀವದ ಗೆಳೆಯ ರಾಮಚಂದ್ರ- ಅವನ ಪಕ್ಕದಲ್ಲಿ ಬಾಳಿನ ಆಸೆಯೆಲ್ಲ ರೂಪುಗೊಂಡಂತೆ ಇಂದಿರ ನಿಂತಿದ್ದಳು ! ವಿಶ್ವನಾಥನ ಮುಖದಲ್ಲಿ ತಾನಾಗಿ ನಗು ಕಾಣಿಸಿತು. ಕಣ್ಣುಗಳಲ್ಲಿದ್ದ ನಿರಾಶೆಯ ನೋಟವನ್ನು ಚದುರಿಸಿ, ತುಟಿಗಳಲ್ಲಿ ಹೂವಾಗಿ ಅರಳಿತು.

ರಾಮಚಂದ್ರ ಇಂದಿರ ಇಬ್ಬರೂ ಅಲ್ಲಿದ್ದ ಕುರ್ಚಿಗಳಲ್ಲಿ ಕುಳಿತರು. ಸ್ವಲ್ಪ ಹೊತ್ತು ಆ ಮಾತು ಈ ಮಾತು ಆಡಿದ ಮೇಲೆ ಜೇಬಿನಿಂದ ಒಂದು ಲಕ್ಕೋಟೆಯನ್ನು ಹೊರಗೆ ತೆಗೆಯುತ್ತ ರಾಮಚಂದ್ರ ಹೇಳಿದ—

"ಇಂದಿರ—ರಂಗನೂರಿನಿಂದ ಕಾಗದ ಬಂದಿದೆ..........ವಿಶ್ವನಾಥ—ನಿನಗೆ ನಮ್ಮ ಮಾವನವರ ಪರಿಚಯವಿರಬಹುದು......!"

"ಇಲ್ಲದೆ ಏನು....? ಚೆನ್ನಾಗಿ ಗೊತ್ತು!"

"ಅವರು ಬರುವುದಾಗಿ ಬರೆದಿದಾರೆ."

"ಎಂದು ಬರುತ್ತಾರೆ....?"

"ನಾಡಿದ್ದು ಸಾಯಂಕಾಲ ಬರಬಹುದು."

"ಅಮ್ಮಯ್ಯನೂ ಬರುವರೆ ?"

ಇಂದಿರ ಕೇಳಿದಳು.

"ಹೂಂ.... ಇಬ್ಬರೂ ಬರುತ್ತಾರಂತೆ.''

ಇಂದಿರನಿಗೆ ಶಾಸ್ತ್ರಿಗಳಲ್ಲಿ ತುಂಬ ಗೌರವ ಇತ್ತು. ಅಮ್ಮಯ್ಯನಲ್ಲಿ ಅಕ್ಕನಂತೆ ವಿಶ್ವಾಸವಿತ್ತು. ಅವರೆಲ್ಲ ಬಂದು ಅವರೊಡನೆ ಓಡಾಡಿ ಕೊಂಡಿರುವ ದಿನಗಳನ್ನು ಅವಳು ಬಹಳ ಆಸೆಯಿಂದ ಇದಿರುನೋಡು ತ್ತಿದ್ದಳು. ಆದರೆ ಈ ದಿನ ಅವರು ಬರಲಿರುವ ಸುದ್ದಿ ಕೇಳಿದಾಗ ಅವಳಿಗೆ ಸಂತೋಷವಾಗಲಿಲ್ಲ. ಮನಸ್ಸು ಬರಿದಾಗಿ ತೋರಿ ಅಲ್ಲಿ ಇನ್ನು ಯಾವ ಭಾವನೆಗೂ ಎಡೆಯಿಲ್ಲದಂತಾಗಿತ್ತು. ನಾನು ಈ ಬಿಕ್ಕಟ್ಟಿನಲ್ಲಿ ಸಿಲುಕಿ ಕೊಳಲುತ್ತಿರುವಾಗ ಅವರು ಬರದಿದ್ದರೇ ಚೆನ್ನಾಗಿತ್ತೇನೋ? ಎನಿಸಿತು. ಯಾವ ಯೋಚನೆಯೂ, ಆತಂಕವೂ ಇಲ್ಲದೆ ಸುಖವಾಗಿ ಅವರೊಡನೆ ಕೂಡಿ ರಂಗನೂರಿನಲ್ಲಿ ಕಳೆದ ದಿನಗಳು ನೆನಪಿನಲ್ಲಿ ಸುಳಿದುವು.

ಗೆಳೆಯರಿಬ್ಬರೂ ಮಾತಾಡುತ್ತಿದ್ದರು. ಇಂದಿರ ಅದನ್ನು ಕೇಳು ವವಳಂತೆ ಇದ್ದರೂ ಅವಳಿಗೆ ಅದೊಂದೂ ಕೇಳಿಸುತ್ತಿರಲಿಲ್ಲ. ರಾಮ ಚಂದ್ರ ಅದನ್ನು ಗಮನಿಸಿ ಅವಳನ್ನು ಮಾತಿಗೆ ಎಳೆಯದೆ ಇದ್ದ. ನಿಂಗ ಒಳಗಿನಿಂದ ಬಂದವನು ಯಾರೋ ಬಂದಿರುವುದಾಗಿ ತಿಳಿಸಿದ.

"ಇಂದಿರ—ನೀನು ಇಲ್ಲೇ ಇರು. ನಾನು ಬೇಗ ಬಂದುಬಿಡು ತ್ತೇನೆ''

ಎಂದು ಹೇಳಿ ರಾಮಚಂದ್ರ ಅಲ್ಲಿಂದ ಎದ್ದು ಹೋದ. ಮೌನವು ಅವರಿಬ್ಬರ ನಡುವೆ ಬೃಹದಾಕಾರವನ್ನು ತಾಳಿದ್ದಂತೆ ತೋರಿತು. ಅವರಿಬ್ಬರ ಧ್ವನಿಯನ್ನು ಆಲಿಸುತ್ತಿದ್ದವಳಿಗೆ ಈಗ ಕುಳ್ಳಿರುವುದು ಅಸಾಧ್ಯವೆನಿಸಿತು. ಯಾವುದೊ ಅವ್ಯಕ್ತ ಭಯ, ಶಂಕೆ ಅವಳನ್ನು ಆವರಿಸಿತು. ಅವಳು ಸ್ವಲ್ಪ ಸಾವಧಾನದಿಂದ ಅದನ್ನು ತಿಳಿಯಲು ಯತ್ನಿಸಿದ್ದರೆ—ಅದು ಏನೆಂದು ಗೋಚರಿಸಬಹುದಿತ್ತೇನೋ! ಅವಳು ಅಲ್ಲಿ ಕುಳಿತಿರಲಾರದೆ, ಎದ್ದು ಹೋಗಲಾರದೆ—ಮಾತಾಡಲೂ ಸಾಧ್ಯ ವಿಲ್ಲದೆ ಸುಮ್ಮನೆ ಒದ್ದಾಡುತ್ತಿದ್ದಳು. ವಿಶ್ವನಾಥ ಅವಳನ್ನೇ ನೋಡು ತ್ತಿದ್ದ. ಅವಳ ಪ್ರತಿಯೊಂದು ಚಲನ ವಲನವನ್ನೂ ಗಮನಿಸುತ್ತಿದ್ದ. ಏನೋ ಯೋಚಿಸಿ ತಟಕ್ಕನೆ ಕೇಳಿದ—

"ಇಂದಿರ—'ನಿಮ್ಮ' ಡಾಕ್ಟರ್ ಇಲ್ಲಿ ಎಷ್ಟು ಪ್ರಸಿದ್ಧಿಯಾಗಿದಾರೆ? ನನಗೆ ಗೊತ್ತೇ ಇರಲಿಲ್ಲ. !"

ಇಂದಿರ ಅವನ ಕಡೆ ನೋಡಿದಳು. ಆ 'ನಿಮ್ಮ' ಎಂಬ ಪದ ಕೇಳಿ ಅವಳಿಗೆ ಹೇಗೋ ಆಯಿತು.

"ಅವರ ವೈದ್ಯ ಶಾಲೆ ಬಹಳ ಚೆನ್ನಾಗಿದೆ, ಹೊರಗಿನಿಂದ ಬಂದು ಎಷ್ಟು ಸ್ವಲ್ಪ ಕಾಲದಲ್ಲಿ ಇಲ್ಲಿನ ಜನರ ಪ್ರೀತಿ ವಿಶ್ವಾಸಗಳನ್ನು ಗಳಿಸಿರುವುದು ಬಹಳ ಆಶ್ಚರ್ಯ !"

ಇಂದಿರ ಆಗಲೂ ಸುಮ್ಮನಿದ್ದಳು. ಅವನ ಈ ಪ್ರಶ್ನೆಯ ಉದ್ದೇಶವನ್ನು ಹುಡುಕುವಂತೆ ಅವನನ್ನೇ ನೋಡುತ್ತಿದ್ದಳು. ಉತ್ತರ ಬರಲಿಲ್ಲವಾಗಿ ವಿಶ್ವನಾಥನೇ ಪುನಃ ಹೇಳಿದ—

"ಅವರ ಮನೆಯೂ ಹಾಗೆ—ಬಹಳ ಸೊಗಸಾಗಿ ಅವರ ಅಭಿರುಚಿಗೆ ತಕ್ಕಂತಿದೆ! ರಾಮಚಂದ್ರ ವೈದ್ಯಶಾಲೆಯಿಂದ ನೆಟ್ಟಗೆ ಮನೆಗೆ ಹೊರಟಿದ್ದ. ಅವರೇ ಬಲವಂತ ಮಾಡಿ ಮನೆಗೂ ಕರೆದುಕೊಂಡು ಹೋಗಿ—ಕಾಫಿ ಕೊಟ್ಟು ಉಪಚಾರಮಾಡಿ ಮನೆಯನ್ನೆಲ್ಲಾ ತೋರಿಸಿದರು. ಬಹಳ ದೊಡ್ಡ ಮನುಷ್ಯ !"

ಇಂದಿರ ಸುಮ್ಮನೆ ಹೂ ಗುಟ್ಟಿದಳು. ಅವನ ಧ್ವನಿ ಏನೋ ಒಂದು ಬಗೆಯಾಗಿದ್ದುದನ್ನು ನೋಡಿ ಅವಳಿಗೆ ಗಾಬರಿಯಾಗಿತ್ತು.

"ಅವರಿಗೆ ಸಂಗೀತವೂ ಬರುವುದೇನು...... ?"

"ಬರಬಹುದು......!"

"ನಿನಗೆ ಗೊತ್ತಿಲ್ಲವೇ? ಅವರ ಬಳಿ ಸೊಗಸಾದ ಪಿಯಾನೋ ಇದೆ !"

"ಇರಬಹುದು...."

"ನಾನು ಅಲ್ಲಿ ಇನ್ನೊಂದು ಆಶ್ಚರ್ಯ ನೋಡಿದೆ ಇಂದಿರ....!"

"ಅದೇನು ?"

"ಅವರ ಮನೆ ತುಂಬ ನಿನ್ನ ಫೋಟೋಗಳೇ ಇವೆ. ಗೋಡೆ ಹಿಡಿಸದಷ್ಟು !"

ಇಂದಿರ ಸ್ವಲ್ಪ ಪೆಚ್ಚಾದಳು. ವಿಶ್ವನಾಥ ಅವಳ ಹೃದಯವನ್ನು ಭೇದಿಸುವಂತೆ ನೋಡುತಿದ್ದ. ಅವಳು ಅವನ ನೋಟವನ್ನು ಎದುರಿಸಿ ದಿಟ್ಟವಾಗಿ ಹೇಳಿದಳು—

ಇರಬಹುದು. ಅವರು ಮೀನನಿಗೆ ಸಮೀಪ ಬಂಧು. ನಮ್ಮ ಮನೆಯವರಂತೆಯೇ ಇದ್ದರು. ನಮ್ಮನ್ನುಳಿದು ಅವರಿಗೆ ಬೇರೆ ಆಪ್ತರಿಲ್ಲ...."

"ನನಗೆ ಎಂದೂ ಹಾಗೆ ತೋರಿರಲಿಲ್ಲ. ನಾನು ಕಂಡಂತೆ ಅವರು ಹೊರಗಿನವರಂತೆ ನಡೆಯುತ್ತಿದ್ದರೇ ಹೊರತು ಒಂದು ಸಲವಾದರೂ ಮನೆಯವರಂತೆ ತೋರಿಸಿಕೊಳ್ಳಲಿಲ್ಲ.. ಏಕೆ.....! ನಾನು ಬಂದದ್ದರಿಂದ ಬಾಂಧವ್ಯ ದೂರವಾಯಿತೊ....?"

"ಕ್ಯಾಪ್ಟನ್— ನೀವು ಯಾವ ಉದ್ದೇಶವಿಟ್ಟುಕೊಂಡು ಮಾತಾಡುತ್ತೀರೋ ಗೊತ್ತಾಗಲಿಲ್ಲ. ನೀವು ಇಲ್ಲಿಗೆ ಬಂದ ದಿವಸ ಎಷ್ಟು ಅಪಾಯದ ಸ್ಥಿತಿಯಲ್ಲಿದ್ದಿರಿ ತಿಳಿದಿದೆಯೆ? ಎರಡು ರಾತ್ರಿಯನ್ನೆಲ್ಲಾ ಅವರು ನಿಮ್ಮ ಹಾಸಿಗೆಯ ಬಳಿಯೇ ಕಳೆದಿದಾರೆ. ಆಗ ನಿಮ್ಮನ್ನು ನೋಡಿಕೊಳ್ಳುವುದರಲ್ಲಿ ಸ್ವಲ್ಪ ಅಜಾಗರೂಕತೆಯೂ ವಿಷಮಾವಸ್ಥೆಗೆ ಬರಬಹುದಿತ್ತು....."

"ಓಹೋ.... ಹಾಗೇನು? ನನಗೆ ಮೊದಲೇ ಗೊತ್ತಿದ್ದರೆ ಮೂರ್ತಿಗೆ ನನ್ನ ಕೃತಜ್ಞತೆಯನ್ನು ಇನ್ನೂ ಹೆಚ್ಚಾಗಿ ತಿಳಿಸುತ್ತಿದ್ದೆ....!"

"ನಿಮ್ಮ ಕೃತಜ್ಞತೆಯನ್ನು ಪಡೆಯಬೇಕೆಂದು ಅವರೇನೂ ಮಾಡಲಿಲ್ಲ....!"

"ನಿನಗಾಗಿ.....?"

"..............................."

"ಇಂದಿರ— ನೀನೇಕೆ ನಮ್ಮೊಡನೆ ವೈದ್ಯಶಾಲೆಗೆ ಬರಲಿಲ್ಲ? ನೀನು ದಿನವೂ ಹೋಗುತ್ತಿದ್ದೆಯಂತೆ.......... ಅಲ್ಲಿ ಸಿಸ್ಟರ್ ನಿನ್ನ ವಿಚಾರ ಬಹಳ ಹೇಳುತ್ತಿದ್ದರು!"

"ನನಗೆ ಇಷ್ಟವಾಗಲಿಲ್ಲ.......!"

"ಹೆದರಿಕೆಯೋ....?"

"ಹೆದರಿಕೆ ? ಏಕೆ ?"

"ಏಕೋ—ನನಗೇನು ಗೊತ್ತು? ನಾನು ಗಮನಿಸುತ್ತಲೇ ಇದೇನೆ. ನನ್ನೊಡನೆ ಹೊರಗೆ ಬಂದಾಗಲೆಲ್ಲ, ಎಲ್ಲಿ ಯಾರು ನೋಡುವರೋ ಏನೋ ಎಂದುಕೊಂಡು ಎಡ ಬಲ ನೋಡುತ್ತಲೆ ಇರುತ್ತಿಯೆ! ಆ.... ದಿನ....ಆ....ನೀನು ನನ್ನ ಹತ್ತಿರ ಕುಳಿತು ಓದುತ್ತಿದ್ದೆಯಲ್ಲ.... ಆಗ ಮೂರ್ತಿ ಅನಿರೀಕ್ಷಿತವಾಗಿ ಹೊತ್ತಲ್ಲದ ಹೊತ್ತಿನಲ್ಲಿ ಬರಲಿಲ್ಲವೇ......ಆಗ ನಿನ್ನ ಮುಖ ನೋಡಬೇಕಾಗಿತ್ತು! ಕುರ್ಚಿಯ ಬಳಿ ಹಾವು ಕಾಣಿಸಿ ಕೊಂಡಿದ್ದರೂ ಅಷ್ಟು........ಅದಕ್ಕೆ ಏನು ಹೇಳಲಿ ?"

"ಏನು ಬೇಕಾದರೂ ಹೇಳಬಹುದು! ಈ ದಿನ ನೀವು ಏನೋ ಆಕ್ಷೇಪಣೆ ಮಾಡಬೇಕೆಂದು ಮನಸ್ಸು ಮಾಡಿಯೇ ಇರುವಾಗ ಅನುಮಾನವೇಕೆ....?"

ವಿಶ್ವನಾಥ ಏನೋ ಯೋಚಿಸುತ್ತ ನಿದಾನವಾಗಿ ಹೇಳಿದ—

"ಇಂದಿರ—ಇನ್ನು ಎಂಟು ದಿನ! ಆಮೇಲೆ ನನ್ನ ಪಕ್ಕದಲ್ಲಿ ನಿಂತು ಪ್ರಪಂಚವನ್ನು ಎದುರುಗೊಳ್ಳಬೇಕಲ್ಲ! ಆಗೇನು ಮಾಡುವೆ?"

ಇಂದಿರ ದೃಷ್ಟಿಯನ್ನು ಕೆಳಗೆ ಮಾಡಿ ನೆಲವನ್ನು ನೋಡುತ್ತಿದ್ದ ವಳು ನಡುಗಿದಳು. ನಿಜ! ಇದುವರೆಗೂ ಅವಳು ಆ ಯೋಚನೆ ಯನ್ನೇ ಮಾಡಿರಲಿಲ್ಲ. ಅದೂ ಮೂರ್ತಿಯ ಎದುರಿಗೆ? ಅದಕ್ಕಿಂತ ಸಾಯುವುದು ಸುಖ!

"ಇಂದಿರ ಇಲ್ಲಿ ನೋಡು!"

"ಏನು....?"

"ಸಾಯಂಕಾಲ ಡಾಕ್ಟರ ಮನೆಯಲ್ಲಿ ಮಾತಾಡುತ್ತಿದ್ದಾಗ ಹಾಗೇ ನಮ್ಮ ಮದುವೆಯ ಪ್ರಸ್ತಾಪ ಬಂತು. ನಾನು ಅವರನ್ನು ಮದುವೆ ಯಾದ ಕೂಡಲೇ ಹೋಗುವುದಕ್ಕೆ ಯಾವ ಜಾಗ ಚೆನ್ನಾಗಿದೆಯೆಂದು ಕೇಳಿದೆ........ಅವರು........"

ಇಂದಿರ ತಟಕ್ಕನೆ ಎದ್ದು ನಿಂತಳು. ವಿಶ್ವನಾಥ ನೋಡದವನಂತೆ ಹೇಳಿದ—

"ಅವರು ಯೋಚನೆಮಾಡಿ ಈಗಲೇ ಬಂದು ಹೇಳುವುದಾಗಿ ಹೇಳಿದಾರೆ!"

ದೂರದಲ್ಲಿ ಗಿಡಗಳ ಸಂದಿಯಿಂದ ಯಾರೋ ಬರುತ್ತಿರುವುದು ಕಾಣಿಸಿತು. ಇಂದಿರ ಒಂದು ನಿಮಿಷದಲ್ಲಿ ಅಲ್ಲಿಂದ ಪರಾರಿಯಾಗಿದ್ದಳು. ರಾಮಚಂದ್ರ ಹತ್ತಿರ ಬಂದವನು—

"ವಿಶ್ವನಾಥ—ಇಂದಿರ ಯಾಕೆ ಹಾಗೆ ಓಡಿಹೋದಳು? ಅವಳಿಗೇನಾದರೂ ಭೂತದ ಕತೆ ಹೇಳಿದೆಯೋ?" ಎಂದು ಕೇಳಿದ.

"ನಿನ್ನ ತಂಗಿ ಭೂತಕ್ಕೆ ಹೆದರುವಂತೆ ಕಾಣುವುದಿಲ್ಲ. ನೀನು ಬರುತ್ತಿರುವುದನ್ನು ನೋಡಿ ಡಾಕ್ಟರ್ ಮೂರ್ತಿ ಎಂದು ತಿಳಿದುಕೊಂಡು ಓಡಿದಳು!"

ಅವಳು ಹೋದಕಡೆಗೇ ನೋಡುತ್ತ ವಿಶ್ವನಾಥ ನಿದಾನವಾಗಿ ಹೇಳಿದ. ಅವನ ಮುಖ ಕಳೆಗುಂದಿರುವುದು ಕತ್ತಲೆಯಲ್ಲಿ ರಾಮಚಂದ್ರನಿಗೆ ಕಾಣಿಸಲಿಲ್ಲ. ಅವನು ಹೇಳಿದ—

"ನೋಡು—ಯಾರೋ ಬಂದಿದ್ದರು. ಅವರನ್ನು ಕಳಿಸಿ ಬರಲು ಇಷ್ಟು ಹೊತ್ತಾಯ್ತು! ಏನು ಜನರೋ......ಅವರಿಗೆ ಹೊತ್ತು ಗೊತ್ತು ಒಂದೂ ಇಲ್ಲ!"

## ೧೮

ಮೂರ್ತಿ ಸಂಜೆಯಿಂದಲೇ ತನ್ನ ಭವಿಷ್ಯವನ್ನು ನಿರ್ಧರಿಸಿಕೊಂಡಿದ್ದ. ಹೊಸದಾಗಿ ರೋಗಿಗಳನ್ನ ಸೇರಿಸಿಕೊಳ್ಳುವುದಿಲ್ಲವೆಂದು ಬರೆದು ಅದನ್ನು ಪತ್ರಿಕೆಗೆ ಕಳುಹಿಸಲು ವಿಳಾಸವನ್ನು ಬರೆದು ಮೇಜಿನ ಮೇಲೆ ಇಟ್ಟಿದ್ದ. ಕಲ್ಕತ್ತೆಯಲ್ಲಿದ್ದ ತನ್ನ ಗುರುತಿನ ಒಬ್ಬ ವೈದ್ಯನಿಗೆ ಕೆಲವು ದಿನ ಬಂದು ಅಲ್ಲಿರುವಂತೆ ಕಾಗದ ಬರೆದಿದ್ದ. ಸಾಮಾನು ಕಟ್ಟುವ ಕೆಲಸವೂ ಮುಗಿಯುತ್ತ ಬಂದಿತ್ತು. ಮೂರ್ತಿ ಅದೆಲ್ಲವನ್ನೂ ಮುಗಿಸಿಕೊಂಡು ತನ್ನ ಕೊಠಡಿಗೆ ಬರುವ ವೇಳೆಗೆ ರಾತ್ರಿ ಬಹಳ ಹೊತ್ತಾಗಿತ್ತು.

ಅಲ್ಲಿ ಅವನಿಗೆ ಹಳೆಯ ನೆನಪನ್ನು ಮರುಕೊಳಿಸಿ ಮನಸ್ಸಿಗೆ ವ್ಯಥೆಯುಂಟು ಮಾಡುವ ಸಾಮಗ್ರಿಗಳು ಹೇರಳವಾಗಿದ್ದುವು. ಆದರೂ ಅವು ಯಾವುವೂ ಅವನ ಮನಸ್ಸನ್ನು ಅಲ್ಲಾಡಿಸಿದಂತೆ ಕಾಣುತ್ತಿರಲಿಲ್ಲ. ಅವನ ಸಹಜವಾದ ನಗು ಆಗಲೂ ಅವನಿಂದ ದೂರವಾಗಿರಲಿಲ್ಲ. ನಿದಾನವಾಗಿ, ಶಾಂತವಾಗಿ—ಎಲ್ಲವನ್ನೂ ನೋಡುತ್ತ ಕೊಠಡಿಯಲ್ಲಿ ತಿರುಗುತ್ತಿದ್ದ. ಹಾಗೇ ಪಿಯಾನೋ ಮುಂದೆ ಹಾಕಿದ್ದ ಸ್ಟೂಲಿನ ಮೇಲೆ ಕುಳಿತುಕೊಂಡ. ಎದುರಿಗೆ ಪಿಯಾನೋವಿನ ಮೇಲು ಭಾಗದಲ್ಲಿ ಇಂದಿರನ ಫೋಟೋ ಇತ್ತು. ದೊಡ್ಡ ಅಳತೆಯದು. ದೂರದಿಂದ ನೋಡಿದರೆ ಅವಳೇ ಸಜೀವವಾಗಿ ನಗುತ್ತ ಕುಳಿತಿರುವಂತೆ ಕಾಣುತಿತ್ತು. ಮೂರ್ತಿ ಅದನ್ನು ತೆಗೆಯಲು ಬಂದವನು ಹಾಗೇ ನೋಡುತ್ತ ಕುಳಿತ. ಎಷ್ಟೋ ಹೊತ್ತು ಹಾಗೆ ಕಳೆಯಿತು. ಇದ್ದಕ್ಕಿದ್ದಂತೆ ರಾತ್ರಿಯ ಮೌನವನ್ನು ಹರಿದುಕೊಂಡು ನಾದವು ತರಂಗ ತರಂಗವಾಗಿ ಹೊರಬಿತ್ತು. ಮೂರ್ತಿ ತನಗೆ ತಿಳಿಯದಂತೆಯೇ ಅದನ್ನು ನುಡಿಸುತ್ತಿದ್ದ. ಆ ಗೀತೆಯನ್ನು ಅವರಿಬ್ಬರೂ ಜೊತೆಯಲ್ಲಿ ಎಷ್ಟೋ ದಿವಸ ಹಾಡಿದ್ದರು. ಆಗ ಆ ಹೊತ್ತಿನಲ್ಲಿ ಆ ಗೀತೆ ಹೃದಯದ ವೇದನೆಯೆಲ್ಲಾ ಹೊರಸೂಸುವಂತೆ ವಾದ್ಯದಮೇಲೆ ನುಡಿಯುತ್ತಿತ್ತು.

ಇಂದಿರ ತನ್ನ ಕೊಠಡಿಯಲ್ಲಿ ಕತ್ತಲೆಯಲ್ಲಿ ಹಾಸಿಗೆಯಮೇಲೆ ಹೊರಳುತ್ತಿದ್ದಳು. ನಿದ್ರೆಗೂ ಅವಳಿಗೂ ಬಹಳ ದೂರವಿತ್ತು. ಸಾಯಂಕಾಲ ವಿಶ್ವನಾಥನ ಬಳಿಯಿಂದ ಬಂದಾಗಿನಿಂದಲೂ ಅವಳು ಅನುಭವಿಸುತ್ತಿದ್ದ ಯಾತನೆ ಹೇಳುವಂತಿರಲಿಲ್ಲ. ಊಟವನ್ನೂ ಮಾಡದೆ ತಲೆನೋವೆಂದು ಹೇಳಿ ಮಲಗಿದ್ದಳು. ಎಷ್ಟು ಹೊತ್ತಾದರೂ ನಿದ್ರೆ ಬರುವ ಸೂಚನೆ ತೋರಲಿಲ್ಲ. ಬೇಸರದಿಂದ ಎದ್ದು ಕೊಠಡಿಗೆ ತಗುಲಿದಂತೆ ಇದ್ದ ಬಿಸಿಲು ಮಹಡಿಗೆ ಹೋಗಿ ತಿರುಗಾಡುತ್ತಿದ್ದಳು. ಮೂರ್ತಿಯ ಕೋಣೆಯಲ್ಲಿ ದೀಪ ಉರಿಯುತ್ತಿರುವುದು ಕಾಣಿಸಿತು. ಸಂಜೆಯೇ ನಿಂಗ ಮೂರ್ತಿ ಹೊರಡುವುದರಲ್ಲಿರುವುದನ್ನು ಸೂಕ್ಷ್ಮವಾಗಿ ತಿಳಿಸಿದ್ದ. ಆಗಿನಿಂದಲೂ ಒಂದು ಸಲ ಅವನನ್ನು ನೋಡುವ ಇಚ್ಛೆ

ಬಲವಾಗಿತ್ತು. ಇಂದಿರ ಅದನ್ನು ಪಕ್ಕಕ್ಕೆ ತಳ್ಳಿ ಬಲವಂತದಿಂದ ಮುಸುಗು ಎಳೆದುಕೊಂಡು ಮಲಗಿದ್ದಳು. ಈಗ ಅವನ ಕೋಣೆಯಲ್ಲಿ ಅಷ್ಟು ಹೊತ್ತಿನಲ್ಲಿ ದೀಪವಿರುವುದನ್ನು ನೋಡಿ, ಅವನೂ ಅಲ್ಲಿ ತನ್ನಂತೆಯೇ ವ್ಯಥೆಪಡುತ್ತಿರಬಹುದೆಂದು ತೋರಿದಕೂಡಲೇ ತುಳಿದಿದ್ದ ಬಯಕೆ ಹೆಚ್ಚು ಕಸುವಿನಿಂದ ತಲೆ ಎತ್ತಿ ನಿಂತಿತು. ಇನ್ನು ಇಲ್ಲಿ ನಿಂತಿರುವುದು ಸರಿಯಲ್ಲವೆಂದುಕೊಂಡು, ಕಣ್ಣೊರಸಿಕೊಳ್ಳುತ್ತ ಒಳಗೆ ಬರುವುದರಲ್ಲಿದ್ದಾಗಲೇ ಗಾಳಿಯಲ್ಲಿ ತೂರಿ ಬಂದ ಹಾಡಿನ ತುಂಡು ಅವಳನ್ನಟ್ಟಿಕೊಂಡು ಬಂದದ್ದು. ಆಗ ಅವಳಿಗೆ ತಾನು ಏನು ಮಾಡುವೆನೆಂಬ ಅರಿವಾಗಲೀ—ಅದು ಸರಿಯೆ ? ಎಂಬ ವಿವೇಚನೆಯಾಗಲೀ ಉಳಿಯಲಿಲ್ಲ. ಒಂದು ನಿಮಿಷದೊಳಗೆ ಮೆಟ್ಟಲುಗಳನ್ನಿಳಿದು, ಬಾಗಿಲು ತೆಗೆದು—ಆವರಣವನ್ನು ದಾಟಿ ಅವನ ಮನೆಯ ಹಾದಿಯನ್ನು ಹಿಡಿದಿದ್ದಳು.

ಇಂದಿರ ಬಹಳ ಮೆಲ್ಲಗೆ ಬಂದಳು. ಸದ್ದಾಗದಂತೆ ಮುಂಬಾಗಿಲನ್ನು ತೆಗೆದು ಕಳ್ಳಹೆಜ್ಜೆಯನ್ನಿಕ್ಕುತ್ತ ಅವನ ಕೊಠಡಿಯ ಹೊರಭಾಗಕ್ಕೆ ಬಂದಳು. ಕಿಟಕಿಯ ಬಳಿ ನಿಂತಾಗ ಮುಖವೆಲ್ಲಾ ಕೆದರಿ ಕಂಗೆಟ್ಟು ಎದೆ ಡಬಡಬನೆ ಹಾರುತ್ತ ಹತ್ತಿರ ವಿರುವವರಿಗೆ ಕೇಳಿಸುವಂತಿತ್ತು;

ಮೂರ್ತಿ ತೆಳ್ಳನೆಯ ಬಿಳಿಯ ಪಂಚೆಯನುಟ್ಟುಕೊಂಡು ಅರ್ಧ ತೋಳಿನ ಜುಬ್ಬವನ್ನು ಹಾಕಿಕೊಂಡಿದ್ದ. ಬೆರಳುಗಳು ವಾದ್ಯದ ಮೇಲೆ ಆಡುತ್ತಿದ್ದವು. ನೋಟ ಎದುರಿಗಿದ್ದ ಪಟದ ಮೇಲೆ ನಟ್ಟಿತ್ತು. ಇಂದಿರ ಒಳಗಿನ ದೃಶ್ಯವನ್ನು ನೋಡಿ ಆ ಜಾಗದಲ್ಲಿ ನೆಟ್ಟಂತೆ ನಿಂತುಬಿಟ್ಟಳು. ಒಂದು ಸಲ ಬಗ್ಗಿ ನೋಡಿ ಹೊರಟುಹೋಗುವೆನೆಂಬ ಸಂಕಲ್ಪ ಎತ್ತಲೋ ಹೊರಟು ಹೋಗಿತ್ತು.

ಇದ್ದಕ್ಕಿದ್ದಂತೆ ಇಂದಿರ ಬೆಚ್ಚಿ ಮುಂದಕ್ಕೆ ಹಾರಿದಳು. ಅಸ್ಫುಟವಾಗಿ ಅವಳ ಬಾಯಿಂದ ಹೊರಬಿದ್ದ 'ಅಯ್ಯೋ' ಶಬ್ದ ಬಳೆಗಳ ಸದ್ದಿನಲ್ಲಿ ಅಡಗಿ ಹೋಯಿತು. ಆಗ ಅವಳು ನಿಂತಿದ್ದ ಸ್ಥಿತಿಯಲ್ಲಿ ಒಂದು ಎಲೆ ಸರಕ್ಕೆಂದರೂ ಹೆದರಿ ಬಿಡುತ್ತಿದ್ದಳು. ಅಂತಹುದರಲ್ಲಿ ಮೂರ್ತಿಯ ನಾಯಿ

ಕೆಲವುದಿನಗಳಿಂದಲೂ ಅವಳನ್ನು ನೋಡಿರಲಿಲ್ಲವಾಗಿ, ಎಲ್ಲೋ ಇದ್ದದ್ದು ವಾಸನೆ ಹಿಡಿದು ಓಡಿಬಂದು ಕಾಲುಬಳಿ ನುಸಿಯಿತು. ಕತ್ತಲೆಗೂ ಅದರ ಮೈ ಬಣ್ಣಕ್ಕೂ ವ್ಯತ್ಯಾಸವಿರಲಿಲ್ಲ. ಅದು ತಗುಲಿದ ಕೂಡಲೇ ಅವಳು ಬೆಚ್ಚಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ!

ಮೂರ್ತಿಯೂ ಬೆಚ್ಚಿದ. ಕಿಟಕಿಯ ಕಡೆ ನೋಡಿ ತಟಕ್ಕನೆ ಎದ್ದು ನಿಂತ. ಇಂದಿರ ಕಾಲಿಗೆ ಸುತ್ತಿಕೊಂಡಿದ್ದ ನಾಯನ್ನು ಆ ಕಡೆ ನೂಕಿ ಓಡಿದಳು. ನಾಲ್ಕು ಮಾರು ದೂರ ಓಡುವುದರೊಳಗೆ ಮೂರ್ತಿ ಹಿಂದಿನಿಂದ ಓಡಿಬಂದು ಅವಳ ತೋಳನ್ನು ಬಲವಾಗಿ ಹಿಡಿದುಕೊಂಡ. ಇಂದಿರ ನಡುಗುತ್ತಿದ್ದಳು. ಮೂರ್ತಿಯ ಹಿಡಿತ ತಣ್ಣಗೆ ಕೊರೆಯುತ್ತಿತ್ತು!

"ಇಂದಿರ............!"

"...............................…"

"ಇಂದಿರ–ಒಳಗೆ ಬಾ!"

ಇಂದಿರ ಕಂಬದಂತೆ ನಿಂತಿದ್ದಳು. ಮೂರ್ತಿ ಅವಳನ್ನು ಎಳೆದು ಕೊಂಡೇ ಒಳಗೆ ಬಂದ.

"ಇಂದಿರ–ಇಷ್ಟು ಹೊತ್ತಿನಲ್ಲಿ ಯಾಕೆ ಬಂದೆ?" ಮೂರ್ತಿ ಬಹಳ ನಯವಾಗಿ ಹೆದರಿದ ಮಗುವನ್ನು ಕೇಳುವಂತೆ ಕೇಳಿದ. ಅವನ ಧ್ವನಿಯಲ್ಲಿ ಉದ್ವೇಗವಿರಲಿಲ್ಲ.

ಇಂದಿರ ಮಾತಾಡಲಿಲ್ಲ. ಒಂದು ಸಲ ಅವನ ಕಡೆಗೂ, ಒಂದು ಸಲ ತನ್ನ ಸುತ್ತಲೂ ಕಣ್ಣಾರಳಿಸಿ ನೋಡುತ್ತಿದ್ದಳು. ಮೆಲ್ಲನೆ ಕೈ ಬಿಡಿಸಿಕೊಳ್ಳಲು ಪ್ರಯತ್ನಪಟ್ಟಳು. ಮೂರ್ತಿ ತನ್ನ ಹಿಡಿತವನ್ನು ಮತ್ತಷ್ಟು ಬಿಗಿ ಮಾಡಿ ಸ್ವಲ್ಪ ಜೋರಾಗಿ ಕೇಳಿದ—

"ಇಂದಿರ–ನಾನು ಮಾತಾಡೋದು ಕೇಳಿಸೋದಿಲ್ಲವೆ? ಯಾಕೆ ಉತ್ತರ ಕೊಡುವುದಿಲ್ಲ? ಕ್ಯಾಪ್ಟನ್ ನಿನ್ನನ್ನು ಇಲ್ಲಿಯವರೆಗೂ ಬರಲು ಬಿಟ್ಟನೆ....!"

ಇಂದಿರನ ದೇಹದಲ್ಲಿ ಶಕ್ತಿ ಸಂಚಾರವಾದಂತಾಯಿತು. ತಲೆ ಎತ್ತಿ ನೋಡಿ ಸಿಟ್ಟನಿಂದ–

"ಮೂರ್ತಿ–ಇದೇನು ಒರಟುತನ! ಕೈ ನೋಯುತ್ತಾ ಇದೆ. ಬಿಡಿ ನಾನು ಹೋಗ್ತೇನೆ...." ಎಂದಳು.

"ಬಿಡುವುದಿಲ್ಲ–ನೀನು ಬಂದ ಕಾರಣವನ್ನು ತಿಳಿದ ಹೊರತು ಇಲ್ಲಿಂದ ಹೊರಗೆ ಹೋಗಗೊಡುವುದಿಲ್ಲ!"

ಇಂದಿರ ಕೈ ಬಿಡಿಸಿಕೊಳ್ಳಲು ಮಾಡಿದ ಯತ್ನ ವಿಫಲವಾಯಿತು ತಲೆ ತಗ್ಗಿಸಿ ಹೇಳಿದಳು—

"ಮೂರ್ತಿ–ನಿಮ್ಮನ್ನು ಒಂದು ಸಲ ನೋಡಬೇಕೆಂದು ಮನಸ್ಸಾಯಿತು! ನೀವು ಹೊರಟು ಹೋಗುವಿರೆಂದು ನಿಂಗ ಹೇಳಿದ...."

"ಅದಕ್ಕೆ ಇಲ್ಲೇಕೆ ಬರಬೇಕು? ಹೇಗೂ ಅಲ್ಲಿಗೆ ಬಂದು ನಿಮಗೆಲ್ಲ ಹೇಳದೆ ಏನೂ ಹೋಗುತ್ತಿರಲಿಲ್ಲ!"

ಮೂರ್ತಿ ಕಟುವಾಗಿ ನುಡಿದ.

ಇಂದಿರ ಏನೋ ಹೇಳಲು ಪ್ರಯತ್ನ ಪಟ್ಟಳು. ತುಟಿ ಅಲ್ಲಾಡಿತೇ ವಿನಾ ಮಾತು ಹೊರಗೆ ಬರಲಿಲ್ಲ.

"ಹೋಗಲಿ–ಒಳಗೇಕೆ ಬರಲಿಲ್ಲ? ನಾನೂ ರಾಮಣ್ಣನಂತೆ! ಎಂದು ಹೇಳಿದ್ದೆಯಲ್ಲ–ಹೊರಗಡೆ ನಿಂತು ಕದ್ದೇಕೆ ನೋಡುತ್ತಿದ್ದೆ?"

ಇಂದಿರ ಸುಮ್ಮನಿದ್ದಳು. ಮೂರ್ತಿ ಎಡಗೈಯಿಂದ ಅವಳ ಗಲ್ಲವನ್ನು ಹಿಡಿದು ತಲೆ ಎತ್ತಿ ಬೆಳಕಿನ ಕಡೆ ತಿರುಗಿಸಿ ಒಂದು ಕ್ಷಣ ನೋಡಿ, ಪುನಃ ಬಿಟ್ಟು ಬಿಟ್ಟು ಹೇಳಿದ—

"ಇಂದಿರ–ನೀನು ಧೈರ್ಯಶಾಲಿಯೆಂದಿದ್ದೆ. ಆದರೆ....ನೀನೀಗ ಶುದ್ಧ ಹೇಡಿ! ನಿನ್ನ ಶೌರ್ಯವೆಲ್ಲಾ ಬರಿಯ ಪಿಸ್ತೂಲನ್ನು ತೋರಿಸುವುದರಲ್ಲೇ ಆಗಿ ಹೋಯಿತು!"

ಇಂದಿರನಿಗೆ ಹೋಗಿದ್ದ ಶಕ್ತಿ ಮತ್ತೆ ಬಂದಂತಾಯಿತು. ಅಭಿಮಾನದಿಂದ ತಲೆ ಎತ್ತಿ—

"ಮೂರ್ತಿ–ಇಲ್ಲಿ ನಾನು ನನ್ನ ಧೈರ್ಯಪ್ರದರ್ಶನಕ್ಕೆ ಬರಲಿಲ್ಲ!" ಎಂದಳು.

ಮೂರ್ತಿ ಮೆಲ್ಲಗೆ ನಕ್ಕ. ಇಂದಿರ ಮತ್ತೂ ಸಿಟ್ಟಿನಿಂದ—

"ಇಲ್ಲಿ ನಗುವುದಕ್ಕೆ ಏನಿದೆ? ನನ್ನ ಸ್ಥಿತಿಯನ್ನು ನೋಡಿ ನಗುವಿರಾ?" ಎಂದಳು.

"ಇಲ್ಲ–ಇಂದಿರ ನನ್ನನ್ನೇ ನೋಡಿಕೊಂಡು ನಗುತ್ತೇನೆ!"

"ಏಕೆ?"

"ನೀನು.... ಆ ದಿನ.... ನಿನ್ನ ವರನನ್ನು ಎದುರುಗೊಳ್ಳುವುದಕ್ಕೆ ಹೊರಟಿದ್ದೆಯಲ್ಲ.... ಆಗ ... ನಾನು ಕೇಳಿದಾಗ ನಿನಗೆ ನನ್ನ ವಿಚಾರದಲ್ಲಿ ಬೇರೆ ಅಭಿಪ್ರಾಯವಿರಲಿಲ್ಲವೆಂದೂ, ರಾಮಚಂದ್ರ ನಾನು ಇಬ್ಬರೂ ಒಂದೇ ಸಮವೆಂದೂ, ಬಹಳ ಚೆನ್ನಾಗಿ ಸುಳ್ಳು ಹೇಳಿದ್ದೆ! ಅದಕ್ಕಿಂತ ಹಾಸ್ಯಾಸ್ಪದವೆಂದರೆ,–ನಾನು ಅದನ್ನೇ ನಂಬಿಕೊಂಡು ಹೊರಟು ಹೋದೆ! ಆ ಮೇಲೆ ಆ ದಿನ.... ನಾನು ... ಆಕಸ್ಮಾತ್ ಹೊತ್ತಲ್ಲದ ಹೊತ್ತಿನಲ್ಲಿ ಬರಬೇಕಾದಾಗ.... ಬಂದಾಗ...."

"ಬಂದಾಗ.... ಏನಾಯ್ತು?"

"ಆಗೋದೇನು? ಆಗ ನಿನ್ನ ಮುಖವನ್ನು ನೋಡಬೇಕಾಗಿತ್ತು....! ಕದಿಯುತ್ತಿರುವಾಗ ಮಾಲುಸಮೇತವಾಗಿ ಸಿಕ್ಕಿಬಿದ್ದ ಕಳ್ಳನ ಮುಖದಂತಿತ್ತು. ನೀನು ಅಷ್ಟು ಹೆದರುವ ಕಾರಣವಾದರೂ ಏನಿತ್ತು? ಅದುವರೆಗೂ ನನಗೆ ಗೊತ್ತಾಗಿರಲಿಲ್ಲ. ಈಗ ನೋಡು–ನಿನ್ನ ಹೃದಯ ನಿನ್ನ ಕಣ್ಣುಗಳಲ್ಲಿ ಪ್ರತಿಬಿಂಬಿಸಿದೆ. ಈಗ ಗೊತ್ತಾಗುತ್ತಿದೆ–ಆ ದಿನ ನೀನು ನನ್ನ ಕಣ್ಣು ತಪ್ಪಿಸಲು ಪ್ರಯತ್ನ ಪಟ್ಟಿದ್ದಕ್ಕೆ ಕಾರಣ....!"

ಇಂದಿರ ಸುಮ್ಮನೆ ಕೇಳುತ್ತಿದ್ದಳು. ಮೂರ್ತಿ ಸ್ವಲ್ಪ ಸುಮ್ಮನಿದ್ದು ಪುನಃ ಹೇಳಿದ–

"ಇಂದಿರ–ತಿಳಿದೂ ತಿಳಿದು ಈ ಕೆಲಸ ಮಾಡಲು ಮನಸ್ಸು ಒಪ್ಪುವುದೆ? ನೀನು ಓದಿದ್ದಕ್ಕೂ ನಾಗರಿಕ ಸಮಾಜದಲ್ಲಿ ಓಡಾಡಿಕೊಂಡಿದ್ದುದಕ್ಕೂ ಈಗಲೀಗ ಸಾರ್ಥಕವಾಯಿತು! ಇಂದಿರ–ನಾನು ಹೊರಟು ಹೋಗುತ್ತೇನೆ. ನಿನ್ನ ನೋಡೋದು ಇದೇ ಕೊನೆಯಾಗಬಹುದು. ಒಂದು ಮಾತು ಹೇಳುತ್ತೇನೆ. ಉದಾಸೀನ ಮಾಡಬೇಡ. ಆ ಮೇಲೆ ಸಾಯುವವರೆಗೂ ಪಶ್ಚಾತ್ತಾಪ ಪಡಬೇಕಾದೀತು.... ಈಗಲೂ ಕೈ

ಮೀರಿಲ್ಲ! ಯೋಚಿಸಿ ನೋಡು. ನಿನ್ನ ಒಂದು ಮಾತು ನನ್ನ ಭವಿಷ್ಯವನ್ನೇ ಬದಲಾಯಿಸಬಲ್ಲದು. ನಿನಗಾಗಿ ಯಾವ ತ್ಯಾಗವನ್ನು ಬೇಕಾದರೂ ಮಾಡಲು ಸಿದ್ಧವಾಗಿದೇನೆ...."

ಮೂರ್ತಿ ಆತುರದಿಂದ ಅವಳ ಕಡೆ ನೋಡುತ್ತಿದ್ದ. ಅವಳು ಎಲ್ಲೋ ನೋಡುತ್ತ "ಇಲ್ಲ" ವೆಂಬಂತೆ ನಿಧಾನವಾಗಿ ತಲೆ ಅಲ್ಲಾಡಿಸಿದಳು.

"ಇಂದಿರ–ಇದೇ ನಿನ್ನ ಕೊನೆಯ ಮಾತೆ? ಹಾಗಾದರೆ ಇದು ಶುದ್ಧ ಅನ್ಯಾಯ! ದ್ರೋಹ, ಆತ್ಮ ವಂಚನೆ.....!"

ಇಂದಿರನ ಹೃದಯ ಒತ್ತಿ ಬಾಯಿಗೆ ಬಂದಂತಾಯಿತು. ಬಹಳ ದಿನಗಳಿಂದ ತಡೆದಿದ್ದ ದುಃಖ ಅವಕಾಶ ಸಿಕ್ಕಿದ ಕೂಡಲೇ ಅವಳ ಅಂಕೆಯನ್ನು ಮೀರಿ ಉಕ್ಕಿ ಹರಿದು ಬರಲು ಸಿದ್ಧವಾಗಿತ್ತು. ಇಂದಿರನಿಗೆ ಅವನ ವಿಶಾಲವಾದ ವಕ್ಷದಲ್ಲಿ ಮುಖವಿಟ್ಟು ಮನಸ್ಸು ದಣಿಯುವಂತೆ ಅಳಬೇಕೆನಿಸಿತು. ನೀರು ತುಂಬಿದ ಕಣ್ಣುಗಳನ್ನು ಅಸಹಾಯಕತೆಯಿಂದ ಅವನ ಕಡೆಗೆ ತಿರುಗಿಸಿದಳು.

ಮೂರ್ತಿಯು ಒಂದು ಕ್ಷಣ ಅವಳ ಕಡೆ ನೋಡುತ್ತ ತನ್ನನ್ನು ಮರೆತು ನಿಂತಿದ್ದ. ಅವನ ಕೈ ಹಿಡಿತ ಸಡಿಲವಾಯಿತು. ಕಣ್ಣುಗಳಿಂದ ಉದುರಿದ ನೀರು ಬೆಚ್ಚಗೆ ಅವಳ ಕೈ ಮೇಲೆ ಬಿತ್ತು. ಇಂದಿರನಿಗೆ ತಾನು ಎಲ್ಲಿರುವೆನೆಂಬುದರ ಅರಿವಾಯಿತು. ಕೂಡಲೆ ಕೈ ಕೊಸರಿಕೊಂಡು ಮಿಂಚಿನ ವೇಗದಲ್ಲಿ ಹೊರಗೆ ಬಂದಳು.

ಮೂರ್ತಿಯೂ ಎಚ್ಚೆತ್ತು ಹಿಂದಿನಿಂದ ಓಡಿ ಬಂದು ಜೋರಾಗಿ—

"ಇಂದಿರ....ಇಂದಿರ....!" ಎಂದು ಕೂಗಿದ.

ಆ ವೇಳೆಗೆ ಇಂದಿರ ಕತ್ತಲೆಯಲ್ಲಿ ತೂರಿಕೊಂಡು ಹೊರಟು ಹೋಗಿದ್ದಳು.

ಇಂದಿರ ಮನೆಗೆ ಬಂದಳು. ಹಿಂದಿನಿಂದ ಯಾರಾದರೂ ಅಟ್ಟಿಸಿ ಕೊಂಡು ಬಂದರೆ ಜೀವದಾಸೆಯಿಂದ ಹೇಗೆ ಓಡುವರೋ ಹಾಗೆ ಓಡಿ ಬಂದಳು. ಮೂರ್ತಿ ಹಿಂದೆ ಉಳಿದ, ಆದರೆ ಅವನು ಹೇಳಿದ ಮಾತು ಗಳಿಂದ ಮಾತ್ರ ಅವಳಿಗೆ ರಕ್ಷಣೆ ಸಿಕ್ಕಲಿಲ್ಲ. ಅವು ಅವಳಿಗಿಂತ ವೇಗ ವಾಗಿ ಅವಳನ್ನು ಅಟ್ಟಿ ಬರುವಂತೆ ತೋರಿತು. ಹಾಸಿಗೆಯ ಮೇಲೆ ಮಲಗಿ ಬಲವಾಗಿ ಮುಸುಕು ಹಾಕಿಕೊಂಡರೂ ಅವು ಅವಳನ್ನು ಬಿಡ ಲಿಲ್ಲಿ!

"ಇದು—ಶುದ್ಧ ಅನ್ಯಾಯ! ದ್ರೋಹ—ಆತ್ಮ ವಂಚನೆ........!"

ಈ ಮಾತುಗಳು ಅವಳ ಕಿವಿಯಲ್ಲಿ ಮೊಳಗುತ್ತಿದ್ದುವು.

"ಇಲ್ಲ—ಈ ರೀತಿ ನಿನ್ನ ಮನಸ್ಸಾಕ್ಷಿಗೆ ವಿರೋಧವಾಗಿ ನಡೆಯಲು ನಿನಗೆ ಅಧಿಕಾರವಿಲ್ಲ!"

ಎಂದು ಅವಳ ಹೃದಯವು ಮಾರ್ನುಡಿಯುತ್ತಿತ್ತು. ಈ ಹೋರಾ ಟದ ನಡುವೆ ಮಲಗಿರಲು ಅವಳಿಗೆ ಸಾಧ್ಯವಾಗಲಿಲ್ಲ. ಬೋನಿನೊಳಗೆ ಅಶಾಂತಿಯಿಂದ ಅತ್ತಿತ್ತ ಅಲೆಯುವ ಸಿಂಹದಂತೆ, ಆ ರಾತ್ರಿಯ ಮೌನ ದಲ್ಲಿ ಕೊಠಡಿಯಲ್ಲಿ ಒಬ್ಬಳೇ ಸುತ್ತಾಡಿದಳು. ಕೊನೆಗೆ ಬೇಸರದಿಂದ ಬಂದು ಕಿಟಕಿಯ ಬಳಿ ನಿಂತು ಕೊಂಡಳು.

ಹೊತ್ತು ಉರುಳಿತು. ಮುಂಜಾನೆಯ ತಂಗಾಳಿ ಅವಳನ್ನು ನಡುಗಿ ಸಿತು. ದೂರದಲ್ಲಿ ಹಕ್ಕಿಯೊಂದು ಧ್ವನಿಮಾಡಿ, ಬೆಳಗು ಸಮೀಪಿಸು ತ್ತಿರುವುದನ್ನು ಸೂಚಿಸಿತು. ಇದುವರೆಗೆ ಬಡವಾಗಿ ನಿಂತಿದ್ದ ಅವಳ ದೇಹದಲ್ಲಿ—ನವ ಚೈತನ್ಯ ತಲೆದೋರಿತು. ತೂಗಾಡುತ್ತಿದ್ದ ಮನಸ್ಸು ಒಂದು ನೆಲೆಗೆ ನಿಂತಿತು. ಇಂದಿರ ಗಂಭೀರವಾದ ನಡಿಗೆಯಿಂದ ಮೇಜಿನ ಬಳಿಗೆ ಬಂದು, ದೀಪವನ್ನು ಹಚ್ಚಿಸಿ ಬರೆಯಲು ಕುಳಿತಳು.

"....... ....ಮೀನ..........ನೀನೆನಗೆ ತಾಯಿ—ಗುರು! ನಿನ್ನಿಂದ ಯಾವುದನ್ನೂ ಮುಚ್ಚಿಡುವುದಿಲ್ಲ. ನೀನು ಈ ಕಾಗದವನ್ನು ನೋಡುವ ಹೊತ್ತಿಗೆ, ನಾನು ನಿನ್ನಿಂದ ಬಹಳ ದೂರ ಹೋಗಿರುತ್ತೇನೆ. ಮತ್ತೇನು

ಮಾಡಲಿ……? ರಾಮಣ್ಣನ ಅನುಮತಿ ಇಲ್ಲದೆ—ನನ್ನ ಮನಸ್ಸಿನಂತೆ ನಡೆಯುವುದು ಸಾಧ್ಯವಿಲ್ಲ. ಅದಕ್ಕೂ ಹೆಚ್ಚಾಗಿ, ನನ್ನ ಮನಸ್ಸಾಕ್ಷಿಗೆ ವಿರೋಧವಾಗಿ ಮತ್ತೊಬ್ಬನನ್ನು ಕೈ ಹಿಡಿದು ಆತ್ಮಘಾತ ಮಾಡಿಕೊಳ್ಳುವುದಕ್ಕೂ ನನಗೆ ಅಧಿಕಾರವಿಲ್ಲವೆಂದು ಈಗ ತಿಳಿಯುತ್ತದೆ. ಈ ಸಂದರ್ಭದಲ್ಲಿ ಇಲ್ಲಿಂದ ಹೊರಡುವುದಲ್ಲದೆ ಬೇರೆ ಉಪಾಯವಿಲ್ಲ. ಆದರೆ—ಮೀನಾ…………ಗಾಬರಿಯಾಗಬೇಡ! ಆತ್ಮಹತ್ಯದಂಥ ಹೀನವಾದ ಯೋಚನೆ ನಿನ್ನ ಬಳಿ ಬೆಳೆದ ನನಗೆ ಬರುವುದಿಲ್ಲ. ನೀನು ಹೇಳಿಕೊಟ್ಟಿರುವ ದುಃಖಿಗಳ ಸೇವೆಯೇ ನನ್ನ ಬಾಳಿನ ಮುಂದಿನ ಗುರಿ! ಕಲ್ಕತ್ತೆಯ ಅನಾಥಾಶ್ರಮದ ಅಧಿಕಾರಿಣಿ ತನಗೆ ಸರಿಯಾದ ಸಹಾಯಕರೊಬ್ಬರು ಬೇಕಾಗಿರುವುದನ್ನು ನಮಗೆ ಅನೇಕ ಸಾರಿ ಹೇಳಿರುವುದು ನಿನಗೆ ನೆನಪಿರಬಹುದು. ಆ ಕೆಲಸವನ್ನು ನಾನು ಸಂತೋಷದಿಂದ ಸ್ವೀಕರಿಸುತ್ತೇನೆ……… ನಾನು ಎಲ್ಲೇ ಇರಲಿ……. ನಿಮ್ಮಿಬ್ಬರ ಪ್ರೀತಿಯೂ ಆಶೀರ್ವಾದವೂ ನನ್ನ ಜೊತೆ ಇರುವುದೆಂಬ ಭರವಸೆ ನನಗಿದೆ!

ನಿನ್ನ ಇಂದಿರಾ"

ಇಂದಿರ ಕಾಗದವನ್ನು ಮಡಿಸಿ ಮೇಜಿನ ಮೇಲಿಟ್ಟು, ಹಾರಿ ಹೋಗದಂತೆ ಅದರ ಮೇಲೆ ತನ್ನ ಫೋಟೋವನ್ನು ಇಟ್ಟಳು. ತನಗೆ ಅಗತ್ಯವಾಗಿ ಬೇಕಾದ ಕೆಲವು ಸಾಮಾನುಗಳನ್ನೂ, ಒಂದೆರಡು ಬಟ್ಟೆಗಳನ್ನೂ ಕೈಲಿ ಹಿಡಿದುಕೊಳ್ಳುವ ಒಂದು ಸಣ್ಣ ಪೆಟ್ಟಿಗೆಗೆ ಹಾಕಿ ಒಂದು ಕಡೆ ಇಟ್ಟಳು. ಬೆಳಿಗ್ಗೆ ರಾಮಚಂದ್ರ ಹೊರಗೆ ಹೊರಟ ಮೇಲೆ ತಾನು ಹೊರಡುವುದೆಂದು ತಾನೂ ನಿಶ್ಚಯಿಸಿದಳು. ದೀಪವನ್ನಾರಿಸಿ ಹಾಸಿಗೆಯ ಮೇಲೆ ಮಲಗಿದ ಕೂಡಲೇ ಬಹಳ ಹೊತ್ತಿನಿಂದ ದೂರವಿದ್ದ ನಿದ್ರೆ ಅವಳನ್ನು ಆವರಿಸಿತು.

ಬೆಳ್ಳನೆ ಬೆಳಗಾಯಿತು. ತೋಟವೆಲ್ಲವೂ ನವಜೀವನದಿಂದ ತುಂಬಿ ಮೆರೆಯುತ್ತಿತ್ತು. ಹಕ್ಕಿಗಳು ಮಧುರವಾಗಿ ಉದಯರಾಗವನ್ನು ಹಾಡುತ್ತಿದ್ದುವು. ತಂಗಾಳಿ ಹೂವುಗಳೊಂದಿಗೆ ಆಟವಾಡುತ್ತ ಸುಳಿಯುತ್ತಿತ್ತು.

ಇಂದಿರ ಎದ್ದವಳು ಕಣ್ಣುಜ್ಜಿಕೊಳ್ಳುತ್ತ ಹೊರಗೆ ಹೋದಳು. ನಿದ್ರೆ ಸಾಲದೆ ತಲೆ ಮೈಯೆಲ್ಲಾ ಭಾರವಾಗಿದ್ದರೂ—ಹೃದಯ ಹಗುರವಾಗಿತ್ತು—ಮುಖ ಗೆಲುವಾಗಿತ್ತು! ಅವಳು ಮುಖ ತೊಳೆದುಕೊಂಡು ಒರಸಿಕೊಳ್ಳುತ್ತ ಹಿಂದಿರುಗಿ ಬರುವ ವೇಳೆಗೆ—ಅಡಿಗೆಯವನು ಮೇಜನ ಎರಡು ಭಾಗದಲ್ಲೂ ಕುರ್ಚಿಗಳನ್ನು ಹಾಕಿ ಇಬ್ಬರಿಗೆ ಕಾಫಿ ತಂದಿಟ್ಟಿದ್ದ. ಇಂದಿರ ಒಳಗೆ ಬಂದವಳು ಅವನ ಕಡೆ ಪ್ರಶ್ನಾರ್ಥಕವಾಗಿ ನೋಡಿದಳು. ಅವನು—

"ಕ್ಯಾಪ್ಟನ್‌ರವರು ಇಲ್ಲೇ ಕಾಫಿ ತೆಗೆದುಕೊಳ್ಳುವರಂತೆ. ಬರುತ್ತಾ ಇದಾರೆ."

ಎಂದು ಹೇಳಿದ.

ಇಂದಿರ ಬೇಸರದಿಂದ ಹುಬ್ಬುಗಂಟಿಕ್ಕಿ—

"ಛಿ........!"

ಎಂದಳು.

ಅಡಿಗೆಯವನು ಅವಳ ಕಡೆಯೇ ನೋಡುತ್ತ ಹೊರಟು ಹೋದ.

ಇಂದಿರ ಬೇಗ ಬೇಗ ಹಾಸಿಗೆಯ ಸುಕ್ಕು ಸರಿಮಾಡಿ, ತಲೆಯನ್ನು ಹಾಗೇ ಮೇಲೆಬಾಚಿ ಕೊಂಡು—ಕುಂಕುಮ ಇಟ್ಟು ಕೊಳ್ಳುತ್ತಿರುವಾಗ ವಿಶ್ವನಾಥ ಹೊರಗೆ ನಿಂತುಕೊಂಡು—

"ಇಂದಿರ..........."

ಅವನ ಧ್ವನಿ ಕೇಳಿ ಇಂದಿರ ಕರಗಿಹೋದಳು. ಮುಖದಲ್ಲಿನ ಬೇಸರ ಮರೆಯಾಯಿತು. ವಿಶ್ವನಾಥ ಬಂದ ದಿನದಿಂದ ಅವನು ಅವಕಾಶ

ವಾದಾಗಲೆಲ್ಲಾ ತನ್ನ ಮನಸ್ಸನ್ನು ತಿಳಿಸಲು ಮಾಡುತ್ತಿದ್ದ ಪ್ರಯತ್ನ— ತಾನು ತೋರಿಸುತ್ತಿದ್ದ ಉದಾಸೀನ, ಎಲ್ಲವೂ ನೆನಪಾದುವು. ಆ ಗಳಿಗೆ ಯಲ್ಲಿ ಅವನಿಗಾಗಿಯೂ ಮರುಕವುಂಟಾಯಿತು. ಇಂದಿರ ನಗುವುದಕ್ಕೆ ಪ್ರಯತ್ನಿಸುತ್ತ—

"ಒಳಗೆ ಬನ್ನಿ ಕ್ಯಾಪ್ಟನ್........"

ಎಂದಳು.

ವಿಶ್ವನಾಥ ಒಳಗೆ ಬಂದು ಕುರ್ಚಿಯ ಮೇಲೆ ಕುಳಿತುಕೊಂಡ. ಅವನು ಹೊರಗೆ ಹೊರಡಲು ಸಿದ್ಧವಾಗಿ ಉಡುಪು ಹಾಕಿಕೊಂಡು, ಕೈಲಿ ಹ್ಯಾಟು ಹಿಡಿದು ಕೊಂಡಿದ್ದ, ಅವನ ಮುಖದ ಮೇಲೆ ಅದುವರೆಗೆ ಕಾಣ ದಿದ್ದ ಒಂದು ಅಪೂರ್ವ ಕಳೆ ಶೋಭಿಸುತ್ತಿತ್ತು.

ಇಂದಿರ ಆಶ್ಚರ್ಯದಿಂದ ಅವನ ಕಡೆ ನೋಡಿ—ಅವನು ಕುಳಿತ ಮೇಲೆ ಕುಳಿತು ಕೊಂಡು, ಕಾಫಿಯನ್ನು ಬಗ್ಗಿಸಿ ಅವನಿಗೆ ಕೊಟ್ಟು ತಾನೂ ತೆಗೆದುಕೊಂಡಳು.

ವಿಶ್ವನಾಥ ನಿಧಾನವಾಗಿ ಕುಡಿಯುತ್ತ—

"ಈಗ ತಲೆನೋವು ಹೇಗಿದೆ? ಇಂದಿರ.........."

ಎಂದು ಕೇಳಿದ.

"ಈಗ ಕಡಿಮೆಯಾಗಿದೆ.........."

"ರಾತ್ರಿ ಸರಿಯಾಗಿ ನಿದ್ರೆ ಬಂದಂತಿಲ್ಲ—ಕಣ್ಣೆಲ್ಲಾ ಕೆಂಪಗಿದೆ ..........!"

ಇಂದಿರನಿಗೆ ಅವನು ನಗುತ್ತಿರುವಂತೆ ತೋರಿ ಹೇಗೋ ಆಯಿತು. ತಡವರಿಸುತ್ತ—

"ಇಲ್ಲ........ನಿದ್ರೆ ಬಂತು. ಚೆನ್ನಾಗಿಯೇ ಬಂತು!" ಎಂದಳು.

ವಿಶ್ವನಾಥ ಅಂದೇ ಅವಳ ಕೋಣೆಗೆ ಬಂದದ್ದು. ಹಿಂದೊಮ್ಮೆ ಮೂರ್ತಿ ಅಲ್ಲಿ ಬಂದಾಗ ಅದನ್ನು ನೋಡಿ ಬೆರಗಾಗಿದ್ದ. ಅಲ್ಲಿಯ ಅಂದ ಚಂದ ವಿಶ್ವನಾಥನ ಮೇಲೆ ಯಾವ ಪರಿಣಾಮವನ್ನು ಮಾಡಲಿಲ್ಲ. ಅವನು ಅಪಣ್ಣಾಗಲೀ, ಎದುರಿಗೆ ತಲೆ ತಗ್ಗಿಸಿ ಕಾಫಿಕುಡಿಯುತ್ತಿದ್ದ

ಒಡತಿಯನ್ನಾಗಲೀ ನೋಡುತ್ತಿರಲಿಲ್ಲ. ಏನನ್ನೋ ನಿರೀಕ್ಷಿಸುತ್ತ ಹೊತ್ತು ಕಳೆಯಲು ಮಾತು ಹುಡುಕುತ್ತಿರುವಂತೆ ತೋರಿತು.

ಇಂದಿರನ ಗಮನವೆಲ್ಲಾ ಅವಳು ಬರೆದಿಟ್ಟಿದ್ದ ಪತ್ರದ ಕಡೆಗಿತ್ತು. ವಿಶ್ವನಾಥ ಅದರ ಹತ್ತಿರವೇ ಕೈ ನೀಡಿ ಕುಳಿತಿದ್ದರೂ ಅವನು ಅದನ್ನು ನೋಡಿರಲಿಲ್ಲ. ಅವಳಿಗೆ ಅದನ್ನು ಮರೆ ಮಾಡಲೂ ಅವಕಾಶವಾಗಿರ ಲಿಲ್ಲ!

ಕಿಟಕಿಯ ಹೊರಭಾಗದಲ್ಲಿ ಮೇಲಿನಿಂದ ತಗುಲಿ ಹಾಕಿದ್ದ ಕುಂಡ ಗಳಲ್ಲಿ ಹೂವು ಅರಳಿ ಸುವಾಸನೆಯನ್ನು ಬೀರುತ್ತಿತ್ತು. ಪುಟ್ಟ ಹಕ್ಕಿ ಯೊಂದು ಬಂದು ಅದರಲ್ಲಿ ಕುಳಿತು ಸದ್ದುಮಾಡಿ ಇಬ್ಬರ ಗಮನವನ್ನೂ ಸೆಳೆಯಿತು. ವಿಶ್ವನಾಥ ಅದನ್ನು ನೋಡುತ್ತ—

"ಆ ಹೂವು ಎಷ್ಟು ಚೆನ್ನಾಗಿದೆ! ನಿನಗೆ ಗಿಡಗಳನ್ನು ಬೆಳಸುವುದ ರಲ್ಲಿ ಬಹಳ ಇಷ್ಟವೆಂದು ನಿಂಗ ಹೇಳಿದ್ದ........" ಎಂದ

ಇಂದಿರ ನಕ್ಕು—

"ಹೌದು—ಅದು ಯಾವಾಗಲೂ ನನಗೆ ಬಹಳ ಇಷ್ಟವಾದ ಕೆಲಸ ಆ ಹೂವನ್ನು ತಂದು ಕೊಡಲೆ....?"

ಎಂದು ಹೇಳಿ ಎದ್ದಳು.

"ಬೇಡ.... ಇಂದಿರ...."

"ಏಕೆ ಬೇಡ....?"

"ಗಿಡದಿಂದ ಕಿತ್ತರೆ ಅದು ಬಾಡುವುದಿಲ್ಲವೆ?"

"ಬಾಡದೆ ಏನು?"

"ಕಿತ್ತು ಅದನ್ನು ಒಣಗಿಸುವುದಕ್ಕಿಂದ-ಗಿಡದಮೇಲೆ ಅದು ನಲಿಯು ತ್ತಿರುವುದನ್ನು ನೋಡುವುದೇ ಸುಖ! ನನ್ನ ಸ್ವಭಾವವೇ ಹಾಗೆ...."

ಅವನ ಧ್ವನಿ ಒಂದು ಬಗೆಯಾಗಿ ಕೇಳುವವರಲ್ಲಿ ಮರುಕ ಹುಟ್ಟಿಸು ವಂತಿತ್ತು. ಇಂದಿರ ಕಳವಳದಿಂದ ಅವನ ಕಡೆ ನೋಡಿದಳು. ವಿಶ್ವ ನಾಥ ಅವಳ ಕಡೆ ನೋಡುತ್ತಿರಲಿಲ್ಲ. ಹೊರಗಡೆ ಮಹಡಿಯ ಮೆಟ್ಟಲು ಗಳನ್ನು ಯಾರೋ ಬೇಗ ಬೇಗ ಹತ್ತಿ ಬರುತ್ತಿದ್ದರು. ಅವನು

ಸದ್ದನ್ನು ಆಲಿಸುತ್ತಿದ್ದ. ಇಷ್ಟು ಮುಂಚೆ ಬರುವವರು ಯಾರಿರಬಹುದೆಂದು ಇಂದಿರ ಯೋಚಿಸುವಷ್ಟರಲ್ಲಿ ಮೂರ್ತಿ ಬಾಗಿಲ ಬಳಿ ಬಂದಿದ್ದ.

"ನಮಸ್ಕಾರ ಡಾಕ್ಟರ್—ಒಳಗೆ ಬನ್ನಿ ;

ಇಂದಿರ—ಡಾಕ್ಟರಿಗೆ ಕಾಫಿ ತರಿಸು...."

ಇಂದಿರ ಎದ್ದು ಕಾಫಿ ತರಲು ಹೋದಳು. ಮೂರ್ತಿಯ ಮುಖದಲ್ಲಿ ಅಸಮಾಧಾನದ ಸೂಚನೆ ಕಾಣುತ್ತಿತ್ತು.

"ಕ್ಯಾಪ್ಟನ್—ನನಗೆ ಕಾಫಿ ಕುಡಿಯಲು ವಿರಾಮವಿಲ್ಲ. ನಿಂಗ ನನ್ನನ್ನು ಕರೆದ ರೀತಿಯಲ್ಲಿ ನಾನು ಗಾಬರಿಯಾಗಿ ರೈಲಿಗೆ ಹೊರಟಿರುವನು ಹಾಗೇ ಬಂದೆ! ಬರ್ತೀನೆ....ನಮಸ್ಕಾರ...."

"ಇನ್ನೂ ಬೇಕಾದಷ್ಟು ಹೊತ್ತಿದೆ....ಡಾಕ್ಟರೆ. ನಾನೂ ರೈಲಿಗೆ ಹೋಗುವವನೆ! ಒಂದು ನಿಮಿಷ ಕುಳಿತುಕೊಳ್ಳಿ. ನಿಮ್ಮೊಡನೆ ಮಾತಾಡುವುದಿದೆ."

ಮೂರ್ತಿ ಅನುಮಾನಿಸುತ್ತ ಕುಳಿತ.

"ಡಾಕ್ಟರ್—ನೀವು ನನ್ನ ವಿಷಯದಲ್ಲಿ ಬಹಳ ಶ್ರದ್ಧೆ ವಹಿಸಿ ಕೆಲಸ ಮಾಡಿದ್ದೀರಿ. ನಾನು ತಮಗೆ ಬಹಳ ಬಾಧ್ಯಪಟ್ಟಿದೇನೆ......"

"ನೀವು ಆ ವಿಷಯ ಹೇಳಬೇಕಾಗಿಲ್ಲ. ಅದು ನನ್ನ ಕರ್ತವ್ಯ.... ಹೆಚ್ಚುಗಾರಿಕೆ ಏನಿಲ್ಲ."

"ನೀವು ಹಾಗೆನ್ನಬಹುದು. ಆದರೆ ಉಪಕಾರ ಹೊಂದಿದವನು ನಾನು....ಹೊರಡುವ ಮೊದಲು ನನ್ನ ವಂದನೆಯನ್ನು ತಿಳಿಸ ಬೇಡವೆ? ಕರ್ತವ್ಯ ಎಲ್ಲರಿಗೂ ಇದೆ ನೋಡಿ....! ನಾನೇ ನಿಮ್ಮಲ್ಲಿಗೆ ಬರಬಹುದಿತ್ತು. ಆದರೆ ನೀವೇ ಇಲ್ಲಿ ಬರುವುದು ಚೆನ್ನು ಎಂದು ತೋರಿತು....."

ಮೂರ್ತಿಗೆ ಅವನ ಮಾತಿನ ಸರಣಿ ಅರ್ಥವಾಗಲಿಲ್ಲ—

"ನೀವು ಹೊರಡುವುದು....! ಈಗ.....? ಎಲ್ಲಿಗೆ?" ಎಂದು ಕೇಳಿದ.

ವಿಶ್ವನಾಥ ನಕ್ಕು ಹೇಳಿದ—

"ನನ್ನ ಸೈನಿಕಜೀವನ ನನಗಾಗಿ ಕಾದಿದೆ!"

"ಹಾಗೆಂದರೆ....?"

ಇಂದಿರ ಕಾಫಿ ತೆಗೆದುಕೊಂಡು ಬಂದು ಮುಂದಿಟ್ಟಳು. ಮೂರ್ತಿ ಅದನ್ನು ಒಂದೇ ಗುಟುಕಿಗೆ ಔಷಧಿಯಂತೆ ಕುಡಿದು, ಹೊರಡಲು ಎದ್ದು ನಿಂತ. ವಿಶ್ವನಾಥ ತಾನೂ ಎದ್ದುನಿಂತು ಕೈ ನೀಡಿದ. ಮೂರ್ತಿ ಇಷ್ಟ ವಿಲ್ಲದಿದ್ದರೂ ಮರ್ಯಾದೆಗಾಗಿ ಕೈ ಮುಂದೆ ಮಾಡಿದ. ವಿಶ್ವನಾಥ ತಟ ಕ್ಕನೆ ಇಂದಿರ ಕೈ ಹಿಡಿದು ಅದರಲ್ಲಿಟ್ಟು—

"ಇಂದಿರ........! ರಾಮಚಂದ್ರ ನನಗೆ ಕೊಟ್ಟಿದ್ದ ಮಾತನ್ನು ಉಳಿಸುವುದಕ್ಕಾಗಿ ನಿನ್ನ ಇಷ್ಟವನ್ನು ನಡೆಸಲಾರದೆ ಇದ್ದ. ಅವನು ಮಾಡಲಾಗದ್ದನ್ನು ನಾನು....... ಮಾಡುತ್ತೇನೆ. ದೇವರು ನಿಮ್ಮನ್ನು ಸುಖವಾಗಿಟ್ಟಿರಲಿ! ನಾನು ಹೊರಡುತ್ತೇನೆ. ಡಾಕ್ಟರ್!"

ಎಂದು ಹೇಳಿ ಹೊರಟ.

ಮೂರ್ತಿ ಅವಕ್ಕಾಗಿ ಅವನ ಕಡೆ ನೋಡುತ್ತಿದ್ದ. ಇಂದಿರ ತನ್ನ ಕಿವಿಯನ್ನೇ ನಂಬಲಿಲ್ಲ. ತಾನು ಎಚ್ಚರವಾಗಿರುವೆನೋ ಇಲ್ಲ—ಇದೂ ಕನಸೋ ಎಂದು ಅನುಮಾನಿಸುತ್ತ ನಿಂತಿದ್ದಳು.

ನಿಂಗನಿಂದ ಅವನು ಹೊರಡುವ ವಿಚಾರ ತಿಳಿದು ರಾಮಚಂದ್ರ ಮೀನಾಕ್ಷಿ ಇಬ್ಬರೂ ಬಾಗಿಲ ಬಳಿಗೆ ಬಂದವರು, ಅಲ್ಲಿನ ನೋಟವನ್ನು ನೋಡಿ ತಟಕ್ಕನೆ ನಿಂತರು. ಸಂದರ್ಭವನ್ನು ಗ್ರಹಿಸಿ ಮೀನಾಕ್ಷಿಯ ಕಣ್ಣುಗಳಲ್ಲಿ ನೀರು ತುಂಬಿತು. ರಾಮಚಂದ್ರ ಎರಡು ಹೆಜ್ಜೆ ಮುಂದಿಟ್ಟ—

"ಇದೇನು........ವಿಶ್ವನಾಥ..........!" ಎಂದು ಕೇಳಿದ.

ವಿಶ್ವನಾಥ ಅವನ ಎರಡು ಕೈಗಳನ್ನು ಹಿಡಿದುಕೊಂಡು—

"ರಾಮಚಂದ್ರ ನಿನ್ನ ವಿಶ್ವಾಸವನ್ನೂ ದೊಡ್ಡತನವನ್ನೂ ಎಂದಿಗೂ ಮರೆಯುವುದಿಲ್ಲ. ಈ ಸಂದರ್ಭದಲ್ಲಿ ಯಾವುದು ಸರಿಯೋ ಅದರಂತೆ ನಡೆದುದಕ್ಕಾಗಿ ನನಗೆ ಬಹಳ ಸಂತೋಷವಾಗಿದೆ! ನಿಮ್ಮೊಡನೆ ಕಳೆದ್ದ ದಿನಗಳು ಯಾವಾಗಲೂ ನನ್ನ ನೆನಪಿನಲ್ಲಿ ಹಸುರಾಗಿಯೇ ಉಳಿಯು ವುವು!"

ಎಂದು ಹೇಳಿ, ಅವನ ಉತ್ತರಕ್ಕಾಗಿ ಕಾಯದೆ ಮೀನಾಕ್ಷಿಗೆ ಕೈ ಮುಗಿದು ಸರಸರನೆ ಮೆಟ್ಟಿಲುಗಳನ್ನಿಳಿದು ಹೋದ. ರಾಮಚಂದ್ರ ಏನೋ ಹೇಳುತ್ತ ಅವನನ್ನು ಹಿಂಬಾಲಿಸಿದ.

ಹೊರಗಡೆ ಕಾರಿನ ಬಾಗಿಲನ್ನು ದಡಾರನೆ ಮುಚ್ಚಿದ ಸದ್ದಾಯಿತು. ಇಂದಿರ ಹಾರಿ ಹೋಗಿ ಕಿಟಕಿಯ ಬಳಿ ನಿಂತಳು. ಕಾರು ಆಗಲೇ ಹೊರಡುವುದರಲ್ಲಿತ್ತು. ನಿಂಗ ಸಾಮಾನುಗಳನ್ನು ಒಳಗಿಟ್ಟು ಕೈಮುಗಿದು ನಿಂತಿದ್ದ. ರಾಮಚಂದ್ರ ವಿಶ್ವನಾಥನ ಹೆಗಲ ಮೇಲೆ ಕೈ ಹಾಕಿಕೊಂಡು ಕುಳಿತಿರುವುದು ಕಾಣಿಸಿತು.

ನೋಡುತ್ತಿರುವಂತೆಯೇ ಕಾರು ಕಣ್ಮರೆಯಾಯಿತು. ಇಂದಿರನ ಕಣ್ಣುಗಳು ನೀರಿನಲ್ಲಿ ತೇಲಿದವು. ಅವಳು ಅದನ್ನು ಒರಸಿಕೊಂಡು ಒಳಗೆ ಬಂದಾಗ ಮೀನಾಕ್ಷಿ ಮೂರ್ತಿ ಇಬ್ಬರೂ ಅವಳ ಕಾಗದವನ್ನು ಓದುತ್ತ ನಿಂತಿದ್ದುದು ಕಾಣಿಸಿತು.

IE FINE BOOK-BINDING WORKS
URLIDHARBAGH, MOAZZAMJAHI MARKET,
HYDERABAD DECCAN.